Digitized by Arya Samaj Foundation Chennai and eGangotri

CHECKED 1973
Initial

ಪ್ರಜಾಸಾಮ್ರಾಜ್ಯಂ ಗ್ರಂಥಮಾಲಾ ಸಂಖ್ಯೆ-15

राज्यनीति-मूलतत्त्व-प्रकाशन-ग्रन्थाः

Presented by
The Ministry of Education and Youth Services
Government of India New Delhi

Ref. No. F.43/112/65-S.K.II. Dated 20-3-1971

प्रजासाम्राज्य-ग्रन्थमाला संख्या १३ १४ १५

राजनीतिः	स्वधर्मविवेकः	शूद्रमीमांसा
RAJANITI	SVADHARMAVIVEKA	SUDRAMIMAMSA

Edited by

R. N. Suryanarayana M.A.,

Prajasamrajyam (Regd.),
1403 Soppinakola, Mysore 4

साम्राज्यम् मुद्रणालय, मैसूर -४

ಮೈಸೂರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CHECKED 1973

ಪ್ರಜಾಸಾಮ್ರಾಜ್ಯಂ ಗ್ರಂಥಮಾಲಾ ಸಂಖ್ಯೆ-15

ಬ್ರಾಹ್ಮೀ ರಾಜನೀತಿ ಮೂಲತತ್ವ ಪ್ರಕಾಶನ

'ವರ್ಣಮೀಮಾಂಸಾ' ಅಂತರ್ಗತ

ಶೂದ್ರಮೀಮಾಂಸಾ

ಪ್ರಜಾಸಾಮ್ರಾಜ್ಯಂ (ಪಂಜೀನಿಬದ್ಧ),
ಮೈಸೂರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರು :

ಪ್ರಜಾಸಾಮ್ರಾಜ್ಯಂ (ಸಂಜೀಸಿಬದ್ಧ),

1403, ಸೊಪ್ಪಿನ ಕೊಳ, ಮೈಸೂರು-4

ಪ್ರಚಲಿತ ಶಕ ೧೮೯೧

(ಕ್ರಿ.ಶ.1969)

ಮುದ್ರಣಕಾರರು :

ಸಾಮ್ರಾಜ್ಯಂ ಮುದ್ರಣಾಲಯ, ಮೈಸೂರು—೪.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.,
ಇತಿಹಾಸ ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯ

ಆಧುನಿಕ ಪ್ರಪಂಚದಲ್ಲಿ ಆರ್ಥಿಕ ಮತ್ತು ಸಮತಾವಾದವು ಪ್ರಬಲವಾಗಿ ಎಲ್ಲ ಕಡೆಗಳಲ್ಲೂ ವರ್ಣ ಸ್ಪರ್ಧೆ (class conflicts) ಕಂಡುಬರುತ್ತದೆ. ಆರ್ಥಿಕ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಉಪೋದ್ಬಲವಾಗಿ ಸಾಮಾಜಿಕ ವ್ಯವಸ್ಥೆಯನ್ನು ಮಾಡಬೇಕೆಂದೂ ಇದು ರಾಜಕೀಯವಾದ ಪ್ರಜಾಪ್ರಭುತ್ವ ತತ್ವಕ್ಕೆ ಹೊಂದಿಕೊಂಡಿದೆಯೆಂದೂ, ಆಗ ಸುಖೀ ರಾಜ್ಯ (welfare state) ಸಿದ್ಧಿಸಿ ಪ್ರತಿಯೊಬ್ಬ ವ್ಯಕ್ತಿಗೂ ಸಂಪೂರ್ಣ ವಿಕಾಸಕ್ಕೆ ಅವಕಾಶವುಂಟಾಗಿ ಶಾಂತ ವಾತಾವರಣದಲ್ಲಿ ಮಾನವ ಸಮಾಜವು ಆಂತರಿಕ ಕಲಹಗಳಿಲ್ಲದೆ ಬೆಳೆಯಬಹುದೆಂದೂ ಈಗಿನ ಭಾವನೆಯಾಗಿದೆ. ಡಾ|| ಅಂಬೇಡ್ಕರರು ಹರಿಜನರಿಗೆ ಸಮಾಜದಲ್ಲಿ ಸಮಾನ ಸ್ಥಾನವನ್ನು ಸಾಧಿಸುವ ಉದ್ದೇಶದಿಂದ ಭಾರತೀಯ ಸಂಸ್ಕೃತಿಯ ತಳಹದಿಯನ್ನು ಸರಿಯಾಗಿ ವಿವೇಚಿಸದೆ ಹರಿಜನರಿಗೆ ನಡೆದಿರುವ ಅನ್ಯಾಯದಿಂದ ಕ್ರುದ್ಧರಾಗಿ ತಮ್ಮ ಮತವನ್ನು ತ್ಯಜಿಸಿ ಬೌದ್ಧ ಮತವನ್ನು ಹರಿಜನರು ಸ್ವೀಕರಿಸಬೇಕೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೋಧಿಸಿ ಸಾಮೂಹಿಕ ಮತ ಪರಿವರ್ತನೆ (mass conversions) ಮಾಡಲು ಯತ್ನಿಸಿದರು. ಹೀಗೆ "ಬೌದ್ಧ" ರಾದವರೂ ಸಮಾಜದಲ್ಲಿ ಸ್ಥಾನವು ಉತ್ತಮಗೊಳ್ಳಲಿಲ್ಲವೆಂದು ಸರ್ಕಾರದ ರಕ್ಷಣೆಯು ಈ ನವೀನ ಬೌದ್ಧರಿಗೂ ಅವಶ್ಯಕವೆಂದು ಈಗ ಹೇಳುತ್ತಿರುವರು. ಜಾತಿ ಭಾವ (casteism) ಹೋಗಬೇಕೆಂದು ನೆಹರು ಅವರು ಹೇಳುತ್ತಿದ್ದರು. ಅದರ ಸ್ಥಾನದಲ್ಲಿ ಹೊಸ ಸಮಾಜವನ್ನು ಲೋಪ ದೋಷ ಗಳಿಲ್ಲದೆ ಸೃಷ್ಟಿಸುವುದು ಕಷ್ಟ.

ಶ್ರೀ ಭಾಗವತದಲ್ಲಿ ಭಗವಂತನು ಹೇಳಿರುವಂತೆ, ಗೀತೆಯು ಉಪದೇಶಿಸಿರುವಂತೆ ಸಮಾಜದಲ್ಲಿ ಕ್ರಾಂತಿಕಾರಕಗಳಾದ ಸ್ಪರ್ಧಾ (cut-throat – competition), ಅಸೂಯಾ, ತಿರಸ್ಕಾರ, ಅಹಂಕಾರಗಳು ನಾಶವಾಗಿ ಸಮದರ್ಶನವುಂಟಾಗಬೇಕಾದರೆ ವ್ಯಕ್ತಿಗಳ ಪಾತ್ರವು ವಿಶೇಷವಾಗಿದೆ. ವಿದ್ಯಾವಿನಯಸಂಪನ್ನನಲ್ಲೂ ಬ್ರಾಹ್ಮಣ, ಗೋವು, ಹಸ್ತಿ, ಶ್ವಾನ, ಶ್ವಪಾಕರಲ್ಲೂ ಪಂಡಿತನು ಸಮದರ್ಶನ ನಾಗಬೇಕು. ಇದಕ್ಕೆ ಆರ್ಥಿಕ ರಾಜಕೀಯ ಸಾಮಾಜಿಕ ವ್ಯತ್ಯಾಸಗಳನ್ನು ಗಣಿಸದೆ ಆತ್ಮ ಸಂಯಮನ ಮಾಡಿಕೊಂಡು ವಿಶ್ವ ದೃಷ್ಟಿಯನ್ನು (welt– anschaung) ಸಾಧಿಸಿದಲ್ಲಿ ಆದರ್ಶ ಸಮಾಜವನ್ನು ರಚಿಸಬಹುದು.

ಗುಣ ಮತ್ತು ಕರ್ಮಕ್ಕೆ ಅನುಸಾರವಾಗಿ ಭಗವಂತನಿಂದಲೇ ಸೃಷ್ಟಿಸಲ್ಪಟ್ಟ ನಾಲ್ಕು ವರ್ಣ ವಿಭಾಗಗಳನ್ನು ಕೇವಲ ಭಾರತೀಯ ಜನತೆಗೆ ಮಾತ್ರವಲ್ಲದೆ ಪ್ರಪಂಚಕ್ಕೆಲ್ಲ ಅನ್ವಯಿಸಬಹುದು. ಜನನ ಮಾತ್ರದಿಂದಲೇ ಜನರ ವರ್ಣಗಳು ನಿರ್ಧರಿಸಲ್ಪಟ್ಟಿವೆ – ಎಂಬ ಸಂಕುಚಿತಾರ್ಥಕ್ಕೆ ವಿರುದ್ಧವಾಗಿ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲಿ ಅನೇಕಾಂಶಗಳು ಸಿಗುತ್ತವೆ. ಚತ್ವಾರಿಂಶತ್ ಸಂಸ್ಕಾರಗಳಿಂದ ಅಷ್ಟ ಆತ್ಮ ಗುಣಗಳು (ದಯಾ, ದಾಕ್ಷಿಣ್ಯ, ಅನಸೂಯಾ, ಶೌಚ, ಅನಾಯಾಸ, ಮಂಗಲ, ಅಕಾರ್ಪಣ್ಯ ಮತ್ತು ಅಸ್ಪೃಹತಾ) ಸಿದ್ಧಿಸುವುವು. ಈ ಸಂಸ್ಕಾರಗಳು ಪತಿತೋನ್ನತತ್ವಕ್ಕಾಗಿ ಅಲ್ಲದೆ ಚಿತ್ತಶುದ್ಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಗಿ ಏರ್ಪಟ್ಟಿವೆ. ಬ್ರಾಹ್ಮಣರಲ್ಲಿಯೇ ದೇವ, ಮುನಿ, ದ್ವಿಜ, ಕ್ಷತ್ರ, ವೈಶ್ಯ, ಶೂದ್ರ, ನಿಷಾದ, ಪಶು, ಮ್ಲೇಚ್ಛ, ಚಂಡಾಲರೆಂಬ ಭೇದ ಗಳಿವೆಯೆಂದು ಅತ್ರಿ ಸ್ಮೃತಿ (ಶ್ಲೋಕ 372–384) ಹೇಳುವುದು. ಹಾಗೆಯೇ ಕ್ಷತ್ರಿಯ ವೈಶ್ಯ ಶೂದ್ರರೆಂಬ ವರ್ಣಗಳಲ್ಲಿಯೂ ಗುಣಾನು ಸಾರವಾಗಿ ನಾಲ್ಕು ವರ್ಣಗಳೂ ಇರಬಹುದು. ಬಾದರಿಯ ಅಭಿಪ್ರಾಯದಂತೆ ಶೂದ್ರರಿಗೂ ಯಜ್ಞಮಾಡುವ ಅಧಿಕಾರವಿದೆ ಯೆಂದು ಪೂರ್ವಮೀಮಾಂಸಾ ಸೂತ್ರಗಳಿಂದ ತಿಳಿದುಬರುವುದು. ಜೈಮಿನಿಯು ರಥಕಾರ, ಸ್ಥಪತಿ, ನಿಷಾದರಿಗೂ ಅಧಿಕಾರವನ್ನು ಕೊಟ್ಟಿರುವನು. ಇಷ್ಟಾಪೂರ್ತಗಳಲ್ಲಿ ಪೂರ್ತವು ಸರ್ವ ವರ್ಣಗಳಿಗೂ ವಿಹಿತವಾಗಿದ್ದು ಪರಮ ಪದವಿಯನ್ನು ಕೊಡುತ್ತದೆ. ವೈಶ್ವದೇವ ದಲ್ಲಿ ಶೂದ್ರನು ಪಾಕಮಾಡಿದ ಅನ್ನವನ್ನು ಉಪಯೋಗಿಸಬಹುದು. ಧರ್ಮವ್ಯಾಧ, ವಿದುರರಂತಹ ಆದರ್ಶ ಶೂದ್ರರು ಆಧ್ಯಾತ್ಮ ವಿದ್ಯೆಗಳಲ್ಲಿ ಅಗ್ರಗಣ್ಯರಾಗಿದ್ದರು.

ವರ್ಣಾಶ್ರಮ ವ್ಯವಸ್ಥೆಯು ಕಟ್ಟುನಿಟ್ಟಾಗಿ ನಾಲ್ಕು ವರ್ಣ ಗಳಿಗೂ ವೃತ್ತಿಗಳನ್ನು ಸ್ಥೂಲವಾಗಿ ನಿರ್ಧರಿಸಿದ ಮೇಲೂ ಆಪದ್ಧ ರ್ಮವೆಂದಾಗಲೀ ದೇಶ ರಕ್ಷಣೆಗಾಗಲೀ ಇತರ ವೃತ್ತಿಗಳನ್ನು ಅನುಸರಿ ಸುವುದಕ್ಕೆ ಅವಕಾಶ ಕೊಟ್ಟಿರುವ ನಿದರ್ಶನಗಳು ಸಿಗುತ್ತವೆ. ಕ್ರಿಸ್ತ ಪೂರ್ವ ನಾಲ್ಕನೆಯ ಶತಾಬ್ದದಲ್ಲಿ ಭಾರತದ ವಾಯುವ್ಯ ಭಾಗದಲ್ಲಿದ್ದ ಶೂದ್ರ ಜನಾಂಗವು ಗಣರಾಜ್ಯವನ್ನು ಮಾಡಿಕೊಂಡು ಯವನರನ್ನು ಎದುರಿಸಿತು. ಹಾಗೆಯೇ ಜನ್ಮತಃ ಬ್ರಾಹ್ಮಣರಾದವರು ಕ್ಷತ್ರಿಯ ವೃತ್ತಿಯನ್ನು ಅನುಸರಿಸಿ ಇದ್ದುದಕ್ಕೆ ಶುಂಗ, ಕಾಣ್ವ, ಶಾತವಾಹನ, ಪಲ್ಲವ ಇತ್ಯಾದಿ ವಂಶಗಳು ನಿದರ್ಶನಗಳಾಗಿವೆ. ಋಷಿಗಳಲ್ಲಿ ಕೆಲವರು ಕೆಳಗಿನ ವರ್ಣಗಳಲ್ಲಿ ಜನಿಸಿದ್ದರೂ ಮಂತ್ರದ್ರಷ್ಟರಾಗಿ ಮಾನ್ಯತೆಯನ್ನು ಪಡೆದರು.

ಬ್ರಾಹ್ಮಣೇ ಪುಲ್ಕಸೇ ಸ್ತೇನೇ ಬ್ರಹ್ಮಣ್ಯರ್ಕೇ ಸ್ಫುಲಿಂಗಕೇ ।
ಅಕ್ರೂರೇ ಕ್ರೂರಕೇ ಚೈವ ಸಮದೃಕ್ಪಂಡಿತೋ ಮತಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನರೇಷ್ವಭೀಕ್ಷ್ಣಂ ಮದ್ಭಾವಂ ಪುಂಸೋ ಭಾವಯತೋ ಚಿರಾತ್ ।
ಸ್ಪರ್ಧಾಸೂಯಾ-ತಿರಸ್ಕಾರಾ ಸಾಹಂಕಾರಾ ವಿಯಂತಿ ಹಿ ॥

ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಂಡಧಾರಣೇ ।
ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇಽಹಂ ಚತುರ್ವಿಧಃ ॥

ಶ್ರೀಮಾನ್ ಆರ್. ಎನ್. ಸೂರ್ಯನಾರಾಯಣ, ಎಂ.ಎ. ಅವರು ಸಂಸ್ಕೃತಾಧ್ಯಾಪಕರಾಗಿದ್ದು ವಿಶ್ರಾಂತರಾಗಿ 'ಪ್ರಜಾಸಾಮ್ರಾಜ್ಯ' ಸಂಸ್ಥೆಯ ಚಾಲಕರಾಗಿ ಉದಾತ್ತ ಧ್ಯೇಯಗಳನ್ನು ಸಾಧಿಸಲು ಹಲವಾರು ಗ್ರಂಥಗಳನ್ನು ರಚಿಸಿರುವರು. ಸಮಾಜದ ಒಂದು ಸಮಸ್ಯೆಯಾದ ಶೂದ್ರ ಮತ್ತು ವರ್ಣ ವ್ಯವಸ್ಥೆಯ ವಿಷಯವಾಗಿ ವಿವೇಚನಾ ಪೂರ್ವಕವಾದ ಈ ಲೇಖನವನ್ನು ಬರೆದಿರುವರು. ಸಾಂಪ್ರದಾಯಕ ಅರ್ಥಗಳಿಗೆ ಕೆಲವೆಡೆ ವಿರುದ್ಧವೆಂದು ಇಲ್ಲಿ ಕಂಡುಬಂದರೂ ತತ್ವಪೋಷಕಗಳಾಗಿರುವುವು. ಸಮಾಜವು ಭದ್ರವಾದ ತಳಹದಿಯ ಮೇಲೆ ನಿಂತು ಲೋಕ ಕಲ್ಯಾಣವನ್ನು ಸಾಧಿಸಲು ಅನುಕೂಲವಾದ ಇಂತಹ ಪ್ರಯತ್ನಗಳು ಸ್ತುತ್ಯವೆಂದು ಹೇಳಬಹುದು. ಗ್ರಂಥಕರ್ತನ ಶ್ರಮವು ಸಾರ್ಥಕವಾಗಲಿ ಎಂದು ಹಾರೈಸುತ್ತೇನೆ.

ಮೈಸೂರು

16-9-1958

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀಗುರುಭ್ಯೋ ನಮಃ

ಭೂಮಿಕೆ

... ಅವಿವೇಕಃ ಪರಮಾಪದಾಂ ಪದಂ ವೃಣುತೇ ಹಿ
ವಿಮೃಶ್ಯಕಾರಿಣಂ ಗುಣಲುಬ್ಧಾಃ ಸ್ವಯಮೇವ ಸಂಪದಃ ॥

ಶೂದ್ರಮೀಮಾಂಸಾ ಶಬ್ದ ಪ್ರಯೋಗವು ನವೀನವಾಗಿರುವಂತೆ ಕಂಡುಬರಬಹುದಾದರೂ ಶೂದ್ರ ಮತ್ತು ಮೀಮಾಂಸಾ ಶಬ್ದಗಳು ಬಹಳ ಹಿಂದಿನಿಂದಲೂ ಬ್ರಾಹ್ಮಣ ರಾಷ್ಟ್ರದ ಸ್ತ್ರೀ ಮತ್ತು ಪುರುಷ ಪ್ರಜೆಗಳಿಗೆಲ್ಲಾ ಪರಿಚಿತವಾಗಿರುತ್ತವೆ. ವೇದ, ವೇದಾಂಗ, (ದರ್ಶನ-ಶಾಸ್ತ್ರ) ಸೂತ್ರ ಗ್ರಂಥಗಳನ್ನು ಕರತಲಾಮಲಕವಾಗಿ ಇಟ್ಟುಕೊಂಡು ವಿಮರ್ಶಿಸುವ ವಿದ್ವಾಂಸರಿಗೆ ಇವೇನೂ ಹೊಸದಲ್ಲ. ಅಪರೋಕ್ಷ ಜ್ಞಾನಿಗಳ ಕೃತಿಗಳಲ್ಲಿಯೂ ಭಾಷ್ಯಾದಿ ವಿವರಣ ಗ್ರಂಥಗಳಲ್ಲಿಯೂ ಸಮಯೋಚಿತವಾಗಿ ಸೂಚಿತವಾಗಿರುತ್ತವೆ.

ಶೂದ್ರ ಮೀಮಾಂಸೆಯು ವರ್ಣ ಮೀಮಾಂಸೆಯ ಒಂದು ಅಂಗವಾಗಿದೆ. ಶೂದ್ರ ಶಬ್ದ ಮತ್ತು ಅದರ ಅರ್ಥವನ್ನು ಅಮ್ಮ-ಥನ ಮಂಥನಕ್ಕೆ ಗುರಿಪಡಿಸಿದಾಗ ವರ್ಣ ಪಂಚಕಗಳ ಸಮೀಕ್ಷೆಯು ತಾನಾಗಿಯೇ ಹೊರಹೊಮ್ಮುವುದು.

ವರ್ಣವನ್ನು ವ್ಯಕ್ತಿಗಳ ಜನ್ಮಕ್ಕೆ ಮಾತ್ರ ಸಂಬಂಧಿಸಿದಂತೆ ಉಪರಿಪ್ಲವವಾಗಿ ಭಾವಿಸಿ ಅಲ್ಪಸಂಖ್ಯಾತರಾದ ತದ್ವಿದರು ಈತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಧೆಗಳಿಗೆ ಗುರಿಯಾಗಿ ನಿರಾತಂಕವಾದ ಔದಾಸೀನ್ಯವನ್ನು ಸ್ವಾಗತಿಸಿ ರಕ್ಷಾಭಿನಿವಿಷ್ಟ ವಿಮರ್ಶೆಗೆ ಗಮನ ಕೊಡಲಾಗಲಿಲ್ಲ. ಇದರಿಂದ ವಿಶ್ವದಲ್ಲಿ ದುಷ್ಟ ಪರಿಣಾಮಗಳುಂಟಾಗಬಹುದೆಂಬುದೂ ಗೋಚರವಾಗಲಿಲ್ಲ. ಈ ಸಮಸ್ಯೆಗಳ ಪರಿಹಾರಕ್ಕೆ ತಜ್ಞರನ್ನು ಪ್ರೋತ್ಸಾಹಿಸಿ ವಿಮರ್ಶಾತ್ಮಕ ಗ್ರಂಥಗಳ ರಚನೆಗೂ ನಿಷ್ಕೃಷ್ಟಜ್ಞಾನ ಪ್ರಚಾರಕ್ಕೂ ತಕ್ಕ ವ್ಯವಸಾಯ ಮಾಡುವ ಹೊಣೆಗಾರಿಕೆಯನ್ನು ಹೊತ್ತ ಬಹುಸಂಖ್ಯಾಕ ಪ್ರಜಾ ಸಾಮಾನ್ಯರೂ ತಮ್ಮ ಕರ್ತವ್ಯವನ್ನು ಪಾಲಿಸಲಿಲ್ಲ.

ರಾಷ್ಟ್ರದ ದೌರ್ಭಾಗ್ಯದಿಂದ ಹಠಾತ್ತಾಗಿ ಉಂಟಾದ ಪರದೇಶದ ಜನಗಳ ಸಹವಾಸ, ಸಂಪರ್ಕ, ಆಡಳಿತ ಮೊದಲಾದ ಈತಿ ಬಾಧೆಗಳಿಂದಲೂ, ರಾಜನೀತಿ ಜ್ಞಾನ, ರಾಷ್ಟ್ರ ರಾಷ್ಟ್ರೈಕ್ಯ ಭಾವನೆಗಳನ್ನು ರೂಢಿಸಲು ಅವಕಾಶವನ್ನು ಹೊಂದದ ದೇಶೀಯರಿಂದ ರಾಷ್ಟ್ರ ಸಂಸ್ಕೃತಿ, ರಾಜನೀತಿಗಳ ಅಲ್ಪಜ್ಞಾನವನ್ನು ಸಂಗ್ರಹಿಸಿದ ಆಡಳಿತಗಾರರು ತಮ್ಮ ಪರಕೀಯ ಭಾಷಾ ಗ್ರಂಥಗಳ ಮೂಲಕ ಹರಡಿದುದರಿಂದಲೂ, ವರ್ಣ ವಿಮರ್ಶಾ ಜ್ಞಾನವು ಮರೆಯಾಯಿತು. ಇದರಿಂದ ಬ್ರಾಹ್ಮಣ ಧರ್ಮಾನುಯಾಯಿಗಳು ಅತಿ ದಾರುಣವಾದ ಬಿಕ್ಕಟ್ಟಿಗೆ ಒಳಗಾಗಿರುವ ಸನ್ನಿವೇಶವು ರಾಷ್ಟ್ರ ಮತ್ತು ಅಂತರ ರಾಷ್ಟ್ರಗಳ ಪರಿಮಿತಿಯಲ್ಲಿ ಸಂಭವಿಸಿರುತ್ತದೆ. "ಗತಿ ಸಾಮಾನ್ಯ, ತತ್ವ ಸಮನ್ವಯ" ಎಂಬ ಬ್ರಹ್ಮಸೂತ್ರಗಳ ವಿವರಣೆಯಲ್ಲಿ ಸೂಚಿಸಿರುವಂತೆ ಏಕ ವಾಕ್ಯತಾಸಿದ್ಧಿಯಿಂದ ಉಂಟಾಗಬೇಕಾದ ವರ್ಣ ಪಂಚಕಗಳ ತತ್ವಜ್ಞಾನದ ಅಭಾವದಿಂದ ರಾಷ್ಟ್ರದಲ್ಲಿ ಸಮ, ಸಮತ್ವ, ಸಮದರ್ಶಿತ್ವಗಳಿಗೆ ಅವಕಾಶವೇ ಇಲ್ಲದಂತಾಗುವುದು. ಇದರ ಪರಿಣಾಮವಾಗಿ ವಿಷಮ ಪರಿಸ್ಥಿತಿಯು ಒದಗಿ ಅಸಹನೆ, ಅಶಾಂತಿ, ಅಸಮಾಧಾನಗಳು ಮಿತಿ ಮೀರುತ್ತವೆ. ಅಥವಾ ಮಿತಿಯಿಂದ ಕುಸಿದು ಬೀಳುವುವು. ಇಂತಹ ಸಮಯದಲ್ಲಿ ಕಾಲ ವಿಳಂಬಕ್ಕೆ ಅವಕಾಶ ಕೊಡದೆ ಪ್ರಕೃತಿಯೇ ವರ್ಣಧರ್ಮ ವಿವೇಚನೆ ಕಡೆಗೆ ಜನಗಳನ್ನು ಸಮಯೋಚಿತವಾಗಿ ವಿರೋಧ ಮತ್ತು ಅನುರೋಧ ಮಾರ್ಗಗಳಲ್ಲಿ ಎಚ್ಚರಿಸಿ, ಪ್ರೇರಿಸಿ ವಿಮರ್ಶಾತ್ಮಕ ಜ್ಞಾನ

CC-0. In Public Domain. Gurukul Kangri Collection, Haridwar

रजिस्ट्रार कार्यालय,
गुरुकुल कांगड़ी विश्वविद्यालय,
जिला सहारनपुर (उ० प्र०)

Digitized by Arya Samaj Foundation Chennai and eGangotri

ಲಾಭಕ್ಕೆ ಯತ್ನಿಸುವಂತೆ ಪ್ರಚೋದಿಸುವುದು * ಎಂಬ ಋತದ ಕಟ್ಟಳೆಯಂತೆ ಪ್ರಜಾಸಾಮ್ರಾಜ್ಯಂ ಸಂಸ್ಥೆಯ ಆಶ್ರಯದಲ್ಲಿ ವರ್ಣ ವಿಚಾರವು ಸಾಮಾನ್ಯವಾಗಿಯೂ ಶೂದ್ರವಿಚಾರವು ವಿಶೇಷವಾಗಿಯೂ ತದ್ವಿದರಿಂದ ಪರಿಷ್ಕೃತವಾಗಿರುತ್ತವೆ. ಹೀಗೆ ಸಂಶೋಧಿತವಾದ ವಿವರಗಳನ್ನು ವಿಭಜನಸಂಯೋಜನ ಕ್ರಮದಲ್ಲಿ ಸಂಗ್ರಹಿಸಿ ಸ್ವಧರ್ಮ ವಿವೇಕದ ಪೂರಕವಾಗುವಂತೆ ಈ ಗ್ರಂಥದಲ್ಲಿ ಅಳವಡಿಸಲಾಗಿದೆ.

ಗ್ರಂಥದಲ್ಲಿ ಪುನಃ ಪುನಃ ಆವರ್ತವಾಗಿರುವ ವಿವರಣೆಗಳು ಪ್ರಮೇಯಾಂಶಗಳ ದೃಢವಾದ ಜ್ಞಾನಕ್ಕೂ ಮತ್ತು ಸಮರ್ಥನೆಗೂ ಮಹೋಪಕಾರಕಗಳಾಗಿರುತ್ತವೆ.

ಪುಸ್ತಕದ ರಚನಾವಸರದಲ್ಲಿ ಅನುಬಂಧಕ್ಕಾಗಿ ಉದಾಹರಿಸಿರುವ

---

* "…. The *Bhagavadgita* has also more than once and plainly declared that every man or woman is granted the freedom to work out his or her own advancement or downfall despite birth, heredity and other controls. This theoretically implies that a candidate from the four varnas can, under given circumstances, develop qualities either higher or lower than those normally expected of his order, and so can achieve his own self-elevation or self-degradation. The *Bhagavadgita* doctrine of Avataras and Vibhutis necessarily implies that there are, under the guidance of Providence, forces of reform and renovation steadily at work in human society, and that, *ipso facto*, there are the other forces, brought into existence by a mis-exercise of human freedom, which are (of course with the konwledge of Providence) working in the opposite direction. There arise in society recurrent waves of progress and regress. One must accordingly first gain a critical and historical understanding of one's own position and bearings, and then fearlessly fashion his own code of conduct." —S.K. Belvalkar, 'Two Mishandled Passages', pp. 5-6.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಾಹ್ಮಣಧರ್ಮ (ಯೂನಿವರ್ಸಲ್ ರಿಲಿಜನ್, ಇಂಗ್ಲಿಷ್) ಸಂಪುಟೀಕೃತ ಭಗವದ್ಗೀತಾ (ಕನ್ನಡ) ಆಪಸ್ತಂಬ ಧರ್ಮಸೂತ್ರ ಮಂಜರೀ (ಸಂಸ್ಕೃತ) ಗ್ರಂಥಗಳ ವಿಂಗಡಣೆ ಮತ್ತು ಜೋಡಣೆಗಳ ವಿನ್ಯಾಸ ಕ್ರಮದಲ್ಲಿ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ಮೂಲತತ್ವಗಳ ಜ್ಞಾನದಿಂದ ವಿರೋಧವೂ ವಿಷಮವೂ ಆದ ದುಷ್ಟ ಪರಿಸ್ಥಿತಿಯು ಅಸ್ತವಾಗುವುದು ; ಯಥಾರ್ಥ ಜ್ಞಾನವು ರೂಢಮೂಲವಾಗುವುದು; ಪಠನ ಮನನಾದಿಗಳಿಂದ ಸಕಲ ಸ್ತ್ರೀ ಮತ್ತು ಪುರುಷ ಪ್ರಜೆಗಳಿಗೂ ಸುಖ, ಶಾಂತಿ, ಸಮಾಧಾನಗಳೂ ಸ್ವರಾಜ್ಯ ಸಾಮ್ರಾಜ್ಯ ವಿಭೂತಿ ಲಾಭವೂ ಉಂಟಾಗುವುವು.

ಗ್ರಂಥದಲ್ಲಿ (ಪುಟ 172) ಬಳಕೆಗೆ ತಂದಿರುವ ಅಮ್‌ಋತ ಶಬ್ದವು ಗಮನಾರ್ಹವಾದುದು. ಅಮೃತವೆಂದು ಬರೆದಾಗ ಮೃತ ಶಬ್ದವು ಪ್ರಧಾನವಾಗಿರುವಂತೆ ಕಾಣುವುದು. ಇಂತಹ ಸನ್ನಿವೇಶ ಗಳಲ್ಲಿ ಅಮೃತ ಶಬ್ದವು ಮೃತ ಶಬ್ದದೊಡನೆ ಸಂಬಂಧವನ್ನು ಹೊಂದಿಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳಲು ಅಮ್‌ಋತ ವೆಂದೇ ಗ್ರಹಿಸಬೇಕಾಗಿದೆ. ಋತಕ್ಕೆ ಅನುಗುಣವಾಗಿ ಋತ ಸಮ್ಮತ ವಾಗಿ ನಡೆದು ಸುಖಶಾಂತಿ ಪ್ರದಾಯಕವಾಗುವುದೇ ಅಮ್‌ಋತ ವೆನಿಸುವುದು. (ಓಮ್ + ಋತಂ==ಅಮ್‌ಋತಂ)

ಈ ಗ್ರಂಥವನ್ನು ಪರಾಮರ್ಶಿಸಿ ಮುನ್ನುಡಿಯನ್ನು ಬರೆದ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳಿಗೂ ಸಾಧೂಕ್ತಿಗಳನ್ನು ದಯಪಾಲಿಸಿದ ವಿದ್ವಜ್ಜನ ಮಹನೀಯರಿಗೂ ಶ್ರೀಮಂತರಿಗೂ ಅನಂತ ಧನ್ಯವಾದ ಗಳನ್ನು ಸಂಸ್ಥೆಯವರು ಸಮರ್ಪಿಸುತ್ತಾರೆ.

ಮಹೀಸುರ ನಗರ
ಹೇವಿಳಂಬಿ, ಮಕರ ೨೩
ಶಕ ಪ್ರಚಲಿತ ೧೮೮೦

ಪ್ರಜಾಸಾಮ್ರಾಜ್ಯಂ ಸಂಸ್ಥೆಯ ಪರವಾಗಿ,
ಆಜ್ಞಾನುಸಾರ ಗ್ರಂಥರಚಯಿತಾ
ಆರ್. ಎ. ಸೂರ್ಯನಾರಾಯಣ
ಪುರೋಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸ್ತಾವನೆ

ಪ್ರಜಾಸಾಮ್ರಾಜ್ಯಂ (ಪಂಜೀನಿಬದ್ಧ) ಸಂಸ್ಥೆಯ ಧ್ಯೇಯೋದ್ದೇಶ ಸಾಧನೆಗಳಿಗಾಗಿ ನಿಯಮಾವಳಿಯಲ್ಲಿ ಕಂಡಂತೆ ಏರ್ಪಾಡಾದ ಅಷ್ಟ (8) ಶಾಖಾ ಸಮಿತಿಗಳ ಕಾರ್ಯ ಭಾಗಗಳನ್ನು ನಿರ್ವಹಿಸಲು ಆಗಾಗ್ಗೆ ಪ್ರಾರ್ಥಿಸಲ್ಪಟ್ಟು ಕೇಂದ್ರಸ್ಥಾಯಿಯಾ ಸಮಿತಿಯವರೊಡನೆ ಭಾಗವಹಿಸಿದ

ಶ್ರೀಯುತರಾದ —

ರಾಷ್ಟ್ರವಿಖ್ಯಾತ, ಪಂಡಿತರತ್ನಂ, ಅದ್ವೈತ ವೇದಾಂತ ವಿಶ್ರಾಂತ ಅಧ್ಯಾಪಕ, ಮೈಸೂರು ಅರಮನೆ ಧರ್ಮಾಧಿಕಾರಿ ನವೀನಂ ಎಂ. ಎಸ್. ವೆಂಕಟೇಶ ಶಾಸ್ತ್ರೀ

ಪಂಡಿತಪ್ರವರ ಮೈಸೂರು ವಿಶ್ವ ವಿದ್ಯಾ ನಿಲಯದ ಸಂಸ್ಕೃತ ಉಪ. ಪ್ರಾಧ್ಯಾಪಕ ಪಾಟಣಕರ್ ಚಂದ್ರಶೇಖರಭಟ್ಟ

ಮೈಸೂರು ಸಂಸ್ಕೃತ ಮಹಾಪಾಠಶಾಲಾಧ್ಯಕ್ಷ. ವೈದಿಕಧರ್ಮಾಚಾರ್ಯ ಏ. ಮಲ್ಲಿಕಾರ್ಜುನ ಶಾಸ್ತ್ರೀ, ಎಂ.ಎ. (ವೇದ ಮತ್ತು ದರ್ಶನ)

ಮೈಸೂರು ಸಂಸ್ಕೃತ ಮಹಾಪಾಠಶಾಲಾ ಸಾಹಿತ್ಯವಿಭಾಗ ಪ್ರಾಧ್ಯಾಪಕ ವೇದ ವೇದಾಂಗ ಷಟ್‌ಶಾಸ್ತ್ರ ವಿದ್ವಾನ್ ತುರುವೇಕೆರೆ ವಿಶ್ವೇಶ್ವರ ದೀಕ್ಷಿತ

ಮೈಸೂರು ಸಂಸ್ಕೃತ ಮಹಾಪಾಠಶಾಲಾ ಧರ್ಮಶಾಸ್ತ್ರ ಪ್ರಾಧ್ಯಾಪಕ ಚತುಶ್ಶಾಸ್ತ್ರ ಪಂಡಿತ ವಾಸುದೇವ ಸೋಮಯಾಜೀ

ಮೈಸೂರು ಅರಮನೆ ರಾಜಪುರೋಹಿತ ಎಂ. ಪಿ. ನಂಜುಂಡ ಶಾಸ್ತ್ರೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೈಸೂರು ಅರಮನೆ ಅಂಬಾ ವಿಳಾಸದ ತರ್ಕ ವೇದಾಂತ ವಿದ್ವಾನ್
ಕಾಶಿ ಪುರೋಹಿತ ನಂಜುಂಡ ಶಾಸ್ತ್ರೀ

ಮೈಸೂರು ಅರಮನೆ ಜ್ಯೋತಿಷ್ಯ ವಿದ್ವಾನ್ ಹೆಚ್. ಗಂಗಾಧರ ಶಾಸ್ತ್ರೀ

ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ, ತರ್ಕ-ವೇದಾಂತ
ಪೂರ್ವಮೀಮಾಂಸಾ ವಿದ್ವಾನ್ ಆರ್. ರಾಮ ಶಾಸ್ತ್ರೀ

ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಅರ್ಥಶಾಸ್ತ್ರ
ಸಂಶೋಧಕ ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್

ಸಂಸ್ಕೃತ ವಿದ್ವಾನ್ ಆರಡಿಕೊಪ್ಪಂ ವಿಶ್ವನಾಥ ಶಾಸ್ತ್ರೀ

ಶ್ರೌತ ವಿದ್ವಾನ್ ಕೃಷ್ಣಸ್ವಾಮಿ ಶಾಸ್ತ್ರೀ

ಆಗಮ ವಿದ್ವಾನ್ ನೆವ್ಮಾರ್ ರಾಮಕೃಷ್ಣ ಭಟ್ಟ

ಪೂರ್ವಮೀಮಾಂಸಾ ಮತ್ತು ವೇದಾಂತ ವಿದ್ವಾನ್ ಜೆ. ಎಸ್.
ಲಕ್ಷ್ಮೀನಾರಾಯಣ ಭಟ್ಟ

ವೇದಾಂತ ಶಿರೋಮಣಿ ಪಂಡಿತ ಎಸ್. ವಿಠಲಶಾಸ್ತ್ರೀ

ಚಿಲ್ಕುಂದ ವೇದ ಪಾಠಶಾಲಾಧ್ಯಕ್ಷ ವೇದವೇದಾಂತ ಸಂಶೋಧಕ
ಸಿ. ನಾಗಪ್ಪ ಶಾಸ್ತ್ರೀ

ವ್ಯಾಕರಣ ವೇದಾಂತ ವಿದ್ವಾನ್ ಸಾಲಿಗ್ರಾಮದ ಶ್ರೀಕಂಠಯ್ಯ.
ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್

ಮೈಸೂರು ವಿಶ್ವ ವಿದ್ಯಾ ನಿಲಯದ ಸಂಸ್ಕೃತ ವಿಭಾಗ ವಿಶ್ರಾಂತ
ಪ್ರಾಧ್ಯಾಪಕ ಎನ್. ಶಿವರಾಮ ಶಾಸ್ತ್ರೀ, ಎಂ.ಎ.

ಮೈಸೂರು ವಿಶ್ವ ವಿದ್ಯಾ ನಿಲಯದ ಸಂಸ್ಕೃತ ವಿಭಾಗ ವಿಶ್ರಾಂತ
ಪ್ರಾಧ್ಯಾಪಕ ವಿ. ಟಿ. ತಿರುನಾರಾಯಣ ಅಯ್ಯಂಗಾರ್, ಎಂ.ಎ.

ಮೈಸೂರು ವಿಶ್ವ ವಿದ್ಯಾ ನಿಲಯದ ಸಂಸ್ಕೃತ ವಿಭಾಗ ವಿಶ್ರಾಂತ
ಅಧ್ಯಾಪಕ ಆರ್. ಎನ್. ಸೂರ್ಯನಾರಾಯಣ, ಎಂ.ಎ.

ಸಂಶೋಧಕ ಗ್ರಂಥಕರ್ತಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೈಸೂರು ವಿಶ್ವ ವಿದ್ಯಾ ನಿಲಯದ ಸಂಸ್ಕೃತ ವಿಭಾಗ ಅಧ್ಯಾಪಕ
ಡಾ|| ಆರ್. ಎಸ್. ಶಿವಗಣೇಶ ಮೂರ್ತಿ, ಎಂ.ಎ., ಪಿಎಚ್.ಡಿ.

ಮೈಸೂರು ವಿಶ್ವ ವಿದ್ಯಾ ನಿಲಯದ ತತ್ವಶಾಸ್ತ್ರ ಉಪಪ್ರಾಧ್ಯಾಪಕ
ಹೆಚ್. ಕೆ. ರಾಜರಾವ್, ಎಂ.ಎ.

ಮೈಸೂರು ವಿಶ್ವ ವಿದ್ಯಾ ನಿಲಯದ ಕನ್ನಡ ಪ್ರಾಧ್ಯಾಪಕ
ಎಸ್. ವಿ. ಪರಮೇಶ್ವರ ಭಟ್ಟ, ಎಂ.ಎ.

ಮೈಸೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರಪ್ರಾಧ್ಯಾಪಕ, ಯುವರಾಜ
ಕಾಲೇಜ್ ಅಧ್ಯಕ್ಷ ಡಾ| ಎಲ್. ಸೀಬಯ್ಯ, ಡಿ.ಎಸ್.ಸಿ.

ಸಾಮುದ್ರಿಕ ಜ್ಯೋತಿಷ್ಯ ವಿದ್ವಾನ್ ಹೆಚ್. ಎಸ್. ವೆಂಕಟರಾವ್
ಎಂ.ಎ., ಎಂ.ಎಡ್., ಬಿ.ಎಲ್.

ಅನಂತ ಪದ್ಮನಾಭ ಭಾಗವತ, ಎಂ.ಎ., ಬಿ.ಎಸ್‌ಸಿ., ಎಂ.ಎಡ್.

ಸಂಗೀತವಿದ್ವಾನ್ ಕೀರ್ತನಕೇಸರಿ ಕೊಣನೂರು ಸೀತಾರಾಮಶಾಸ್ತ್ರೀ

ಆರ್. ಕೆ. ವೆಂಕಟರಮಣಯ್ಯ, ವಯಸ್ಕರ ಶಿಕ್ಷಣಶಾಖೆ

ಹೆಚ್. ರಾಮಕೃಷ್ಣರಾವ್, ಭಗವಾನ್ ಆಶ್ರಮ, ಶಿವಮೊಗ್ಗ

ಮೈಸೂರು ನಗರದ ಎಂಜನಿಯರಿಂಗ್ ಕಂಟ್ರಾಕ್ಟರ್ ಗುಂಡಪ್ಪ

ರಿ|| ಅಕೌಂಟೆಂಟ್ ಹೆಚ್. ಎಂ. ಸುಬ್ಬರಾವ್

ಮೈಸೂರು ವಿಶ್ವ ವಿದ್ಯಾ ನಿಲಯದ ಉಪಕುಲಪತಿ ತತ್ವಶಾಸ್ತ್ರ
ಪ್ರೊಫೆಸರ್ ಎನ್. ಎ. ನಿಕಂ, ಎಂ.ಎ.

ವಿಶ್ರಾಂತ ಚೀಫ್ ಎಂಜಿನಿಯರ್ ಎನ್. ನೀಲಕಂಠಪ್ಪ, ಬಿ.ಇ.

ಅಡ್ವೋಕೇಟ್ ಎಸ್. ವೆಂಕಟಪತಯ್ಯ, ಬಿ.ಎ., ಬಿ.ಎಲ್.
,, ಎಂ. ಎ. ದೊರೆಸ್ವಾಮಯ್ಯಂಗಾರ್, ಎಂ.ಎ., ಬಿ.ಎಲ್.
,, ಆರ್. ಕೆ. ಆನಂದರಾಮಯ್ಯ, ಬಿ.ಎಸ್‌ಸಿ., ಬಿ.ಎಲ್.
,, ಕೆ. ಶೇಷಾದ್ರಿ, ಬಿ.ಎ., ಎಲ್‌ಎಲ್.ಬಿ.

*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

— ಈ ಮಹಾಶಯರ ಸಹಕಾರ ಸೂಕ್ತಿ ಸಂವಿಧಾನಗಳಿಂದಲೂ ವಿಷಯ ವಿವೇಚನೆ ವಿಮರ್ಶೆಗಳಿಂದಲೂ, ಮೇಲುವಿಚಾರಣೆಯಿಂದಲೂ ಸಂಸ್ಕೃತಿ ಮತ್ತು ರಾಜನೀತಿ ಶಾಸ್ತ್ರಗಳ ಸಂಶೋಧನವು ಸುಗಮವಾಗಿ ನಡೆದು ಪೂರ್ಣ ಫಲ ಪ್ರದಾಯಕವಾಗಿರುತ್ತದೆ.

ಸ್ತ್ರೀ ಸಂಸ್ಕೃತಿ ಶಿಕ್ಷಣ ಶಾಖಾ ಉಪಸಮಿತಿಯ ಆಶ್ರಯದಲ್ಲಿ ನಡೆದ ಸ್ತ್ರೀ ಸಮ್ಮೇಳನಗಳಲ್ಲಿ ಉಪನ್ಯಾಸ, ಚರ್ಚಾ ಮತ್ತು ವಿಮರ್ಶೆಗಳಲ್ಲಿ ಭಾಗವಹಿಸಿದ —

ಶ್ರೀಮತಿಯರಾದ :

ವಿದುಷಿ ಧರ್ಮಾಂಬಾಳ್, ಶಾರದಮ್ಮ, ಕೆ. ಸುಬ್ಬಮ್ಮ, ಸರಸ್ವತಮ್ಮ, ಚಾಮುಂಡೀಪುರಂ ರತ್ನಮ್ಮ, ಯಾದವಗಿರಿ ರತ್ನಮ್ಮ ಡಾ॥ ನಾಗಪ್ಪ, ರುದ್ರಪಟ್ಟಣದ ಲಕ್ಷ್ಮಮ್ಮ, ಹನಸೋಗೆ ರಾಜಲಕ್ಷ್ಮಮ್ಮ ಪಿ. ರಾಜಮ್ಮ, ಸಂತೇಪೇಟೆ ಬಾಲಮ್ಮ, ಸಂಸ್ಕೃತವಿದುಷಿ ಹ. ಕೃ. ಶ್ರೀಲಕ್ಷ್ಮಿ, ಹಿಂದೀರತ್ನ, ಮಹಾರಾಣಿ ಹೈಸ್ಕೂಲ್ ಕನ್ನಡಪಂಡಿತೆ ಗೌರಮ್ಮ. ಪುಣ್ಯವತಮ್ಮ, ಜಯಭಾರತೀ, ಭ್ರಮರಾಂಬಾ — ಇವರ ಸಹಕಾರದಿಂದ ಕಾರ್ಯಾಭ್ಯುದಯಗಳು ನಡೆದಿರುತ್ತವೆ.

ತಜ್ಞರೂ ವಿದ್ವಾಂಸರೂ ಪದವೀಧರರೂ ವಿಮರ್ಶಕರೂ ಸಂಶೋಧಕರೂ ಆದ ಬಹುಸಂಖ್ಯೆಯ ವಿಖ್ಯಾತ ಮಹನೀಯರು ಸಂಸ್ಕೃತಿ, ವಿವಾಹ ಸಂಸ್ಕೃತಿ. ರಾಜನೀತಿ, ಜ್ಯೋತಿರ್ದರ್ಶನಗಳ ವಿಚಾರವಾಗಿ ವಿಮರ್ಶಾ ಪೂರ್ವಕ ಉಪನ್ಯಾಸ ಪ್ರವಚನಗಳಿಂದಲೂ ತಚ್ಛ್ರವಣದಿಂದಲೂ ಸಂಸ್ಥೆಯ ಕಾರ್ಯವು ಚರಿತಾರ್ಥವಾಗುವಂತೆ ಮಾಡಿ ಪ್ರೋತ್ಸಾಹಿಸಿರುತ್ತಾರೆ.

ಸಂಸ್ಕೃತಿ ಸಾಧನ – ಉಪಸಮಿತಿಯ ಆಶ್ರಯದಲ್ಲಿ ಪ್ರಯೋಗ ಶಾಲೆಯ ಪ್ರಯೋಗಗಳಂತೆ ಫಲಪ್ರದವಾಗುವ ವಿವಾಹ ಮೊದಲಾದ ಸಂಸ್ಕೃತಿಗಳ ತತ್ವ ವಿಚಾರವಾಗಿ ಪ್ರಜೆಗಳೆಲ್ಲರೂ ತಿಳಿಯುವುದಕ್ಕೂ ತಿಳಿದುದನ್ನು ಅನುಷ್ಠಾನದಲ್ಲಿಟ್ಟುಕೊಳ್ಳುವುದಕ್ಕೂ ತಕ್ಕ ಅವಕಾಶವನ್ನು ಕಲ್ಪಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಚಾರ ವಿಮರ್ಶೆ ವಿವೇಚನೆಗಳಿಲ್ಲದ ತಿಳಿವಳಿಕೆಯನ್ನು ಮೀರಿ ಬೆಳೆಸಿ ವಿವೇಕ ವಿಜ್ಞಾನಮಯವಾದ ಜ್ಞಾನದಿಂದ ರಾಷ್ಟ್ರದ ಪ್ರಜೆಗಳೆಲ್ಲರೂ ರಾಷ್ಟ್ರ ಮತ್ತು ರಾಷ್ಟ್ರೈಕ್ಯ ಭಾವನೆಯಿಂದ ಏಕ ಪ್ರಕಾರವಾಗಿ ಸಂಸ್ಕೃತಿ. ಆಚಾರ. ವ್ಯವಹಾರಗಳಲ್ಲಿ ಪ್ರಗತಿಯನ್ನು ಸಾಧಿಸಲು ಪೋಷಕವೂ ಪ್ರಚೋದಕವೂ ಆದ ರಾಜನೀತಿಯ ಮೂಲ ತತ್ವ ಪ್ರಕಾಶಕ ವಿಷಯಗಳನ್ನು ಅಧಿಕರಿಸಿ ಅನುಸ್ಯೂತವಾಗಿ ನಡೆಸಿದ ಸರ್ವತೋಮುಖವಾದ ವಿಸ್ತೃತ್ ಸಂಶೋಧನ ಕಾರ್ಯ ವಿವರಗಳನ್ನು ಸಂಗ್ರಹಿಸಿ ಅವುಗಳ ಪ್ರಕಾಶನದಿಂದ ಸಾರ್ವತ್ರಿಕವಾಗಿಯೂ ಮತ್ತು ಸಾರ್ವಜನಿಕವಾಗಿಯೂ ರಾಷ್ಟ್ರಾದ್ಯಂತ ಹರಡುವಂತೆ ಮಾಡುವ

1. 1) ರಾಜನೀತಿ ಸ್ಥಾನ. ಮಹಿಮೆ 2) ಸ್ವಧರ್ಮ ವಿವೇಕ 3) ವರ್ಣ ಮೀಮಾಂಸಾರ್ಗತ ಶೂದ್ರಮೀಮಾಂಸಾ 4) ಪುರುಷ ಸೂಕ್ತಾರ್ಥ ವಿವರಣೆ

2. 1) ಗ್ರಹಚಾರ ಮತ್ತು ಜ್ಯೋತಿಶ್ಶಾಸ್ತ್ರ ತತ್ವ 2) ಕಾಲ. ಕರ್ಮ, ಅಮೃತ ಮಂಥನ 3) ವ್ಯವಹಾರ ಪಂಕಜ (ಜಾತಿವಾದ ಖಂಡನ).

3. ಶ್ರೀರಾಮ ಸಂಜೀವಿನೀ, ಕೈಕೇಯೀ

ಗ್ರಂಥಗಳನ್ನು ಸಂಸ್ಥೆಯ ನಿರ್ಣಯಾನುಸಾರ ಪುರೋಧರಾದ ಶ್ರೀ ಆರ್. ಎಲ್. ಸೂರ್ಯನಾರಾಯಣ ರವರು ರಚಿಸಿರುತ್ತಾರೆ. ಹೀಗೆ ರಚಿತವಾದ ಕಾಲ, ಕರ್ಮ. ಅಮೃತ ಮಂಥನವೆಂಬ ಪ್ರಬುದ್ಧವೂ ಪರಿಶೋಧಿತವೂ ಪರಿಷ್ಕೃತವೂ ಪ್ರಚೋದಕವೂ ಆದ ಲೇಖನವು ಬೆಂಗಳೂರು ಶ್ರೀ ಬಿ. ವಿ. ರಾಮನ್ ರವರ ಅಸ್ಟ್ರಲಾಜಿಕಲ್ ಮ್ಯಾಗಜೈನ್ ಪತ್ರಿಕೆಯಲ್ಲಿ (ಪುಟ 779-782, 836-860 — 1961) ರಲ್ಲಿ ಪ್ರಕಟವಾಗಿರುತ್ತದೆ.

ಪ್ರಜೆಗಳು ಸಂಕಲ್ಪ ಪೂರ್ವಕ ಕೈಗೊಂಡು ನಿರ್ವಹಿಸುವ ಶಾಸ್ತ್ರೋಕ್ತ-ಅನುಷ್ಠಾನಗಳಲ್ಲಿ ಲೋಪ ದೋಷಗಳಿಗೆ ಅವಕಾಶವಿಲ್ಲದೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ತವ್ಯಕರ್ಮಗಳು ಪ್ರಯೋಗಗಳಂತೆ ಶುಭಫಲಪ್ರದವಾಗಲು ಮಾರ್ಗ ದರ್ಶಕವಾಗಿ ಸಹಕರಿಸುವಂತೆ ಸಂಸ್ಥೆಯವರು ಮುದ್ರಿಸಿ ಪ್ರಕಟಿಸಿರುವ ವ್ರತಗ್ರಂಥಗಳೂ ಪಾರಾಯಣಗ್ರಂಥಗಳೂ ಜನಾದರಣೀಯವಾಗಿರುತ್ತವೆ -- ಗೌರೀ ಗಣಪತಿ ವ್ರತ, ಶ್ರೀರಾಮ ಪೂಜಾವಿಧಿ, ಸುಂದರಕಾಂಡ, ಮಂಗಳ ವಿವಾಹಸಂಸ್ಕೃತಿ, ಮಂಗಳಾಶಾಸನ ಪದ್ಯಮಾಲಿಕಾ. ಶಂಕರ ಗುರು ಪೂಜಾ ರಾಜನೀತಿ ತತ್ವಗರ್ಭಿತ ಜಡ್ಜ್ ಮೆಂಟ್ ಇತ್ಯಾದಿ.

ಅಭೂತ ಪೂರ್ವವೂ ಅತ್ಯವಶ್ಯಕವೂ ಆಗಿ ಶಾಸ್ತ್ರೀಯ ವಿಷಯಗಳಿಗೆ ಸಂಬಂಧಿಸಿದ ಸ್ವಧರ್ಮ ವಿವೇಕ, ಶೂದ್ರ ಮೀಮಾಂಸಾ, ಪುರುಷಸೂಕ್ತಾರ್ಥ ವಿವರಣೆ ಗ್ರಂಥಗಳ ಕೈಬರಹದ ಪ್ರತಿಗಳನ್ನು ವೇ|| ಬ್ರ|| ಶ್ರೀಗಳಾದ ರಾಷ್ಟ್ರ ವಿಖ್ಯಾತ ಮೈಸೂರು ಅರಮನೆ ಧರ್ಮಾಧಿಕಾರಿಗಳಾದ ಪಂಡಿತರತ್ನಂ ನವೀನಂ ವೆಂಕಟೇಶ ಶಾಸ್ತ್ರಿಗಳು ಪೂರ್ವೋತ್ತರ ಮೀಮಾಂಸಾ - ಪಂಡಿತ ಪ್ರವರ ಪ್ರಾಚೀನ ಮತ್ತು ನವೀನನ್ಯಾಯ ವಿದ್ವಾನ್ ಬೆಂಗಳೂರು ಎಂ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು ; ಕಡಬದ ಹೈಸ್ಕೂಲ್ ಸಂಸ್ಕೃತ ಪಂಡಿತ ಉ. ಕೆ. ಲಕ್ಷ್ಮೀ ನರಸಿಂಹಶಾಸ್ತ್ರಿಗಳು ; ತರ್ಕ, ವೇದಾಂತ ವಿದ್ವಾನ್ ಕಾಶಿ ಪುರೋಹಿತ ನಂಜುಂಡ ಶಾಸ್ತ್ರಿಗಳು ; ಸಂಶೋಧಕರೂ ಗ್ರಂಥ ಕರ್ತರೂ ಆದ ಆಯುರ್ವೇದ ವಿದ್ವಾನ್ ಡಾ|| ಎನ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳು, ಎಲ್.ಎ.ಎಂ.ಎಸ್. ಮತ್ತು ಎಲ್.ಎಂ.ಪಿ. — ಇವರೆಲ್ಲರೂ ಪರಿಶ್ರಮದಿಂದ ಅವಲೋಕನಮಾಡಿ ಅಮೋಘವಾದ ಸಾಧು ಸೂಕ್ತಿಗಳಿಂದ ಪ್ರಶಂಸನ ಮಾಡಿರುತ್ತಾರೆ.

ಮೈಸೂರು ವಿಶ್ವ ವಿದ್ಯಾನಿಲಯದ ಮಹಾರಾಜ ಕಾಲೇಜ್ ಇತಿಹಾಸ ಪ್ರಾಧ್ಯಾಪಕರೂ ಸುಪ್ರಸಿದ್ಧ ವಿಮರ್ಶಕರೂ ಗ್ರಂಥಕರ್ತರೂ ಆದ ಡಾ|| ಎಸ್. ಶ್ರೀಕಂಠ ಶಾಸ್ತ್ರೀ, ಎಂ.ಎ., ಡಿ.ಲಿಟ್. ಅವರು ಶೂದ್ರಮೀಮಾಂಸಾ ಗ್ರಂಥವನ್ನು ಸಮೀಕ್ಷಿಸಿ ಮುನ್ನುಡಿಯನ್ನು ದಯಪಾಲಿಸಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖ್ಯಾತರಾದ ಅಡ್ವೋಕೇಟ್ ಶ್ರೀ ಸಂಪಿಗೆ ವೆಂಕಟಪತಯ್ಯನವರು ಗ್ರಂಥಗಳನ್ನು ಆಮೂಲಾಗ್ರವಾಗಿ ನೋಡಿ ಅಪಾರವಾದ ಮೆಚ್ಚುಗೆಯಿಂದ ಅಭಿನಂದಿಸಿ ಉತ್ತೇಜನವನ್ನು ದಯಪಾಲಿಸಿರುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ. ಎಂ.ಎ.,ಬಿ.ಎಲ್. ರಿ. ಚೀಫ್ ಜಸ್ಟಿಸ್ ಮೈಸೂರು ಹೈಕೋರ್ಟ್, ಬೆಂಗಳೂರು – ಅವರು ಪ್ರಜಾಸಾಮ್ರಾಜ್ಯಂ ಪ್ರಕಾಶನಗಳ ಆವಶ್ಯಕತೆಯನ್ನು ತಿಳಿಸಿ ಪ್ರೋತ್ಸಾಹ ಪತ್ರವನ್ನು ಬರೆದಿರುತ್ತಾರೆ.

ಮೈಸೂರು ಹೈಕೋರ್ಟ್ ರಿ॥ ಜಸ್ಟಿಸ್ ಶ್ರೀ ಎ೯. ಬಾಲಕೃಷ್ಣಯ್ಯ ಅವರು ಪ್ರಜಾಸಾಮ್ರಾಜ್ಯಂ ಸಂಸ್ಥೆಯು ಕೈಗೊಂಡಿರುವ ಸಂಸ್ಕೃತಿ ಸಂಶೋಧನ ಕಾರ್ಯಗಳನ್ನು ಶ್ಲಾಘಿಸಿ ಮೇಲ್ಕಂಡ ಗ್ರಂಥಗಳು ಜನತೆಗೆ ಉಪಕಾರಕವಾಗಿರುತ್ತವೆಂದು ಹೇಳಿರುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಣಿ ಕಾಲೇಜ್ ಸಮಾಜಶಾಸ್ತ್ರ ಉಪಪ್ರಾಧ್ಯಾಪಕ ಶ್ರೀ ವಿ. ಮುದ್ದಲಿಂಗಣ್ಣನವರು ಪ್ರೋತ್ಸಾಹಿಸಿ ಪ್ರಶಂಸಾ ಪತ್ರವನ್ನು ಬರೆದಿರುತ್ತಾರೆ.

ಡಾ॥ ಹೆಚ್. ಎಸ್. ಕೃಷ್ಣಮೂರ್ತಿ ಬಿ.ಎಸ್‌ಸಿ. ಎಲ್.ಎ. ಎಂ.ಎಸ್. ಎಂ.ಬಿ.ಬಿ.ಎಸ್.,ಎಂ.ಎಸ್. (ಫಾರ್ಮಕಾಲಜಿ) ಅಸೋಸಿಯೇಟ್ ಪ್ರೊಫೆಸರ್, ಫಾರ್ಮಕಾಲಜಿ, ಮೆಡಿಕಲ್ ಕಾಲೇಜ್, ಬೆಂಗಳೂರು ಅವರು ಸಂಸ್ಥೆಯು ಪ್ರಾರಂಭವಾದಾಗಿನಿಂದಲೂ ಧನಮುಸಗಳಿಂದ ಅಮೋಘವಾದ ಸಹಾಯವನ್ನು ನೀಡಿರುತ್ತಾರೆ.

ಗ್ರಹಚಾರ. ಜ್ಯೋತಿಶ್ಶಾಸ್ತ್ರ ಮಹಿಮೆ ಗ್ರಂಥದಲ್ಲಿ ಗ್ರಹವು ಪ್ರಪಂಚವನ್ನೆಲ್ಲಾ ಆವರಿಸಿ ಸೃಷ್ಟಿ ಸ್ಥಿತಿ ಲಯಗಳಿಗೆ ಮೂಲವಾಗಿ ಪ್ರತಿ ವ್ಯಕ್ತಿಯ ಚೇಷ್ಟೆಗಳೆಲ್ಲಾ ಅನ್ವಯಿಸುವ ವಿಚಾರವು ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿದೆ. ಆದಿತ್ಯಾದಿ ಜ್ಯೋತಿರ್ಘನಗಳು ಪಂಚಭೂತಾತ್ಮಕವಾಗಿ ಪ್ರಪಂಚವನ್ನೆಲ್ಲಾ ಆವರಿಸಿರುವ ವಿಚಾರವನ್ನೂ ಭೂಮಿಯೂ ಸಹ ಜ್ಯೋತಿರ್ಘನಗಳಲ್ಲಿ ಒಂದಾಗಿರುವ ವಿಚಾರವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರ್ಕಬದ್ಧವಾಗಿ ಆಧುನಿಕ ವಿಜ್ಞಾನ ಪದ್ಧತಿಗೂ ಹೊಸದಾಗಿರುವ ಕ್ರಮದಲ್ಲಿ ತಿಳಿಸುವ ಅದ್ಭುತ ವಿಮರ್ಶಾ ಗ್ರಂಥ. ಇದರ ಹಸ್ತಪ್ರತಿಯನ್ನು ವಿದ್ವಾನ್ ಆರಡಿಕೊಪ್ಪಂ ವಿಶ್ವನಾಥ ಶಾಸ್ತ್ರಿಗಳೂ ಶ್ರೀ ರಂಗನಾಥ ಚಕ್ರವರ್ತಿಗಳೂ ಪರಾಮರ್ಶಿಸಿ ಸದಭಿಪ್ರಾಯವನ್ನು ದಯಪಾಲಿಸಿರುತ್ತಾರೆ.

ಧಾರ್ಮಿಕ ಅನುಷ್ಠಾನಗಳಿಗೆ ಆಶ್ರಯದಾತರೂ ಆದರ್ಶಪ್ರಾಯರೂ ಆದ ಶ್ರೀಮಂತ ಮಹಾಪ್ರಭುಗಳು ಸ್ವಧರ್ಮವಿವೇಕ, ಶೂದ್ರವಿಮಾಂಸಾ, ಪುರುಷಸೂಕ್ತಾರ್ಥವಿವರಣ ಗ್ರಂಥಗಳನ್ನು ಅವಲೋಕನಮಾಡಿ ಉದಾರ ಕೃಪಾಶ್ರಯವನ್ನು ಧನ ಪೂರ್ವಕವಾಗಿ ಸೂಚಿಸಿರುತ್ತಾರೆ.

ಧರ್ಮಕಾರ್ಯ ಪ್ರವೀಣ ಶ್ರೀಮಂತ ಶ್ರೀ ಟಿ. ತಿಮ್ಮಪ್ಪನವರು ತಾತ್ಕಾಲಿಕ ಧನಸಹಾಯದ ಮೂಲಕ ಗ್ರಂಥ ಪ್ರಕಾಶನಗಳನ್ನು ಪ್ರೋತ್ಸಾಹಿಸಿರುತ್ತಾರೆ.

ಶ್ರೀಮದಿತ್ಯಾದಿ ಶ್ರೀ ಶ್ರೀ ದ್ವಾರಕಾ ಶಂಕರಾಚಾರ್ಯಜಗದ್ಗುರು ಪೀಠಾಧಿಪತಿಗಳು ಪ್ರಕಾಶನಕ್ಕೆ ಸಿದ್ಧವಾಗಿರುವ ಮೇಲ್ಕಂಡ ಪುಸ್ತಕ ತ್ರಯಗಳನ್ನು ನೋಡಿ ಶ್ರೇಯೋಭಿವೃದ್ಧಿಯನ್ನು ಅನುಗ್ರಹಿಸಿರುತ್ತಾರೆ.

ಶ್ರೀ ಶ್ರೀ ಶೃಂಗಗಿರಿ ಜಗದ್ಗುರು ಶ್ರೀ ಶಾರದಾ ಪೀಠಾಧಿಪತಿಗಳಾದ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀ ಜಗದ್ಗುರು ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಯವರು ಮಹೀಸುರ ನಗರದಲ್ಲಿ ಸಂಸ್ಥೆಯವರು ವಿಜ್ಞಾಪನ ಪತ್ರಿಕೆಯ ಮೂಲಕ ಮಾಡಿದ ಪ್ರಾರ್ಥನೆಯಂತೆ ಮೇಲ್ಕಂಡ ಹಸ್ತ ಲಿಖಿತ ಪುಸ್ತಕಪ್ರತಿಗಳನ್ನು ಅವಲೋಕನಮಾಡಿ ಸದಸ್ಯರನ್ನು ಸಂಬೋಧಿಸಿ ಮಾಡಿದ ಅನುಗ್ರಹ ಭಾಷಣದ ಮೂಲಕ ಗ್ರಂಥ ಮಹಿಮೆಯನ್ನು ಪ್ರಶಂಸಿಸಿ ನಾರಾಯಣ ಸ್ಮೃತಿಯ ಮೂಲಕ ಶುಭೋದರ್ಕವನ್ನು ಅನುಗ್ರಹಿಸಿರುತ್ತಾರೆ.

ಪುಸ್ತಕಗಳ ಅಂದಾಜಾ ಪೂರ್ವಕಲ್ಪನೆಯ ಬೆಲೆಯನ್ನು ಮುಂಗಡವಾಗಿ ಪಾವತಿ ಮಾಡುವುದರ ಮೂಲಕ ಪುಸ್ತಕ ಮುದ್ರಣಕ್ಕೆ ನೆರವಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕೆಂಬ ಸಮಿತಿಯವರ ಪ್ರಾರ್ಥನೆ ಮೇರೆ ಉದಾರ ಮಹಾಶಯರು ದಯಪಾಲಿಸಿದ ಮೊಬಲಗನ್ನು ಸಂಗ್ರಹಿಸಿ ಗ್ರಂಥ ಮುದ್ರಣ ಮತ್ತು ಪ್ರಕಾಶನಗಳನ್ನು ಕಾರ್ಯಗತ ಮಾಡಲು ಏರ್ಪಡಿಸಿದ ಉಪಸಮಿತಿಯ ಸದಸ್ಯರಾದ ಶ್ರೀಯುತ : ಎನ್. ಎಲ್. ನರಸಿಂಹಯ್ಯ, ಸಂತೇಪೇಟೆ ಕುಂಚಿಟಿಗರ ಸಂಘದ ಮುಖಂಡರು, ಕೆ. ಕೃಷ್ಣಯ್ಯಂಗಾರ್, ಎಂ.ಎ., ಇಂಗ್ಲಿಷ್ ವಿಭಾಗ, ಮಹಾರಾಜ ಕಾಲೇಜ್ ; ಕೆ. ಶೇಷಾದ್ರಿ, ಅಡ್ವೋಕೇಟ್, ಸಂಸ್ಥೆಯ ಗೌ॥ಕಾರ್ಯದರ್ಶಿ; ಆರ್.ಎನ್.ಸೂರ್ಯನಾರಾಯಣ, ಎಂ.ಎ., ಪುರೋಧರು ಪ್ರಜಾಸಾಮ್ರಾಜ್ಯ — ಇವರು ಸ್ವಧರ್ಮವಿವೇಕ 120 ಪುಟ, ಶೂದ್ರಮೀಮಾಂಸಾ 30 ಪುಟಗಳಷ್ಟು ಮುದ್ರಣ ಮಾಡಿಸಿದರು. ಉಳಿದ ಭಾಗಗಳ ಮುದ್ರಣ ವ್ಯವಸ್ಥೆಗಳನ್ನು ಏಕೈಕ ಸದಸ್ಯರಿಗೆ ವಹಿಸಿ ಪ್ರಕಾಶನ ಕಾರ್ಯವನ್ನು ಸಾಧಿಸುವುದರ ಔಚಿತ್ಯವನ್ನು ಮನಗಂಡು,

"ಸದಸ್ಯರೂ, ಪ್ರಜೆಗಳೂ ಸ್ವಂತವಾಗಿ ಧನವನ್ನು ಮುಂಗಡವಾಗಿ ವಿನಿಯೋಗಿಸಿ ಪ್ರಜಾಸಾಮ್ರಾಜ್ಯ ಗ್ರಂಥಗಳನ್ನು ವೈಯಕ್ತಿಕವಾಗಿ ಮುದ್ರಣ ಮಾಡಿಸಿ ಸಂಸ್ಥೆಯ ಮೂಲಕ ಗ್ರಂಥ ವಿಕ್ರಯದಿಂದ ಪಡೆದ ಮೊಬಲಗಿನಿಂದ, ತಮ್ಮ ಧನವನ್ನು ವೃದ್ಧ್ಯಂಶ ಸಮೇತ ಹಿಂದಕ್ಕೆ ಪಡೆಯುವ ಗೊತ್ತುವಳಿಯಿಂದ ಗ್ರಂಥ ಮುದ್ರಣ ಪ್ರಕಾಶನಗಳಿಗೆ ಏರ್ಪಾಡು ಮಾಡತಕ್ಕದ್ದು."

ಎಂಬ ನಿಯಮಾವಳಿಗನುಸಾರವಾಗಿ ಮಾಡಿದ ಪ್ರಾರ್ಥನೆಯನ್ನು ಅಂಗೀಕರಿಸಿ ಸಂಸ್ಥೆಯ ಸಂಶೋಧನ ಸಮಿತಿ ಸಂಚಾಲಕರಾದ ರುದ್ರಪಟ್ಟದ ಡಾ॥ ಆರ್. ಎಸ್. ಶಿವಗಣೇಶ ಮೂರ್ತಿ, ಎಂ.ಎ.,ಪಿಎಚ್.ಡಿ., ಸಂಸ್ಕೃತ ವಿಭಾಗ, ಮೈಸೂರು ವಿಶ್ವ ವಿದ್ಯಾನಿಲಯ–ಅವರು ಪ್ರಕಾಶನ ನಿಯಮಾವಳಿ ಪ್ರಕಾರ ರಾಜನೀತಿ ಮೂಲತತ್ವ ಪ್ರಕಾಶನಗಳಾದ ಸ್ವಧರ್ಮ ವಿವೇಕ, ಶೂದ್ರ ಮೀಮಾಂಸಾ ಗ್ರಂಥಗಳಲ್ಲಿ ಮುದ್ರಣವಾಗದೆ ನಿಂತಿದ್ದ ಮುಕ್ಕಾಲು ಭಾಗಗಳನ್ನೂ, ರಾಜನೀತಿ (ಸ್ಥಾನ, ಮಹಿಮೆ) ಕೈಪಿಡಿಯನ್ನೂ ಮುದ್ರಣ ಮಾಡಿಸಿ ಗ್ರಂಥ ಪ್ರಕಾಶನಕ್ಕೆ ಸಿದ್ಧಪಡಿಸಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥಗಳಲ್ಲಿ ಕಂಡ ಮೂಲಭೂತ ವಿಷಯಗಳಿಗೆ ಪರಮೋಪಕಾರಕವಾದ ಪುರುಷಸೂಕ್ತಾರ್ಥ ವಿವರಣ ಗ್ರಂಥವನ್ನು ಪ್ರತ್ಯೇಕವಾಗಿ ಮುದ್ರಿಸಿ ಪ್ರಕಾಶಿಸುವುದು ಸೂಕ್ತವೆಂದು ಭಾವಿಸಲಾಗಿದೆ. ಡಾ|| ಆರ್. ಎಸ್. ಶಿವಗಣೇಶಮೂರ್ತಿಯವರು ಶಂಕರಗುರುಪೂಜಾ ಗ್ರಂಥವನ್ನು ಮುದ್ರಣ ಮಾಡಿಸಿ ಪ್ರಜಾಸಾಮ್ರಾಜ್ಯ ಸಂಸ್ಥೆಯ ಮೂಲಕ ವಿಕ್ರಯಕ್ಕೆ ವ್ಯವಸ್ಥೆ ಮಾಡಿರುತ್ತಾರೆ.

ಸಂಶೋಧನ, ಪರಿಶೋಧನ ವಿಮರ್ಶಾ ಪದ್ಧತಿಗಳ ಮೂಲಕ ರಾಜನೀತಿ ಮೂಲ ಭೂತ ತತ್ವಗಳನ್ನು ಪ್ರಪ್ರಥಮವಾಗಿ ಪ್ರಕಾಶನ ಮಾಡುವ ಮಹತ್ಕಾರ್ಯವನ್ನು ಮಹೀಸುರ ಪ್ರದೇಶದ ಪ್ರಜಾಸಾಮ್ರಾಜ್ಯಂ ಸಂಸ್ಥೆಯವರಾದ ರಾಷ್ಟ್ರದ ಪ್ರಜೆಗಳು ಸಾಧಿಸಿ ರಾಷ್ಟ್ರವೈಶಿಷ್ಟ್ಯ, ಔನ್ನತ್ಯ, ಗೌರವಗಳನ್ನೂ ವಿಶ್ವಾದರಣೀಯವಾದ ಪ್ರಜಾಪ್ರಭುತ್ವ ತತ್ವವನ್ನೂ ಪ್ರಕಾಶಪಡಿಸಿ ಕೀರ್ತಿಗೆ ಪಾತ್ರರಾಗಿರುವುದು ಗೀರ್ವಾಣ ಭಾಷಾಭಿಜ್ಞರೂ ಸಂಸ್ಕೃತಿ ರಾಜನೀತಿ ನಿಷ್ಠೆಯುಳ್ಳವರೂ ಆದ ಮಹೀಸುರ ದೇಶದ ಪ್ರಜೆಗಳ ಸರ್ವೋತ್ತಮ ಆದರ್ಶವಾಗಿರುತ್ತದೆ. ರಾಜರಾದ ಪ್ರಜೆಗಳು ಅಥವಾ ಪ್ರಜೆಗಳಾದ ರಾಜರು ಸ್ವತಂತ್ರವೂ ಸ್ವಂತವೂ ಆದ ರಾಜ್ಯಭಾರವನ್ನು ಹೊಂದಿರುವ ಈ ಸಮಯದಲ್ಲಿ ರಾಷ್ಟ್ರವು ಎಚ್ಚೆತ್ತು ಸ್ವಕೀಯವಾದ ಬ್ರಾಹ್ಮೀ ರಾಜನೀತಿಯ ಮೂಲ-ತತ್ವವನ್ನು ಬೋಧಿಸುವ ಈ ಬಗೆಯ ಗ್ರಂಥಗಳ ಅತ್ಯಂತಾವಶ್ಯಕತೆಯನ್ನು ಮನಗಾಣಬಹುದಾಗಿದೆ.

ರಾಷ್ಟ್ರ ಗೌರವ, ರಾಜ ಗೌರವ, ರಾಜ್ಯ ಗೌರವ, ಪ್ರಜಾಗೌರವಗಳನ್ನು ಸಂರಕ್ಷಿಸುವುದಕ್ಕಾಗಿ ಪುಸ್ತಕ ಮೌಲ್ಯ, ಬಹುಮಾನ, ಸಹಾಯಧನ ಪ್ರದಾನಗಳಿಂದ ಗ್ರಂಥಗಳನ್ನು ಆದರಿಸಿ, ಪಠಿಸಿ, ಪಠನ ಮಾಡಿಸಿ, ಶ್ರವಣ ಮಾಡಿ, ಶ್ರವಣ ಮಾಡಿಸಿ ರಾಜನೀತಿ ಜ್ಞಾನಲಾಭವನ್ನು ಹೊಂದಿ ಆಚಾರ ಸಂಸ್ಕೃತಿ ನಿಷ್ಠೆಯುಳ್ಳವರಾಗಬೇಕೆಂಬ ರಾಷ್ಟ್ರದ ಭವ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂದೇಶವನ್ನು ಪಾಲಿಸಬೇಕೆಂದು ಪ್ರಜಾಸಾಮ್ರಾಜ್ಯಂ ಸಂಸ್ಥೆಯು ಪರ ಪ್ರಾರ್ಥಿಸುತ್ತಾರೆ.

ಈ ಗ್ರಂಥಗಳ ಹಸ್ತಪ್ರತಿಗಳನ್ನು ಕೇಂದ್ರ ರಾಜ್ಯದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಿ ರಾಷ್ಟ್ರಾದ್ಯಂತ ಏಕ ಕಾಲದಲ್ಲಿ ಸಕಲ ಪ್ರಜೆಗಳ ಹಸ್ತಭೂಷಣವಾಗುವಂತೆ ಮಾಡುವ ಮಹತ್ತರವಾದ ಮುದ್ರಣ ಮತ್ತು ಪ್ರಕಾಶನಗಳಿಗೆ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ.

ಪ್ರಜಾಸಾಮ್ರಾಜ್ಯಂ ಧ್ಯೇಯ ಸಾಧನೆಗೆ ಆಧಾರವಾದ ವಿಷಯ ಗಳನ್ನು ಅನ್ವೇಷಣ ಮಾಡಿ ತತ್ವಗಳನ್ನು ಬಹಿರಂಗಪಡಿಸಿದ ತತ್ವ ಪರಿ ಪೋಷಕ ಸಮಿತಿ, ರಾಜನೀತಿ ಮತ್ತು ದಿವ್ಯ (ದೇವ) ಕಾರ್ಯ ಸಂಶೋ ಧಕ ಸಮಿತಿಗಳು, ಪ್ರಚಾರ ಸಮಿತಿ, ಆರ್ಥಿಕ ಸಮಿತಿ, ಶಿಕ್ಷಣ ಸಮಿತಿ, ಘಟಕೋತ್ಸವ ಸಮಿತಿಗಳ, ಉಪಸಮಿತಿಗಳಾದ ಸಂಸ್ಕೃತಿ ಸ್ವಯಂ ಶಿಕ್ಷಣ ಸಮಿತಿ, ಸ್ತ್ರೀ ಶಿಕ್ಷಣ ಸಮಿತಿ, ಸಂಸ್ಕೃತಿ ಸಾಧನ ಸಭೆ. ಮುದ್ರಣ ಪ್ರಕಾಶನ ಸಭೆಗಳ ಆಶ್ರಯದಲ್ಲಿ ಅಮೋಘ ಸೇವೆಯನ್ನು ಸಲ್ಲಿಸಿದ ಸದಸ್ಯರು. ವಿದ್ವಾಂಸರು, ಪ್ರವಚನಕಾರರು. ಉಪನ್ಯಾಸಕರು. ಶ್ರೋತೃ ವರ್ಗ ಮಹನೀಯರು ಗ್ರಂಥ ಲೇಖಕರು ಗ್ರಂಥಾವಲೋಕನ ಮಾಡಿ ಸಾಧೂಕ್ತಿಗಳಿಂದ ಪ್ರೋತ್ಸಾಹಿಸಿದ ವಿದ್ವಜ್ಜನ ಮಹನೀಯರು ಗ್ರಂಥ ಪ್ರಕಾಶನಕ್ಕೆ ಆಶ್ರಯವನ್ನೂ ಗ್ರಂಥ ಮುದ್ರಣಾರಂಭಕ್ಕೆ ಧನವನ್ನೂ ಕೊಟ್ಟ ಮಹನೀಯರು ಮುದ್ರಾಪಣ ಕಾರ್ಯಭಾರವನ್ನು ನಿರ್ವಹಿಸಿ ದವರು, ಮುದ್ರಣ ಕಾರ್ಯಭಾರವನ್ನು ನಿರ್ವಹಿಸಿದ ಸಾಮ್ರಾಜ್ಯಂ ಮುದ್ರಣಾಲಯದವರು ಮೊದಲಾದ ಮಹಾಶಯರಿಗೆಲ್ಲಾ ಸಂಸ್ಥೆಯ ಪರವಾಗಿ ಅತ್ಯಂತ ಕೃತಜ್ಞತಾ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪ್ರಜಾಸಾಮ್ರಾಜ್ಯಂ ಸಂಸ್ಥೆಯಲ್ಲಿ ಪ್ರಧಾನ ಕಾರ್ಯಗಳನ್ನು ನಿರ್ವಹಿಸಲು ನೇರವಾಗಿ ಭಾಗವಹಿಸಿ ಪರಿಶ್ರಮ, ಅಭಿಮಾನ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರೋತ್ಸಾಹ, ಉತ್ಸಾಹ, ಔದಾರ್ಯಗಳನ್ನು ವ್ಯಕ್ತಪಡಿಸಿದ ಕೇಂದ್ರ ಸ್ಥಾಯಿಾ ಸಮಿತಿಯ ಸದಸ್ಯ ಮಹಾಶಯರ ಸೇವೆಯು ಚಿರಸ್ಮರಣೀಯ ವಾಗಿರುತ್ತದೆ.

ಮಹೀಸುರ ನಗರ — ಪ್ರಜಾಸಾಮ್ರಾಜ್ಯಂ ಸಂಸ್ಥೆಯ ಪರವಾಗಿ,

ಕೀಲಕ, ಕುಂಭ ೧೮
ಶಕ ಪ್ರಚಲಿತ ೧೮೯೧

ಕೆ. ಶೇಷಾದ್ರಿ, ಅಡ್ವೋಕೇಟ್
ಗೌ॥ ಕಾರ್ಯದರ್ಶಿ

ಆರ್. ಎ. ಸೂರ್ಯನಾರಾಯಣ
ಪುರೋಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜಾಸಾಮ್ರಾಜ್ಯಂ (ಪಂಜೀನಿಬದ್ಧ), ಮೈಸೂರು.

ಕೇಂದ್ರ ಸ್ಥಾಯೀಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟು ಕಾರ್ಯಭಾರಗಳನ್ನು ನಿರ್ವಹಿಸಿದ ಮತ್ತು ನಿರ್ವಹಿಸುತ್ತಿರುವ ಮಹಾಶಯರು :—

ಶ್ರೀಯುತರಾದ :

1959 ರಿಂದ

ರಾಜಸೇವಾ ಪ್ರಸಕ್ತ, ರಾವ್ ಬಹಾದುರ್
ಎಂ. ರಾಮಸ್ವಾಮಿ (ಅಧ್ಯಕ್ಷ)
ಬಿ. ಎಸ್. ದತ್ತಾತ್ರಿ. ಬಿ.ಎಸ್‌ಸಿ., ಮಣಿಮಂದಿರಂ
ಎಸ್. ಎಲ್. ಶ್ರೀಕಂಠಯ್ಯ, ಎನ್.ಐ.ಇ.

ಪಂಡಿತಪ್ರವರ ಪಾಟಣಕರ್ ಚಂದ್ರಶೇಖರ ಭಟ್ಟ,
ಆಗಮ ವಿದ್ವಾನ್ ಎನ್. ಡಿ. ರಾಮಕೃಷ್ಣ ಭಟ್ಟ
ಪಿ. ಗೋಪಾಲಕೃಷ್ಣ ಶೆಟ್ಟಿ. ಅಡ್ವೋಕೇಟ್
ಆರ್. ಎನ್. ಸೂರ್ಯನಾರಾಯಣ, ಪುರೋಧ

1962 ರಿಂದ

ಎನ್. ಎಲ್. ನರಸಿಂಹಯ್ಯ. ಸಂತೇಪೇಟೆ
ಕೆ. ಕೃಷ್ಣಯ್ಯಂಗಾರ್, ಎಂ.ಎ.. ಮಹಾರಾಜ ಕಾಲೇಜ್
ಕೆ. ಶೇಷಾದ್ರಿ, ಅಡ್ವೋಕೇಟ್, ಗೌ|| ಕಾರ್ಯದರ್ಶಿ

1966 ರಿಂದ

ಜಿ. ಆರ್. ರಾಮಯ್ಯ, ಟ್ರಾನ್ಸ್‌ಪೋರ್ಟ್ ಸರ್ವಿಸ್
ಎಸ್. ಸುಂದರರಾವ್, ಅಡ್ವೋಕೇಟ್
ಎಸ್. ಆರ್. ಅಶ್ವತ್ಥನಾರಾಯಣರಾವ್,
ರಾಜಲಕ್ಷ್ಮಿ ಎಲೆಕ್ಟ್ರಿಕ್ಟ್ ಸ್ಟೋರ್ಸ್
ಕೆ. ಎ. ಧನಪಾಲ ಶೆಟ್ಟಿ, ಅಲಂಕಾರ್ ಜ್ಯೂಯಲರ್ಸ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಿ. ಸುಬ್ಬರಾಯ ಶಾಸ್ತ್ರೀ, ಎಂ.ಎ. ಎಂ.ಕಾಮ್.	1959-66
ಡಿ. ರಾಮಯ್ಯ, ವಿಶ್ರಾಂತ ಸೂಪರಿಂಟೆಂಡೆಂಟ್ ಅರಸು ಬೋರ್ಡಿಂಗ್ ಸ್ಕೂಲ್	1959-62
ಎಸ್. ಶ್ರೀರಂಗಾಚಾರ್, ಅಡ್ವೋಕೇಟ್	
ಡಾ|| ಎಲ್. ಸೀಬಯ್ಯ. ಡಿ.ಎಸ್‌ಸಿ.	1961 ರಿಂದ
ಆರ್. ಕೃಷ್ಣಸ್ವಾಮಿ, ಬಿ.ಎ, ಆರ್.ಎಸ್.ಎ.. ಎಫ್.ಐ.ಇ.	1961-66
ಆರ್. ಕೆ. ಆನಂದರಾಮಯ್ಯ, ಅಡ್ವೋಕೇಟ್	1961-63
ಇ. ಪಿ. ನಂಜಪ್ಪ, ಮರ್ಚೆಂಟ್	
ಸರ್ದಾರ್ ಕೆ. ಬಸವರಾಜ ಅರಸ್, ಸುಪ್ರೀಂ ಕೋರ್ಟ್ ಅಡ್ವೋಕೇಟ್	1959-61
ವಿದ್ವಾನ್ ಎನ್. ಮಲ್ಲಿಕಾರ್ಜುನ ಶಾಸ್ತ್ರೀ, ಅಧ್ಯಕ್ಷ ಮೈಸೂರು ಸಂಸ್ಕೃತ ಮಹಾಪಾಠಶಾಲಾ	
ಎಸ್. ವಿ. ಪರಮೇಶ್ವರ ಭಟ್ಟ, ಮಹಾರಾಜ ಕಾಲೇಜ್	
ಸಂಗೀತ ವಿದ್ವಾನ್ ಬಿ. ಕೆ. ಪದ್ಮನಾಭರಾವ್	
ಎಂ. ಎಸ್. ಚಂದ್ರಶೇಖರಯ್ಯ	1961-63
ವಿ. ಮುದ್ದುಲಿಂಗಣ್ಣ, ಮಹಾರಾಣಿ ಕಾಲೇಜ್	1963-66
ಎಚ್. ಸುಬ್ಬರಾವ್, ಅಡ್ವೋಕೇಟ್	1963-66

ಆರ್. ಎನ್. ಸೂರ್ಯನಾರಾಯಣ
ಪುರೋಧ

ಕೆ. ಶೇಷಾದ್ರಿ,
ಗೌ|| ಕಾರ್ಯದರ್ಶಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಾನುಕ್ರಮಣಿಕೆ

ಪುಟ

೧. ವರ್ಣ ೧– ೩೯

ವರ್ಣ ವಿವೇಚನೆ— ವರ್ಣ ಮೂಲ— ವರ್ಣ ಲಕ್ಷಣ— ವರ್ಣ-ಜ್ಞಾನವು ಅನಿವಾರ್ಯ — ವರ್ಣಜ್ಞಾನಾಧಿಕಾರ — ವರ್ಣಜ್ಞಾನವ ಸ್ಥಾನಮಾನ ಪ್ರಯೋಜನಗಳು— ವರ್ಣ ಸಂಕೇತ— ವರ್ಣ ವಿಧಾನ– ವರ್ಣ ಗೋತ್ರ— ವಂಶ— ವರ್ಣ ಸಂಸ್ಕೃತಿ— ವರ್ಣ ಸಾಧನೆ—

೨. ವರ್ಣಸೀಮಾ – ವರ್ಣವ್ಯಾಪ್ತಿ ೪೦– ೪೮

ಸಾರ್ವಜನಿಕತ್ವ— ವರ್ಣ ವೈಶಿಷ್ಟ್ಯ–ವಿಶೇಷ ಹೊಣೆಗಾರಿಕೆ—

೩. ವರ್ಣ ವಿವೇಕ ೪೯– ೮೮

ವರ್ಣ ರಹಸ್ಯ— ವೈಶ್ಯ ರಹಸ್ಯ, ಕ್ಷತ್ರಿಯ ರಹಸ್ಯ, ಶ್ರೋತ್ರಿಯ ರಹಸ್ಯ, ನಿಷಾದ ರಹಸ್ಯ, ಶೂದ್ರ ರಹಸ್ಯ— ವರ್ಣ–ಜನ್ಮ— ವರ್ಣ ಪ್ರಕಾಶಕ ಉಪಬಾಹ್ಯಾಲಂಕಾರ ಲಕ್ಷಣಗಳು— ವರ್ಣ ವೈರೂಪ್ಯ –. ವರ್ಣ ಸಾಮಾನ್ಯ ಮುಖ್ಯ ವರ್ಣ ಯಜ್ಞಸೂತ್ರ— ವರ್ಣ ಸಂಕರ— ವರ್ಣ ಪ್ರಭೇದ–ಉಪಭೇದಗಳು — ವರ್ಣ–ಅವಸ್ಥೆಗಳು—

೪. ವರ್ಣಾಶ್ರಮ ೮೯– ೯೮

ವರ್ಣಾಶ್ರಮ–ವರ್ಣಾಶ್ರಮವ್ಯವಸ್ಥೆ—

೫. ವರ್ಣಾರ್ಥ ವಿಮರ್ಶೆ ೯೯–೧೧೦

ವರ್ಣಾರ್ಥ ವಿಮರ್ಶೆ–ಶೂದ್ರಶಬ್ದ ವಿವೇಚನೆ–ವಿಮರ್ಶೆ—

೬. ವರ್ಣವ್ಯಾಖ್ಯಾನೌಚಿತ್ಯವಿಚಾರಚರ್ಚೆ ೧೧೧–೧೨೦

೭. ವಿಮರ್ಶಾತ್ಮಕ ವ್ಯಾಖ್ಯಾನ ೧೨೧–೧೩೯

೮. ರಸಾತ್ಮಕ ವಿಮರ್ಶೆ ೧೪೦–೧೫೫

೯. ವರ್ಣ ಪರಿಪಾಲನೆ ೧೫೬–೧೮೪

ಸ್ವಧರ್ಮವಿವೇಕಾದಿ ಗ್ರಂಥಸಮೀಕ್ಷೆ ೧–೧೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಯಂ ವಾ ಇದಂ ಬ್ರಹ್ಮ ಚ ಕ್ಷತ್ರಂ ಚ ||

— ಜೈಮಿನೀಯ ಬ್ರಾಹ್ಮಣ

ಪ್ರಜಾಸಾಮ್ರಾಜ್ಯ-ಸಂಸದ್ಧಿ
ಪ್ರಜಾನಾಂ ಕ್ಷತ್ರ ಸಿದ್ಧಯೇ |
ಋತಂ ಸತ್ಯಂ ಪುರಸ್ಕೃತ್ಯ
ಯತತೇ ದೇವತಾಜ್ಞಯಾ ||

ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ |
ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನಧರ್ಮಾ |
ಕಾಲೋಹ್ಯಯಂ ನಿರವಧಿಃ ವಿಪುಲಾ ಚ ಪೃಥ್ವೀ ||

— ಭವಭೂತಿ

ಇದಂ ಕವಿಭ್ಯಃ ಪೂರ್ವೇಭ್ಯೋ ನಮೋ ವಾಕಂ ಪ್ರಶಾಸ್ಮಹೇ ||
ವಂದೇಮಹಿ ಚ ತಾಂ ವಾಣೀಂ ಅಮೃತಾಮಾತ್ಮನಃ ಕಲಾಂ ||

ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ ||

— ಕಾಳಿದಾಸ

ಪ್ರಜಾ ರಾಜನೀತಿ ಪ್ರಚೋದಕ

ಪ್ರಜಾ ಸಾಮ್ರಾಜ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

श्रीगणेशाय नमः

ಶ್ರೀಯೋಗಾನಂದಗುರುಪಾದೇಭ್ಯೋ ನಮಃ

೧. ವರ್ಣ

ವರ್ಣ ವಿವೇಚನೆ

ವರ್ಣ ಎಂದರೆ ಬಣ್ಣ-ಆರಿಸಿದ್ದು. ವಿಶ್ವದಲ್ಲಿ ಕಣ್ಣಿಗೆ ಕಾಣುವ ಶುದ್ಧವೂ ಸ್ವತಂತ್ರವೂ ಆದ ಬಣ್ಣಗಳು ಮೂರು. ಕೆಂಪು, ಹಳದಿ ಮತ್ತು ನೀಲಗಳೆಂಬ ಈ ಬಣ್ಣಗಳನ್ನು ವಿಭಜನ ಸಂಯೋಜನಗಳ ವಿವಿಧ ಪ್ರಮಾಣಗಳಲ್ಲಿ ಸೇರಿಸುವುದರಿಂದ ಪ್ರಧಾನವಾದ ಏಳು ಬಣ್ಣಗಳುಂಟಾಗುವುವು. ಈ ಸಪ್ತವರ್ಣಗಳ ವಿವಿಧ ಮಿಶ್ರಣದಿಂದ ಅಸಂಖ್ಯಾಕವಾದ ಬಣ್ಣಗಳಾಗುವುವು.

ನಾದದ ಪ್ರಪಂಚದಲ್ಲಿ ಜಿಹ್ವೆಯ ಮೂಲಕ ಶಾರೀರಕ ಪ್ರಯತ್ನಗಳಿಂದ ಆಗುವ ಉಚ್ಚಾರಣೆಗಳನ್ನು ವರ್ಣಗಳು ಅಥವಾ ಅಕ್ಷರಗಳು ಎನ್ನುವರು. ಇವುಗಳನ್ನು ಗುರುತು ಮಾಡಿ ತೋರಿಸುವ ರೇಖಾವಿನ್ಯಾಸಗಳನ್ನು ವರ್ಣ – ಅಕ್ಷರಗಳು ಎಂದು ಭಾಷಾವಿದರೂ, ಕಲಾವಿದರೂ ತಿಳಿಸುತ್ತಾರೆ.

ನಯನೇಂದ್ರಿಯಕ್ಕೆ ವಿಷಯವಾದ ರೂಪವು ಪ್ರತ್ಯೇಕವಾಗಿಯೂ ಸ್ಪಷ್ಟವಾಗಿಯೂ ದ್ರವ್ಯಗಳೊಡನೆ ಕೂಡಿಕೊಂಡು ಕಾಣುವುದು. ಈ ಗುಣವೂ ವರ್ಣವೆನಿಸುವುದು.

ಆತ್ಮ–ಜೀವ–ರ ಸಾಮಾನ್ಯವೂ ವಿಶೇಷವೂ ಆದ ಸ್ಥಿತಿ, ಗುಣ, ಶಕ್ತಿ, ಕರ್ಮಗಳನ್ನು ಪ್ರತ್ಯೇಕವಾಗಿ ಮತ್ತು ನಿರ್ದಿಷ್ಟವಾಗಿ ತೋರಿಸುವ ಸಂಜ್ಞೆಗಳಿಗೆ ವರ್ಣಗಳೆಂದು ಹೆಸರು. ಇವು ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳೆಂಬ ಸಾಮಾನ್ಯ ಮತ್ತು ವಿಶೇಷ ಸಂಜ್ಞೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಾಗಿರುತ್ತವೆ. ಪ್ರಪಂಚದಲ್ಲಿ ಇಂದ್ರಿಯ ಗೋಚರವಾಗುವ ಸಮಸ್ತ ಚರಾಚರ ವಸ್ತುಗಳಿಗೂ ಈ ಸಂಜ್ಞೆಗಳು ಅನ್ವಯವಾಗುವುವು. 'ವರ್ಣ'ವನ್ನು ಸ್ಥೂಲವಾಗಿಯೂ, ಸೂಕ್ಷ್ಮವಾಗಿಯೂ ವಿಚಾರಿಸಿ ಚರ್ಚಿಸಿ ಅನುಭವಗಳಿಗೆ ಹೊಂದಿಕೊಂಡಿರುವಂತೆ ವಿವೇಕಯುತವಾಗಿ ತಿಳಿಸುವ ಶಾಸ್ತ್ರವೇ ವರ್ಣ ಮೀಮಾಂಸಾ. ಕಲನ (ಕರ್ಮ) ವೆಂಬ ಪ್ರಪಂಚದಲ್ಲಿ ಅಥವಾ ಪ್ರಪಂಚವೆಂಬ ಕರ್ಮ (ಕಲನ) ದಲ್ಲಿ ವರ್ಣ ಮೀಮಾಂಸೆಯು ಅತ್ಯಂತವಾಗಿ ಉಪಕಾರ ಮಾಡುವುದಾಗಿದೆ.

ವರ್ಣ ಮೂಲ

'ಈಶಾವಾಸ್ಯಮಿದಂ ಸರ್ವಂ'* ಎಂಬಂತೆ 'ಪೂರ್ಣ'–'ಬ್ರಹ್ಮ'–ಆನಂದವು ಬ್ರಹ್ಮಾಂಡವನ್ನು (ಜಗತ್ತನ್ನು) ಒಳಗೂ ಹೊರಗೂ ಸರ್ವತ್ರ ವ್ಯಾಪಿಸಿ ಹರಡಿ ಆವರಿಸಿರುವುದು. ಘನೀಭೂತವೆನಿಸಿದ ಆನಂದ–ಪೂರ್ಣ–ಬ್ರಹ್ಮವು ಕಲನ–ದಿಕ್–ನಾದ–ಸ್ಪಂದ–ವಾಗಿ ವಿವರ್ತವಾಗಿ

---

* ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್ |
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯ ಸ್ವಿದ್ಧನಮ್ ||

ಇಂದ್ರಿಯಗಳ ಅನುಭವಕ್ಕೆ ಲಕ್ಷ್ಯವಾದ ಈ ಪ್ರಪಂಚವೆಲ್ಲವೂ ಈಶ, ಬ್ರಹ್ಮ, ಪೂರ್ಣ ಮೊದಲಾದ ಶಬ್ದಗಳಿಂದ ಹೇಳಲ್ಪಡುವ ವಸ್ತುವಿನಿಂದ ಆವೃತವಾಗಿ ಒಳಗೆ ಮತ್ತು ಹೊರಗೆ ಅಖಂಡವಾಗಿ ತುಂಬಲ್ಪಟ್ಟಿರುವುದು. ಪರಬ್ರಹ್ಮ (ಕಸ್ಯ ಸ್ವಿತ್) ವಿವರ್ತ–ವ್ಯಾಪ್ತವಾದ ಮತ್ತು ಉಪಭೋಗಕ್ಕೆ ಅರ್ಹವಾದುದರಿಂದ 'ಧನ'ವೆಂದು ಹೇಳಲ್ಪಡುವ ಜಗದ್ವಿಷಯಗಳಿಗಾಗಿ ಹಮ್ಮೈಸಿ ಅತ್ಯಾಸೆಪಡಬಾರದು. (ಮಾ ಗೃಧಃ) ಮತ್ತು ಭೋಗಕ್ಕೆ ಸಿದ್ಧವಾದ ಜಗತ್ತನ್ನು ಅಥವಾ ಜಗದ್ವಿಷಯಗಳನ್ನು ಮೇಲ್ಕಂಡಂತೆ — "ಪರಬ್ರಹ್ಮನಿಂದ ವ್ಯಾಪ್ತವಾದ ಜಗತ್ತು" ಎಂಬ ಭಾವನೆಯಿಲ್ಲದೆ (ತೇನ ತ್ಯಕ್ತೇನ) ಅನುಭವಿಸಬಾರದು. (ಮಾ ಭುಂಜೀಥಾಃ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಗುಣವೆನಿಸುವುದು. ಇದು ಕಲನಾತ್ಮಕವಾದ ಈ ಬ್ರಹ್ಮವು ಸಂರಕ್ಷಕವಾದ ಕ್ಷತ್ರವಾಗಿ ವಿವರ್ತವಾಗುವುದು. ಶಕ್ತಿ ತ್ರಯಗಳೂ ಗುಣ ತ್ರಯಗಳೂ ಜತೆಯಲ್ಲಿಯೇ ವಿವರ್ತವಾಗುವುವು. ಬ್ರಹ್ಮಮಯವೂ ಅನಂತವೂ ಅಖಂಡವೂ ಆದ 'ದಿಕ್' ಸಹಿತ ಅವಿಚ್ಛಿನ್ನವಾದ ಮಂಥನವು (ಕಲನವು) ನಡೆಯುತ್ತಲೇ ಇರುವುದು. ಕಾಲ ಪುರುಷನೆಂಬ ಕಲನದಿಂದ ಕೋಟಿಗಟ್ಟಲೆ ನಾಮರೂಪಗಳು ಪೂರ್ಣವಾದ ಆನಂದವನ್ನು ಖಂಡ ಖಂಡವಾಗಿ ಬಳಸಿ ಆವರಿಸುವುದರಿಂದ ಆಯಾ ಗುಣ ಶಕ್ತಿ ಕರ್ಮ ವಿಶಿಷ್ಟರಾದ ಆತ್ಮ-ಜೀವರು ಸಂಕಲ್ಪಾನುಸಾರ, ವಿವರ್ತರಾಗುವರು.

ಅಖಂಡವಾದ ಅಥವಾ ದಿಕ್ ಎನಿಸಿದ ಕಲನದಲ್ಲಿ ನಾಮರೂಪಗಳನ್ನು ಹೊಂದಿದ ಅಸಂಖ್ಯಾತ ದೇಹಿಗಳಿಂದ ಅನಂತವಾದ ಗುಣ ಶಕ್ತಿ ಕಲನ ವ್ಯಾಪಾರಗಳು ನಡೆಯುವುವು. ಇವುಗಳನ್ನು ವರ್ಗೀಕರಿಸಿ ಸಂಗ್ರಹಿಸಿದರೆ ಸಾರಭೂತವಾದ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳೆಂಬ ಐದು ಬಗೆಯ ಸಂಜ್ಞೆಗಳು ಸರ್ವ ಸಾಮಾನ್ಯವಾಗಿ ಪ್ರಧಾನವಾಗಿ ಎದ್ದು ನಿಲ್ಲುವುವು. ಈ ಸಂಜ್ಞೆಗಳಿಂದ ಆತ್ಮ-(ಜೀವ)-ದೇಹಿಗಳ ಸ್ವಭಾವಗುಣ ಕರ್ಮಗಳು ನಿರ್ದಿಷ್ಟವಾಗಿ ಸಂಸ್ಕೃತಿ-ಆಚಾರ-ವ್ಯವಹಾರಗಳು ರೂಪುಗೊಳ್ಳುವುವು ಮತ್ತು ಬೆಳೆಯುವುವು. ಪರಬ್ರಹ್ಮ ವಿವರ್ತವಾದ ಈ ಗುಣ ಶಕ್ತಿ ಕರ್ಮಗಳೇ ಜೀವವರ್ಣಗಳು. ಆತ್ಮವರ್ಣಗಳು ಎನಿಸುವುವು. ಪಂಚಭೂತಗಳೂ, ತನ್ಮಾತ್ರಗಳೂ ಇಂದ್ರಿಯಗಳೂ ಮತ್ತು ಮನಸ್ಸು ಇವುಗಳಿಂದ ಆವೃತವಾಗಿರುವ ಸಂಘಾತಾತ್ಮನ ಅನುಭವಕ್ಕೆ ಯೋಗ್ಯವಾದುವುಗಳಾಗಿರುವ ಸ್ಥೂಲವಾದ ಉಪಾಧಿಗಳು ಕಲ್ಪಿತವಾಗುವುವು. ಪ್ರತಿ ದೇಹಿಯ ಸಂಕಲ್ಪಸಾಧನೆಗಾಗಿ ಗುಣ ಶಕ್ತಿ ಕರ್ಮಗಳಿಗೆ ಅನುಗುಣವಾಗಿ, ಅನುರೂಪವಾದ ಕಾಲ, ದೇಶ ಮತ್ತು ಸನ್ನಿವೇಶ (ಪಾತ್ರ) ಗಳಲ್ಲಿ ನಾಮ ರೂಪಗಳೂ ಸಂಸ್ಕೃತಿಯ ಅಂಗಾ ಸೋಪಾನಗಳಿಗೆ ಅರ್ಹವಾದ ದೇಹಗಳೂ ಉಂಟಾಗುವುವು. ಕಲನ-ಸ್ಪಂದಗಳಿಂದ ಸಹಿತವಾದ ಈ ದಿಗ್ವ್ಯಾಪಾರವು ಬ್ರಹ್ಮಾಂಡ ಪಿಂಡಾಂಡಗಳಲ್ಲಿ ಏಕ ಪ್ರಕಾರವಾಗಿ ಬಿಂಬ ಪ್ರತಿಬಿಂಬವೆನಿಸಿ ನಡೆಯುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದದಲ್ಲಿ ರುದ್ರಾಧ್ಯಾಯ ಚಮಕ ಭಾಗಗಳಲ್ಲಿ ವಿಶ್ವದ ಶಕ್ತಿ ಗುಣ ಕರ್ಮಗಳೆಲ್ಲಾ ದಿವ್ಯವಾಗಿರುವುದನ್ನೂ ಪೂಜ್ಯವಾಗಿರುವುದನ್ನೂ ತೋರಿಸಿದೆ. ಬಹುವಚನದ ಪ್ರಯೋಗವು ಅಲ್ಲಿ ಹೇಳಿರುವ ಶಕ್ತಿ ಗುಣ ಕರ್ಮಗಳ ಪ್ರತಿಯೊಂದು ಅಂಶವೂ ಅದರಲ್ಲಿ ಅಂತರ್ಗತವಾಗುವ ಅಸಂಖ್ಯಾತವಾದ ಸಂಯೋಜನ ವಿಭಜನೆ ರೂಪಗಳನ್ನು ಸೂಚಿಸುವುದು. ಚತುರ್ಥೀ ವಿಭಕ್ತಿಯ ಬಹುವಚನರೂಪದಲ್ಲಿ ಪ್ರಯೋಗವಾಗಿರುವ ಯುಷ್ಮಚ್ಛಬ್ದವೂ ಸಹ ಅಂತಹ ಬಗೆಬಗೆಯ, ಪ್ರಭಾವಯುತವೂ ದೇವತೆ, ದೇವರು ಎಂದು ಪೂಜಿಸಲ್ಪಡತಕ್ಕವುಗಳೂ ಆದ ಅಸಂಖ್ಯಾತ ವಾದ ಗುಣ ಶಕ್ತಿ ಕರ್ಮಗಳೆಂಬ ಕಲನವನ್ನು ಸೂಚಿಸುವುದು.* ಪ್ರಪಂಚದಲ್ಲಿ ಉಚ್ಚನೀಚಭಾವನೆಗಳನ್ನು ತೊಡೆದು ಹಾಕುವುದಕ್ಕೂ, ಸರ್ವಸಮಾನತೆಯನ್ನೂ 'ಸರ್ವಂ ಬ್ರಹ್ಮ' ಎಂಬುದನ್ನೂ ನಿರ್ದೇಶಿಸಿ ನಿದರ್ಶನಗಳಿಂದ ತೋರಿಸುವುದಕ್ಕೂ, ಶತ್ರು, ವಿಷಮ, ಪಾಪ, ಕೆಟ್ಟುದು ಮೊದಲಾದ ಕುತ್ಸಿತ ಭಾವನೆಗಳನ್ನು ಬಿಟ್ಟು ಸಮಾಧಾನ ವನ್ನು ಹೊಂದುವುದಕ್ಕೂ ರುದ್ರಾಧ್ಯಾಯ ವಿಷಯಗಳು ಜ್ಞಾನ ವಿಜ್ಞಾನ ಯೋಗಮಯವಾಗಿವೆ.* 'ಚ ಮೇ' ಎಂಬ ಪದಗಳು ಪ್ರತಿ ವಾಕ್ಯದಲ್ಲಿಯೂ ತುಂಬಿರುವುದರಿಂದ ಚಮಕವೆಂಬ ಹೆಸರಿನ ರುದ್ರಾಧ್ಯಾಯ ಭಾಗವು ವಿಶ್ವದಲ್ಲಿ ಇಂದ್ರಿಯಕ್ಕೆ ಗೋಚರವಾಗಿಯೂ ಇಂದ್ರಿಯಾತೀತವಾಗಿಯೂ ಇರುವ ವಿಷಯಗಳೆಲ್ಲವೂ 'ಮೇ – ಪರಂ ಬ್ರಹ್ಮನಿಗಾಗಿ – 'ನಾನುವಿಗಾಗಿ' – ಪರಂ – ಬ್ರಹ್ಮ ಸೇವೆಗಾಗಿ ಇವೆ' ಎಂದು ಹೇಳಿ ಸರ್ವ ವಸ್ತುಗಳೂ ದೇವತಾ ವಿಶಿಷ್ಟವಾಗಿರುವುದನ್ನು ತಿಳಿಸುವುವು. ಇವೆಲ್ಲವೂ ಕ್ಷತ್ರದ ಪರಿಮಿತಿಯಲ್ಲಿ ಬಂದು ಶ್ರೋತ್ರಿಯಾದಿ ಪಂಚವರ್ಣಗಳಲ್ಲಿ ಅಡಕವಾಗುವ ಗುಣ ಕರ್ಮಗಳಾಗಿ, ವರ್ಗೀಕೃತ ವಾಗುವುವು.

---

* ಮನಶ್ಶಾಸ್ತ್ರ, ಶರೀರಕ ಶಾಸ್ತ್ರ, ಶಾರೀರಕ ರಚನಾ ಶಾಸ್ತ್ರ ವಿಷಯಗಳಿಂದ ಗರ್ಭಿತವಾದ ಪಿಂಡಾಂಡ ಮತ್ತು ಬ್ರಹ್ಮಾಂಡಗಳ ಶಾಸ್ತ್ರವಿವರಣೆಯೇ ರುದ್ರಾಧ್ಯಾಯ ವಿಷಯವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮದಿಂದ (ನಿರ್ಗುಣ) ಬ್ರಹ್ಮವು (ಸಗುಣ) ವಿವರ್ತವಾಗುವುದರಿಂದ ಬ್ರಹ್ಮ ಶಬ್ದವು ಅರ್ಥ ದ್ವಯವನ್ನು ಹೊಂದಿರುವುದು. ಸಗುಣ ಬ್ರಹ್ಮದ ಗುಣ ಕರ್ಮ ಶಕ್ತಿಗಳ ಆವಿಷ್ಕೃತಿಯೇ ಕ್ಷತ್ರವಾಗಿ ಪ್ರಪಂಚವನ್ನು ಆವರಿಸಿ ಪೂರ್ಣವಾಗಿರುವುದು. ಕ್ಷತ್ರವೇ ಪ್ರಪಂಚದ ವಿಸ್ತರಣೆಗೂ ಸೃಷ್ಟಿ ಸ್ಥಿತಿಲಯಗಳಿಗೂ ಕಾರಣವಾದ ಋತವಾಗಿ ವಿವರ್ತವಾಗುವುದು; ಮತ್ತು ಋತದಿಂದ ಕಾರ್ಯ ವಿಧಾಯಕವಾಗುವುದು.

ದೇವ ಮತ್ತು ಅಸುರ ಗುಣ ಶಕ್ತಿ ಕರ್ಮಗಳೂ ಶ್ರೋತ್ರಿಯಾದಿ ಪಂಚವರ್ಣಗಳಲ್ಲಿ ಪ್ರತಿಯೊಂದರಲ್ಲಿಯೂ ಅಂತರ್ಗತವಾಗಿರುತ್ತವೆ.

ವರ್ಣಮೂಲವು ವೇದಗಳಲ್ಲಿ ಪುಷ್ಟೀಕೃತವಾಗಿ ವರ್ಣಿಸಲ್ಪಟ್ಟಿದೆ. ಪುರುಷಸೂಕ್ತವೆಂಬ ವೇದಭಾಗದ ವಾಕ್ಯಬೃಂದಗಳಲ್ಲಿ ವರ್ಣಗಳು ಪ್ರಧಾನವಾಗಿ ವರ್ಣಿಸಲ್ಪಟ್ಟಿವೆ.

ವೇದಗಳೆಲ್ಲವೂ ನಿಷಾದ, ಶೂದ್ರ, ವೈಶ್ಯ, ಕ್ಷತ್ರಿಯ ಮತ್ತು ಶ್ರೋತ್ರಿಯಗಳಾಗಿರುತ್ತವೆಂದು ಘೋಷಿಸಲ್ಪಟ್ಟಿದೆ. ಪ್ರತಿ ವೇದಭಾಗವೂ ವಾಕ್ಯವೂ ಪದಗಳೂ ಅಕ್ಷರಗಳೂ ಸಹ ನಿಷಾದಾದಿ ಗುಣ ಶಕ್ತಿ ಕರ್ಮಗಳನ್ನು ಶತಾಂಶ ಪ್ರಮಾಣ ಕ್ರಮದಲ್ಲಿ ಹೊಂದಿರುತ್ತವೆ. ನಿಷಾದ ಶೂದ್ರಾದಿಗಳ ಮಹಿಮೆಯ ಕೊರತೆಗೆ ಅವಕಾಶವಿಲ್ಲ. ಇಂತಹ ಶಕ್ತಿ ಗುಣ ಕರ್ಮಗಳೆಲ್ಲಾ ಪೂಜ್ಯಭಾವದಿಂದ ಸತ್ಕರಿಸಲ್ಪಟ್ಟರೆ-(ನಮಸ್ಕರಿಸಲ್ಪಟ್ಟರೆ, ಸುಖ ಶಾಂತಿಪ್ರದವಾಗುವುವು ಎಂದು ರುದ್ರಾಧ್ಯಾಯವು ಘೋಷಿಸುವುದು.

ಘಟನಾಘಟನ ಸಾಮರ್ಥ್ಯದಿಂದ ಪರಮೋಪಕಾರಕವಾಗಿರುವ ಅಥರ್ವವು * ಶೂದ್ರವಾಗಿ ಶೂದ್ರದ ಆಧಾರದ ಮೇಲೆ ಚಕ್ರನೇಮಿ ಕ್ರಮ

---

* ವೇದಾಃ ತ್ರಯಃ ಎಂದು ಹೇಳಿ ವೇದತ್ರಯ ಸಾಮಾನ್ಯವಾದ ಅಥರ್ವ ವೇದವನ್ನು ಪ್ರತ್ಯೇಕವಾಗಿ ಪರಿಗಣಿಸುವಂತೆ, ವರ್ಣಗಳೂ ಕಾರ್ಯ ಕಾರಣ ಕ್ರಮದಲ್ಲಿ ಮೂರು ಎಂಬ ದೃಷ್ಟಿಯಿಂದ ವರ್ಣ ಸಾಮಾನ್ಯವಾದ ಶೂದ್ರವನ್ನು ಪರಿಗಣಿಸಬೇಕು. ಅಥರ್ವವು ವೇದೋಕ್ತಿಗಳನ್ನು ಪ್ರಯೋಗಗಳ ಮೂಲಕ ಅನುಭವಕ್ಕೆ ಗುರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿ ಋತವನ್ನು ಅನುಸರಿಸಿ ನಿರ್ವಾಹವಾಗಬೇಕಾಗಿದೆ. ಶೂದ್ರವನ್ನು ಬಿಟ್ಟಿರುವ ಪ್ರಯೋಗ ಕರ್ಮಗಳು ಪ್ರಪಂಚದಲ್ಲಿರಲು ಸಾಧ್ಯವಿಲ್ಲ; ಚರಿತಾರ್ಥವಾಗುವುದೂ ಇಲ್ಲ.

ಪರಮಾತ್ಮನನ್ನು ಮಾನವ ಪ್ರಮಾಣದಿಂದ ಅಳೆದು ವ್ಯವಹಾರ ದಲ್ಲಿ ತೋರಿಸುವುದಕ್ಕಾಗಿ ಮಾದರಿಗಾಗಿ ಎಂಬಂತೆ ವಿರಾಟ್ ಪುರುಷನ ಆಕಾರವು ಭಾವಿಸಲ್ಪಟ್ಟಿದೆ. ಸೃಷ್ಟಿಸ್ಥಿತಿ ಲಯಗಳಿಗೆ ಅತ್ಯವಶ್ಯಕಗಳಾದ ಇಂದ್ರಾದಿಗಳು, ಸೂರ್ಯಾದಿಗಳು ಕಶ್ಯಪ – ಮರೀಚ್ಯಾದಿಗಳೆಂಬ ಅವಸ್ಥೆಗಳ ಜತೆಗೆ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ ನಿಷಾದ ಗಳೆಂಬ ಕ್ರಿಯಾವಯವ ವರ್ತನೆಗಳನ್ನು ವಿರಾಟ್ ಪುರುಷನ ಅಂಗಗಳಿಗೆ ಸಂಬಂಧಿಸಿ ಹೋಲಿಸಿದಂತೆ ವೇದ ಮಂತ್ರಗಳು ವರ್ಣಿಸುತ್ತವೆ. ಅಖಂಡ ಪರಮಾತ್ಮನಿಗೆ ಸಹಸ್ರ ಶೀರ್ಷಗಳು ಸಹಸ್ರಾಕ್ಷಗಳು ಸಹಸ್ರ ಪಾದಗಳು ಇವೆ — ಎಂಬ ವರ್ಣನೆಯ ಔಚಿತ್ಯ, ಗುಣಗಳನ್ನು ರಸಾಭಿನಿವಿಷ್ಟ ವಿಮರ್ಶೆಗೆ ಗುರಿಪಡಿಸಿ ರಹಸ್ಯವನ್ನು ವಿವೇಕದಿಂದ ಅರಿಯಬೇಕಾಗಿದೆ.

ಕಣ್ಣು ಕಾಲಾಗಿಯೂ ಕಾಲು ಕೈಯಾಗಿಯೂ ಕಾಣಬಹುದು. ಆದುದರಿಂದ ಜಾಗರೂಕತೆಯಿಂದಲೂ ಶ್ರದ್ಧೆಯಿಂದಲೂ ವೇದೋಕ್ತಿ ಗಳನ್ನು ವಿವೇಚನೆ ಮಾಡಬೇಕಾಗಿದೆ. 'ಪದ್ಭ್ಯಾಂ ಶೂದ್ರೋ ಅಜಾಯತ' ಎಂಬುದು ವೇದವಾಕ್ಯ. ಪರಮಾತ್ಮನ ಪಾದಕ್ಕೂ ಶೂದ್ರಕ್ಕೂ ಸಂಬಂಧವನ್ನು ಕಲ್ಪಿಸಿ, ಭೂ – ಪಾತಾಳ – ದ್ಯುಲೋಕ ಗಳನ್ನು ಮೂರು ಹಜ್ಜೆಗಳಿಂದ – ತ್ರಿವಿಕ್ರಮನ ಅದ್ಭುತವಾದ ಪಾದ (ಶೂದ್ರ) ಕರ್ಮದಿಂದ ಪ್ರದರ್ಶಿಸಿ ಶೂದ್ರ ಶಕ್ತಿಯೇ ಪ್ರಪಂಚಶಕ್ತಿ

ಮಾಡುವುದು. ಶೂದ್ರವೂ ಸಹ ಕರ್ಮ ಫಲಾನುಭವದ ಮೂಲಕ ನಿರ್ಗುಣ ನಿಷ್ಕ್ರಿಯಾ ಧರ್ಮವನ್ನು ಹೊಂದಿಸುವುದು. ಅಥರ್ವವು ಬ್ರಹ್ಮಸಾಕ್ಷಾತ್ಕಾರ ಅಪರೋಕ್ಷಾನುಭವಗಳಿಗೆ ಸಾಧನವಾಗಿರುವಂತೆ ಶೂದ್ರವೂ ಸಹ ಅಪರೋಕ್ಷಾನುಭವ, ಬ್ರಹ್ಮ ಸಾಕ್ಷಾತ್ಕಾರಗಳಿಗೆ ಮಾರ್ಗದರ್ಶಕವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೂದ್ರವೇ ವಿಷ್ಣುಪಾದ, ವಿಷ್ಣುಪದ (ಆಕಾಶ) ಎಂಬುದನ್ನು ತೋರಿಸಿರುತ್ತಾರೆ. "ಪದ್ಭ್ಯಾಂ ಭೂಮಿಃ ದಿಶಃ ಶ್ರೋತ್ರಾತ್" ಎಂಬಂತೆ ಭೂಮಿಯೂ ಸಹ ಪಾದದಿಂದ ಉಂಟಾಗಿ ಶೂದ್ರ ಸಹಜವಾಗಿರುತ್ತದೆ. ಆಗಮ ಶಾಸ್ತ್ರವು ಶಕ್ತಿಯನ್ನು ಪಾದಗಳಲ್ಲಿ ಆರೋಪಿಸುತ್ತದೆ; ಜ್ಞಾನ ಕಾರಣವೂ ಜ್ಞಾನವೂ ಆದ ಗುರುವಿನ ಪಾದ ಪಾದುಕೆಗಳು ಶಿರಸ್ಸಿನಲ್ಲಿ ಬ್ರಹ್ಮರಂಧ್ರ ಕಮಲದಲ್ಲಿ ಸಾಕ್ಷಾತ್ಕೃತವಾಗುವುವು ಎಂದು ಹೇಳುತ್ತದೆ. ಸರ್ವವನ್ನೂ ಪವಿತ್ರಗೊಳಿಸುವ ತೀರ್ಥವು ವಿಷ್ಣುಪಾದ (ದ್ಯೌಃ = ದ್ಯುಲೋಕ = ಆಕಾಶ) ದಿಂದ ಸ್ರವಿಸುವುದೆಂದೂ ಹೇಳಿದೆ. ಯೋಗ ಶಾಸ್ತ್ರವೂ ಮನಶ್ಶಾಸ್ತ್ರವೂ ಸಿದ್ಧಾಂತಗಳಿಂದ ಪರಿಪೋಷಿಸುತ್ತವೆ. ಪಾದವೆಂದರೆ ಕಿರಣ, ಅಂಶ. ಈ 'ಪಾದ'ವೆಂಬ ಜ್ಯೋತಿಃ ಕಿರಣದಲ್ಲಿ ಕರ್ಮವು ಪ್ರಪಂಚವನ್ನು ತುಂಬಿದೆ. ಆದುದರಿಂದ ಕರ್ಮವು, ಕರ್ಮಾನುಭವವು ಶೂದ್ರವೆಂಬುದನ್ನು ಈ ಗ್ರಂಥವು ಸಮರ್ಥಿಸುತ್ತದೆ.

ವೈಶ್ಯವು ತೊಡೆಗೆ ಸಂಬಂಧಿಸಿದಂತೆಯೂ ಕ್ಷತ್ರಿಯವು ಬಾಹುವಿಗೆ ಹೊಂದಿಕೊಂಡಂತೆಯೂ ಶ್ರೋತ್ರಿಯವು ಮುಖಕ್ಕೆ - ಜಿಹ್ವೆಗೆ - ಅನ್ವಯಿಸುವಂತೆಯೂ ಉಕ್ತವಾಗಿದೆ.

ವಿವೇಕ ಮತ್ತು ಭಾಷೆ (ನಾಲಿಗೆ) ಗಳೇ ಪ್ರಧಾನವಾದ ಮಾನವ ಪ್ರಪಂಚದಲ್ಲಿ ಪ್ರತಿಯೊಬ್ಬರೂ ಮುಖದ – ಜಿಹ್ವೆಯ – ಪ್ರಭಾವದಿಂದ ಮಾನವೇತರ ಪ್ರಾಣಿವರ್ಗಕ್ಕಿಂತ ಮೇಲ್ಪಟ್ಟವರಾಗಿರುತ್ತಾರೆ. ದೇಹಿಯ ಅನುಭವಗಳನ್ನು ಪೂರ್ಣವಾಗಿ ಪ್ರಕಟಿಸಲು ಪೂರ್ಣಾವಕಾಶವನ್ನು ಹೊಂದದ ಮಾನವೇತರ ಪ್ರಾಣಿಗಳ ಹಂತಕ್ಕಿಂತಲೂ ಮೇಲುಮೇಲಿನ ಹಂತಗಳನ್ನು ಏರುವುದಕ್ಕೆ ತಕ್ಕ ಸಹಾಯ ಸಂಪತ್ತುಗಳಿಂದ ಜಿಹ್ವೆಯ-ವಾಗಿಂದ್ರಿಯದ–ಪೂರ್ಣ ಪ್ರಯೋಜನವನ್ನು ಹೊಂದಲು ಅವಕಾಶವಿದೆ. ಈ ಗುಣ ಶಕ್ತಿ ಕರ್ಮಗಳನ್ನೇ ದೇವತೆಗಳೆನಿಸಿ ಸರ್ವ ಸಾಮಾನ್ಯವಾಗಿವೆ. ಆದುದರಿಂದ ಮುಖವಾದ ಶ್ರೋತ್ರಿಯವನ್ನೂ ಶ್ರೋತ್ರಿಯವಾದ ಮುಖವನ್ನೂ ಹೊಂದಿರುವ ಜೀವಿಗಳು ಅಂದರೆ ಮಾನವರು ಅಥವಾ ಪ್ರಜೆಗಳು ಎಲ್ಲರೂ ಶ್ರೋತ್ರಿಯತತ್ವವನ್ನು ಅವಲಂಬಿಸಿರುತ್ತಾರೆಂಬುದು ಸ್ವಭಾವ ಸಿದ್ಧವಾಗಿ ವ್ಯಾಪ್ತಿಯುಂಟಿರುವುದು. (concomittance)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತಾಡುವ ಮತ್ತು ವಿವೇಕವುಳ್ಳ ದೇಹಿಗಳಲ್ಲಿ ಮೊದಲು ಶ್ರೋತ್ರಿಯತ್ವ, ಅಮೇಲೆ ಮಾನವತೆ - ಪ್ರಜಾತ್ವಗಳು ಆರೋಪಿತ ವಾಗುವುವು. ಶ್ರೋತ್ರಿಯ-ಮುಖಕ್ಕೆ ಆಧಾರವಾದುದು ಶೂದ್ರಪಾದ ಅಥವಾ ಪಾದಶೂದ್ರ. ಕರ್ಮಗಳಿಗೆಲ್ಲಾ ಮೂಲಾಧಾರವಾದುದು ಋಣ ಶೋಧನಾತ್ಮಕವಾದ ಶೂದ್ರ. ಸೃಷ್ಟಿತತ್ವ (ಇಚ್ಛಾ ಸಂಕಲ್ಪ-ಋಣ) ಮತ್ತು ಋತಗಳಿಗೆ ಅನುರೋಧವಾಗಿ ವಿಧೇಯತೆಯಿಂದ ಪ್ರಕೃತಿಯನ್ನು ಸೇವಿಸಬೇಕು. ಹೀಗೆ ಚಕ್ರನೇಮಿ ಕ್ರಮದಲ್ಲಿ ಶುಶ್ರೂಷೆ ಯಿಂದ ಅನುಸರಿಸದಿದ್ದರೆ ಸತ್ಕರ್ಮವೆನಿಸುವುದಿಲ್ಲ; ಫಲವೂ ಸಹ ನಿರೀಕ್ಷಿತವಾದಂತೆ ಹಿತವಾಗುವುದೂ ಇಲ್ಲ.

ಕರ್ಮಕ್ಕಾಗಲೀ ಜ್ಞಾನಕ್ಕಾಗಲೀ ಸ್ಥಾಯಿಾಭಾವದಂತಿರುವ ಶೂದ್ರಶಕ್ತಿಯ ಸಹಾಯವಿಲ್ಲದಿದ್ದರೆ ಇತರ ಶ್ರೋತ್ರಿಯಾದಿಶಕ್ತಿಗಳಿಂದ ಆಗುವ ಕರ್ಮವು ಕುಂಠಿತವಾಗುತ್ತದೆ. ಸಗುಣ ಪ್ರಪಂಚದಲ್ಲಿ ಪೂರ್ವ ರೂಪವು ಶೂದ್ರ; ಉತ್ತರ ರೂಪವು ಸಂಸ್ಕೃತಿಯನ್ನು ಸೂಚಿಸುವ ಸಂಸ್ಕೃತವಾದ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳು ವೇದದಲ್ಲಿ ರೈಕ್ವ, ಅಜೀಗರ್ತ, ದಿವೋದಾಸ ಇತ್ಯಾದಿ ಸಂಕೇತ ನಾಮ ಗಳ ಸಂಬಂಧದಲ್ಲಿ ಶೂದ್ರವು ಉದಾಹರಿಸಲ್ಪಟ್ಟಿದೆ.

ವೈಶ್ಯ, ಕ್ಷತ್ರಿಯ, ಶ್ರೋತ್ರಿಯ, ಶೂದ್ರಗಳನ್ನು ಬಳಸಿಕೊಂಡು ಆಕಸ್ಮಿಕಗಳಿಂದ ರಕ್ಷಿಸಲು ಕಾದು ಕುಳಿತಿರುವ ಹೊಣೆಗಾರಿಕೆಯು ನಿಷಾದಶಕ್ತಿಯಾಗಿರುವುದು. ಇದನ್ನೇ ಸೈನ್ಯ-ಸೇನಾ-ಶಕ್ತಿ ಎಂದು ಸಮಯೋಚಿತವಾಗಿ ಪರಿಗ್ರಹಿಸುವ ಔಚಿತ್ಯವು ಅಸಾಧಾರಣವಾದುದು.

ವಿರಾಟ್ ಪುರುಷನು ಭೂಮಿಯನ್ನು ಬಳಸಿರುವಂತೆ-(ಸ ಭೂಮಿಂ ವಿಶ್ವತೋ ವೃತ್ವಾ)- ಶರೀರವೆಂಬ ಕ್ಷೇತ್ರ (ಭೂಮಿ) ಯನ್ನು ಕವಚ-ಚರ್ಮದೋಪಾದಿಯಲ್ಲಿ ಬಳಸಿ ಕಾದಿರುವುದು ನಿಷಾದ, ಸರ್ವ ಕರ್ಮ ಗಳಿಗೂ ಸಹಾಯಕವಾಗಿ ಸರ್ವ ಸ್ವತಂತ್ರವಾಗಿದ್ದು ಸ್ವಾತಂತ್ರ್ಯವನ್ನು ಪ್ರಯೋಗಿಸದೆ, "ಪ್ರಪಂಚದ ಯೋಗಕ್ಷೇಮಕ್ಕಾಗಿ ಕರ್ತವ್ಯ ಕರ್ಮ ಬದ್ಧತೆ" ಯೆಂಬ ವರ್ಣ ನಿರ್ಬಂಧದ ಮಿತಿಯಿಂದ ಇದು ದೂರ ಸರಿದಿರುತ್ತದೆ. 'ಅತ್ಯತಿಷ್ಠದ್ದಶಾಂಗುಲಂ' ಎಂಬುದರ ಛಾಯೆಯಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರುತ್ತದೆ ಮತ್ತು ಕ್ಷೇತ್ರಕ್ಕೆ ಬೇಲಿಯಂತಿರುವುದು. ಕ್ಷೇತ್ರದ ಸಸ್ಯಗಳ ಹಂಗಿಗಾಗಲೀ ಕ್ಷೇತ್ರಸ್ವಾಮಿಯ ಹಂಗಿಗಾಗಲೀ ಒಳಪಡದೆ ತಾನೇ ತಾನಾಗಿ ಸ್ವತಂತ್ರವಾಗಿದ್ದು, ಕ್ಷೇತ್ರವನ್ನೂ, ಸಸ್ಯಗಳನ್ನೂ ಸ್ವಾಮಿಯನ್ನೂ ಸಂರಕ್ಷಿಸುವ ಬೇಲಿಯ ಋಣಕ್ಕೆ ಪಾತ್ರರಾಗಿ ಒಳಗಾಗಿರುವವರು ಬೇಲಿಯನ್ನು ಕೃತಜ್ಞತೆಯಿಂದ ನೋಡಿ ಹರ್ಷಿಸಿ ತೃಪ್ತರಾಗುತ್ತಾರೆ. ಅದರಂತೆ ಜೀವನಯಜ್ಞಕರ್ಮ ನಿರ್ವಾಹದಲ್ಲಿ ಸಮಾನವಾದ ಬಾಧ್ಯತೆಯುಳ್ಳ ನಿಷಾದ ಕರ್ಮದ ಋಣದಲ್ಲಿ ಅದರ ಆಶ್ರಯದಲ್ಲಿ ಶ್ರೋತ್ರಿಯ ಕ್ಷತ್ರಿಯ ವೈಶ್ಯ ಶೂದ್ರ ನಿಷಾದ ಕರ್ಮಗಳು ಸುರಕ್ಷಿತವಾಗಿ ನಡೆಯುವುವು. ಕ್ಷತ್ರಿಯ ವೈಶ್ಯ ಶ್ರೋತ್ರಿಯ ಶೂದ್ರ ಕರ್ಮಗಳು ಆಯಾ ಶಕ್ತಿಗೆ-ಮಿತಿಗೆ -ಲಗ್ನವಾಗಿ ಬದ್ಧವಾಗಿರುವಂತೆ ನಿಯತಕರ್ಮಗಳಿಗೆ ಬದ್ಧವಾಗದೆ ಅಸ್ವತಂತ್ರವಾಗಿದ್ದು, ಸನ್ನಿವೇಶ ಪರಿಸ್ಥಿತಿಗಳಿಗೆ ತಕ್ಕಂತೆ ಸ್ವಾತಂತ್ರ್ಯವನ್ನು ಪ್ರಯೋಗಿಸಿ ನಡೆಯಬೇಕೆಂಬ ನಿಯಮಕ್ಕೆ ಒಳಗಾಗಿ ಪ್ರಪಂಚವನ್ನು ಆಕಸ್ಮಿಕಗಳಿಂದ ಸಂರಕ್ಷಿಸಲು ನಿಷಾದಶಕ್ತಿಗುಣಕರ್ಮಗಳು ಸದಾ ಸನ್ನಿಹಿತವಾಗಿ (ಉಪನಿಷತ್) ಸಿದ್ಧವಾಗಿರುತ್ತವೆ. ಉಪನಿಷತ್ ಬ್ರಹ್ಮ-ಜ್ಞಾನ ಮತ್ತು ಸ್ಮೃತ್ಯಾದಿಗಳು ಯಜ್ಞಗಳನ್ನು ಸಮಯೋಚಿತವಾಗಿ ಚರಿತಾರ್ಥಗಳನ್ನಾಗಿ ಮಾಡುವ ಛಾಯಾ ಪರಿಸ್ಥಿತಿಯು ನಿಷಾದ ಶಬ್ದದ ಅರ್ಥವನ್ನು ಪರಿಪೋಷಿಸುತ್ತದೆ.

ಶ್ರೋತ್ರಿಯಾದಿ ಗುಣಕರ್ಮಗಳು ಆತ್ಮೇಚ್ಛೆಯಿಂದ ನಡೆಯುವುವು ಎಂಬುದನ್ನೂ ಹೊರಗಿನಿಂದ ಹೊರಿಸಲ್ಪಡುವವುಗಳಲ್ಲವೆಂಬುದನ್ನೂ ಸರ್ವದಾ ನೆನಪಿಗೆ ತಂದುಕೊಳ್ಳಬೇಕು.

ವರ್ಣ ಲಕ್ಷಣ

ವೇದಗಳಲ್ಲಿ ವರ್ಣಸೂಚಕವಾಗಿರಬಹುದೆಂಬಂತೆ ಮಂತ್ರಗಳನ್ನು ಮಾದರಿಗಾಗಿ ಇಲ್ಲಿ ಆರಿಸಿ ತೋರಿಸಿದೆ. ಸಾಮಾನ್ಯವಾಗಿ ದಿಕ್ಸೂಚಿಯಾಗಿರುವಂತೆ ಇವುಗಳನ್ನು ಋಷ್ಯಾನುಸಾರ ಆದರಿಸುವುದರಿಂದ ವಿಷಯಗಳು ಸುಗಮವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಸ್ತಿ ಪ್ರಜಾಭ್ಯಃ

ಗಾತುಂ ಯಜ್ಞಾಯ ಗಾತುಂ ಯಜ್ಞಪತಯೇ
ದೈವೀ ಸ್ವಸ್ತಿರಸ್ತು ನಃ ಸ್ವಸ್ತಿರ್ಮಾನುಷೇಭ್ಯಃ
ಊರ್ಧ್ವಂ ಜಿಗಾತು ಭೇಷಜಂ ಶಂ ನೋ ಅಸ್ತು
ದ್ವಿಪದೇ ಶಂ ಚತುಷ್ಪದೇ ಇತ್ಯಾದಿ.

ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ |
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಮ್ ||
ಗೀತಾ 18-42.

ಓಮ್ ಶಾಂತಿಃ ಶಾಂತಿಃ ಶಾಂತಿಃ

ಇತ್ಯಾದಿ ಉಕ್ತಿಗಳು ಶ್ರೋತ್ರಿಯ ಪ್ರಾಧಾನ್ಯವುಳ್ಳ ವರ್ಣದ-ಜೀವನದ-ವರ್ತನೆಯ ಆಶಾಸನವೆನಿಸಿ, ಶ್ರೋತ್ರಿಯ ವರ್ಣ ಲಕ್ಷಣ ಸೂಚಕಗಳಾಗಿರುವುವು.

ಅಭಯಂ ಕೃಣೋತು.

ಅಭಯಂ ಸರ್ವ ಭೂತೇಭ್ಯಃ || ಯೋಗಕ್ಷೇಮಂ ವಹಾಮ್ಯಹಮ್ ||
ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಂ || ಗೀತಾ 18-43

ಇವು ಕ್ಷತ್ರಿಯ ಪ್ರಧಾನವಾದ ವರ್ಣದ, ವರ್ತನೆಯ, ಜೀವನದ ಆಶಾಸನವೆನಿಸಿ ಕ್ಷತ್ರಿಯ ವರ್ಣ ಲಕ್ಷಣ ಸೂಚಕಗಳಾಗಿರುವುವು.

ಅಲಕ್ಷ್ಮೀರ್ನಾಶಯಾಮ್ಯಹಮ್.

ಈಶ್ವರೀಂ ಸರ್ವ ಭೂತಾನಾಂ ತಾಮುಪಾಹ್ವಯೇ ಶ್ರಿಯಂ
ವಯಂ ಸ್ಯಾಮ ಪತಯೋ ರಯೀಣಾಂ
ಕೃಷಿಗೋರಕ್ಷ್ಯವಾಣಿಜ್ಯಂ ವೈಶ್ಯಂ ಕರ್ಮ ಸ್ವಭಾವಜಂ || ಗೀ. 18-44

ಇವು ವೈಶ್ಯ ಪ್ರಧಾನವಾದ ವರ್ಣದ ವರ್ತನೆಯ ಜೀವನದ ಆಶಾಸನವೆನಿಸಿ ವೈಶ್ಯ ವರ್ಣ ಲಕ್ಷಣ ಸೂಚಕಗಳಾಗಿರುವುವು.

ದ್ರುಪದಾ ದಿವಿಮುಂಚತು .... ಆಪಶ್ಶುಂಧಂತು ಮೈನಸಃ ||
ಕರಿಷ್ಯೇ ವಚನಂ ತವ ; ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ||
ಚಕ್ರನೇಮಿ ವರ್ತನೇ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್ ||
(ಶೂದ್ರಕರ್ಮ ಸ್ವಭಾವಜಮ್) ಗೀತಾ 18-44
ಇವು ಶೂದ್ರ ಪ್ರಧಾನವಾದ ವರ್ಣದ ವರ್ತನೆಯ ಜೀವನದ ಆಶಾಸನವೆನಿಸಿ ಶೂದ್ರವರ್ಣ ಲಕ್ಷಣ ಸೂಚಕಗಳಾಗಿರುವುವು.

ಮಾನಸ್ತೋಕೇ ತನಯೇ .... ರೀರಿಷಃ | ಸರ್ವಭೂತಹಿತೇ ರತಃ |

ಅಪಕ್ರಾಮಂತು ಯೇ ಭೂತಾ ವಿಘ್ನಕರ್ತಾರಃ ತೇ ನಶ್ಯಂತು ಶಿವಾಜ್ಞಯಾ | ಇತ್ಯಾದಿಗಳು ನಿಷಾದ ಪ್ರಧಾನವಾದ ವರ್ಣದ ವರ್ತನೆಯ ಜೀವನದ ಆಶಾಸನವಾಗಿ ನಿಷಾದ ವರ್ಣ ಲಕ್ಷಣ ಸೂಚಕಗಳಾಗಿರುವುವು.

ಮೇಲ್ಕಂಡಂತೆ ಶ್ರೋತ್ರಿಯಾದಿ ಪಂಚವರ್ತನೆಗಳ ಮೂಲವಾದ ಇಚ್ಛಾಸಂಕಲ್ಪ, ಋಣ ಮತ್ತು ಲಕ್ಷಣಗಳನ್ನು ಶತಾಂಶ ಪ್ರಮಾಣ ರೀತ್ಯಾ ಸಮಯೋಚಿತವಾಗಿ ಅಳವಡಿಸಿಕೊಂಡು ಪಂಚವಲಯಗಳಲ್ಲಿ ರಾಜ್ಯಭಾರ ನಿರ್ವಾಹಕ್ಕೆ ತಕ್ಕಂತೆ ಆಯಾ ವಿಶೇಷ ಹೊಣೆಗಾರಿಕೆಯ ವರ್ತನೆ ಕರ್ತವ್ಯಗಳನ್ನು ನೆರವೇರಿಸಿ ಜೀವನ ಯಜ್ಞವನ್ನು ನೆರವೇರಿಸಬೇಕಾಗಿರುತ್ತದೆ.

ಯಸ್ಯಾಂ ಯಜ್ಞಂ ತನ್ವತೇ ವಿಶ್ವಕರ್ಮಾಣಃ
(12-1-13 ಅಥರ್ವ)

ಕವೇ ಮೇ ಪೃಥಿವಿ ಪಂಚಮಾನವಾಃ (12-1-15 ಅಥರ್ವ)
ಎಂದು ಸ್ಪಷ್ಟವಾಗಿರುವಂತೆ ಪಂಚಕರ್ಮಗಳಲ್ಲಿ ವಿಶೇಷ ಹೊಣೆಗಾರಿಕೆಯನ್ನು ಸ್ವತಃಏವ ಧರಿಸಿರುವ ಪಂಚಮಾನವ ಧರ್ಮಗಳನ್ನು (ವಿಶ್ವಕರ್ಮಗಳನ್ನು) ಎಂದರೆ ವಿಶೇಷ ಹೊಣೆಗಾರಿಕೆ ವರ್ತನೆಗಳ ಕರ್ಮದ ಜತೆಗೆ ಸಾಮಾನ್ಯವಾಗಿ ಉಳಿದ ನಾಲ್ಕು ಬಗೆ ವರ್ತನೆಗಳ ಕರ್ಮಗಳನ್ನು ಹೊಂದಿಸಿಕೊಂಡು ನಿರ್ವಾಹ ಮಾಡಿ ಪ್ರಜೆಗಳು ಯಜ್ಞವನ್ನು-ಜೀವನ ಯಜ್ಞವನ್ನು ನೆರವೇರಿಸುತ್ತಾರೆ.

ವರ್ಣಗಳು ಜೀವಗಳ ಋಣವನ್ನು ಸೂಚಿಸುವುವು. ಲೋಕದಲ್ಲಿ ಚರಾಚರಾತ್ಮಕವಾಗಿ ಶರೀರ ಧಾರಣೆ ಮಾಡುವುದು ಋಣವನ್ನವಲಂಬಿಸಿದೆ. ದೇಹಿಯು ಇಂದ್ರಿಯಾದಿ ವ್ಯಾಪಾರಗಳಿಂದ (ಇಚ್ಛಾ. ಸಂಕಲ್ಪ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತ್ನ) ಋಣಾನುಸಾರವಾಗಿ ನಡೆಸಿ ಅನುಭವಿಸಲೇ ಬೇಕು. ಹಾಗೆ ಅನುಭವಕ್ಕೆ ಬರದೆ, ಮತ್ತು ಅನುಭವವು ತಾತ್ಕಾಲಿಕವಾದ ಉಪಾಧಿಯ ಯೋಗ್ಯತೆಗೆ ಮೀರಿದ್ದರೆ ಅಥವಾ ಆ ಮಟ್ಟಕ್ಕೆ ಸಲ್ಲದೇ ಇರುವುದಾದರೆ ಅದಕ್ಕೆ ತಕ್ಕ ಆವರಣ, ಶರೀರಗಳನ್ನು ಹೊಂದಬೇಕಾಗಿರುವುದರಿಂದ ಆತ್ಮನನ್ನು ಬಳಸಿ ಕಾದು ನಿಂತಿರುವುದು. ಹೀಗೆ ಬೇರೆ ಶರೀರವನ್ನು-ವಾ- ಶರೀರಗಳನ್ನು ಧರಿಸಿ ಋಣಾನುಭವದಿಂದ ಋಣವನ್ನು ಪರಿಹರಿಸಿ ಕೊಳ್ಳಬೇಕಾಗಿರುತ್ತದೆ. ಈ ರೀತಿ ಶರೀರಗಳನ್ನು ಧರಿಸಿದ ದೇಹಿಯ ಪರಿಸ್ಥಿತಿಯು ಗುಣ ಶಕ್ತಿ ಕರ್ಮ ವಿಶಿಷ್ಟವಾಗಿರುವುದು. ವ್ಯಕ್ತವಾದ ಗುಣ ಶಕ್ತಿ ಕರ್ಮ ವೈಶಿಷ್ಟ್ಯವು ವರ್ಣ ಸಂಜ್ಞೆಯನ್ನು ತಾಳುವುದು. ಈ ವರ್ಣವು ಅಥವಾ ವರ್ಣಗಳು ಆಯಾ ಗುಣ ಶಕ್ತಿ ಕರ್ಮಗಳ ದೊಡ್ಡದಾದ, ಸಣ್ಣದಾದ, ಪುಟ್ಟದಾದ ಅವಸ್ಥಾ ವಿಶೇಷಗಳನ್ನು ಸೂಚಿಸುವುವು. ಆದುದರಿಂದ ವರ್ಣಗಳನ್ನು ದೇಹಿಯ ಗುಣ ಶಕ್ತಿ ಕರ್ಮಗಳೂ ಅವಸ್ಥಾ ವಿಶೇಷವು ಋಣವನ್ನೂ ಸೂಚಿಸುವುವು.

ದೇಹಿಗಳ ಅವಸ್ಥಾ ಸ್ಥಿತಿ ಸೂಚಕವಾದ ವರ್ಣಗಳ ಮೂಲಕ ಗುಣ ಶಕ್ತಿ ಕರ್ಮಗಳೂ ಸ್ವಯಂ ಪ್ರಕಾಶವಾಗುವುವು. ಸ್ವಯಂ ಪ್ರಕಾಶವಾಗುವ ಈ ಗುಣ ಶಕ್ತಿ ಕರ್ಮಗಳ ಜ್ಞಾನ ಪರಿಚಯಗಳಿಂದ ಪ್ರತಿ ದೇಹಿಯೂ ತನ್ನ ಮತ್ತು ಇತರರ ಮಿತಿಗಳನ್ನು ತಿಳಿದು ಉಚಿತವಾದ ನಯ, ನೀತಿ ಮಾರ್ಗದಲ್ಲಿ ನಡೆಯುವುದರಿಂದ ಘರ್ಷಣೆಗೂ ವೈಮನಸ್ಯಕ್ಕೂ ವೈಷಮ್ಯಕ್ಕೂ ಅವಕಾಶವಿರುವುದಿಲ್ಲ.

ಗುಣ ಶಕ್ತಿ ಕರ್ಮಗಳ ಸ್ವಯಂ ಪ್ರಕಾಶಕವಾದ ಜ್ಞಾನ - ಪರಿಚಯಗಳಿಗೆ ಸ್ವಭಾವತಃ ಅವಕಾಶವಿಲ್ಲದಿರುವಾಗ ಅವುಗಳನ್ನು ಸಮಯ ನಿರ್ಧಾರಿತವಾದ ಸಂಕೇತಗಳ ಬಾಹ್ಯಚಿಹ್ನೆಗಳಿಂದ ಪ್ರಕಾಶಪಡಿಸುವುದರ ಮೂಲಕ ದೇಹಿಯು ತನ್ನ ಮತ್ತು ಇತರರ ಇತಿ ಮಿತಿಯರಿಯಲು ಅವಕಾಶವನ್ನು ಕಲ್ಪಿಸಬೇಕಾಗುವುದು.

ಇಷ್ಟೇ ಅಲ್ಲದೆ, ಭಾಸನು (ಪ್ರತಿಮಾ-ಅಂಕ 1.) ತಪಸ್ಸಂಗ್ರಾಮ-ಕವಚಂ ನಿಯಮದ್ವಿರದಾಂಕುಶಃ ಖಲೀನಮಿಂದ್ರಿಯಾಶ್ವಾನಾಂ ಗೃಹ್ಯತಾಂ ಧರ್ಮಸಾರಥಿಃ ಎಂದು ವಲ್ಕಲಧಾರಣ ಸಮಯದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಮನ ಬಾಯಿಂದ ಹೇಳಿಸಿರುವ ಉಕ್ತಿಯು ಸರ್ವ ಸಾಮಾನ್ಯವಾಗಿ ಸರ್ವ ಗ್ರಾಹ್ಯವಾಗಿರುತ್ತದೆ. ವರ್ಣಕ್ಕೂ ಗುಣ ಶಕ್ತಿ ಕರ್ಮ ಅವಸ್ಥೆಗಳಿಗೂ ಅನುರೂಪವಾದ ವೇಷ ಭೂಷಣ ಚಿಹ್ನೆಗಳನ್ನು ಧರಿಸುವುದರಿಂದ ವಿಷಮ ಪರಿಸ್ಥಿತಿಗಳೊದಗಿದಾಗ ಆ ಚಿಹ್ನೆಗಳಿಂದ ಸ್ವಕರ್ತವ್ಯಗಳನ್ನೂ ಗೌರವಗಳನ್ನೂ ಜ್ಞಾಪಕಕ್ಕೆ ತಂದುಕೊಳ್ಳಬಹುದಾದ ದೇಹಿಯು ಭ್ರಷ್ಟತೆಗೆ ಗುರಿಯಾಗದಂತೆ ಸಹಕಾರವಾಗುವುದು.

ವರ್ಣಜ್ಞಾನವು ಅನಿವಾರ್ಯ

ವರ್ಣಗಳು ಸಮವಾಯ (ಅದಿಲ್ಲದಿದ್ದರೆ ವಸ್ತುವೇ ಇಲ್ಲವೆಂದೆನಿಸುವ ಗುಣ) ಸಂಬಂಧದಿಂದ ದೇಹಿಗಳಲ್ಲಿ ಐಕ್ಯವಾಗಿ ದೇಹಿಗಳ ಇರುವಿಕೆ ಮತ್ತು ಜೀವನಗಳಿಗೂ ವಸ್ತುಗಳ ಇರುವಿಕೆಗೂ ಅಸ್ತಿಭಾರವಾಗುವವು. ಪ್ರತಿಯೊಬ್ಬ ಮಾನವ ದೇಹಿಯೂ ತನ್ನ ತನ್ನ ವರ್ಣ ವಿಚಾರವನ್ನು ಕೂಲಂಕಷವಾಗಿ ಅಂತಃ ಪರಿಸ್ಥಿತಿ ಮತ್ತು ಬಹಿಃ ಪರಿಸ್ಥಿತಿಗಳಿಂದ ತಿಳಿಯುವುದರಿಂದ ಮಾನವ ವೈಶಿಷ್ಟ್ಯವನ್ನು ಸಾರ್ಥಕವಾದುದನ್ನಾಗಿ ಮಾಡಿಕೊಳ್ಳಬಹುದು. ಸ್ವಸ್ವರೂಪಜ್ಞಾನಾನುಸಂಧಾನಕ್ಕೆ ಮಾರ್ಗದರ್ಶಕವಾಗಿ ನಿತ್ಯಾನಂದಲಾಭಕ್ಕೆ ಮೂಲವಾದುದು ವರ್ಣಜ್ಞಾನ. ವರ್ಣ ವಿಷಯ ಜ್ಞಾನವಿಜ್ಞಾನವು ಸಾರ್ವಜನಿಕ ಸಾರ್ವತ್ರಿಕ ಸಾರ್ವಕಾಲಿಕವಾಗಿ ಮನುಗುಣ (ಮನುತ್ವ = ತಾರತಮ್ಯ ವಿವೇಕದಿಂದ ವಸ್ತು ಜ್ಞಾನಮಾಡಿಕೊಳ್ಳುವ ಮನಶ್ಶಕ್ತಿ) ವುಳ್ಳ ದೇಹಿಗಳಿಗೆ ಅತ್ಯವಶ್ಯಕವಾಗುವುದು. ಇಹಪರ ಸಾಧನೆಗೂ ವರ್ಣ ವಿಷಯಜ್ಞಾನಕ್ಕೂ ನಿಕಟವಾದ ನಿತ್ಯಸಂಬಂಧವಿರುವುದು.

ವರ್ಣಜ್ಞಾನಾಧಿಕಾರ

ವರ್ಣ ಸಂಜ್ಞೆಗಳು ಗುಣ ಕರ್ಮ ವಿಶಿಷ್ಟವಾದ, ಬ್ರಹ್ಮಾಂಡದ ಚರಾಚರ ವಸ್ತುಗಳಿಗೆಲ್ಲಾ ಅನ್ವಯಿಸುವುವು. ಸೃಷ್ಟಿವರ್ಗದಲ್ಲಿ ಉತ್ತಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಾನವನ್ನು ಪಡೆದಿರುವ 'ಮನು' ವಿಶಿಷ್ಟವಾದ ದೇಹಿಗಳಿಗೆ ಸ್ವಾಭಾವಿಕವಾಗಿಯೇ ವರ್ಣ ವಿಷಯಜ್ಞಾನವು ಹೊಂದಿಕೊಂಡಿರುವುದು. ಸರ್ವ ಮಾನವರೂ ವರ್ಣ ವಿಷಯಜ್ಞಾನ, ವಾದ, ಚರ್ಚೆ ಮತ್ತು ಸಿದ್ಧಾಂತಗಳಿಗೆ ವೈಯಕ್ತಿಕವಾಗಿ ಅರ್ಹತೆಯನ್ನು ಪಡೆದಿರುತ್ತಾರೆ. ವರ್ಣ ಸಂಜ್ಞೆಗಳು ಪ್ರಧಾನವಾಗಿ ಪ್ರಗತಿದಾಯಕವಾದುದು ಎಂದು ಅಪೌರುಷೇಯ (ಇಂದ್ರಿಯಾತೀತ) ವಾಗಿ ಪ್ರಕಟವಾಗಿರುವ ಬ್ರಾಹ್ಮಣ ಧರ್ಮವನ್ನೂ ಬ್ರಾಹ್ಮಣಾಚಾರವನ್ನೂ ಬ್ರಾಹ್ಮೀ-ಸಂಸ್ಕೃತಿಗಳನ್ನೂ ಅನುಸರಿಸುವ ಬ್ರಾಹ್ಮಣ ಭೂಮಿಯ ಬ್ರಾಹ್ಮಣ ದೇಶೀಯರು ವರ್ಣ ವಿಷಯವನ್ನು ಯಥಾಶಕ್ತಿ ಯಥಾ ಮತಿ ರೂಢಿಸಿಕೊಂಡು ಶ್ರೇಯಸ್ಸಿಗೆ ಪಾತ್ರರಾಗುತ್ತಾರೆ. ಆದುದರಿಂದ ಬ್ರಾಹ್ಮಣಧರ್ಮಾನುಯಾಯಿಗಳು ವರ್ಣಜ್ಞಾನ ವಿಜ್ಞಾನಕ್ಕೆ ವಿಶೇಷಾಧಿಕಾರವನ್ನು ಸ್ವಭಾವತಃ ಮತ್ತು ಜನ್ಮತಃ ಹೊಂದಿರುತ್ತಾರೆ.

ವರ್ಣಗಳ ಗುಣ ಕರ್ಮಗಳು ನಿಯಮಾನುಸಾರವಾಗಿ ನಡೆಯುವಾಗ ಆಯಾ ಗುಣ ಕರ್ಮರತರಾದ ವರ್ಣಗಳು ಆಕಸ್ಮಿಕ ಬಾಧೆಗಳಿಗೆ ಒಳಗಾದ, ತಮ್ಮ ತಮ್ಮ ಗುಂಪಿಗೆ ಸೇರಿದ ದೇಹಿಗಳ ರಕ್ಷಣೆಗೆ ಸಿದ್ಧರಾಗದಿರುವಷ್ಟು ಬಿಕ್ಕಟ್ಟಿನ, ಬಂಧನದಲ್ಲಿರುವುವು. ಆದುದರಿಂದ ವರ್ಣಾತೀತವಾಗಿ ಅಂದರೆ ಚತುರ್ವರ್ಣ ಬಂಧನಾತೀತವಾಗಿರುವ ವರ್ಣವು ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿರಬೇಕಾಗಿರುವುದು. ಇದು ಪೂರ್ಣತೆಯ ಸಾಕ್ಷಾತ್ಕಾರವನ್ನು ಹೊಂದಿದ ಅತಿವರ್ಣಾಶ್ರಮಿಗಳಂತೆಯೇ ಪ್ರಾಪಂಚಿಕವಾದ ವರ್ಣ ಬಂಧನ ಸ್ವತಂತ್ರವಾಗಿರುವ ಸ್ಥಿತಿಯನ್ನು ಹೋಲುವುದು.

ವರ್ಣಜ್ಞಾನಸ್ಥಾನಮಾನ-ಪ್ರಯೋಜನಗಳು

ಆತ್ಮಲಾಭಕ್ಕಿಂತ ಉತ್ತಮವಾದ ಪ್ರಯೋಜನವು ಬೇರೆ ಯಾವುದೂಯಿಲ್ಲ.* ಜೀವಗಳು (ದೇಹಿಗಳು) ಏಕೈಕವಾದ ನಿತ್ಯಾನಂದ ಸ್ಥಿತಿ

---

* ಆಪಸ್ತಂಬಧರ್ಮಸೂತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ಸಾಕ್ಷಾತ್ಕರಿಸುವುದು ಸ್ವಾಭಾವಿಕ ಮತ್ತು ಸ್ವತಸ್ಸಿದ್ಧ. ಇದಕ್ಕೆ ಸಾಮಾನ್ಯ ಬ್ರಹ್ಮಜ್ಞಾನವು ಮೂಲಾಧಾರವಾಗಿದೆ. ಬ್ರಹ್ಮಜ್ಞಾನಾಧಾರದಿಂದ ಬ್ರಹ್ಮವನ್ನು ಅನುಸಂಧಾನ ಮಾಡುತ್ತಾ ದೇಹಿಗಳು ತಮ್ಮ ತಮ್ಮ ವರ್ಣ ಮಿತಿಯಲ್ಲಿ ಸಂಸ್ಕಾರ ಸೋಪಾನಗಳನ್ನು ಕ್ರಮಶಃ ಏರಬೇಕಾಗಿದೆ ಮತ್ತು ಸ್ವಕರ್ಮವನ್ನು ಅನುಷ್ಠಾನಮಾಡಿ ಕ್ಷತ್ರವನ್ನು ಸಾಧಿಸುವುದರ ಮೂಲಕ ಬ್ರಹ್ಮ = ಆನಂದವನ್ನು ಅನುಭವಿಸಬೇಕಾಗಿರುತ್ತದೆ. ಈ ವಿಧವಾದ ಆತ್ಮಯಜ್ಞ ಜೀವನಯಜ್ಞ ಸಿದ್ಧಿಗಾಗಿ ಲೋಕದಲ್ಲಿ ಸ್ವತಂತ್ರವಾಗಿ ನಡೆಸಬೇಕಾದ ಕೆಲಸಗಳ ಕ್ಷೇತ್ರವನ್ನು ಪ್ರವೇಶಿಸಿ ಪ್ರವರ್ತಿಸುವುದಕ್ಕಾಗಿ ಪೂರ್ವ ಸಂಸ್ಕಾರವು ಅವಶ್ಯಕ. ಈ ಸಂಸ್ಕಾರವು ಸ್ವಾಭಾವಿಕವೂ ಸಾಮಾನ್ಯವೂ ವಿಶೇಷವೂ ಆದ ಕೆಲಸಗಳಿಗೆಲ್ಲಾ ಅರ್ಹತೆಯನ್ನು ಉಂಟುಮಾಡುವುದು. ಈ ಅರ್ಹತೆಯೇ ದೇಹಿಗಳಿಗೆಲ್ಲಾ ಎರಡನೇ ಜನ್ಮವನ್ನು ವಿದ್ಯಾತಃ ಉಂಟುಮಾಡುವುದು. ಇದಕ್ಕೆ ದ್ವಿಜ ಸಂಸ್ಕಾರವೆಂದು ಹೆಸರು.

ವೇದಾಧ್ಯಯನ-ಆಚಾರ್ಯೋಪಾಸನಾದಿಗಳಿಗೆ ಅರ್ಹತೆಯನ್ನು ಪಡೆಯಲು ರೂಢಿಯಲ್ಲಿರುವ ದ್ವಿಜ ಸಂಸ್ಕಾರವು ಸರ್ವವಿದಿತವಾಗಿ ಅನುಷ್ಠಾನದಲ್ಲಿರುತ್ತದೆ.

ಇದರಂತೆ ವಿಶ್ವದಲ್ಲಿ ದೇಹಿಗಳು ಜೀವಾವಧಿ ಸಾಧಿಸಬಹುದಾದ ಯಜ್ಞಗಳಿಗೆಲ್ಲಾ ಅರ್ಹತೆಯನ್ನು ಹೊಂದಿಸುವ ಸಂಸ್ಕಾರವು (ದ್ವಿಜ ಸಂಸ್ಕಾರವು) ಮಾನವರಿಂದ ಅಪೇಕ್ಷಣೀಯವಾಗಿರುತ್ತದೆ. ಈ ಸಂಸ್ಕಾರಗಳ ಇತಿಮಿತಿ ಹೊಂದಾಣಿಕೆಗಳು ವರ್ಣಕ್ಕೆ ಹೊಂದಿಕೊಂಡಿವೆ. ಆದುದರಿಂದ ಜನ್ಮವೆತ್ತಿದ ದೇಹಿಗೆ (ಮಾನವ ದೇಹಿಗೆ) ವರ್ಣ ಜ್ಞಾನವು ತಾದಾತ್ಮ್ಯ ಸಂಬದ್ಧವಾದ ಪ್ರಯೋಜನಕಾರಿ ವಸ್ತುಗಳಲ್ಲಿ ಒಂದಾಗಿದೆ.

ವರ್ಣ ಜ್ಞಾನದಿಂದ ದೇಹಿಗಳು ಅವರವರ ಮಿತಿಯನ್ನರಿತು ಹಿಂದು ಮುಂದಿನ ಅನುಭವಗಳ ಮೇಲೆ ಮತ್ತು ಅನುಭವಗಳಿಂದ ತಾತ್ಕಾಲಿಕವಾದ ಮತ್ತು ಮುಂದು ಮುಂದಿನ ಕರ್ತವ್ಯ ಕರ್ಮಗಳನ್ನೂ ಸತ್ಸಂಕಲ್ಪಗಳನ್ನೂ ಸಂಕಲ್ಪವಿಲ್ಲದಿರುವಿಕೆಯನ್ನೂ ರೂಢಿಸಿಕೊಳ್ಳಬಹುದು. ವರ್ಣ ಪ್ರಗತಿ ನಿಯಮಗಳ ಪರಿಪಾಲನೆಯು ಸಾಮಾನ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ವಿಶೇಷ ಹೊಣೆಗಾರಿಕೆಯ ನಿರ್ವಹಕ್ಕೆ ಸಹಾಯವಾಗುವುದೇ. ಇದರಿಂದ ಸ್ವಸ್ವರೂಪಾನುಸಂಧಾನ ಮಾರ್ಗವು ದೊರೆಯುವುದು.

ಚಕ್ರನೇಮಿ ಕ್ರಮದಲ್ಲಿ ಕರ್ತವ್ಯಗಳನ್ನು ಸಾಧಿಸಿ ಸಂಸ್ಕಾರ ವಿಶೇಷಗಳನ್ನು ಆಯಾ ಹಂತದಲ್ಲಿ ಪ್ರತಿಕ್ಷಣದಲ್ಲಿಯೂ ಪ್ರತಿ ಅವಸ್ಥೆಯಲ್ಲಿಯೂ ಸ್ವತಂತ್ರವಾಗಿ ನೆರವೇರಿಸುವುದಕ್ಕೆ ವರ್ಣ ಜ್ಞಾನವು ಸಹಕಾರಿಯಾಗಿರುತ್ತದೆ. ಸ್ವಕರ್ಮ, ಪರಕರ್ಮ, ಪಂಚಭೂತಕರ್ಮಗಳನ್ನು ಒರೆ ಹಚ್ಚಿ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಸ್ವವರ್ಣದ ಮಿತಿಯಲ್ಲಿ ಸದುಪಯೋಗಿಸಿಕೊಂಡು ಆನಂದಾನುಭವವು ತಾನಾಗಿಯೇ ಉಂಟಾಗುವಂತೆ ದೇಹಿಗಳು ಆಚಾರ, ವ್ಯವಹಾರ, ರಾಜನೀತಿಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವುದೇ ವರ್ಣ ವಿಧಾನವು. ವರ್ಣಜ್ಞಾನವಿಲ್ಲದೆ ನಿರ್ವಾಹವಾಗುವ ಸುಸಂಸ್ಕೃತಯಜ್ಞ ಮೊದಲಾದುವುಗಳು ಮಾರ್ಗದರ್ಶಕರಿಲ್ಲದ ಮತ್ತು ನಡೆಸುವವರಿಲ್ಲದ ದೋಣಿಗಳಂತೆ ದುಸ್ಸ್ಥಿತಿಗೆ ಗುರಿಯಾಗಬೇಕಾಗುವುದು.

ವರ್ಣಸಂಕೇತ

ವೇದವು ಬ್ರಹ್ಮ-ಕ್ಷತ್ರಮಯವಾಗಿದೆ. ಬ್ರಹ್ಮವು ಇಂದ್ರಿಯಾತೀತ-(ವ್ಯವಹಾರಾತೀತ)-ವಾದುದು ಮತ್ತು ಪೂರ್ಣವೂ ಅಖಂಡವೂ ಸರ್ವವ್ಯಾಪಿಯಾಗಿರುವ ಸಾರ್ವತ್ರಿಕವಾದ ಆನಂದಘನವೂ ಆಗಿರುತ್ತದೆ. ಬ್ರಹ್ಮಶಬ್ದವು ಆನಂದ ರಸ ಸೂಚಕವೂ ಆಗಿರುತ್ತದೆ. ಆನಂದ, ರಸ ಮೊದಲಾದ ಪದಗಳು ಬ್ರಹ್ಮಸಂಕೇತ ವಾಚಕಗಳಾಗಿರುತ್ತವೆ.

ಬ್ರಹ್ಮ ವಿವರ್ತವಾದ ಮತ್ತು ಬ್ರಹ್ಮಾನುಸಂಧಾನಕ್ಕೆ ಅವಶ್ಯಕವಾದ ಕ್ಷತ್ರವು ಜೀವ, ಮನಸ್ಸು ಇಂದ್ರಿಯಗಳೇ ಮೊದಲಾದ ಗುಣ ಶಕ್ತಿ ಕರ್ಮ ಮೊದಲಾದುವುಗಳ ಸಂಕೇತವಾಗಿದೆ. ಕ್ಷತ್ರವು ಋತ-ಸತ್ಯವೆಂಬ ಜಗತ್ತಿನ ನೀತಿಗೆ ಕಾರಣವಾಗಿದೆ. ಆನಂದಾನುಭವವು ಅಖಂಡವೂ ಪೂರ್ಣವೂ ಆದ ಋತಕ್ಕೆ ಸಂಬಂಧಿಸಿರುವುದು. ಋತದಿಂದಲೇ ಖಂಡವಾದ ವ್ಯಷ್ಟಿ ಸಮಷ್ಟಿ ವ್ಯವಹಾರವು ಸುಸ್ಥಿತವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಿಯನ್ನು ಸ್ವಸ್ವರೂಪಾವಸ್ಥಾನಕ್ಕೆ ಏರಿಸುವುದು.

ಹೀಗೆಯೇ ವೇದದಲ್ಲಿ ಕಂಡುಬರುವ ಇಂದ್ರಾದಿ ಶಬ್ದಗಳೂ ದೇವಾಸುರಾದಿಗಳೂ ಸೂರ್ಯಾದಿಗಳೂ ಶ್ರೋತ್ರಿಯ ಶಬ್ದಾದಿಗಳೂ, ಋಗಾದಿಗಳೂ, ಉಪನಿಷತ್ತು, ಕಶ್ಯಪ, ಅದಿತಿ, ದಿತಿ, ದನುಗಳೂ ಸರ್ವವೂ ಸರ್ವಮಯವಾದ ಗುಣಶಕ್ತಿಕರ್ಮಗಳ ಸಂಕೇತಗಳಾಗಿಯೇ ಇರುವುವು. ಮತ್ತು ಸಾರ್ವಕಾಲಿಕಗಳೂ ಸಾರ್ವತ್ರಿಕಗಳೂ ಸರ್ವಾಂತರ್ಯಾಮಿಗಳೂ ಆಗಿವೆ. ಇವೆಲ್ಲವೂ ಸಮಯಾನುಸಾರ ಪರಸ್ಪರ ಹೆಣೆದುಕೊಳ್ಳುವುವು.

ನಿಷ್ಪಕ್ಷಪಾತವಾಗಿ ವ್ಯಕ್ತಿ ಮತ್ತು ವಿಶ್ವಗಳನ್ನು ಗುರಿಯಾಗಿಟ್ಟುಕೊಂಡು ಈ ಶಬ್ದ ಸಂಕೇತವನ್ನು ತಿಳಿದು ಅರ್ಥರಸವನ್ನು ಸವಿಯಬೇಕಾಗಿದೆ.

ವ್ಯಷ್ಟಿ ಸಮಷ್ಟಿ ವ್ಯವಹಾರಕ್ಕೆ ಮೂಲವಾದ ಕ್ಷತ್ರವೇ ಸೃಷ್ಟಿ ಸ್ಥಿತಿ ಲಯಗಳ ಸಂಕೇತವಾಗಿದೆ. ಇದರಿಂದಲೇ ಮೇಲೆ ತಿಳಿಸಿರುವ ಕಶ್ಯಪ, ಕಾಲಪುರುಷ, ಅದಿತಿ ಇತ್ಯಾದಿಗಳೂ ಇಂದ್ರಸೂರ್ಯಾದಿಗಳೂ ಇವುಗಳ ಗುಣಶಕ್ತಿಕರ್ಮಗಳ ಸಂಕೇತವನ್ನು ತಿಳಿಯುವ ಅಮಿತ ಹೊಣೆಗಾರಿಕೆಯು ಸರ್ವ ದೇಹಿಗಳನ್ನೂ ಆಶ್ರಯಿಸಿದೆ.

ಕ್ಷತ್ರದಿಂದ ಶ್ರೋತ್ರಿಯ ಕ್ಷತ್ರಿಯ ವೈಶ್ಯ ಶೂದ್ರ ನಿಷಾದಗಳು ವಿವರ್ತವಾಗುವುವು. ಎಂದು ತಿಳಿದು ಸಂಕುಚಿತ ಭಾವನೆಯನ್ನು ಜೀವನದ ಸಮಸ್ತ ಸೋಪಾನಗಳಲ್ಲಿ ತೊಡೆದುಹಾಕಬೇಕಾಗಿದೆ.

ವ್ಯವಹಾರವು ಕೇವಲ ಕೆಲವು ವ್ಯಕ್ತಿಗಳ ವ್ಯಾಪ್ತಿಗೆ ಒಳಪಟ್ಟಿರುವಂತೆ ತಿಳಿದು ಪ್ರಪಂಚಕ್ಕೆಲ್ಲಾ ವ್ಯಾಪಿಸುವ ಸಂಕೇತಗಳನ್ನು ವ್ಯಕ್ತಿಗಳಿಗೆ ಅನ್ವಯಿಸಿಕೊಳ್ಳುವ ವರ್ತನೆಯು ಕೂಪ ಕೂರ್ಮದ ದೃಷ್ಟಿ ಮತ್ತು ಅನುಭವಗಳ ದೋಷಕ್ಕೆ ಒಳಗಾಗುವುದು. ಈ ವರ್ತನೆಯಿಂದ ಗೊತ್ತಾದ ಮಿತಿಯುಳ್ಳ ಪ್ರದೇಶದಲ್ಲಿ ವ್ಯಕ್ತಿಗಳ ಬಲ ಮತ್ತು ಅಬಲತೆಗಳ ಪ್ರಯೋಗಕ್ಕೆ ಅವಕಾಶವಾಗಿ ಅಬಲರು ಬಲಶಾಲಿಗಳ ಪ್ರಭಾವದಿಂದ ಅಡಗಿಸಲ್ಪಟ್ಟು ಶಾಂತಿಯು ಆಪಾತತಃ ಕಾಣಬರಬಹುದು. ಆದರೂ ಸರ್ವಜ್ಞವಾದ ಅಬಲವೆಂದು ತಳ್ಳಲ್ಪಟ್ಟ ದೇಹಿಯು ಆಯಾ ಸನ್ನಿವೇಶದಲ್ಲಿ ವಿವಿಧವಾದ ಅನುಭವಕ್ಕೆ ಗುರಿಯಾಗುವುದು; ಸಂಕಲ್ಪಾದಿಗಳಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಂಧನಕ್ಕೆ ತನ್ನನ್ನು ತಾನೇ ಒಳಪಡಿಸಿಕೊಳ್ಳುವುದು. ಆಯಾ ಋಣದ ಅನುಭವಕ್ಕೆ ತಕ್ಕ ಉಪಾಧಿಗಳನ್ನು ಪಡೆದು ಸಂಕಲ್ಪ ಸಾಧನೆಗೆ ಎಡೆಬಿಡದೆ ಯತ್ನಿಸುವುದರಿಂದ ಅಂತಃ ಅಥವಾ ಬಹಿಃ ಎಲ್ಲಿಯೂ ಯಾವಾಗಲೂ ಸೈಜವಾದ ಶಾಂತಿ ವ್ಯಾಪನೆಗೆ ಅವಕಾಶವಾಗುವುದೇ ಇಲ್ಲ.

ಶಬ್ದಗಳು ವಸ್ತುಗುಣಕರ್ಮ ಶಕ್ತ್ಯಾದಿಗಳಿಂದ ವಿಶಿಷ್ಟವಾದ ದೇಹಿಗೆ ಅನ್ವಯವಾಗುವಂತೆ ಪ್ರಯೋಗಿಸಲ್ಪಟ್ಟವೆ. ಎಂದು ಕಾಣು ವುದು ; ಆದರೆ ಕೇವಲ ಮಾನವ ಮಿತಿಗೂ ಇಂದ್ರಿಯಾನುಭವಮಿತಿಗೂ ತರ್ಕದ ಮಿತಿಗೂ ಮೀರಿದ, ತ್ರಿಕಾಲಗಳಿಗೂ ಸರ್ವಜನಕ್ಕೂ ಸಾರ್ವತ್ರಿಕ ವಾಗಿ ಹೊಂದಿಕೊಳ್ಳುವ ಸಂದರ್ಭಗಳಲ್ಲಿ ವರ್ಣಿಸಲ್ಪಟ್ಟ ವಿಷಯಗಳು ಕೇವಲ ವ್ಯಕ್ತಿಯನ್ನಾಗಲೀ ವ್ಯಕ್ತಿಗಳ ಗುಂಪನ್ನಾಗಲೀ ಹೇಳುವುದಿಲ್ಲ ವೆಂದು ದೃಢವಾಗಿ ತಿಳಿಯಬೇಕು. ವೇದೋಕ್ತವಾದ ಇಂತಹ ಶಬ್ದಗಳು ಕೇವಲ ಗುಣಕರ್ಮಶಕ್ತಿಸ್ಥಿತಿ ಮೊದಲಾದ ಧರ್ಮಗಳನ್ನು ಧರ್ಮಿಗಳ ಲ್ಲಿರಬಹುದಾಗಿರುವಂತೆ ತೋರಿಸಲು ಉಕ್ತವಾಗಿವೆ. ಈ ಸಂಕೇತ ಗಳನ್ನು ತಿಳಿಯುವುದು ಆವಶ್ಯಕವು.

ರಾಜ್ಯದ ಪಂಚವಲಯಗಳ ಸಾಮ್ರಾಜ್ಯ ತತ್ವವನ್ನು ಮುಂದಿಟ್ಟು ಕೊಂಡು ಸಮಂಜಸವಾದ ವರ್ಣ ಸಂಕೇತಾರ್ಥವನ್ನು ಪುರಸ್ಕರಿಸಿ ಗುಣ ಶಕ್ತಿಕರ್ಮಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಆ ಶಾಸ್ತ್ರ ಗಳಲ್ಲಿರುವ ಉಕ್ತಿಗಳ ಕರ್ತೃಗಳು ಮತ್ತು ವಕ್ತೃಗಳು ವಿಷಯಗಳನ್ನು ತಿಳಿದಿರಲಿಲ್ಲವೆಂದಾಗಲೀ ವಿವರವಾಗಿ ಹೇಳಲಿಲ್ಲವೆಂದಾಗಲೀ ಆಕ್ಷೇಪಿ ಸುವುದು ಯುಕ್ತವಲ್ಲ. ಆಯಾ ಸನ್ನಿವೇಶಗಳಲ್ಲಿ ಶಾಸ್ತ್ರಮರ್ಯಾದೆ ಯನ್ನು ಉಲ್ಲೇಖಿಸುವಾಗ ಮತ್ತೊಂದು ಸನ್ನಿವೇಶದ ದೃಷ್ಟಿ ಕೋಣದಿಂದ ಕಂಡುಬರುವ ಸಂದೇಹಗಳೂ ದ್ವೇಷಾಸೂಯಾದಿಗಳೂ ಅಂಕುರಿಸಿರಲಿಲ್ಲ. ಆದುದರಿಂದ ಆ ವಿಷಯಗಳನ್ನು ಪ್ರಸ್ತಾಪಿಸಿ ವಿವರಿಸುವ ಆವಶ್ಯಕತೆಯಿರಲಿಲ್ಲ ಎಂದು ವಿಶಾಲ ದೃಷ್ಟಿಯಿಂದ ಹಿಂದಿನ ಧರ್ಮಶಾಸ್ತ್ರಕಾರರ ತೃಪ್ತಿಭಾವನೆಯನ್ನು ತಿಳಿದು ಆನಂದಿಸಬೇಕು. (ಈ ಕಾಲಪಲ್ಲಿಯೂ ಸಹ ಏಕ ಕಾಲದಲ್ಲಿ ನಿಬಂಧನೆಗಳು ಪೂರ್ಣವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೂ ಶುದ್ಧವಾಗಿಯೂ ರಚಿತವಾಗಲಾರವು. ಕ್ರಮೇಣ ಅನುಭವ
ವಿನಿಯೋಗಗಳ ದೃಷ್ಟಿಯಿಂದ ಆಗಾಗ್ಗೆ ಪುನರ್ರಚನೆ ಮಾಡುವುದಾಗಿದೆ.)
ವಿದ್ವತ್ತಿನ ಮಟ್ಟದಲ್ಲಿ ಜ್ಞಾನಿಗಳಿಂದ ಕಾಮಕ್ರೋಧಾದಿಗಳಿಗೆ ಅವಕಾಶ
ಕೊಡದಂತೆ ಕಾರ್ಯ ನಿರ್ವಾಹವಾಗಿ ನ್ಯಾಯ ನಿರ್ಣಯವು ಅಪರವರ
ಋಣ ಕರ್ಮ ಸಂಸ್ಕೃತಿಗಳ ಮಟ್ಟದಲ್ಲಿ (ಅವಸ್ಥೆಯಲ್ಲಿ) ಸಮಂಜಸವಾಗಿ
ಯೇ ಇರಬಹುದು. ಸಾರ್ವಕಾಲಿಕವಾಗಿ ಸಾರ್ವತ್ರಿಕವಾಗಿ ಅನ್ವಯಿಸಿ
ಕೊಂಡು ಉಪಯೋಗಿಸಬೇಕಾಗಿರುವ ಶಾಸ್ತ್ರ, ತತ್ವಾನ್ವೇಷಣ, ಕರಣ,
ಸಾಧನ, ಸಾಮಗ್ರಿಗಳನ್ನು ಆಗಿಂದಾಗ್ಗೆ ಹರಿತ ಮಾಡಿಕೊಂಡು ಅನುಕ್ತ
ವಾದ ಅಭಿಪ್ರಾಯವನ್ನು ವಿವೇಕದಿಂದ ಊಹಿಸಿ ಉಕ್ತವಾದರೂ
ಅನುಭವಕ್ಕೆ ಬೇಕಿಲ್ಲದವುಗಳನ್ನು (ಉದಾ : ಅಭಕ್ಷ್ಯಣಾದಿ) ದೂರೀಕರಿಸಿ
ಪೂರ್ತಿಗೊಳಿಸಿಕೊಳ್ಳಬೇಕು.

ಅಪೌರುಷೇಯವಾದ ವೇದರಾಶಿಯಲ್ಲಿಯೂ ತದನುಯಾಯಿಗ
ಳಾದ ತತ್ವ ವಿವೇಚಕ ತತ್ವ ಪ್ರತಿಪಾದಕ ಸಂಸ್ಕೃತಿ ಬೋಧಕ ಆಚಾರ
ಪ್ರಕಾಶಕ ಗ್ರಂಥಗಳಲ್ಲಿಯೂ ವ್ಯಕ್ತಿಯನ್ನೂ ವ್ಯಕ್ತಿಗಳ ಚರಿತ್ರೆಗಳನ್ನೂ
ಸೂಚಿಸುವ ಶಬ್ದಗಳು ಇರುವುದಿಲ್ಲ; * ಇರಲೂ ಕೂಡದು; ಇದ್ದಂತೆ-
ವಾ- ಇರುವಂತೆ ಭಾವಿಸಲೂ ಕೂಡದು. ಅಂಕಿತ ನಾಮಗಳಿಗೆ
ಅಪೌರುಷೇಯ ವಾಙ್ಮಯದಲ್ಲಿ ಸ್ಥಳವಿಲ್ಲ. ಅಂಕಿತ ನಾಮಗಳೆಂದು

---

* ಬ್ರಹ್ಮ-ಸೂತ್ರ ಅ. ದೇವತಾಧಿಕರಣಂ ಸೂತ್ರ 26–33
ಶ್ರೀ ಶಂಕರಭಾಷ್ಯಂ ಸೂತ್ರ 28, ಪುಟ 160 | ಕಾಮಕೋಟಿ ಕೋಶ
ಪ್ರಕಾಶನ 1954. ದೇವಾದಿ ವ್ಯಕ್ತಿಪ್ರಭವಾಭ್ಯುಪಗಮೇಽಪ್ಯಾಕೃತಿ-
ನಿತ್ಯತ್ವಾತ್ ನ ಕಶ್ಚಿದ್ವಸ್ವಾದಿಶಬ್ದೇಷು ವಿರೋಧ ಇತಿ ದ್ರಷ್ಟವ್ಯಮ್ |
ಆಕೃತಿವಿಶೇಷಸ್ತು ದೇವಾದೀನಾಂ ಮಂತ್ರಾರ್ಥ-ವಾದಾದಿಭ್ಯಃ ವಿಗ್ರಹ-
ವತ್ತ್ವಾದ್ಯವಗಮಾತ್ ಅವಗಂತವ್ಯಃ |. ಸ್ಥಾನವಿಶೇಷಾ ಸಂಬಂಧ-
ನಿಮಿತ್ತಾಶ್ಚೇಂದ್ರಾದಿ ಶಬ್ದಾಃ ಸೇನಾಪತ್ಯಾದಿ ಶಬ್ದವತ್ | ತತಶ್ಚ
ಯೋ ಯಸ್ತತ್ರತತ್ರಸ್ಥಾನಮಧಿರೋಹತಿ ಸ ಸ ಇಂದ್ರಾದಿ ಶಬ್ದೈರ-
ಭಿಧೀಯತ ಇತಿ ನ ದೋಷೋ ಭವತಿ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿದೊಡನೆಯೇ ಅಪೌರುಷೇಯತ್ವಾಭಿಪ್ರಾಯಕ್ಕೆ ಜಲಾಂಜಲಿಯನ್ನೀಯಬೇಕು. ಈ ಸಂದರ್ಭದಲ್ಲಿ ಅಂಕಿತನಾಮಗಳ ಪರವಾಗಿಯೂ ಪೌರುಷೇಯತ್ವಕ್ಕೆ ವಿರೋಧವಾಗಿಯೂ ವಾದಮಾಡುವುದರಿಂದ ವಿವೇಕವು, ಸತ್ಯಾಂಶವು ಜಾರಿ ನುಸುಳಿಹೋಗುವುದು. ಎಷ್ಟೋ ಸಂದರ್ಭಗಳಲ್ಲಿ ಗೊತ್ತಾದ ಅಂಕಿತನಾಮವುಳ್ಳವರು ಅವತರಿಸಿದ್ದರು ಎಂದು ಹೇಳುವುದರ ರಹಸ್ಯವು ಅಂಕಿತ ನಾಮವನ್ನು ರೂಢನಾಮವನ್ನಾಗಿ ಭಾವಿಸುವುದೇ ಆಗಿದೆ. ವ್ಯಕ್ತಿಯನ್ನು ಹೇಳುತ್ತದೆಂಬ ವಿಚಾರವು ಅಸ್ತಂಗತವಾಗುತ್ತದೆ.

ಸರ್ವ ಸಾಮಾನ್ಯ ಅನುಭವಗಳನ್ನು ಒಳಗೊಂಡಿರುವ ವ್ಯಕ್ತಿಗಳ ಅಂಕಿತನಾಮಗಳನ್ನು ಮಾತ್ರ ಇತಿಹಾಸ ಪುರಾಣಗಳಲ್ಲಿ ಸೇರಿಸಿರುತ್ತಾರೆ. ಇಂತಹವುಗಳನ್ನು ಅನುಭವವು ಸೂಚನೆಯಾಗುವಷ್ಟುಮಟ್ಟಿಗೆ ವ್ಯಕ್ತಿಗೆ ಸಂಬಂಧಿಸಿಕೊಂಡು ಜೀವನ ಸಾಮಾನ್ಯ ವಿಷಯಗಳನ್ನು ವಿಶ್ವವ್ಯಾಪಕವೆಂತಲೇ ಭಾವಿಸಿ ಗ್ರಹಿಸಬೇಕು. ಜನ್ಮಾರಭ್ಯ ಸ್ವಸ್ವರೂಪ ಜ್ಞಾನಾನುಭವ ಪರ್ಯಂತ ಈ ಅನುಭವಗಳು ಯಾರಿಗೂ ತಪ್ಪಿದುದಲ್ಲ. ಯಾವ ಭಿಕ್ಷುಕನ ಚರಿತ್ರೆಯನ್ನಾದರೂ ಅದ್ಭುತವನ್ನಾಗಿ ಬೆಳಗುವ ಶಕ್ತಿಯು ಕವಿಗಳಿಗೆ ಇರುತ್ತದೆ. 250 ಕೋಟಿ ಪ್ರಜೆಗಳಿಗೆ ತಕ್ಕಂತೆ 250 ಕೋಟಿ ಜನಗಳೂ ಕವಿಗಳಾದರೆ ಪರಸ್ಪರ ಜೀವನ ಚರಿತ್ರೆಗಳನ್ನು ಬರೆದು ಅಸಂಖ್ಯಾತವಾಗಿ ತುಂಬಿಡಬಹುದು. ಇವುಗಳಲ್ಲಿ ಜೀವನದ ಲಘುತಮ ಸಾಮಾನ್ಯ ಅಪವರ್ತ್ಯವನ್ನೂ ಅನುಷ್ಠಾನದ ಮಹತ್ತಮ ಸಾಮಾನ್ಯ ಅಪವರ್ತನವನ್ನೂ ಗೊತ್ತುಮಾಡಿ ವಿಭಜನ ಸಂಯೋಜನ ಕ್ರಮದಿಂದ ವಿಷಯಗಳನ್ನು ತಿಳಿದು ಆನಂದವನ್ನು ಹೊಂದಬೇಕಾಗಿದೆ.

ಬ್ರಹ್ಮಸೂತ್ರಗಳು ಕೆಲವು ಪಙ್ಕ್ತಿಗಳಲ್ಲೇ ಮುಗಿಯುವುದಾಗಿದ್ದರೂ ಅರ್ಥಸಂಕೇತ (ಸಂಕೇತಾರ್ಥ) ವ್ಯಾಖ್ಯಾನಗಳು ವಿಸ್ತೃತಗ್ರಂಥಗಳಾಗಿ ಬೆಳೆದಿರುವುವು. ಇದರಿಂದಲೇ ಧರ್ಮಶಾಸ್ತ್ರಾದಿ ಸಂಸ್ಕೃತಿ ಬೋಧಕ ಅನುಷ್ಠಾನ ಪ್ರಕಾಶಕ ಗ್ರಂಥಗಳನ್ನು ಯಾವ ಸಂಕೇತ-ಮರ್ಯಾದೆ (ಮಿತಿ) ಗಳಲ್ಲಿ ಗೌರವಿಸಬೇಕೆಂದು ವಿಶದವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೌತಸ್ಮಾರ್ತಕರ್ಮಗಳ ನಿರ್ವಾಹ ಪ್ರಕರಣಗಳಲ್ಲಿ ಸಂದೇಹಾಂಶಗಳನ್ನು ಊಹಿಸಿ ಪೂರ್ವ ಪಕ್ಷವಾಗಿಟ್ಟುಕೊಂಡು ಯಥಾನುಕೂಲವಾಗಿ ಕರ್ಮ ನಿರ್ವಾಹ ಮಾಡಬಹುದೆಂಬ ಸಿದ್ಧಾಂತವನ್ನು ಸಮನ್ವಯ ಮಾಡಿ ತೋರಿಸಿರುತ್ತಾರೆ. ಯಾವ ಸಂದರ್ಭದಲ್ಲಿಯಾದರೂ ಸಂಶಯಗಳು, ವಿರೋಧಗಳು ತಲೆದೋರಿದೊಡನೆ ತೀವ್ರವಾದ ರಸಾಭಿನಿವಿಷ್ಟ ವಿಮರ್ಶೆಗೆ ವಿಷಯಗಳನ್ನು ಗುರಿಮಾಡಿ ಸಾಧಕ ಬಾಧಕಗಳನ್ನು ನಿರ್ಣಯಿಸಬೇಕಾಗಿರುತ್ತದೆ. ವ್ಯಕ್ತಿಗಳ ಆಚರಣೆಯಲ್ಲಿ ಪರಸ್ಪರ ವಿರೋಧವು ಕಂಡುಬಂದರೂ ಶಾಸ್ತ್ರವು ಯಾವುದಾದರೊಂದನ್ನು ಮಾತ್ರ ಅನುಗ್ರಹಿಸುವಂತಿದ್ದರೂ ಋಣ ಕರ್ಮಫಲಾನುಗುಣವಾಗಿ ನೂತನ ಸಮಸ್ಯೆಗಳು ಉದ್ಭವಿಸುವುದಾದರೆ ಕೂಡಲೆ ತಿದ್ದುಪಡಿಯನ್ನು ಸೂಚಿಸಿ ವಿರೋಧ, ಮೋಹ, ಪಕ್ಷಪಾತಗಳಿಗೆ ಅವಕಾಶವಿಲ್ಲದಂತೆ ಸಂಸ್ಕೃತಿಯ ಮಿತಿಯಲ್ಲಿ ಶಾಸ್ತ್ರವನ್ನು ವಿಸ್ತರಿಸಬೇಕಾಗಿದೆ. ಮತ್ತು ಪರಕೀಯ ಶಾಸನಾದಿ ವಿಪ್ಲವಗಳಿಂದ ಅಡಗಿ ಹೋಗಿದ್ದು, ನೂತನವೆಂಬಂತೆ ಪ್ರಕಾಶನಕ್ಕೆ ಬರಬೇಕಾಗಿರುವ ಸಂಪ್ರದಾಯ ಶಿಷ್ಟಾಚಾರವನ್ನೂ ಋಷಿಮತವನ್ನೂ ರೂಢಿಗೆ ತರಬೇಕಾಗುತ್ತದೆ.

ಋಷಿ ವಂಶಜರಾಗಿ ಋಷಿ ಪಂಥಾನುವರ್ತಿಗಳಾಗಿ ಋಷಿಗಳೇ ಆಗಬೇಕಾಗಿರುವವರು ಬ್ರಹ್ಮಾನುಸಂಧಾನ ಪೋಷಕವಾದ, ಬ್ರಹ್ಮಾನುಸಂಧಾನಕ್ಕೆ ಅನುರೋಧವಾದ, ಬ್ರಹ್ಮಾನುಸಂಧಾನ ಕರ್ತವ್ಯ ಕರ್ಮಗಳ ಅಡಚಣೆಯನ್ನು ಹೋಗಲಾಡಿಸುವ ವ್ಯಾಖ್ಯಾನಗಳನ್ನು 'ಸರ್ವೇಷಾಂ ಅನುರೋಧ'ವಾಗಿರುವಂತೆ ಅಳವಡಿಸಿಕೊಳ್ಳಬೇಕಾಗಿದೆ.

ಚಾತುರ್ವರ್ಣ್ಯಂ ಎಂಬ ಗೀತೋಕ್ತಿಯ ಅರ್ಥವು ವಿವಿಧವಾಗಿರುವ ವಿಚಾರವು ವೈಚಿತ್ರ್ಯವಿಶಿಷ್ಟವೂ ಸಂತಾಪಕರವೂ ಆಗಿರುತ್ತದೆ. ಶ್ರೀ ಕೃಷ್ಣನ ಬಾಯಿಂದ ಪ್ರಥಮತಃ ಬಂದಂತೆ, ಎರಡನೇ ಹಂತದಲ್ಲಿ ಸಂಜಯನು ಧೃತರಾಷ್ಟ್ರನಿಗೆ ಹೇಳಿದ್ದಂತೆ, ಮತ್ತು ಮೂರನೇ ಘಟ್ಟದಲ್ಲಿ ವ್ಯಾಸರು ಉಲ್ಲೇಖಿಸಿದಂತೆ ಚಾತುರ್ವರ್ಣ್ಯಂ ಶಬ್ದದ ವ್ಯುತ್ಪತ್ತಿ, ಅರ್ಥ ವಿವರಣೆಗಳನ್ನು ಇತ್ತೀಚಿನವರಾದ ಪಾಣಿನಿ ಮಹರ್ಷಿಗಳು, ಪತಂಜಲಿಗಳು, ವಾರ್ತಿಕಕಾರರು, ಕಾಶಿಕಾಕಾರರು, ಭಟ್ಟೋಜಿ ದೀಕ್ಷಿತರು ಇವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇವಲ ವ್ಯಾಕರಣ ಮರ್ಯಾದೆ (ಎಲ್ಲೆಕಟ್ಟು) ವಿವರಣೆಗಳಿಂದ ಒರೆ ಹಚ್ಚುವುದಕ್ಕೆ ಪ್ರಯತ್ನಿಸುವವರ ಕೈಗೆ ಸಿಕ್ಕಿದ ಶ್ರೀಕೃಷ್ಣ ಸಂಜಯ ವ್ಯಾಸೋಕ್ತಿಗಳು ಶಕ್ತಿಹೀನವಾಗಿವೆ.

'ಚಾತುರ್ವರ್ಣ್ಯಂ' ಶಬ್ದವನ್ನು ಯಾವ ಅರ್ಥದಲ್ಲಿ ಯಾವ ಭಾಷಾ ಶಾಸ್ತ್ರದ ಆಧಾರದ ಮೇಲೆ ಶ್ರೀಕೃಷ್ಣನು ಹೇಳಿದನು? ಎಂಬುದರಲ್ಲಿ ಅನುಷ್ಠಾನ ವ್ಯವಹಾರಾನುಭವಗಳು ರೂಢವಾಗಿರುವವರಿಗೆ ಸಂದೇಹವು ಸ್ವಭಾವತಃ ಉಂಟಾಗುವುದು. ಇದು ಸಂತಾಪಕರವೂ ಕರುಣಾಸ್ಪದವೂ ಆಗಿರುತ್ತದೆ. ಆಗಾಗ್ಗೆ ಬೆಳೆಯಬೇಕಾದ ಸ್ವಭಾವವುಳ್ಳ ಶಾಸ್ತ್ರ ಮರ್ಯಾದೆಯನ್ನು ಒತ್ತಟ್ಟಿಗಿಟ್ಟು, ಪಾಕ್ಷಿಕವಾದ ವ್ಯಾಕರಣ ಖಡ್ಗವನ್ನು ಧರಿಸಿ ಸಂಕುಚಿತವೂ ಮಿತವೂ ಆದ ವ್ಯಾಕರಣದ ನಿಯಮಗಳಿಗೆ ಅನುಸಾರವಾಗಿ ಶಬ್ದ ವಿಶಸನ ಮಾಡುವ ಆನಂದದ ವ್ಯಾಪ್ತಿಯಲ್ಲಿ ಭಾಷಾರಸವು ಅರ್ಥಸಮೇತ ಇಂಗಿಹೋಗುವುದು. ಪಾಣಿನಿ, ಪತಂಜಲಿ, ವಾರ್ತಿಕಕಾರ, ಕಾಶಿಕಾವೃತ್ತಿಕಾರ, ಭಟ್ಟೋಜಿ ದೀಕ್ಷಿತರು (ಸಂಪುಟೀಕರಣಕಾರರು)- ಇತ್ಯಾದಿ ವ್ಯಾಕರಣ ವಿಭೂತಿ ಪುರುಷರಿಗೆ ಸಂದೇಹ ವಿಷಯಗಳು ಕಾಣಿಸಿಕೊಳ್ಳುತ್ತಿದ್ದುವು. ತಪಃ ಪ್ರಭಾವದಿಂದ ರಹಸ್ಯವನ್ನು ಭೇದಿಸಿ ಅಪೂರ್ಣತೆಯನ್ನು ಹೋಗಲಾಡಿಸಿ ಆವಶ್ಯಕತೆಯನ್ನು ಪೂರ್ಣ ಮಾಡುತ್ತಿದ್ದರು. ಪೂನಾ. ಡಾ. ಎಸ್. ಕೆ. ಬೆಳ್ವಾಳ್‌ಕರ್ ಮೊದಲಾದ ಅರ್ವಾಚೀನರಿಗೆ ಇವು ಇನ್ನೂ ಈಗಲೂ ವಿವಾದ ಸಂದೇಹಾಸ್ಪದಗಳಾಗಿವೆ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಡಾ. ಎಸ್. ಕೆ. ಬೆಳ್ವಾಳ್‌ಕರ್ ರವರು ತಮ್ಮ ಗೀತಾ ವ್ಯಾಖ್ಯಾನ ಸಮಾರಂಭದಲ್ಲಿ ಚಾತುರ್ವರ್ಣ್ಯಂ ಶಬ್ದದ ಪ್ರಕೃತಿ ಪ್ರತ್ಯಯ ವಿಮರ್ಶೆ ಮಾಡಿರುತ್ತಾರೆ. ಅರ್ಥ ವಿವರಣೆಯ ಸಮಸ್ಯೆಯು ಮಾತ್ರ ಪರಿಹಾರವಾಗಿಲ್ಲ.

ವ್ಯಾಕರಣವೂ ಶಬ್ದಾರ್ಥಗಳೂ ಶಬ್ದಗಳೂ ಪ್ರಜೆಗಳ ಮನೋಲ್ಲಾಸ, ವಿಕಾಸ, ಮುಕುಳನಗಳಿಗೆ ತಕ್ಕಂತೆ ಬದಲಾವಣೆಗಳಾಗುತ್ತಿರುವಾಗ ಅರ್ಥ ನಿರ್ಣಯದ ತೊಡಕನ್ನು ಬಗೆಹರಿಸುವುದು ಸುಲಭವಲ್ಲ. ಕ್ಲಿಷ್ಟವೆಂದು ತಳ್ಳಿಹಾಕುವುದರಿಂದ ಮತ್ತಷ್ಟು ಕ್ಲೇಶವುಂಟಾಗುವುದು. ಯಾವ ಯಾವ ದೃಷ್ಟಿಕೋಣದಿಂದ ಹೇಗೆ ಹೇಗೆ ತಿಳಿಯಬೇಕೆಂಬುದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವೇಕದಿಂದ ರಸಾಭಿನಿವಿಷ್ಟ ವಿಮರ್ಶೆಗೆ ಗುರಿಪಡಿಸಿ ಯತ್ನಿಸಿದರೆ ಲೇಶವೂ ಕಷ್ಟವಾಗುವುದಿಲ್ಲ.

ಧರ್ಮ ನಿರ್ಣಯ, ಆಚಾರ ನಿರ್ಣಯ, ನ್ಯಾಯ ನಿರ್ಣಯ, ವ್ಯವಹಾರ ನಿರ್ಣಯಗಳ ಹೊಣೆಗಾರಿಕೆಯು ಶಾಸ್ತ್ರೀಯವಾದುದು. ಪೂರ್ಣಾನುಭವಕ್ಕೆ ಸೇರಿದುದು. ಸಮಸ್ತ ಶಾಸ್ತ್ರ ಮತ್ತು ಅನುಭವಗಳ ಸಹಾಯದಿಂದ ಸ್ವಯಂ ವ್ಯಕ್ತವಾಗುವುದು. ಪೂರ್ಣವಾದ ಬ್ರಹ್ಮಾಂಡ ದಲ್ಲಿ (ಪೂರ್ಣಮಿದಂ ....) ವ್ಯಕ್ತಿಗಳ ದೃಷ್ಟಿ ಅನುಭವಾದಿಗಳ ಪರಿ-ಮಿತಿಯು ಅಲ್ಪವಾದುದರಿಂದ ಆಗಾಗ್ಗೆ ನಿಯಮಗಳನ್ನು ಸಮಯಾನು ಸಾರ ನಿರ್ಧರಿಸಬಹುದೆಂದು ಮಹಾಮತಿಗಳೂ ಉದಾರರೂ ಆದ ಮಹರ್ಷಿಗಳು ಅವಕಾಶವನ್ನು ಕಲ್ಪಿಸಿರುತ್ತಾರೆ. ಅಧಿಕಾರವನ್ನು ಕೊಟ್ಟು ಮಾರ್ಗವನ್ನೂ ತೋರಿಸಿರುತ್ತಾರೆ.

ಚಾತುರ್ವರ್ಣ್ಯಂ — ಚತ್ವಾರಃ ವರ್ಣಾಃ ಎಂಬ ಅನುಭವೋ-ಕ್ತಿಯು ತನ್ನದೇ ಆದ ಸಂಕೇತಾರ್ಥವನ್ನು ದೂರಮಾಡಿಲ್ಲ. ಶಬ್ದಾರ್ಥ, ಶಬ್ದ ಲಕ್ಷಣ ಮತ್ತು ಶಬ್ದ ಸಂಕೇತ, ವ್ಯಾಖ್ಯಾನ ಮೊದಲಾದ ಪಾರಿ ಭಾಷಿಕ ಸಾಧನಗಳಿಂದ ಕೂಡಿ, ಸಾಧ್ಯವಾಗಬೇಕಾದ ತತ್ವಾರ್ಥ, ಅನುಭವ, ಶ್ರೇಯಃ ಪಂಥವನ್ನು ಋತದ ಆಧಾರದ ಮೇಲೆ ಋಣಕ್ಕನು ಗುಣವಾಗಿರುವಂತೆ ತಿಳಿಯಬೇಕು. ಮತ್ತು ಜೀವನಕ್ಕೆ ಪ್ರತಿ ಹಜ್ಜೆಯ ಲ್ಲಿಯೂ ಹೊಂದಿಸಿಕೊಳ್ಳುವುದರಿಂದ ಮನುಷ್ಯ ದೇಹಿಗಳ ಸಂಸಾರವು ಸಾರ್ಥಕವಾಗಿ ಶ್ರೇಯಸ್ಸನ್ನೂ ಆನಂದವನ್ನೂ ಬೀರುವುವು.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ಎಂಬುದರಿಂದ - ಮಯಾ ಸೃಷ್ಟಂ ಎಂಬುದರ ತತ್ವಾರ್ಥವನ್ನೂ ಗ್ರಹಿಸ ಬೇಕು. ಇದು ಸ್ವಭಾವ ಸ್ಥಿತಿಯನ್ನೂ ಋತ ಪ್ರಕ್ರಿಯೆಯನ್ನೂ ಸೃಷ್ಟಿಯ ಮರ್ಮವನ್ನೂ ತಿಳಿಸುವುದಾಗಿದೆ. ಶ್ರೀಕೃಷ್ಣನು ಸೃಷ್ಟಿಸಿದನು ಅಥವಾ ದೇವರು ಸೃಷ್ಟಿಸಿದರು, 'ನನ್ನಿಂದ ಸೃಷ್ಟಿಸಲ್ಪಟ್ಟಿತು' ಎಂದು ಕೃಷ್ಣನು ಹೇಳಿದನು — ಇತ್ಯಾದಿ ಅರ್ಥಗಳನ್ನು ಸ್ಥೂಲವಾಗಿ ತಿಳಿದರೆ ವಸ್ತು ತತ್ವಕ್ಕೂ ಜ್ಞಾನಕ್ಕೂ ಭಂಗವಾಗುವುದು. ವರ್ಣ ಚತುಷ್ಟಯ ವನ್ನು ಹೇಳುವ ಶಬ್ದಗಳೂ, ಬದ್ಧವಾದ ವರ್ಣದ ಎಲ್ಲೆಯಿಂದ ಹೊರಗಿದ್ದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್ಯವನ್ನು ಸಾಧಿಸಬೇಕಾದ ವರ್ಣವನ್ನು ಹೇಳುವ ಐದನೇ ಶಬ್ದವೂ ಸಹ ಗುಣ, ಕರ್ಮ ಶಕ್ತಿಗಳ ವೈಶಿಷ್ಟ್ಯವನ್ನು ತಿಳಿಸುವುವು. –ಎಂಬುದು ಮೇಲ್ಕಂಡ ಚಾತುರ್ವರ್ಣ್ಯಂ ಶಬ್ದ ಪ್ರಯೋಗದಿಂದಲೇ ತಿಳಿಯುವುದು. ಚತ್ವಾರಃ ವರ್ಣಾಃ ಎಂಬುದೂ ಸಹ ನಾಲ್ಕು ಬಗೆಯ ಗುಣ ಕರ್ಮಗಳನ್ನು ಹೇಳುವುದೇ ಹೊರತು ಯಾವುದೋ ಒಂದು ಸಂಕುಚಿತ ದೃಷ್ಟಿಯಿಂದ ಆಯಾ ಗುಣ ಕರ್ಮ ಶಕ್ತಿಗಳಿಗೆ ಆಶ್ರಯವಿಲ್ಲದ ಸನ್ನಿವೇಶ ಅಥವಾ ಪಾತ್ರಗಳನ್ನು–ದೇಹಿಗಳನ್ನು–ದೇಹಿಗಳ ಗುಂಪನ್ನು ತಿಳಿಸುವುದಿಲ್ಲ. –ಎಂಬುದನ್ನು ಪದೇ ಪದೇ ಚರ್ವಣಮಾಡಿ ಸಮರ್ಥಿಸಿ ದೃಢಪಡಿಸಿಕೊಂಡು ಶಾಸ್ತ್ರಗಳಿಗೂ, ಶಾಸ್ತ್ರಕಾರರಿಗೂ, ಶಾಸ್ತ್ರಾನುಯಾಯಿಗಳಿಗೂ ಗೌರವವುಂಟಾಗುವಂತೆ ವರ್ತಿಸುವುದೂ ಗುಣ ಕರ್ಮ ಶಕ್ತಿ ಸೂಚಕವಾದ ವರ್ಣದ ಮಿತಿಯಲ್ಲಿಯೇ ಬರುತ್ತದೆ.

ವರ್ಣ ವಿಧಾನ

ಶ್ರೋತ್ರಿಯಾದಿ ಪಂಚವರ್ಣ ವ್ಯಾಪಾರಗಳು ಗೊತ್ತಾದ ಸಂವಿಧಾನಕ್ಕೆ ಒಳಗಾಗಿ ನಿರ್ವಾಹವಾದರೆ ಪ್ರಪಂಚವು ಸುಖಮಯವಾಗುವುದು. ಇವುಗಳಲ್ಲಿ ಪ್ರತಿಯೊಂದು ವರ್ಣದ ವ್ಯಾಪಾರವೂ ಉತ್ತರೋತ್ತರ ಶ್ರೇಯಃ ಪ್ರಾಪ್ತಿಗೆ ಆಯಾ ಮಿತಿಯಲ್ಲಿ ಚಕ್ರನೇಮಿ ಕ್ರಮದಲ್ಲಿ ನಡೆಯಬೇಕು. ಸಂವಿಧಾನದಿಂದ ನಡೆಯುವ ಸ್ವವರ್ಣ ಯಜ್ಞವೂ ಸ್ವಕರ್ಮವೂ ಸುಮುಖ(active) ವರ್ಣ ವ್ಯಾಪಾರಗಳೆನಿಸಿ ಆನಂದವೆಂಬ ಸ್ವಸ್ವರೂಪಾವಸ್ಥಾನಕ್ಕೆ ಒಯ್ಯುವುವು.

ಅಜ್ಞಾನವೇ ಮೊದಲಾದ ಪ್ರತಿಬಂಧಕಗಳಿಂದ ತಟಸ್ಥವಾಗುವ ಸ್ವವರ್ಣ ಯಜ್ಞ ಸ್ವಕರ್ಮ ವ್ಯಾಪಾರಗಳು ದುರ್ಮುಖ (passive) ವರ್ಣ ವ್ಯಾಪಾರಗಳೆನಿಸುವುವು. ಪ್ರತಿಬಂಧಕಗಳು ನಿವಾರಣೆಯಾಗಿ ಸುಮುಖ ಮಟ್ಟಕ್ಕೇರುವ ಯತ್ನಗಳು ನಡೆದು ಕಾಲಾನುಕ್ರಮದಲ್ಲಿ ಮೇಲಿನ ಹಂತಕ್ಕೆ ಏರಲೇಬೇಕಾಗುವ ವ್ಯವಸ್ಥೆಯು ಸ್ವಾಭಾವಿಕವಾಗಿದೆ.

ಅನರ್ಹತೆಯಿಂದ, ಸ್ವವರ್ಣದ ಮಿತಿಯನ್ನು ಮೀರಿದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಆಲಸ್ಯದಿಂದ ಸ್ವಕರ್ಮದ ಮಿತಿಯಿಂದ ಜಾರಿದರೂ ಶ್ರೇಯಃ
ಪ್ರಾಪ್ತಿಗೆ ಭಂಗವುಂಟಾಗಿ ಋತವಿರೋಧಿಗಳೆನಿಸುವ ವಿಮುಖ (nega-
tive) ವರ್ಣ ವ್ಯಾಪಾರಗಳು ಕರ್ತೃವನ್ನು ಬಾಧೆಗೆ ಗುರಿಪಡಿಸುವುವು.
ಶಿಕ್ಷೆಯೆಂದೆಂಬ ಅಂತಹ ಕೆಲಸದ ಅನುಭವದಿಂದ ಅರ್ಹತೆಯ ಜ್ಞಾನ,
ಆಲಸ್ಯ ನಿವಾರಕ ಸಾಧನಗಳನ್ನು ಆಶ್ರಯಿಸಿ ಸುಮುಖದ ಹಂತಕ್ಕೆ
ಏರಲು ಶ್ರೇಯಃ ಪ್ರಾಪ್ತಿಕರ ಕರ್ಮಗಳನ್ನು ಮಾಡುವ ಪರಿಸ್ಥಿತಿಯು
ಸ್ವಾಭಾವಿಕವಾಗಿಯೇ ಕ್ರಮಶಃ ಪ್ರಾಪ್ತವಾಗುವುದು.

ವರ್ಣ ವಿಧಾನಾದಿಗಳು ಸದಾ ಸರ್ವರ ಗಮನಕ್ಕೆ ಬೀಳುವಂತೆ
ತದ್ವಿದರೂ ಉನ್ನತ ಮಟ್ಟದಲ್ಲಿರುವವರೂ ತಕ್ಕ ರಾಜನೀತಿ ಶಾಸನ
ಗಳಿಂದ ಸಂವಿಧಾನ ಪ್ರಕಟಣೆಗೆ ಅವಕಾಶ ಕೊಟ್ಟು ಪ್ರಜೆಗಳು ಅವರವರ
ಹಿತಕ್ಕಾಗಿ ಶ್ರೇಯೋಭಿವೃದ್ಧಿಗಾಗಿ ಅವರವರ ವರ್ಣ ವಿಧಾನೋಕ್ತ
ವ್ಯಾಪಾರಗಳನ್ನು ಅಳವಡಿಸಿಕೊಂಡು ಋಣ ಸಂಶೋಧನಾದಿಗಳಿಗೆ
ಯತ್ನಿಸಿ ನಿತ್ಯಾನಂದ ಲಾಭಕ್ಕೆ ಪಾತ್ರರಾಗುವಂತೆ ಯತ್ನಿಸಬೇಕಾಗಿದೆ.

ತತ್ತದ್ವರ್ಣನಿಯಮಗಳನ್ನು ಪರಿಪಾಲಿಸುವ ದೀಕ್ಷೆಯನ್ನು ವಹಿಸಿ
ರುವವರು ಆಶ್ರಿತಾಶ್ರಯಭಾವಾದಿಗಳಿಂದ ಕರ್ತವ್ಯಗಳನ್ನು ನಿರ್ವಹಿ
ಸುತ್ತಾರೆ. ಪ್ರತಿವರ್ಣದವರೂ ಅವರವರ ವರ್ಣ ಕಾರ್ಯಗಳಿಗೆ ಬದ್ಧ
ರಾಗಿ ನಡೆಯುತ್ತಿರುವಾಗ ಯಾವ ಒಂದು ವರ್ಣ ಕಾರ್ಯಕ್ಕಾದರೂ
ಅಡ್ಡಿ ಆತಂಕಗಳುಂಟಾದಾಗ ಸಹಾಯರಕ್ಷಣೆಗೆ ಗಮನಕೊಡಲು ಸಾಧ್ಯ
ವಾಗುವುದಿಲ್ಲ. ರಕ್ಷಣೆಗೆ ದೀಕ್ಷೆ ವಹಿಸಿದ ಕ್ಷತ್ರಿಯವರ್ಣವು ಬೇರೊಂದು
ನಿಯಮ ಪರಿಪಾಲನೆಯನ್ನು ಮಾಡುತ್ತಿರುವಾಗ ಅದನ್ನು ಉಲ್ಲಂಘಿಸಿ
ಬರಲಾಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಆಕಸ್ಮಿಕ ಕಂಟಕಗಳ ನಿವಾ
ರಣೆಗಾಗಿ ಸನ್ನದ್ಧರಾಗಿ ನಿತ್ಯವರ್ಣ ನಿಯಮಗಳಿಗೆ ಬದ್ಧವಾಗದೆ ಇರುವ
ವರ್ಣವು ಅತ್ಯವಶ್ಯಕವಾಗಿರುವ ವಿಚಾರವನ್ನು ಹಿಂದೆ ಹೇಳಿದೆ.
ಯಾವುದಾದರೂ ವರ್ಣ ಕಾರ್ಯವು ನಡೆಯುತ್ತಿರುವಾಗ ಆಕಸ್ಮಿಕ
ಅನಿವಾರ್ಯಗಳಿಂದ ರಕ್ಷಣೆಯನ್ನು ಹೊಂದಲು ಸಹಾಯವು ಅಪೇಕ್ಷಿಸ
ಲ್ಪಟ್ಟರೆ, ವರ್ಣ ನಿಯಮಗಳಿಂದ ಸ್ವತಂತ್ರವಾಗಿ ಆಕಸ್ಮಿಕ ಘಟನೆ
ಗಳನ್ನೆದುರಿಸಲು ಕಾದಿರುವುದೆಂಬ ಗುಣಶಕ್ತಿಕರ್ಮಗಳುಳ್ಳ ವರ್ಣವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಾಯ ನೀಡಲು ಸಿದ್ಧವಾಗಿರುವುದು. ಹೀಗೆ ಕಾದಿರುವ ಗುಣ ಕರ್ಮದ ನಿರ್ವಾಹ ವಿಧಾನವೂ ಶ್ರೇಯಃ ಪ್ರಾಪ್ತಿಗೆ ಕಾರಣವಾಗುವುದು. ಈ ಬಗೆಯ ವರ್ಣವು ಐದನೆಯದಾಗಿ ವರ್ಣ ನಿಯಮ ಬದ್ಧವಾದ ನಾಲ್ಕು ವರ್ಣಗಳನ್ನು ಬಳಸಿ ವಿಶ್ವಯೋಗಕ್ಷೇಮದ ಒಂದಂಶವನ್ನು ನೆರವೇರಿಸುವುದಾಗಿದೆ.

ವರ್ಣ ಗೋತ್ರ–ವಂಶ

ವಿಶ್ವದಲ್ಲಿ ಅನುಭವಕ್ಕೆ ಬರುವ ಗುಣ ಶಕ್ತಿ ಕರ್ಮ-ಗತಿ (ಕಲನ) ಗಳು ಸಂಯೋಜನ ವಿಭಜನ ಕ್ರಮದಲ್ಲಿ ಋಣಾನುಬಂಧ ಪ್ರಮಾಣಕ್ಕೆ ತಕ್ಕಂತೆ ಪರಸ್ಪರವಾಗಿ ಒಂದುಗೂಡುತ್ತವೆ. ಸಮಾನ ಪ್ರತಿಪತ್ತಿಯುಳ್ಳ ಗುಣ ಶಕ್ತಿ ಕರ್ಮವುಳ್ಳವುಗಳ ಒಕ್ಕೂಟವೇ ಒಂದು ಸಾಮಾನ್ಯರೂಪವನ್ನು ಕೊಡುವುದು. ಈ ಬಗೆಯ ರೂಪಲಕ್ಷಣಗಳೆಲ್ಲಾ ಸಮಾನತೆ–ಹೋಲಿಕೆ–ಗಳಿಗನುಗುಸಾರವಾಗಿ ವರ್ಗೀಕರಿಸಲ್ಪಡುವುವು. ವರ್ಗೀಕರಿಸಲ್ಪಟ್ಟ ಜಾತಿ, ಗುಂಪು, ಸಮೂಹ–ಸಮಾಜ–ಕ್ಷೇತ್ರಗಳು ಗೋತ್ರಗಳೆನಿಸುವುವು. ಗೋತ್ರ ಶೀರ್ಷಿಕೆಯಲ್ಲಿ ಪ್ರಸ್ತಾರಕ್ರಮದಲ್ಲಿ ಅಂತರ್ಗತವಾಗಿರುವ ಅನೇಕ ವಂಶಗಳು ಕುಟುಂಬ ಮೂಲಗಳಾಗಿರುತ್ತವೆ.

ಬ್ರಾಹ್ಮಣಾಚಾರವನ್ನು ಅನುಸರಿಸುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕುಟುಂಬ, ಕುಟುಂಬಮೂಲ, ವಂಶ ಮತ್ತು ಗೋತ್ರಗಳ ಹಂತದಲ್ಲಿ ಸೃಷ್ಟಿ ಮೂಲಕ್ಕೂ ತನಗೂ ಇರುವ ಸಂಬಂಧವನ್ನು ಕಲ್ಪಿಸಿಕೊಳ್ಳಬಹುದು. ಮತ್ತು ಆ ಮಿತಿಯಲ್ಲಿ ಮರ್ಯಾದೆಯನ್ನು (ಗೌರವವನ್ನು) ಸಲ್ಲಿಸಿ ಗೌರವವನ್ನು ವ್ಯಾವಹಾರಿಕವಾಗಿ ಪಡೆಯಬಹುದು.

ಗುಣಶಕ್ತಿಕರ್ಮಗಳ ಸಂಯೋಜನ ವಿಭಜನ ಕ್ರಮಗಳಲ್ಲಿ ವರ್ಗೀಕರಣ ರೀತ್ಯಾ ಉಂಟಾದ ಗೋತ್ರ-ವಂಶ-ಗಳು ಅಸಂಖ್ಯಾತಗಳಾಗಿಲ್ಲ. ಪ್ರಪಂಚದ ದೇಹಿಗಳೆಲ್ಲರೂ ನಿಯಮಿತವಾದ ಅಲ್ಪ ಸಂಖ್ಯೆಯ ಗೋತ್ರ-ವಂಶ-ಗಳಲ್ಲಿ ವರ್ಣ ಸೋಪಾನಕ್ಕೆ ತಕ್ಕಂತೆ ಗೊತ್ತಾದ ವಂಶ-ಗೋತ್ರಗಳಿಗೆ ಸೇರಿಯೇ ಇರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಪ್ಪತ್ತೇಳು ನಕ್ಷತ್ರಗಳ ಸಂಬಂಧದಲ್ಲಿ ಜನ್ಮವನ್ನು ತಾಳಿದ ಸಸ್ಯಾದಿ ಮನುಷ್ಯ ಪರ್ಯಂತ ಇರುವ ಜೀವಿಗಳೆಲ್ಲರೂ 27 ನಕ್ಷತ್ರ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅದರಂತೆ ಕಶ್ಯಪ-ಬ್ರಹ್ಮ ಮೊದಲಾದ ಪ್ರಜಾಪತಿಗಳ ವರ್ಗಕ್ಕೆ ದೇಹಿಗಳು ಸೇರಿಕೊಂಡಿರುವರು ಎಂಬ ಹೆಮ್ಮೆಯನ್ನು ಮರೆಯಲಾಗುವುದಿಲ್ಲ.

ವರ್ಣ ಸಂಸ್ಕೃತಿ

ಶ್ರೋತ್ರಿಯಾದಿ ವರ್ಣಗಳು ಸಂಸ್ಕೃತಿ ವಿಧಾನದಿಂದ ಬೆಳಗುತ್ತವೆ. ದೇಹಿಯ ಸ್ಥಿತಿಯು ಹಿಂದಿನ ಋಣಾನುಬಂಧದಿಂದ ಉಂಟಾಗುವುದರಿಂದ ಸಂಸ್ಕೃತಿಯೂ ಸಹ ನಡೆದಿರಬೇಕೆಂದು ಸ್ಪಷ್ಟವಾಗುವುದು. ಅತ್ಯುತ್ಕಟವಾದ ಈ ಸಂಸ್ಕೃತಿಯ ಪ್ರಾಬಲ್ಯದಿಂದ ದೇಹಿಯ ಕಾರ್ಯಗಳು ಕ್ಷಿಪ್ರಫಲದಾಯಕಗಳಾಗುವುವು. ಆದರೂ ಸುತ್ತುಮುತ್ತಲಿನ ಸನ್ನಿವೇಶಕ್ಕೂ ತನ್ನ ನೂತನ ಶರೀರ ಧಾರಣೆಗೂ ತಕ್ಕಂತೆ ದೇಹಿಯು ವಿದ್ಯಾ ಸಂಸ್ಕಾರವನ್ನು ಹೊಂದಲೇ ಬೇಕಾಗಿರುತ್ತದೆ.

'ಸ್ವ' ಎಂಬುದು ದೇಹಿಯನ್ನು ಹೇಳುವಂತೆ ಸ್ವೇತರ ಶರೀರದ ಆವರಣದಲ್ಲಿರುವ ದೇಹಿಯು 'ಪರ' ವೆನಿಸಿ, ಪರ = ಶ್ರೇಷ್ಠವಾಗಿರುವ ಸ್ಥಿತಿಯುಂಟಾಗುತ್ತದೆ. ಇಂತಹ ಪರ-ದೇಹಿಯು ಗುರುವಾಗಿ ವಿದ್ಯಾ ಜನನವನ್ನು ದಯಪಾಲಿಸಿದ ಹೊರತು ಸಂಸ್ಕಾರವೂ ಯಜ್ಞವೂ ಚರಿತಾರ್ಥವಾಗುವುದಿಲ್ಲ. ಸ್ವಯಂ ಪಂಡಿತರೂ ಶ್ರೇಷ್ಠರೂ ಆದ ದೇಹಿಗಳು ಪರಿವ್ರಾಜಕ-ಸಿದ್ಧಪುರುಷರಾದರೂ ಗುರುವಿನಿಂದ ಜ್ಞಾನ ಜನನ ಸಂಸ್ಕೃತಿಯನ್ನು ಹೊಂದದಿದ್ದರೆ ಗತಿಯೇ ಇಲ್ಲ. ಮತ್ತು ಅಂತಹವರಿಗೆ ದುಷ್ಟ ಆವರಣಗಳಿಂದ ಗತಿಯು ತತ್ಕಾಲದಲ್ಲಿ ಪ್ರಾಪ್ತವಾಗದಿದ್ದರೂ ದುಷ್ಟ ಆವರಣಗಳಿಂದ ವಿಮುಕ್ತವಾದ ಸ್ಥಿತಿಯು ಕ್ರಮೇಣ ಲಬ್ಧವಾಗಿ ವಿದ್ಯಾಜನನಸಂಸ್ಕೃತಿಗೆ ಮೂಲವಾದ ಗುರುವಿನ ಆಶ್ರಯವೂ ದೊರೆಯುವುದರಲ್ಲಿ ಸಂಶಯವಿಲ್ಲ.

ವಿಶ್ವದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ದೇಹಿಯೂ ಆತನ (ಬೆನ್ನಿನ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದೆ ಅತಿಶಯವಾದ ಸಂಸ್ಕೃತಿ-ಪ್ರಯತ್ನ ರಾಶಿಗಳನ್ನು ಹೊತ್ತಿದ್ದರೂ ತಾತ್ಕಾಲಿಕ ಪರಿಸ್ಥಿತಿಯಲ್ಲಿ ವಿದ್ಯಾ-ಕಲಾ-ಜನನಕ್ಕೆ ಅನುರೂಪರಾದ ದೇಹಿಗಳನ್ನಾಶ್ರಯಿಸಿ ಗುರು ಸೇವೆಯನ್ನು ಮಾಡಬೇಕಾಗಿರುತ್ತದೆ. ಇದೇ ಪ್ರಥಮ ಸಂಸ್ಕೃತಿಯಾಗಿ ಆ ಉಪಾಧಿಯಿಂದ ನಡೆಯಬೇಕಾದ ವರ್ಣ ಕಾರ್ಯಗಳಿಗೆ ಮೂಲವಾಗುವುದು. ಯಾವ ಕಾರ್ಯಾರಂಭಕ್ಕಾದರೂ ಅತ್ಯವಶ್ಯಕವಾಗಿ ಇದು ನಡೆಯಲೇ ಬೇಕು. ಬೇಡವೆಂದರೂ ಕಾರ್ಯ ಸಿದ್ಧಿಯ ಋಣಾನುಭವವು ಆಗಬೇಕಾಗಿರುವುದರಿಂದ ಗುರು ಸೇವಾ ಸಂಸ್ಕೃತಿಯು ತಪ್ಪುವುದಿಲ್ಲ. ತಾನಾಗಿಯೇ ಹೊರಿಸಲ್ಪಟ್ಟಂತಾಗುವುದು. ಹೀಗಿರುವಲ್ಲಿ ಸ್ವತಃ ಯತ್ನಿಸಿ ಸಂಸ್ಕಾರವನ್ನು ಸ್ವಾಗತಿಸುವುದು ಸರ್ವರಿಗೂ ಸಾಧು ಸ್ವಭಾವವೇ ಆಗಿರುತ್ತದೆ.

ಶ್ರೋತ್ರಿಯಾದಿ ಪಂಚವರ್ಣಗಳು ತಮ್ಮ ತಮ್ಮ ವರ್ಣ ಕರ್ಮಗಳಿಗನುಸಾರವಾಗಿ ತಾತ್ಕಾಲಿಕವಾಗಿ ಕಾರ್ಯೋನ್ಮುಖವಾಗಲು ಗುರುವಿನಿಂದ ಸಂಸ್ಕಾರವನ್ನು ಹೊಂದಬೇಕಾಗಿದೆ. ಸ್ವೇತರವೆನಿಸಿ ಪರವೆನಿಸುವ ಸಸ್ಯ ಪ್ರಾಣಿ ಪಕ್ಷಿ ಜಲಚರಗಳು ಮೊದಲುಗೊಂಡು ಶ್ರೇಷ್ಠ ಮಾನವ ದೇಹಿಗಳವರೆಗಿನ ಶ್ರೇಣಿಯಲ್ಲಿ ಯಾರಾದರೂ ಯಾವುದಾದರೂ ಗುರುಸ್ಥಾನದಲ್ಲಿ ನಿಂತು ವಿದ್ಯಾ-ಕಲಾ-ಜನನ ಸಂಸ್ಕೃತಿಯನ್ನು ನೆರವೇರಿಸಬೇಕಾಗಿರುತ್ತದೆ. ಈ ವಿದ್ಯಾ-ಕಲಾ-ಜನನವೇ ದ್ವಿಜ ಸಂಸ್ಕಾರದ ಅರ್ಥವಾಗಿರುತ್ತದೆ.

ವೇದಾಧ್ಯಯನಕ್ಕಾಗಿ ದ್ವಿಜಸಂಸ್ಕಾರ; ಮಹಾಮಂತ್ರೋಪದೇಶಗಳಿಗೆ ದ್ವಿಜ ಸಂಸ್ಕಾರ; ಭಾಷ್ಯಾದಿ ಪಾಠಕ್ಕೆ ದ್ವಿಜ ಸಂಸ್ಕಾರ ಇತ್ಯಾದಿ ಸಂಸ್ಕಾರಗಳು ಸಮಸ್ತ ಕಲೆಗಳಿಗೂ, ಕರ್ಮಗಳಿಗೂ, ಕಲನಗಳಿಗೂ ವ್ಯಾಪಾರಗಳಿಗೂ. ಉದ್ಯೋಗಗಳಿಗೂ, ವ್ಯಕ್ತಿಗಳಿಗೂ, ಶರೀರಕ್ಕೂ ಮನಸ್ಸಿಗೂ ಆತ್ಮಕ್ಕೂ ನಡೆಯಬೇಕಾಗಿರುತ್ತವೆ.

ಕ್ಷತ್ರಿಯ ವೈಶ್ಯಗಳಿಗೆ ವೇದಾಧ್ಯಯನವು ಗೌಣವಾಗಿದ್ದು ತತ್ಸಂಬಂಧವಾದ ದ್ವಿಜ ಸಂಸ್ಕಾರವೂ ಗೌಣವಾಗಿರುತ್ತದೆ. ಶ್ರೋತ್ರಿಯಕ್ಕೆ ಕ್ಷತ್ರಿಯ-ವೈಶ್ಯದ್ವಿಜ ಸಂಸ್ಕಾರಗಳು ಗೌಣವಾಗಿರುವುವು. ಕ್ಷತ್ರಿಯ ವೈಶ್ಯವರ್ಣ ಮತ್ತು ಕರ್ತವ್ಯಗಳಿಗೆ, ಸಂಬಂಧಪಟ್ಟ ದ್ವಿಜಸಂಸ್ಕಾರಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ ಪ್ರಧಾನವಾಗಿರುವುವು. ಶೂದ್ರ ನಿಷಾದಗಳಿಗೆ ತತ್ತದುಚಿತ ದ್ವಿಜಸಂಸ್ಕಾರಗಳು ನಡೆಯುವುವು.

ವಿಶ್ವದಲ್ಲಿ ದೇಹಿಗಳ ಶ್ರೇಯಸ್ಸಿನ ಅಂತಸ್ತಿಗೆ ತಕ್ಕಂತೆ ಅವರು ಇಚ್ಛಾ ಪೂರ್ತಿಗಾಗಿ ಋಣಾನುಬಂಧ ಪ್ರಕಾರ ಆಯಾ ವರ್ಣದ ದ್ವಿಜ ಸಂಸ್ಕಾರವನ್ನು ಹೊಂದಬೇಕಾಗಿದೆ.

ಯಾವ ಸಂದರ್ಭದಲ್ಲಿಯೂ ದೇಹಿಗಳ ಅಂತಸ್ಥವಾದ ಬಹಿಃಸ್ಥವಾದ ವರ್ಣಗಳು ಏಕವಾಗಿರುವ ಅಥವಾ ಬೇರೆಯಾಗಿರುವ ವಿಚಾರವನ್ನು ತಿಳಿದು ಸಿದ್ಧಿಯನ್ನು ಸಾಧಿಸುವ ಹೊಣೆಗಾರಿಕೆಯು ದೇಹಿಗಳಿಗೆ ಸೇರಿದುದಾಗಿದೆ.

ಪೂರ್ಣ-ಬ್ರಹ್ಮನಂತೆ ಪ್ರಪಂಚದಲ್ಲಿ ವ್ಯಾಪಿಸಿರುವ ಗುಣ ಶಕ್ತಿ ಕರ್ಮಗಳು ಸಸ್ಯಾದಿ ದೇಹಿಗಳನ್ನು ಬಳಸಿರುವುವು. ಅವುಗಳಿಗೂ ಸಹ ದ್ವಿಜಸಂಸ್ಕಾರಗಳು ನಡೆಯಬಹುದಾಗಿದೆ.

ಕಾರ್ಯಸಾಧನೆಗೆ ಪ್ರಧಾನವಾದ ವಿವೇಕ, ಮನುಷ್ಯತ್ವವುಳ್ಳ ಮಾನವರು ಗುಣಶಕ್ತಿಕರ್ಮಗಳನ್ನು ಋಣಾನುಬಂಧದ ಮಿತಿಯಲ್ಲಿಯೂ ಅದಕ್ಕೆ ತಕ್ಕ ವರ್ಣಗಳ ಮಿತಿಯಲ್ಲಿಯೂ ಪ್ರಯೋಗಿಸಿ ಕಾರ್ಯಸಿದ್ಧಿಯನ್ನು ಹೊಂದುವುದಕ್ಕೆ ಮಾಡುವ ಪ್ರಯತ್ನಗಳಲ್ಲಿ ಶಿಕ್ಷಣವೂ ಒಂದಾಗಿದೆ. ಶಿಕ್ಷಣಕ್ಕೆ ಪ್ರವೇಶಾದಿ ಸಂಸ್ಕೃತಿಗಳೂ ಉಕ್ತವಾಗಿರುವುವು. ಈ ಸಂಸ್ಕೃತಿಗಳಿಂದ ಸುಸಂಸ್ಕೃತರಾದ ದೇಹಿಗಳು ಗುರುವಿನ ಆಶ್ರಯದಿಂದ ದ್ವಿಜರೆನಿಸಿ ಕಾರ್ಯೋನ್ಮುಖರಾಗಬೇಕು.

ಒಬ್ಬ ದೇಹಿಯು ಅನೇಕ ಕಾರ್ಯ ಸಾಧನೆಗಳಿಗೆ ಯತ್ನಿಸುವುದಾದರೆ ಪ್ರತಿಯೊಂದು ಕಾರ್ಯಾರಂಭದಲ್ಲಿಯೂ ತತ್ತತ್ಪ್ರವೇಶಾದಿ ಸಂಸ್ಕಾರಗಳನ್ನು ತತ್ತದಾಚಾರ್ಯವರ್ಯನ ಹೊಂದಬೇಕಾಗಿದೆ.

ಚರ್ಮದ ಕೈಗಾರಿಕೆಯಲ್ಲಿ ಎಷ್ಟು ಬಗೆಗಳಿವೆಯೋ ಅವುಗಳಿಗೆಲ್ಲಾ ಮೂಲಭೂತವಾದ ಪ್ರಥಮ ಸಂಸ್ಕಾರವೂ ಅನಂತರ ಇತರ ವಿಧವಾದ ಸಂಸ್ಕಾರಗಳೂ ಆಯಾ ಬಗೆಗಳ ಕಾರ್ಯಾರಂಭದಲ್ಲಿ ನಡೆಯುವುವು. ಹೊಲಿಗೆ, ಉಳುವುದು, ಅಡಿಗೆ, ಸ್ತ್ರೀಯರ ವಿಶಿಷ್ಟ ಕಾರ್ಯಗಳು, ಹಾರುವುದು, ನೆಗೆಯುವುದು, ಕುಸ್ತಿ, ಗರಡಿ ಮೊದಲಾದ ಸಣ್ಣ ಪುಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್ಯ ಸಾಧನೆಗಳಿಗೆಲ್ಲಾ ದ್ವಿಜ ಸಂಸ್ಕಾರಗಳು ಪ್ರತ್ಯೇಕವಾಗಿಯೇ ಇರುವುವು.

ಪದವೀ ಸಂಜ್ಞೆಯನ್ನು ಧರಿಸುವ ದೇಹಿಗಳೆಲ್ಲರೂ ಪದವೀ ಸಂಜ್ಞಾ ಸೂಚಕವಾದ ಸ್ಥೂಲ ಸಂಕೇತಗಳಿಂದಲೇ ತಮ್ಮ ತಮ್ಮ ಸಂಸ್ಕಾರ ವಿಶೇಷಗಳನ್ನು ತಿಳಿಸಲಾರರು. ಬಿ.ಎಸ್‌ಸಿ., ಬಿ.ಎ. ಎಂಬ ಸಂಕೇತ ದಿಂದ ಯಾವ ಯಾವ ವಿಷಯ ವಿಭಾಗಗಳಲ್ಲಿ ದ್ವಿಜ ಸಂಸ್ಕಾರವು ನಡೆದಿದೆ–ಎಂಬುದನ್ನು ವಿವರಿಸಿ ಪ್ರತ್ಯೇಕವಾಗಿ ತಿಳಿಸಬೇಕಾಗಿದೆ. ಇದ ರಿಂದ ಇತರ ಅಧ್ಯಯನ ಸಂಸ್ಕಾರಗಳಿಗೆ ಅಥವಾ ಸೇವೆಗೆ ಇರುವ ಅರ್ಹತೆಯನ್ನು ತಿಳಿಯಬಹುದು.

ವೇದಾಧ್ಯಯನ, ಶಾಸ್ತ್ರಾಧ್ಯಯನ, ಕಲಾಭ್ಯಾಸ, ಶೂದ್ರ ನಿಷಾದ ಕ್ಷತ್ರಿಯ ವೈಶ್ಯ ವಿದ್ಯಾ–ಕಲಾ–ಶಿಕ್ಷಣ ಅಭ್ಯಾಸಗಳು, ಚತು ಷ್ಷಷ್ಟಿ ವಿದ್ಯಾ ಕಲಾದಿಗಳು ಇವುಗಳ ಸಿದ್ಧಿಯೆಲ್ಲವೂ ಪ್ರಾರಂಭದಲ್ಲಿ ಗುರುವಿನಿಂದ ಆಗುವ ವಿದ್ಯಾ-ಕಲಾ–ಜನನದ ದ್ವಿಜ ಸಂಸ್ಕಾರಪೂರ್ವಕ ವಾಗಿಯೇ ನಡೆಯುವುವು.

ದೇಹಿಯು ಜನ್ಮವನ್ನು ತಾಳಿದಂದಿನಿಂದ ಜೀವಾವಧಿ ಪರ್ಯಂತ ವೂ–ತಾತ್ಕಾಲಿಕ ಜೀವಪಾನದಲ್ಲಿ ನೂತನವಾಗಿ ಆರಂಭಿಸುವ ಕಾರ್ಯ ಗಳಿಗೂ, ಹಿಂದಿನಿಂದ ಅನುಸರಿಸಿಕೊಂಡು ಬಂದು ಮುಂದುವರಿಸಲ್ಪಡ ಬೇಕಾದ ಕಾರ್ಯಗಳಿಗೂ ಶ್ರೇಯೋಭ್ಯುದಯ ಸಂಸ್ಕಾರಗಳು ನಡೆಯು ವುವು. ಇವೆಲ್ಲವೂ ವರ್ಣ ಸಂಸ್ಕೃತಿಗಳೇ ಆಗಿರುವುವು. ಶರೀರ, ಮನಸ್ಸು ಇಂದ್ರಿಯಾದಿಗಳ ಹಿತಕ್ಕೆ ಆಗುವ ಸಂಸ್ಕಾರಗಳು ಪರಂಪರೆಯಾಗಿ ಆತ್ಮನ ಸ್ವಸ್ವರೂಪಾವಸ್ಥಾನ ಯೋಗದ ಮೆಟ್ಟಲುಗಳಾಗಿರುವುವು.

ವರ್ಣ ವಿರೋಧವಾಗಿ ನಡೆಯುವ ವಿಮುಖ ವರ್ತನೆಗಳು ದೇಹಿ ಯನ್ನು ಎಚ್ಚರಿಸಿ ಪುನಃ ಅವುಗಳನ್ನು ಪುರಸ್ಕರಿಸದಿರುವಂತೆ ಅನುಭವದ ಮೂಲಕ ತಿಳಿಸುವ ಸಂಸ್ಕಾರಗಳೆಂದೇ ಪರಿಗಣಿಸಲ್ಪಡುವುವು. ಅಂಡಜ ಜಂತುಗಳಲ್ಲಿ ಶರೀರ ಜನ್ಮವೇ ಎರಡು ಹಂತಗಳಲ್ಲಿ ನಡೆದು ದ್ವಿಜ ಸಂಸ್ಕಾರವನ್ನು ಬೆಳಗುವುದು.

ಕ್ರಿಮಿಗಳಲ್ಲಿ ಮೊಟ್ಟೆಯೊಡೆದು ಹುಳುವಾಗುವುದೂ ದ್ವಿಜಸಂಸ್ಕಾರ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಳು ಕೆಲವು ಕಾಲ ಅಜ್ಞಾತ ಅಕರ್ಮ-ಅವಸ್ಥೆಯಲ್ಲಿರುವುದೂ ಮೂರನೇ ಸಂಸ್ಕಾರ; ಪುನಃ ತಾಟಸ್ಥ್ಯದ ಅವಸ್ಥೆಯು ಕಳೆದು ಅತ್ಯನ ತವೂ ಅತ್ಯಂತ ರೂಪಾಂತರವೂ ಆದ ಪತಂಗಾವಸ್ಥೆಯು ಚತುರ್ಥ ಸಂಸ್ಕಾರವಾಗಿರುತ್ತದೆ. ಇವೆಲ್ಲವೂ ಜನ್ಮ ಸಂಸ್ಕಾರಗಳೇ. ತೃತೀಯ ಚತುರ್ಥ ಸಂಸ್ಕಾರಗಳು ಪರಕಾಯ ಪ್ರವೇಶ ಸಂಸ್ಕಾರವನ್ನು ಸೂಚಿಸುವುವು. ತತ್ವಶಾಸ್ತ್ರದಲ್ಲಿ ಈ ವಿಷಯವು ಭ್ರಮರಕೀಟನ್ಯಾಯವಾಗಿ ಪ್ರಸಿದ್ಧವಾಗಿರುವುದು.

ಪರಮಹಂಸರ ಕರಕಮಲದಿಂದ ಜನನವಾಗುವ ಪರಿವ್ರಾಜಕಾದಿ-ಆಶ್ರಮಗಳು ಶ್ರೇಯಸ್ಸಾಧನೆಯ ಅಂತ್ಯ ಸೋಪಾನಕ್ಕೆ ಸಂಬಂಧಿಸಲ್ಪಟ್ಟಿರುವುವು.

ವರ್ಣ ಸಾಧನೆ

ಒಂದು ವರ್ಣದ ಗುಣ ಶಕ್ತಿ ಕರ್ಮಗಳ ಋಣಾನುಬಂಧದ ಮಿತಿಯಲ್ಲಿ ಬರುವ ದೇಹಿಯು ಯೋಗ್ಯತಾತಿಶಯದಿಂದ ಅದೇ ಶರೀರದಲ್ಲಿ ಶರೀರ, ಮನಸ್ಸು ಆತ್ಮಗಳಿಗೆ ಉಚಿತವೂ ಪ್ರಬಲವೂ ಆದ ಶಿಕ್ಷಣವನ್ನು ದ್ವಿಜ ಸಂಸ್ಕಾರ ಮೂಲಕ ಹೊಂದಿ ಉತ್ತಮ ವರ್ಣದ ಹಂತವನ್ನು ಏರಬಹುದು. ವಿಶ್ವಾಮಿತ್ರವೆಂಬ ಘನಪ್ರಯತ್ನದಿಂದ ವಿಶ್ವಾಮಿತ್ರವು ವಸಿಷ್ಠ ಸ್ಥಿತಿಯನ್ನು ಹೊಂದಬಹುದಾಗಿದೆ. ವಿದ್ಯಾರಣ್ಯರೂ ಸಹ ಆಶ್ರಮ ಭೇದದಿಂದ ಶರೀರ ಭೇದ ಧರ್ಮವನ್ನು ಸಾಧಿಸಿ ಕಾರ್ಯಸಿದ್ಧಿಯನ್ನು ಪಡೆದು ಆದರ್ಶರಾಗಿ ಅಮೃತತ್ವವನ್ನು ಸಾಕ್ಷಾತ್ಕರಿಸಿರುತ್ತಾರೆ.

ಕ್ರಮಶಃ ಮೇಲುಮೇಲಕ್ಕೆ ಏರಬೇಕಾದ ಅಭ್ಯಾಸ ಕ್ರಮದಲ್ಲಿ ಸಾಧಿಸುವ ಅರ್ಹತೆ-ಯೋಗ್ಯತೆ-ಉಳ್ಳ ದೇಹಿಗಳು ಮಿತಿಯನ್ನು ಉಲ್ಲಂಘಿಸಿದಾಗ ಅರ್ಹತೆ - ಅರ್ಥಸಿದ್ಧಿಗೆ ಅಡ್ಡಿಯಾದ ವ್ಯತಿಕ್ರಮ, ಅಕ್ರಮ, ಅಪೂರ್ಣತೆಯೆಂಬುದೇ ಮೊದಲಾದ ಕಾರಣ ಅಥವಾ ದೋಷಗಳಿಂದ ಪ್ರಯತ್ನವು ಪಕ್ವವಾಗದೆ ವಿಫಲವಾಗುವುದು.

ಅರ್ಹತೆ ಮತ್ತು ಸಿದ್ಧಿಗಳನ್ನು ಆಶ್ರಿತರಿಗೆ ದೊರಕಿಸಲು ಅಖಂಡ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವಾದ ಗುಣಶಕ್ತಿಕರ್ಮಗಳ ಪೂರ್ಣತೆಯನ್ನು ಪಡೆದಿರುವ ಸಿದ್ಧಪುರುಷರು ಆಶ್ರಿತರನ್ನು ಉದ್ಧರಿಸಲು, ಆಶ್ರಿತರು ಮಾಡಬೇಕಾದ ಪ್ರಯತ್ನ ಸಂಸ್ಕಾರವೆಷ್ಟಿರುವುದೋ ಅಷ್ಟನ್ನೂ ಅವರಿಗಾಗಿ ಅಪರ ಪರವಾಗಿ ತಮ್ಮ ತಪಃ ಫಲರಾಶಿಯಿಂದ ಕೊಟ್ಟು ಉತ್ತಮ ವರ್ಣ ಕಾರ್ಯ ದಕ್ಷತೆಯನ್ನೂ ಅರ್ಹತೆಯನ್ನೂ ಸಿದ್ಧಿಯನ್ನೂ ದೊರಕಿಸುತ್ತಾರೆ. ಹೀಗೆ ಸಿದ್ಧರ ಸಿದ್ಧಿಯನ್ನು ಪಡೆಯುವುದಕ್ಕಾಗಿ ಪರೋಕ್ಷವಾಗಿ ಅರ್ಹತೆಯನ್ನು ಕ್ಲೇಶದಿಂದ ಪಡೆದವರಲ್ಲಿ ಹರಿಶ್ಚಂದ್ರನೂ ಒಬ್ಬನು.

ವರ್ಣ ಮತ್ತು ವರ್ಣ ಪ್ರಭೇದಗಳ ಶೀರ್ಷಿಕೆಯಲ್ಲಿ ಬರುವ ದೇಹಿಗಳು ತಮ್ಮ ತಮ್ಮ ಋಣಾನುಗುಣವಾಗಿ ಗುಣ ಶಕ್ತಿ ಕರ್ಮಗಳನ್ನು ರೂಢಿಸುವವರಾಗಿರುತ್ತಾರೆ. ವರ್ಣ ವಿವರಗಳ ಸಾಧ್ಯತೆಯು ಶತಾಂಶ ಪ್ರಮಾಣ ಕ್ರಮದಲ್ಲಿರುತ್ತದೆ.

ವೇದಾಧ್ಯಯನವೆಂದರೆ ಪೂರ್ಣ ವೇದದ ಅಧ್ಯಯನವಾಗಬಹುದು ; ಒಂದು ಭಾಗದ, ಒಂದು ಸೂಕ್ತ , ಒಂದು ಋಕ್ ವಾ ಮಂತ್ರದ ಅಧ್ಯಯನವಾಗಬಹುದು. ಇವೆಲ್ಲವೂ ಅವರವರ ಅನುಸಂಧಾನ ಪ್ರಯತ್ನಗಳಿಂದ ತಪೋ ಮಹಿಮೆಯಿಂದ ಫಲದಾಯಕಗಳಾಗುವುವು. ಅನನುಸಂಧಾನದಿಂದಾದ ಪೂರ್ಣ ವೇದಾಧ್ಯಯನಕ್ಕಿಂತಲೂ ಅನುಸಂಧಾನ ಸಂಸ್ಕೃತವಾದ ಮಂತ್ರ ಜಪವೇ ಶ್ರೇಷ್ಠವೆನಿಸಿ ಅಧಿಕ ಫಲಪ್ರದವಾಗಬಹುದು. ಕೇವಲ ಜನ್ಮವಾಗಲೀ, ಸ್ಥಿತಿಯಾಗಲೀ ಫಲವನ್ನು ಕೊಡಲಾರವು. ಕೇವಲ ವರ್ಣದ ಹೆಸರು ಹೇಳಿದ್ದರಿಂದ ಫಲವು ಲಭಿಸುವುದಿಲ್ಲ. ವರ್ಣವು ಸಾಧನೆಗೆ ಸಂಬಂಧಪಟ್ಟು ಪ್ರಯೋಜನಕಾರಿಯಾಗಿರುವುದು. ವೈಶ್ಯವರ್ಣಕ್ಕೆ ಸೇರಿದುದರಿಂದಲೇ ಸಂಪದಭ್ಯುದಯವಾಗುವುದಿಲ್ಲ. ಕೇವಲ ಕ್ಷತ್ರಿಯ ವರ್ಣ ಸಂಬಂಧವು ಸಂರಕ್ಷಣೆಯ ಕರ್ತವ್ಯವನ್ನು ನೆರವೇರಿಸಲಾರದು.

ಧರ್ಮ ಪುಣ್ಯ ಇತ್ಯಾದಿ ನೆಪಗಳಿಂದ ಇಂದ್ರಿಯಗಳನ್ನು ಸಡಿಲಿಸಿ ಮನಸ್ಸನ್ನು ಜೋಲು ಬಿಟ್ಟರೆ ಅವಧಾನವು ಕೆಡುವುದು. ಅನುಸಂಧಾನ ಶಕ್ತಿಯು ಕುಂದುವುದು. ಇಂತಹ ಶೈಥಿಲ್ಯಗಳಿಗೆ ಇಂಬುಗೊಡದೆ–ಸೋಲದೆ ಸ್ವಕರ್ಮವೇ ಶ್ರೇಷ್ಠತಮವೆಂದು ದೃಢವಾಗಿರಬೇಕು. ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಕ್ಕೆ ಸಂಬಂಧಪಟ್ಟ ಪ್ರಾಥಮಿಕ ಎಚ್ಚರಿಕೆಗಳನ್ನು ಮರೆಯದೆ ಸ್ಮರಿಸುತ್ತಿರುವುದೇ ಗುರುತರವಾದ ಸಾಧನೆಯ ಅಂಗವಾಗಿರುತ್ತದೆ.

ಪ್ರಾಪಂಚಿಕವಾದ ಚಾಪಲ್ಯಗಳಿಗೊಳಗಾಗಿ ವರ್ಣಗಳ ಮಿತಿಯಿಂದ ಜಾರಿ ಧುಮ್ಮಿಕ್ಕಿದರೆ ಪ್ರಾಪಂಚಿಕದ ಸೊಬಗು ಆಪಾತತಃ ಅನುಭವಕ್ಕೆ ಬಂದರೂ, ಸಂಸ್ಕೃತಿ ಶ್ರೇಣಿಯಲ್ಲಿ ವಿಮುಖವೆನಿಸಿ, ವಿಮುಖದ ಮಟ್ಟದಿಂದ ತಪ್ಪಿಸಿಕೊಳ್ಳಲು ಹೆಚ್ಚು ಶ್ರಮಪಡುವ ದುಃಖಕ್ಕೆ ಭಾಗಿಯನ್ನಾಗಿ ಮಾಡುವುದು. ಅಂತಹವರು ಯಾರು ಯಾವುದನ್ನು ಬೇಕಾದರೂ ಸಾಧಿಸಬಹುದು. ಕರ್ಮ ರಹಸ್ಯವನ್ನು ತಿಳಿದು ಸಂಸ್ಕಾರವನ್ನು ಕ್ರಮಶಃ ಹೊಂದಲು ಶ್ರಮಿಸುತ್ತಾ ಕಾರ್ಯಸಿದ್ಧಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ ನಿರ್ವಹಿಸಲು ಅತ್ಯುತ್ಕಟವಾದ ಪ್ರಯತ್ನಗಳಿಂದ ಸಾಧಿಸುವುದರಿಂದ ಫಲವು ಲಭಿಸುವುದರಲ್ಲಿ ಸಂದೇಹವಿಲ್ಲ. ಇಂತಹ ಸಾಹಸಗಳು ವಿಫಲವಾಗಬಹುದಾದುದರಿಂದ ಆತ್ಮನ ಪೂರ್ಣಶಕ್ತಿಯನ್ನೂ, ತಾತ್ಕಾಲಿಕ ಮಿತಿಯನ್ನೂ ಅರಿತು ಕ್ರಮಶಃ ಯತ್ನಿಸುವ ರಾಜಯೋಗವನ್ನವಲಂಬಿಸುವುದು ಮೇಲು.

ಜನ್ಮತಃ ಮತ್ತು ಕರ್ಮತಃ (ವರ್ಣತಃ) ವಿಪ್ರವುಳ್ಳ ದೇಹಿಯು ವಿಪ್ರ ಬಂಧನಕ್ಕೆ ತನ್ನನ್ನು ಒಳಪಡಿಸದೆ ಅಡಿಗೆ ಮೊದಲಾದ ಶೋಧನ (ಶೂದ್ರ) ಕೆಲಸವನ್ನು ಆಚರಿಸುತ್ತಾ ಯಜ್ಞ ಜಪಾದಿ ಕಾರ್ಯಗಳನ್ನು ನಡೆಸುವುದಾದರೆ ವಿಕ್ಷಿಪ್ತವಾದ ಮನಸ್ಸಿನ ಸ್ಥಿತಿಯಿಂದ ಅನುಸಂಧಾನವು ಕುಂಠಿತವಾಗುವುದು. ಯಜ್ಞ ಜಪಾದಿ ಸ್ವಕರ್ಮವು ಕೆಡುವುದು. ತನ್ನನ್ನು ಬಂಧನಕ್ಕೆ ಒಳಪಡಿಸುವುದಿಲ್ಲವೆಂದು ತಿಳಿಯಲ್ಪಟ್ಟ ಪರಿಚರ್ಯಾತ್ಮಕವಾದ ಅಡಿಗೆ, ಔಷಧಿ ಪಾಕಾದಿಗಳೂ ಅನುಸಂಧಾನವಿಲ್ಲದೆ ಹೋಗಿ ಕೆಡುವುವು. ಇದಕ್ಕೆಲ್ಲಾ ಕಾರಣವಾದ ದೇಹಿಗಳು ಬಂಧನಕ್ಕೆ ಗುರಿಯಾಗುವರು.

ಶೂದ್ರ ಶೋಧನದ ಅನುಸಂಧಾನ ಪೂರ್ವಕ ನಡೆಯುವ ಶ್ರೇಷ್ಠತಮವಾದ ಅಡಿಗೆ ಮೊದಲಾದ ಕರ್ಮಗಳು ನಡೆಯುತ್ತಿರುವಾಗ ಅವುಗಳ ಜತೆಯಲ್ಲಿ ಅಷ್ಟೇ ಏಕಾಗ್ರಚಿತ್ತತೆಯಿಂದ ಸಾಗಬೇಕಾದ ಶ್ರೋತ್ರಿಯ ಜಪಾದಿ ಕಾರ್ಯಗಳಾಗಲೀ ಸಂರಕ್ಷಣಾತ್ಮಕವಾದ ಕ್ಷತ್ರಿಯ ಕಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಲೀ ಸಂಪದಭ್ಯುದಯದ ವೈಶ್ಯ ಕಾರ್ಯವಾಗಲೀ ನಡೆಯಲಾರವು. ಇವೆಲ್ಲವೂ ಆಯಾ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವ ಕರ್ತವ್ಯ ನಿಯಮಗಳಿಗೆ ಸೇರಿದುವು. ಈ ಕಾರಣದಿಂದಲೇ ಮನಶ್ಶಾಸ್ತ್ರದ ತತ್ವಗಳನ್ನೂ ಆಯಾ ವರ್ಣ ಯಜ್ಞ ಕಾರ್ಯಾದಿ ನಿರ್ವಾಹ ಶಾಸ್ತ್ರಗಳ ತತ್ವವನ್ನೂ ಸಾಕ್ಷಾತ್ಕರಿಸಿಕೊಂಡು ಜಪಾದಿ ಕರ್ಮಗಳು ಸಂರಕ್ಷಣಾದಿ ರಹಸ್ಯಜ್ಞಾನಾಧ್ಯಯನ ಪ್ರಯೋಗಾದಿ ಕರ್ಮಗಳು ಸಂಪದಭ್ಯುದಯ ವಿಧಾನ ಜ್ಞಾನ ಮತ್ತು ಪ್ರಯೋಗ ಕರ್ಮಗಳು ಸೇವಾಧರ್ಮ ಜ್ಞಾನ ಮತ್ತು ಅನುಸಂಧಾನಗಳು ಇವುಗಳ ಮಹಿಮೆ ಮತ್ತು ಫಲಗಳಿಗೆ ಸಮಾನವಾದ ಮಹಿಮೆ ಮತ್ತು ಫಲಗಳನ್ನು ಅನುಸಂಧಾನಾತ್ಮಕವಾದ ಅಡಿಗೆ, ಗುಡಿಸುವಿಕೆ ಮೊದಲಾದ ಶೌಚ ಕಾರ್ಯಗಳುಳ್ಳ ಗೃಹಯಜ್ಞ ಗ್ರಾಮಯಜ್ಞಗಳಿಂದ ಹೊಂದಬಹುದೆಂದು ವಿವರಿಸಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಋತ ಮತ್ತು ಕರ್ಮ ಯೋಗಗಳಲ್ಲಿ ಇವೆಲ್ಲವೂ ಅಡಕ (ಅಂತರ್ಗತ) ವಾಗಿರುತ್ತವೆ. ಆದುದರಿಂದ ಗೃಹಯಜ್ಞವೂ ಯೋಗವೆಂದು ಘೋಷಿಸಿ ಪ್ರಾಣಾಯಾಮಾದಿ ಹಠಯೋಗ ಸಾಧನಗಳಿಂದ ಸಾಧಿಸಲ್ಪಡಬಹುದಾದ ಫಲವನ್ನು ಗೃಹಕೃತ್ಯಾದಿ ಕಾರ್ಯ, ರಾಜಕಾರ್ಯ ನಿರ್ವಾಹಗಳಿಂದ ಪಡೆಯುವ ಅನುಸಂಧಾನ ಮಾರ್ಗವನ್ನು ಗೀತಾದಿಗಳಲ್ಲಿ ತಿಳಿಸಿರುತ್ತಾರೆ (Yoga, Domesticated.)

ಸ್ವತಂತ್ರವಾಗಿ ಆಲೋಚಿಸಿ ನಿರ್ವಾಹ ಮಾಡುವ ವಿಪ್ರದಲ್ಲಿ ನಿರತನೂ, ಕ್ಷತ್ರಿಯ ಕಾರ್ಯವನ್ನು ವಹಿಸಿದವನೂ ಆದ ಒಬ್ಬನು ಕಾರಣಾಂತರದಿಂದ ಕಾಡಿನಲ್ಲಿ ಅಸಹಾಯನಾದನು. ಆಗ ತನಗೆ ನೆರಳನ್ನೂ ಅನ್ನ ವಸತಿಗಳನ್ನೂ ನೀಡಿದ ಹೆಂಗಸಿನ ಉಪಕಾರಕ್ಕೆ ಪ್ರತಿಯಾಗಿ ಕೆಲಸ ಮಾಡಿ ಋಣವನ್ನು ಪರಿಹರಿಸಿಕೊಳ್ಳಲು ಆಕೆಯ ಕೋರಿಕೆಯಂತೆ ದೋಸೆ ಬೇಯಿಸುತ್ತಿದ್ದನು. ಆಗಂತುಕವಾಗಿ ವಹಿಸಿಕೊಂಡ, ಪರಿಚರ್ಯಾತ್ಮಕವಾದ ಶೂದ್ರ ಕೆಲಸದ ಮೇಲೆ ದತ್ತ ಮನಸ್ಕನಾಗಲು ಅವನ ಸ್ಥಿತಿಯು ಅವನಿಗೆ ಮನೋದಾರ್ಢ್ಯವನ್ನು ಕೊಡಲಿಲ್ಲ. ತನ್ನ ಸ್ವಂತ ಕಾರ್ಯಕ್ರಮದ ವಿಚಾರ ವಿಮರ್ಶೆಯಲ್ಲಿ ಮಗ್ನನಾದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಅವಧಾನವು ತಪ್ಪಿದುದರಿಂದ ಬೇಯುತ್ತಿದ್ದ ಪದಾರ್ಥವು ಕೆಟ್ಟು ಹೋಯಿತು. ಇದರಿಂದ ಹೆಂಗಸಿನ ಆಗ್ರಹಕ್ಕೆ ಪಾತ್ರನಾಗಿ ಋಣವನ್ನು ಪರಿಹರಿಸುವುದಕ್ಕೆ ಬದಲಾಗಿ ಹೊಸದಾಗಿ ಋಣಬಂಧನವನ್ನು ಹೊಂದಬೇಕಾಯಿತು.

ಹಾಲನ್ನು ಕಾಯಿಸುವಾಗ ಅನವಧಾನದಿಂದ ಹಾಲು ಹೆಚ್ಚಾಗಿ ಕಾದು ಉಕ್ಕಿ ಚೆಲ್ಲಿಹೋಗಬಹುದು-ಎಂಬುದು ಎಲ್ಲರಿಗೂ ತಿಳಿದ ವಿಷಯ. ದೋಸೆ ಬೇಯಿಸುವುದಕ್ಕೂ ಹಾಲು ಕಾಯಿಸುವುದಕ್ಕೂ ಜಪಾದಿಗಳಿಗೂ ಕಾರ್ಯಾಲಯಗಳಲ್ಲಿ ಲೇಖನಾದಿಗಳನ್ನು ನಿರ್ವಹಿಸುವುದಕ್ಕೂ ಕೋಶದ ಹಣಕಾಸು ಲೆಕ್ಕಾಚಾರಗಳಿಗೂ ಶಸ್ತ್ರ ಚಿಕಿತ್ಸೆಗಳಿಗೂ, ಲೋಹವನ್ನು ಕರಗಿಸುವುದಕ್ಕೂ ತೈಲಾದಿ ಔಷಧಗಳನ್ನು ಸಿದ್ಧಪಡಿಸುವುದಕ್ಕೂ ಔಷಧಿ ರಸಾಯನ ಪ್ರಯೋಗ ಶಾಲೆಗಳಲ್ಲಿ ಪ್ರಯೋಗಗಳನ್ನು ನಡೆಸುವುದಕ್ಕೂ ಏಕಾಗ್ರಚಿತ್ತತೆ ಮೊದಲಾದ ಅನುಸಂಧಾನ ಸಂಸ್ಕೃತಿಗಳು ಅವಶ್ಯಕ. ಈ ಕಾರ್ಯಗಳ ನಿರ್ವಾಹಕ್ಕೆ ಏಕಾಗ್ರಚಿತ್ತತೆಯು ಬೇರೆ ಬೇರೆ ಪ್ರಮಾಣಗಳಲ್ಲಿರುವುದಿಲ್ಲ. ಬ್ರಹ್ಮಾನುಸಂಧಾನಾತ್ಮಕವಾದ ಯಜ್ಞ ಜಿಜ್ಞಾಸಾ ಪ್ರಕರಣದಲ್ಲಿ ಹೇಳಿರುವಂತೆ ಸಕಲ ಮನೋವಾಕ್ಕಾಯ ಕರ್ಮಗಳೂ ಋತಾನುರೋಧವಾಗಿದ್ದು ಹಿತವಾದ ಫಲವನ್ನು ಕೊಡುವ ಸುಮುಖ ಯಜ್ಞಗಳೆನಿಸುವುವು. (positive-active.)

ಬ್ರಹ್ಮಾನುಸಂಧಾನವಿಲ್ಲದ ಮತ್ತು ಋತ ವಿರೋಧವಾದ ಕರ್ಮಗಳು ಅಹಿತ ಫಲವನ್ನು ತುಂಬಿಸುವ ವಿಮುಖ ಯಜ್ಞಗಳಾದುದರಿಂದ (Negative) ಸಾಧನೆಗೆ ಅರ್ಹವಲ್ಲವೆಂದು, ಹಿಂದೆಯೇ ಹೇಳಿದೆ. ಅದರಂತೆ, ತಟಸ್ಥವಾದ ಮನೋವ್ಯಾಪಾರಕ್ಕೆ ಒಳಪಟ್ಟು ನಡೆಯದೆ ಇರುವ ಕರ್ಮಗಳು ದುರ್ಮುಖ (passive) ಗಳೆನಿಸಿ ಕ್ರಮೇಣ ಆತ್ಮ ತೇಜೋಬಲದಿಂದ ಸುಮುಖ ಯಜ್ಞಗಳಾಗಿ ಪರಿಣಮಿಸಬಹುದು.

ಅನುಸಂಧಾನವಿಲ್ಲದ ಬುದ್ಧನ ಸೂಕ್ತಿಗಳು ಶುಷ್ಕವಾಗಿರುವುವು. ಅನುಸಂಧಾನಯುತವಾದ ಬುದ್ಧನ ಅಥವಾ ಇತರರ ಉಪದೇಶದಿಂದ ನಡೆಯುವ ಕರ್ಮಗಳು ಬ್ರಾಹ್ಮಣಾಚಾರದಲ್ಲಿ ಹೇಳಿರುವ ಯಜ್ಞಗಳೇ ಆಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಸಂಧಾನವಿಲ್ಲದ ಯಜ್ಞಾದಿ ಕರ್ಮಗಳೂ ವರ್ಣಕರ್ಮಗಳೂ ಶುಷ್ಕವೇ. ಅಂದರೆ ಪ್ರಗತಿಸಾಧನಗಳೆನಿಸುವುದಿಲ್ಲ; ದೇಹಿಗಳನ್ನು ಕೀಳು ಮಟ್ಟದ ಅಹಿತ ಕರ್ಮದ ಅಂತಸ್ತಿಗೆ ತಳ್ಳುವುವು.

ಅನುಸಂಧಾನವಿರುವ ಬುದ್ಧ ಸೂಕ್ತಿಗಳು ಮತ್ತು ಉಪದಿಷ್ಟ ಕರ್ಮಗಳು ಯಜ್ಞವೆನಿಸಿ ಬ್ರಾಹ್ಮಣಾಚಾರವೆನಿಸುವುದರಿಂದ ವರ್ಣ ಸಾಧನೆಯಲ್ಲಿ ಬುದ್ಧಸಂಘಕ್ಕೆ ಪ್ರತ್ಯೇಕ ಸ್ಥಾನವಿರುವುದಿಲ್ಲ. ಮತ್ತು ಅನುಸಂಧಾನವಿಲ್ಲದ ಬುದ್ಧ ಪಂಥವೂ ಸಾಧನೆಯ ಮಿತಿಯಲ್ಲಿ ಬರುವು ದಿಲ್ಲವೆಂಬುದು ಬೌದ್ಧರೆಂದು ಹೇಳಿಕೊಳ್ಳುವ ಮತ್ತು ಕಾರ್ಯತಃ ಬ್ರಾಹ್ಮಣಾಚಾರವನ್ನು ಅನುಷ್ಠಾನ ಮಾಡುವ ಜನಗಳ ನಡತೆಗಳಿಂದಲೇ ಸ್ವತಸ್ಸಿದ್ಧವಾಗುವುದು.

ಧರ್ಮಶಾಸ್ತ್ರ-ಕಟ್ಟಳೆಗಳು ಸಾಮಾನ್ಯವಾಗಿ ಕೇವಲ ದಿಗ್ದರ್ಶಕ ಗಳಾಗಿರುವುವು. ಕಾಲ ದೇಶ ಪಾತ್ರಾನುಸಾರ ವೈಯಕ್ತಿಕ ಸ್ವಾತಂತ್ರ್ಯ-ಋಣಾನುಬಂಧ-ಫಲಾನುಭವಗಳಿಗೆ ಹೊಂದಿಕೊಳ್ಳುವಂತೆ ಜಿಜ್ಞಾಸೆ ಯಿಂದ ಚರ್ಚಿಸಿ ರಸಾಭಿನಿವಿಷ್ಟ ವಿಮರ್ಶೆಗೆ ಗುರಿಮಾಡಿ ಅರ್ಥಗ್ರಹಣ ಮಾಡಿಕೊಂಡು ಸಾಧಿಸಬೇಕು ಅಥವಾ ಆಚರಿಸಬೇಕೆಂಬದಾಗಿ ತಪಸ್ಸಿ ನಿಂದ ಗೋಚರವಾದ ವಿಚಾರಗಳನ್ನು ಧರ್ಮಜ್ಞರು ಉಲ್ಲೇಖಿಸಿರುತ್ತಾರೆ ಮತ್ತು ವ್ಯಾಖ್ಯಾನ ಮಾಡಿರುತ್ತಾರೆ. ಕವಿಗಳಾದ ವಿಭೂತಿಪುರುಷರು ಪ್ರಜೆಗಳೆಲ್ಲರ ಶ್ರೇಯಸ್ಸಿಗೂ ಅಭ್ಯುದಯಕ್ಕೂ ಅವಶ್ಯವಾಗಿ ಸಹಕಾರ ವಾಗುವಂತೆ ವಿಷಯಗಳನ್ನು ಪ್ರತಿಪಾದಿಸಿರುತ್ತಾರೆ. ಅಂತಹ ಸಾಧೂಕ್ತಿ ಗಳ ಇಂಗಿತ-ಆಶಯ-ವನ್ನೂ ಸಂಕೇತವನ್ನೂ ರಹಸ್ಯವನ್ನೂ ಔಚಿತ್ಯ ವನ್ನೂ ವಿವೇಕದಿಂದ ಅರಿತು ಅನುಷ್ಠಾನಕ್ಕೆ ತಂದು ವರ್ಣಸಾಧನೆ ಮಾಡಬೇಕು. ಸ್ವಕೀಯ ಸಂಸ್ಕೃತಿಯನ್ನು ಪರಕೀಯ ಸಂಸರ್ಗ ಸಂಸ್ಕಾರದಿಂದ ವಿವರ್ಣವಾಗಿರುವ ದೃಷ್ಟಿಯಲ್ಲಿ ನೋಡಿ ಕುಹಕವಾಗಿ ಎಣಿಸುವುದರಿಂದ ಸ್ವಕೀಯ ಶ್ರೇಯಸ್ಸಾಧನೆಯು ನಡೆಯುವುದಿಲ್ಲ.

ಬುದ್ಧಿ ಭೇದಕ್ಕೆ ಅವಕಾಶವಾಗುವಂತೆ ಒಡಕುಗಳನ್ನು ಎಬ್ಬಿಸಲು ಕುತಂತ್ರ ಪ್ರೇಮಿಗಳೂ ಕುತಂತ್ರರತರೂ ಅಸಹನೆ ಅಸೂಯೆಗಳನ್ನು ಹೃದಯದಲ್ಲಿ ತುಂಬಿಕೊಂಡು ಪರಮೋಪಕಾರ ಮಾಡುವಂತೆ ಹೇಳುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನೋಹರವಾದ ಮಾತು ಮತ್ತು ಮಾಡುವ ಕೆಲಸಗಳಿಂದ ವರ್ಣ ಕರ್ಮಗಳ ಹೀನತೆಗೆ ಕಾರಣವಾಗುವುದು. ಭಾರತ ದೇಶದಲ್ಲಿ ಉಂಟಾದ ಇಂತಹ ಒಡಕುಗಳು ಭಾರತೀಯರನ್ನು ಜೈನರನ್ನಾಗಿಯೂ ಬೌದ್ಧರನ್ನಾಗಿಯೂ ಮಾಡಿರುತ್ತವೆ. ರಾಷ್ಟ್ರೈಕಮತ್ಯಕ್ಕೂ ರಾಜ್ಯಭಾರಕ್ಕೂ ಇದರಿಂದ ಕಳಂಕವುಂಟಾಗುವುದು. "ಈ ಕಳಂಕವೇ ಸೊಗಸು" ಎಂದು ಭಾವಿಸಿ ಅದನ್ನು ವೃದ್ಧಿ ಮಾಡುತ್ತಾ ರಾಷ್ಟ್ರೈಕ್ಯವೆಂದು ತುದಿನಾಲಗೆಯಿಂದ ಹೇಳುವುದರಿಂದ ವರ್ಣ ಸಾಧನೆಗಳಿಗೆ ಎಡೆಯಾಗುವುದಿಲ್ಲ. ಆದುದರಿಂದ ಇಹ ಪರ ಸಾಧನೆಗಳು ಸಾಗಲಾರವು.

ಯಾವ ವರ್ಣದ ಕಾರ್ಯಗಳನ್ನೂ ಶಬ್ದದಿಂದ ಸೂಚಿತವಾದಷ್ಟು ಪೂರ್ಣವಾಗಿ ನಡೆಸಲು ಯಾರೊಬ್ಬರಿಂದಲೂ ಸಾಧ್ಯವಿಲ್ಲ. ಋಣಾನುಬಂಧದ ಮಿತಿಯಲ್ಲಿ ಮತ್ತು ಸನ್ನಿವೇಶಪ್ರಾಬಲ್ಯದಿಂದ ಅನುಷ್ಠಾನಪರವಾಗುವುದೇ ದೇಹಿಯ ಮುಖ್ಯ ಸಾಧನೆಯಾಗಿರುತ್ತದೆ. ವೇದಗಳನ್ನೆಲ್ಲಾ ಅಧ್ಯಯನ ಮಾಡಿದರೂ ಅರ್ಥ ಗ್ರಹಣಕ್ಕೆ ಅವಕಾಶವಿಲ್ಲ; ಶಾಸ್ತ್ರಗಳ ಅಧ್ಯಯನವಾಗುವುದೇ ಇಲ್ಲ; ಆದುದರಿಂದ ವರ್ಣ ಕಾರ್ಯಗಳ ಪ್ರಮಾಣ, ಗಾತ್ರ, ಸಂಖ್ಯೆ ಪ್ರಧಾನವಾಗಿರದೆ ಅವುಗಳ ಗುಣ ಪ್ರಯೋಜನಗಳು ಮಾತ್ರ ಪ್ರಧಾನವಾಗಿರುವುವು.

ವೇದದ ಒಂದು ಭಾಗ ಅಥವಾ ಒಂದು ಮಂತ್ರವನ್ನು ಸ್ವಾಧೀನಕ್ಕೆ ತಂದುಕೊಂಡು ಕಲಸ ವ್ಯಾಪಾರಗಳನ್ನು ಸಾಧಿಸಬಹುದು. ಹೀಗೆ ಜಪ ಹೋಮ, ಅತಿಥಿಸತ್ಕಾರ ಇತ್ಯಾದಿಗಳಲ್ಲಿ ಯಾವುದು ದೇಹಿಯ ಮಿತಿಯಲ್ಲಿ ಚರಿತಾರ್ಥವಾಗಬಹುದೋ ಅದರಲ್ಲಿ ಪ್ರಗತಿಯನ್ನು ಸಾಧಿಸಿ ಸೃಷ್ಟಿ ಸ್ಥಿತಿ ಲಯಾದಿಗಳಲ್ಲಿ ಪ್ರವರ್ತಕರಾಗಬಹುದು. (ಲಯ = ರೋಗಾದಿಗಳ ನಾಶ.)

ಕ್ಷತ್ರಿಯ ವೈಶ್ಯಗಳಿಂದಮಾತ್ರಕ್ಕೆ ಪ್ರಪಂಚವನ್ನೇ ಆಳಬೇಕೆಂದಲ್ಲ. ವೈಯಕ್ತಿಕ ಕುಟುಂಬ ರಾಜ್ಯಗಳಲ್ಲಿಯೂ ಸಹ ನೀತ್ಯನುಶಾಸನ ಸಂಯಮನಾದಿ ಹಿತಕರವಾದ ಗುಣಗಳೇ ಪ್ರಧಾನವಾಗಿರುವುವು. ಆದುದರಿಂದ ವೈಯಕ್ತಿಕ ರಾಜ್ಯಭಾರವೂ ಸಂಪದಭ್ಯುದಯವೂ ಕುಟುಂಬ, ಪ್ರದೇಶ, ದೇಶ, ರಾಷ್ಟ್ರ ವಲಯಗಳ ರಾಜ್ಯಭಾರ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪತ್ತು ಸಹ ಗುಣದಲ್ಲಿ ಏಕ ಪ್ರಕಾರವಾಗಿದ್ದು ಸಾಮಾನಾಧಿಕರಣ್ಯ ವನ್ನು ಹೊಂದಿರುವುವು.

ಆರ್ಥಿಕ ಶಕ್ತಿಯು ವಿಸ್ತರಣವಾಗಲೀ ಅರ್ಥ ಸಂಪತ್ತಿನ ಪ್ರಮಾಣ ವಾಗಲೀ ಜೀವನ ಯಜ್ಞದಲ್ಲಿ ಸಾಧನೆಯ ಗುರಿಯಲ್ಲವೆಂದು ಅನೇಕ ನೀತಿ ವೈರಾಗ್ಯ ಗ್ರಂಥಗಳೂ ಅನುಭವಗಳೂ ಸಾರುತ್ತಿವೆ.

ದೇಹಿಯು ಶ್ರೇಯಸ್ಸನ್ನು ಸಾಧಿಸುವುದಕ್ಕೆ ಮಹತ್ವಮಸಾಮಾನ್ಯ ಅಪವರ್ತನದಂತಿರುವ ಅನುಸಂಧಾನವೇ ಸಾಧನೆಯೆನಿಸುವುದು. ಋಣಾನುಬಂಧದ ಬಂಧನದಿಂದ - ಋಣಾನುಭವ ಬಂಧನದಿಂದ ಪ್ರಾಪಂಚಿಕ ವೈಭವಗಳಿಂದ ಸುತ್ತುವರಿಯಲ್ಪಟ್ಟಿದ್ದರೂ, ಶ್ರೇಯಸ್ಸು, ಬ್ರಹ್ಮಾನುಸಂಧಾನ, ಸ್ವಸ್ವರೂಪಾವಸ್ಥಾನಗಳನ್ನು ಲಕ್ಷ್ಯವಾಗಿ ಉಳ್ಳ ಬ್ರಾಹ್ಮಣ ಧರ್ಮದ ಜೀವನದಲ್ಲಿ ಅವುಗಳಿಗೆ ಬೆಲೆಯಿಲ್ಲ. ಅಪಾರ ವೈಭವಗಳಿಂದ ಕೂಡಿದ್ದರೂ ಶ್ರೇಯಸ್ಸನ್ನು ಸಾಧಿಸದೇನೇ ಇರಬಹುದು.

ಪ್ರಾಪಂಚಿಕವಾಗಿ ಸರ್ವ ಶೂನ್ಯವಾದ ದಾರಿದ್ರ್ಯವು ಶ್ರೇಯೋ ಭಾಗ್ಯನಿಧಿಯಾಗಿರುತ್ತದೆ. ಪ್ರಾಪಂಚಿಕ ವೈಭವವು ಆಧ್ಯಾತ್ಮಿಕ ದಾರಿದ್ರ್ಯ ಭೂಯಿಷ್ಠವಾಗಿರಬಹುದು. ಒಂದು ಅಂಶದಿಂದ ಭಾಗ್ಯವು ಕಂಡರೆ ಅದೇ ಸ್ಥಳದಲ್ಲಿ ಮತ್ತೊಂದು ಅಂಶದಿಂದ ದೌರ್ಭಾಗ್ಯವೂ ಪಕ್ಕ ದಲ್ಲಿಯೇ ಕಾಣುವುದು. ಇವೆಲ್ಲವನ್ನೂ ಅಂದರೆ -(ಜೀವನ ಯಜ್ಞದಲ್ಲಿ ಕಾಣುವ ನೂರಾರು ಸಾವಿರಾರು ಭಾವಸ್ಥಿತಿಗಳಲ್ಲಿ ಮಾನವೀಯತೆಯ ಪ್ರಕಾರ)- ಶ್ರೇಯಸ್ಸನ್ನು ಸಾಧಿಸುವುದು ಸಮಸ್ತ ಮಾನವರಿಗೂ ಸಮಾನವಾಗಿಯೇ ಇರುತ್ತದೆ.

ಒಬ್ಬ ದೇಹಿಗೆ ಒಂದು ಭಾಗ್ಯವು ಆ ದೇಹದಲ್ಲಿ ಅನುಭವಕ್ಕೆ ಬರುವುದು. ಅದೇ ದೇಹಿಯು ತಾತ್ಕಾಲಿಕವಾಗಿ ಅಪೇಕ್ಷಿತವೆಂದು ಕಾಣುವ ಭಾಗ್ಯಗಳನ್ನು ಹಿಂದೆಯೇ ಅನುಭವಿಸಿರಬಹುದು ಅಥವಾ ಋಣಾನುಬಂಧದ ಪ್ರಕಾರ ಅವುಗಳನ್ನು ಮುಂದೆ ಅನುಭವಿಸಲು ಅರ್ಹವಾದ ದೇಹ ಮತ್ತು ಸನ್ನಿವೇಶಗಳನ್ನು ಹುಡುಕಿಕೊಂಡು ಹೋಗಿ ವಿವಿಧವಾದ ಶರೀರಗಳಿಂದ ವಿವಿಧವಾದ ಅನುಭವಗಳನ್ನು ವಿವಿಧವಾಗಿ ಹೊಂದಬಹುದು. ಅನುಭವಕ್ಕೆ ತಕ್ಕಂತೆ ವರ್ಣಗಳ ಮೂಲಕ ಕಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳೂ ವಿಹಿತವಾಗುವುವು. ಯಾವ ವರ್ಣವಾದರೂ ಯಾವ ಸ್ಥಿತಿಯಾದರೂ, ವರ್ಣ ಸಾಧನೆಯ ಗುಣವೇ ಸುಖವನ್ನೂ ಶಾಂತಿಯನ್ನೂ ಉಂಟುಮಾಡಿ ಸಾಧ್ಯವನ್ನು ಸಾಧಿಸುವುದು.

ವರ್ಣ ಸಾಧನೆಯಲ್ಲಲ್ಲಿ ಪ್ರಗತಿಯನ್ನು ಸಾಧಿಸುವವರು ಕಲನ-ಕಾಲ-ಜ್ಯೋತಿಯ ಗತಿಯನ್ನು ತಿಳಿದ ಮಹರ್ಷಿಗಳು ತೋರಿಸಿರುವ ಜೀವಿತದ ಭಾವಗಳನ್ನು ಹನ್ನೆರಡು ಭಾಗಗಳಾಗಿ ವರ್ಗೀಕರಿಸಿ ಬ್ರಹ್ಮಾಂಡ ಪಿಂಡಾಂಡ ಸೂಚಕವಾದ ಮೇಷಾದಿ ರಾಶಿ ಕುಂಡಲಿಗೆ ಹೊಂದಿಸಿ ಹೇಳಿರುತ್ತಾರೆ. ಕಲನ ವ್ಯಾಪಾರಗಳಿಗೊಳಗಾದ ಜೀವನು ತನ್ನ ಮಿತಿಯನ್ನು ತಿಳಿದು ಶ್ರೇಯಃ ಪ್ರಾಪ್ತಿಗೆ ಯತ್ನಿಸಲು ಕಲನವನ್ನು ಸೂಚಿಸುವ ಗ್ರಹಗತಿಯನ್ನು ಅಳವಡಿಸಿಕೊಂಡಿರುತ್ತಾರೆ. 9 ವಿಧವಾದ ಗ್ರಹಗಳ ಸ್ಥಿತಿ ಸೂಚಿತ ಭೂತ, ವರ್ತಮಾನ, ಭವಿಷ್ಯತ್ ಕಲನಗಳ ವಿಚಾರವನ್ನು ತಿಳಿದು ವರ್ಣಕ್ಕೆ ಹೊಂದಿಸಿಕೊಂಡು ವರ್ಣ ಸಾಧನೆ ಮಾಡುವುದರಿಂದ ಲೋಕಕ್ಕೇ ಕಲ್ಯಾಣವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨. ವರ್ಣಸೀಮಾ — (ವರ್ಣವ್ಯಾಪ್ತಿ)

(೧) ಸಾರ್ವಜನಿಕತ್ವ

ಶೂದ್ರಾದಿ ಪಂಚ ಶಕ್ತಿ ಗುಣ ಕರ್ಮ ವಿಧಾನಗಳು ಪ್ರತಿಯೊಂದು ವ್ಯಕ್ತಿಯಲ್ಲಿಯೂ ಕುಟುಂಬ, ಸಮಾಜ, ಪ್ರದೇಶ, ರಾಷ್ಟ್ರಗಳೆಂಬ ಸಮಷ್ಟಿ ಸಂಸ್ಥೆಗಳಲ್ಲಿಯೂ ಜೀವನದ ಮತ್ತು ವ್ಯವಹಾರದ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಸನ್ನಿವೇಶವು ಪ್ರೇರಿಸಿದಂತೆ ತಾವೇ ತಾವಾಗಿ ಅಭಿವ್ಯಕ್ತವಾಗುವುವು. ಮಕ್ಕಳಲ್ಲಿಯೂ ಆಟ ಪಾಠಗಳ ಕಾಲದಲ್ಲಿ ಮತ್ತು ಸಾಮಾನ್ಯ ಜೀವನದಲ್ಲಿ ಶ್ರೋತ್ರಿಯಾದಿ ಪಂಚಕಗಳು ಸ್ವಾಭಾವಿಕವಾಗಿ ಸಂಸ್ಕಾರ ವಿಶೇಷಗಳಿಂದ ತಮ್ಮ ಮಿತಿಯಲ್ಲಿ ನಡೆಸುವ ರಾಜ್ಯಭಾರದಲ್ಲಿ ರಾಜ್ಯದ ಅಂಗಗಳಾಗಿ ಸ್ಥೂಲ ಸೂಕ್ಷ್ಮ ರೂಪಗಳಲ್ಲಿ ಪ್ರಕಾಶಕ್ಕೆ ಬರುವುವು.

ದೇಶದ ಅಥವಾ ವ್ಯಕ್ತಿಯ ಶಾಸನ ಕಾರ್ಯಗಳನ್ನು-ರಾಜ್ಯವನ್ನು-ನಡೆಸುವ ಪೀಠಕ್ಕೆ 'ರಾಜ' ಎಂದು ಹೆಸರು. ಅದರಂತೆ ಅಂಗೈಯಷ್ಟು ಅಗಲ ಮನೆ ಭೂಮಿ ಮೊದಲಾಗಿ ಅತಿ ವಿಸ್ತಾರವಾಗಿ ಅನೇಕ ಸಂಖ್ಯಾಕಗಳಾಗಿ ಭೂಮಿ ಮನೆ ಮೊದಲಾದ ಕ್ಷೇತ್ರಗಳನ್ನು ಹೊಂದಿದವರೆಲ್ಲರೂ ಭೂಪತಿಗಳೇ ಆಗಿರುತ್ತಾರೆ. ಮತ್ತು ರಾಜರಾಗಿ ಗೃಹ ಭೂಮಿಗಳಿಗೆ ಸಂಬಂಧಿಸಿದ ಶಾಸನ ಕಾರ್ಯಗಳನ್ನು ನಡೆಸಬೇಕಾಗಿರುತ್ತದೆ. ಒಂದೊಂದು ವ್ಯಕ್ತಿಯೂ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ ನಿಷಾದ ಕರ್ಮಗಳನ್ನು ಆಯಾ ವ್ಯಕ್ತಿ ಮತ್ತು ಆವಶ್ಯಕತೆಗೆ ತಕ್ಕಂತೆ ಪ್ರತಿದಿನವೂ ನಡೆಸಲೇಬೇಕಾಗಿರುತ್ತೆಂಬುದನ್ನೂ ಇಲ್ಲದಿದ್ದರೆ ಜೀವನವೂ ವ್ಯವಹಾರವೂ ಸಾಗಲಾರದೆಂಬುದನ್ನೂ ನಿರ್ಧರಿಸಿ ತಿಳಿದುಕೊಳ್ಳಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ-ವಾ-ರಾಷ್ಟ್ರಗಳೆಂಬ ವ್ಯಷ್ಟಿ ಸಮಷ್ಟಿ ಜೀವನಯಜ್ಞ ನಿರ್ವಾಹಕ್ಕಾಗಿ ಕೆಲವು ಪ್ರಜೆಗಳು ಮೇಲ್ಕಂಡ ಒಂದೊಂದು ವರ್ತನೆಯನ್ನೇ ಋಣಾನುಬಂಧ ಸ್ವೇಚ್ಛೆಯ ವಿಶೇಷವಾದ ಹೊಣೆಗಾರಿಕೆಯಿಂದ ರೂಢಿಸಿಕೊಳ್ಳಬೇಕಾದ ವ್ಯವಸ್ಥಾ ಕ್ರಮಗಳು ಸ್ವಯಂ ವ್ರತವಾಗಿ ರಾಜನೀತಿಯಿಂದ ಪಂಜೀಸಿಬದ್ಧಗಳಾಗಿರುವುವು. ನಿಷಾದ ಶೂದ್ರಾದಿಗಳ ಪರಸ್ಪರ ಸಹಕಾರ ಕಾರ್ಯವು ಜೀವಿಸುವುದಕ್ಕೆ, ಜೀವನಯಜ್ಞವನ್ನು ನೆರವೇರಿಸುವುದಕ್ಕೆ ಅತ್ಯವಶ್ಯಕವಾದುದರಿಂದ ಪ್ರತಿಯೊಬ್ಬ ದೇಹಿಯಲ್ಲಿಯೂ ಸ್ವಭಾವತಃ ಅವು ಇದ್ದೇ ಇರುವುವು. ವ್ಯಕ್ತಿ ಮೊದಲಾದ ರಾಜ್ಯದ ಪಂಚ ವಲಯಗಳಲ್ಲಿಯೂ ನಿಷಾದಾದಿಗಳು ಇದ್ದೇ ಇರುವುವು.

ವ್ಯವಹಾರದ ಮಿತಿಯಲ್ಲಿ ಯಾವುದೋ ಒಂದು ಹಂತದಲ್ಲಿ ಕ್ಷೇತ್ರ ಬೀಜ ಸಮಾಗಮ ಋಣಕ್ಕೂ ಸಂಸ್ಕೃತಿಗೂ ತಕ್ಕಂತೆ ವ್ಯವಹಾರ ಸೌಕರ್ಯಕ್ಕಾಗಿ ಸಮಾಜ (ಗುಂಪು) ಗಳನ್ನು ವಿಂಗಡಿಸಿಕೊಂಡು ಸಮಷ್ಟಿ (ಸಂಘ) ತತ್ವಾಧಾರದ ಮೇಲೆ ಬ್ರಹ್ಮಾನುಸಂಧಾನದಿಂದ ಜೀವನ ರಥವನ್ನು ಸಾಗಿಸಲು ಅನುಭವ ನಿಷ್ಣಾತರ ಮೇಧಾಶಕ್ತಿಯು ವ್ಯವಸ್ಥೆಗಳನ್ನು ಮಾಡಿರುತ್ತದೆ. ಅದರಲ್ಲಿ ಗರ್ಭಿತವಾದ ತತ್ವಗಳನ್ನು ನೋಡಿ ಆನಂದಿಸುವ ಮತ್ತು ಪರಮ ಪುರುಷಾರ್ಥವನ್ನು ಸಾಧಿಸುವ ಭಾರವೂ ನಿಷ್ಣಾತರಿಗೇ ಸೇರಿದ್ದಾದರೂ ಸಾಮಾನ್ಯರು ಕೈಕಟ್ಟಿ ಕುಳಿತು ಕೊಂಡು ಅಸೂಯೆಪಡತಕ್ಕದ್ದು ಸುಖಕರವಲ್ಲವೆಂಬುದು ವೇದದಲ್ಲಿ ಪಂಕ್ತಿ ಪಂಕ್ತಿಯಲ್ಲಿಯೂ ಎಂಬಂತೆ ಕಂಡುಬರುವ ದೇವಾಸುರ ಯುದ್ಧ ವಿಚಾರ ಸೂಚನೆಗಳಿಂದ ಸ್ಪಷ್ಟವಾಗುತ್ತದೆ. ಸರ್ವರೂ ಸರ್ವದಾ ಸರ್ವವಿಧಗಳಲ್ಲಿಯೂ ಸರ್ವ ಪ್ರಯತ್ನಗಳನ್ನೂ ಅವರವರ ಋಣಾನುಬಂಧದ ಮಿತಿಯಲ್ಲಿ ರಹಸ್ಯವನ್ನು ತಿಳಿದು ಉತ್ಸಾಹ ಸಂತೋಷಗಳಿಂದ ನಡೆಸಿ ಸುಖಶಾಂತಿಯನ್ನು ಪಡೆಯುವುದೇ ಮುಖ್ಯ ಗುರಿ ಎಂದು ಧರ್ಮಶಾಸ್ತ್ರಾದಿಗಳಲ್ಲಿ ಉದಾಹೃತವಾಗಿದೆ.

ಜೀವನಯಜ್ಞವೆಂಬ ಒಂದೇ ಮೂಲ ಸ್ತಂಭಕ್ಕೆ ಸಂಬಂಧಿಸಿದ ತುಳಿಯ ದಂಡಗಳಿಗೆ ನೇತು ಹಾಕಿರುವ ಐದು ವಿಧವಾದ ಕಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಜನ (ಕ್ಷೇತ್ರ) ಗಳೂ ಒಂದೇ ಸಮವಾಗಿ ಒಂದೇ ತೂಕ ಒಂದೇ ಗಾತ್ರ ಒಂದೇ ಫಲ ಲಕ್ಷ್ಯ ವುಳ್ಳವುಗಳಾಗಿ ಬೇರೆ ಬೇರೆ ಆಕಾರ, ಬಣ್ಣಗಳಿಂದ ಭ್ರಮಿಸುತ್ತಾ ಶ್ರೇಯಸ್ಸಿಗೆ ಸಾಧನಗಳಾಗಿರುವುವು "ಸಾಮ್ರಾಜ್ಯ"ವೆಂಬ ಜೀವನ ಶಾಸನಗಳಿಂದ ರೂಢಿಸಲ್ಪಟ್ಟಿರುವುವು.

ಜಗತ್ತಿಗೂ ಸೃಷ್ಟಿಗೂ ಮೂಲಾಧಾರವಾದುದು ಜನ್ಮ. ಜನ್ಮವು ಶೂದ್ರವಾಗಿ ಶ್ರೇಯಸ್ಸಿನ ಮೇಲು ಮೇಲಿನ ಹಂತಗಳನ್ನು ಏರುವುದೆಂಬ ಪ್ರತಿಜನ್ಮ (ಉದಯ) ಕ್ಕೂ ಶೂದ್ರವು ಹೊಂದಿಕೊಂಡೇ ಇರುವುದು ಆದುದರಿಂದ ಶೂದ್ರವರ್ಣವು ಜನಪವಾದ, ದೃಶ್ಯವಸ್ತುಗಳಿಗೆಲ್ಲಾ ಮಹತ್ತಮ ಸಾಮಾನ್ಯ ಅಪವರ್ತನವಾಗಿ, ಘನಮಹಿಮೆಯುಳ್ಳದ್ದಾಗಿ ಸರ್ವಾಂಗಸುಂದರವಾಗಿ, ಸರ್ವ ಸ್ತುತ್ಯ-ಸರ್ವಾದರಣೀಯವಾಗಿರುವುದು ಋಣ ಶೋಧನ (ಪರಿಹಾರ-ಅನುಭವ) ಕ್ಕಾಗಿ ಜನ್ಮವೆತ್ತುವ ಜೀವರೆಲ್ಲ ರೂ ಶೂದ್ರದಿಂದ ಕೃತಾರ್ಥರಾಗಬೇಕಾಗಿದೆ.

ಶೋಧನ ಎಂದರೆ ಕಳೆಯುವುದು, ಕಡಿಮೆ ಮಾಡುವುದು, ತೊಳೆ ಯುವುದು, ಶುದ್ಧಿ ಮಾಡುವುದು ಎಂದರ್ಥ. "ಜನ್ಮನಾ ಜಾಯತೇ ಶೂದ್ರಃ" ಎಂಬಂತೆ ಋಣ ಕರ್ಮ ಫಲಾನುಭವವನ್ನು ಶೋಧಿಸಿ ಶುದ್ಧ ವಾಗುವುದಕ್ಕೆ ಶೂದ್ರಪೂರ್ವಕವಾಗಿಯೇ ಜನ್ಮವುಂಟಾಗುವುದು ಆದು ದರಿಂದಲೇ ಜನ್ಮಕ್ಕೂ ಶೂದ್ರಕ್ಕೂ ಐಕ್ಯವಿರುವಂತೆ ಪ್ರತಿಪಾದಿತವಾಗಿದೆ. ಹೆಚ್ಚು ಹೆಚ್ಚಾದ ಋಣಕರ್ಮಗಳಿಂದ ಹೆಚ್ಚು ಕಾರ್ಯಭಾರಗಳನ್ನು ಆರೋಪಿಸಿಕೊಂಡು ಮೆರೆಯುವುದಕ್ಕೆ ಅವಕಾಶವು ಸರ್ವರಿಗೂ ಇದ್ದೇ ಇರುತ್ತದೆ. ಆದರೆ ಹುಟ್ಟಿದಾಗ ಪ್ರತಿಯೊಂದು ಅವಸ್ಥೆ-ಹಂತದಲ್ಲಿಯೂ ಶೂದ್ರವಾಗಿದ್ದು ಮೋಕ್ಷ ಮೂಲವಾದ ಗುರುಪಾದವನ್ನು ಶೂದ್ರದಿಂದ (ಸೇವಾ) ಆಶ್ರಯಿಸಿ ಶೂದ್ರದಿಂದಲೇ (ಹೆಚ್ಚಿನ ಬಂಧನವಿಲ್ಲದೆ ಕೇವಲ ಅನುಭವದಿಂದಲೇ-ಬಂಧನವನ್ನು ಕಳೆದುಕೊಳ್ಳುವುದರಿಂದಲೇ) ಮೋಕ್ಷ (ನಿತ್ಯಾನಂದ) ವನ್ನು ಹೊಂದುವ ಕಲ್ಪವು ಸರ್ವಶಾಸ್ತ್ರ ಸಮ್ಮತವಾಗಿ ಸರ್ವಶಾಸ್ತ್ರ ಪುರಾಣೇತಿಹಾಸಗಳಲ್ಲಿ ಶ್ಲಾಘಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಮರೂಪವೇ ಶೂದ್ರವು

ಚೇತನಾಚೇತನಗಳಾದ ಸ್ಥಾವರ ಜಂಗಮ ವಸ್ತುಗಳಲ್ಲಿ ಶೂದ್ರವು ಅನುಸ್ಯೂತವಾಗಿ ಅಂದರೆ ಒಟ್ಟಿನೇಗೆಯಂತೆ ಹೊಂದಿಕೊಂಡಿರುವುದು. ಬ್ರಹ್ಮಾಂಡದಲ್ಲಿ ನಾಮ ರೂಪವನ್ನು ಹೊಂದಿದ ದೃಶ್ಯವೆಲ್ಲಾ ಶೂದ್ರ ಮಯವಾಗಿರುತ್ತದೆ. ಪರಮಾತ್ಮನ ಪಾದದಿಂದ ಉಂಟಾದ ಭೂಮಿಗಳೂ ಅಂದರೆ ಕ್ಷೇತ್ರಗಳೂ ಮತ್ತು ಶೂದ್ರವೂ ಪರಸ್ಪರ ಸಹಜಭಾವದಿಂದ ಇರುತ್ತವೆ. ಇಂತಹ ಶೂದ್ರದ ಮಹಿಮೆಯನ್ನು ತಿಳಿಯದಿರುವುದು ಆತ್ಮ ವಂಚನೆ ಮತ್ತು ಆತ್ಮ ದ್ರೋಹಗಳಿಗೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಅಶಾಂತತೆಯೂ ಅಸುಖವೂ ವ್ಯವಹಾರ ಪ್ರಪಂಚದಲ್ಲಿ ಹೆಚ್ಚುತ್ತದೆ.

ದೇವತೆಗಳಲ್ಲಿ ಶೂದ್ರವಿದೆ, ಗ್ರಹಗಳಲ್ಲಿ ಶೂದ್ರವಿದೆ. ಪಕ್ಷಿಗಳ, ವೃಕ್ಷಗಳ, ಕ್ರಿಮಿ ಕೀಟಾದಿಗಳ, ಮೃಗ ಪ್ರಾಣಿಗಳ ಮತ್ತು ಮಾನವರ ಜೀವನಗಳಿಗೆಲ್ಲಾ ಶೂದ್ರವು ಕಡ್ಡಾಯವಾಗಿ ಸಂಬಂಧಿಸಿರುತ್ತದೆ. ಹೀಗೆ ಶೂದ್ರ, ನಿಷಾದ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ವರ್ಣಗಳು ಶತಾಂಶ ಪ್ರಮಾಣ ರೀತ್ಯಾ ಮತ್ತು ವೈಶಿಷ್ಟ್ಯದಿಂದ ಪ್ರಪಂಚವನ್ನು ಎಡೆಬಿಡದೆ ಆವರಿಸಿಕೊಂಡಿರುತ್ತವೆ.

ಜ್ಯೋತಿರ್ಗ್ರಹಗಳು, ನಿರ್ಜೀವಿಗಳಾದ ಬಂಡೆ, ರತ್ನ ಮೊದಲಾದು ವುಗಳು, ವೇದಗಳು ಎಂಬೆಲ್ಲವನ್ನೂ ಆಯಾ ವಸ್ತುಗಳ ಶಕ್ತಿ, ಗುಣ, ಕರ್ಮ ನಿರ್ದೇಶಕ್ಕನುಗುಣವಾಗಿ ನಿಷಾದ ಶೂದ್ರಾದಿ ಪಂಚ ಭಾಗಗಳ ನ್ನಾಗಿ ವಿಂಗಡಿಸಿ ಘಂಟಾಘೋಷವಾಗಿ ಕ್ಷಣ ಕ್ಷಣದಲ್ಲಿಯೂ ಮನಸ್ಸಿಗೆ ಗೋಚರವಾಗುವಂತೆ ಹೇಳುವ ಋಷಿವಾಕ್ಯವನ್ನು ಮರೆಯುವುದರಿಂದ ನಿಷ್ಕಾರಣವಾಗಿ ಅಶಾಂತಿ ಪರಿಸ್ಥಿತಿಗೆ ಅವಕಾಶವಾಗುವುದು.

ಶೂದ್ರ, ನಿಷಾದ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ಗಳಲ್ಲಿ ಪ್ರಾಧಾನ್ಯವನ್ನು ಕೊಟ್ಟು ಆರಿಸಿದುವರ ಮಿತಿಯನ್ನು ಮೀರಿ ಮತ್ತು ಮಿತಿಯಿಂದ ಕೆಳಕ್ಕೆ ಜಾರಿ ನಡೆಯಬಹುದಾದುದರಿಂದ ಋಣವನ್ನು ಪರಿಹರಿಸಿಕೊಳ್ಳುವುದಕ್ಕೆ ಬದಲು, ಇರುವುದರ ಜತೆಗೆ ಋಣವನ್ನು ಹೊಸದಾಗಿ ಹೊತ್ತುಕೊಳ್ಳುವ ಸನ್ನಿವೇಶಗಳು ಪ್ರಾಪ್ತವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚತ್ವಾರಃ ವರ್ಣಾಃ ಬ್ರಾ-ಕ್ಷ-ವೈ-ಶೂದ್ರಾಃ ತೇಷಾಂ ಪೂರ್ವಃ ಪೂರ್ವಃ ಆತ್ಮನಃ ಶ್ರೇಯಾನ್ । ಜಘನ್ಯಃ ವರ್ಣಃ ಧರ್ಮ-ಚರ್ಯಯಾ ಪೂರ್ವಂ ಪೂರ್ವಂ ವರ್ಣಮಾಪದ್ಯತೇ ಜಾತಿ-ಪರಿವೃತ್ತೌ ॥ ಅಧರ್ಮಚರ್ಯಯಾ ಪೂರ್ವಃ ವರ್ಣಃ ಜಘನ್ಯಂ ಜಘನ್ಯಂ ವರ್ಣಮಾಪದ್ಯತೇ ಜಾತಿಪರಿವೃತ್ತೌ ಎಂದು ವ್ಯಕ್ತಿಗಳ ಶ್ರೇಯಸ್ಸಾಧನೆಯ ದೃಷ್ಟಿಯಿಂದ ವ್ಯಾವಹಾರಿಕವಾಗಿ ಸಾಮಯಾಚಾರಿಕವಾಗಿ ಹೇಳಲ್ಪಟ್ಟಿದೆ. ತತ್ವತಃ ಜೀವನ ಯಜ್ಞದ ದೃಷ್ಟಿಯಿಂದ, ಆತ್ಮಲಾಭದ ದೃಷ್ಟಿಯಿಂದ ಉಚ್ಚನೀಚ ಭಾವನೆಗಳಿಲ್ಲ ವೆಂಬುದನ್ನೂ ಮರೆತಿರುವುದಿಲ್ಲ.

ವಸಿಷ್ಠ ಗುಣ ಶಕ್ತಿ ವ್ಯವಸಾಯವುಳ್ಳವರ ಬ್ರಹ್ಮತೇಜೋಬಲವು ಸ್ವಾತಂತ್ರ್ಯವನ್ನು ನಿಯಂತ್ರಿಸಿಕೊಂಡ ಶೂದ್ರದ ಸೇವೆಯಿಂದಲೂ, ಸಂಪತ್ತಿನ ವೈಶ್ಯದಿಂದಲೂ ಪೋಷಿತವಾಗುವುದು; ಸಿಷಾದದಿಂದ ಆಕಸ್ಮಿಕಗಳ ದೆಸೆಯಿಂದ ರಕ್ಷಿತವಾಗುವುದು. ವ್ಯಕ್ತಿಗಳ ಕ್ಷತ್ರಿಯ ಬಲವು ಮಿತಿ ಎಂಬ ಶೂದ್ರವನ್ನು ತಿರಸ್ಕರಿಸಿ ಸ್ವಾತಂತ್ರ್ಯವನ್ನು ಸ್ವೇಚ್ಛೆಯಿಂದ ಪ್ರಯೋಗಿಸುವ ಅಹಂಕಾರಪೂರಿತವಾಗುವುದಾದರೆ ವಿಫಲವನ್ನು ಹೊಂದಬೇಕಾಗುವುದು. ಎಂಬುದಕ್ಕೆ ವಿಶ್ವಾಮಿತ್ರ ಗುಣಶಕ್ತಿ ವ್ಯವಸಾಯವುಳ್ಳ ವಿಶ್ವಾಮಿತ್ರದೇಹಿಯ ಸಂಕುಚಿತವಾದ ವರ್ತನೆಯು, ಆಚಾರ ವರ್ಣವು ನಿದರ್ಶನವಾಗಿರುವುದು ; ಇತಿಹಾಸ ರೂಪದಲ್ಲಿ ಇಂತಹ ಜೀವನ ಸಂದರ್ಭ ಸನ್ನಿವೇಶಗಳ ನಿದರ್ಶನಗಳಿಂದ ವೇದಾದಿಗಳಲ್ಲಿ ವಿವರಿಸಲ್ಪಟ್ಟಿರುವುದು.

ವಿಶ್ವಾಮಿತ್ರವೆಂಬ ಗುಣಶಕ್ತಿ ವ್ಯವಸಾಯಗಳುಳ್ಳವರು ಪುಣ್ಯವನ್ನು ಗಳಿಸಿ ಪುಣ್ಯದ ರಾಶಿಯನ್ನು ಬೆನ್ನು ಮೇಲೆ ಹೊರಲಾರದೆ ಹೊತ್ತುಕೊಂಡು ಅಪಾರವಾದ ಋಣಭಾರದಿಂದ ಕೊರಗುವರು. ಅದನ್ನು ಅನುಭವಿಸಿ ಋಣವನ್ನು ಪರಿಹರಿಸಿಕೊಂಡಲ್ಲದೆ ಮೋಕ್ಷವೂ ಶಾಂತಿಯೂ ದೊರೆಯುವಂತಿಲ್ಲ. ಪುಣ್ಯದ ಬಂಧನವನ್ನು ನೀಗಲು ಋಣ ಶೋಧನವೆಂಬ ಶೂದ್ರವನ್ನು ಆಶ್ರಯಿಸಿ ಪುಣ್ಯ ಫಲವನ್ನು ಸತ್ಪಾತ್ರದಲ್ಲಿ ದಾನ ಮಾಡಿ ಪೂರ್ಣ ಸಚ್ಚಿದಾನಂದ ಸ್ಥಿತಿಯನ್ನು ಹೊಂದಲು ಪ್ರಯತ್ನಿಸಬೇಕಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨) ವರ್ಣ ವೈಶಿಷ್ಟ್ಯ (ವಿಶೇಷ ಹೊಣೆಗಾರಿಕೆ)

ಸರ್ವಸಾಮಾನ್ಯವಾದ ಪಂಚಶಕ್ತ್ಯಾದಿಗಳು ಸರ್ವರಿಗೂ ಸ್ವಾಭಾವಿಕವಾಗಿ ಜೀವನದಲ್ಲಿ ಹೊಂದಿಕೊಂಡಿರುವುವು ಎಂದು ಪದೇ ಪದೇ ತಿಳಿಸಲಾಗಿದೆ. ಈ ಪಂಚ ಗುಣ ಶಕ್ತಿಕರ್ಮಗಳಲ್ಲಿ ಪ್ರತಿಯೊಂದನ್ನೂ ಪೂರ್ಣವಾಗಿ ಸ್ವಾಧೀನಕ್ಕೆ ತಂದುಕೊಂಡು ರಹಸ್ಯ ಮತ್ತು ತತ್ವಗಳನ್ನು ಅನ್ವೇಷಣ ಮಾಡುವುದಕ್ಕಾಗಿ ಪ್ರತ್ಯೇಕವಾಗಿರುವಂತೆ ಅರ್ಹತೆಯುಳ್ಳ ಕೆಲವು ಜನಗಳನ್ನು ಗೊತ್ತುಮಾಡಿಕೊಳ್ಳುವುದೂ; ಅಥವಾ ಅಂತಹ ಕೆಲವು ಜನಗಳು ಸ್ವತಃ ತಮ್ಮ ಇಚ್ಛಾ ಸಂಕಲ್ಪಾನುಸಾರ ಋಣಾನುಬಂಧವನ್ನು ಪಡೆದು ಅದಕ್ಕಾಗಿ ನಿಂತಿರುವುದೂ; ವ್ಯವಹಾರ ಮತ್ತು ರಾಜನೀತಿ ವಿಷಯಗಳ ಪರಿಮಿತಿಯಲ್ಲಿ ಉತ್ತೇಜನಗಳನ್ನು ಹೊಂದುವ ಪರಿಸ್ಥಿತಿಯೂ ಸಹ ಸ್ವಾಭಾವಿಕವಾಗಿರುವಂತೆಯೇ ಉಂಟಾಗುವುದು.

ಪಂಚ ಗುಣ ಕರ್ಮಗಳ ಪ್ರಯೋಗಶಾಲೆಗಳಲ್ಲಿ (ಅಂದರೆ ವ್ಯಕ್ತಿಗಳಲ್ಲಿ, ಕೌಟುಂಬಿಕಾದಿ ವಲಯಗಳ ಕ್ಷೇತ್ರಗಳಲ್ಲಿ) ಪ್ರಯೋಗಗಳನ್ನು ನಡೆಸಿ ಪ್ರಪಂಚದ ಸೃಷ್ಟಿಸ್ಥಿತಿಲಯಗಳು ಸಮನ್ವಯದಿಂದ ಸುಗಮವಾಗಿ ನಡೆಯುವುದಕ್ಕೆ ಪಂಚ ವಲಯಗಳ ರಾಜರು ರಾಜ್ಯದ ಪಂಚ ವಲಯಗಳಲ್ಲಿ ಪಂಚ ಗುಣ ಕರ್ಮಗಳ ವಿಶೇಷ ಹೊಣೆಗಾರಿಕೆಯನ್ನು ಪ್ರತ್ಯೇಕವಾಗಿ ಧರಿಸುವ ಸಮರ್ಥರಿಗೆ ವಹಿಸಿ ವೃದ್ಧಿಗೊಳಿಸಬೇಕಾಗಿದೆ. ಇದೇ ವರ್ಣ ವೈಶಿಷ್ಟ್ಯಕ್ಕೆ ಕಾರಣವಾಗಿ ಸಾಹಸದ ಮೇಲೆ ನಿಂತಿರುವುದು.

ಯಸ್ಯಾಂ ಯಜ್ಞಂ ತನ್ವತೇ ವಿಶ್ವಕರ್ಮಾಣಃ (ಅಥರ್ವ 12.1-13) ಎಂಬಂತೆ ಶೂದ್ರ ನಿಷಾದಾದಿ ಪಂಚಗುಣಕರ್ಮನಿರ್ವಾಹವೆಂಬ ಯಜ್ಞವನ್ನು ಪ್ರಜೆಗಳು ಪ್ರಜೆಗಳಿಗಾಗಿ ಪ್ರಜೆಗಳ ಪರಸ್ಪರ ಸಹಾನುಭೂತಿಯಿಂದ "ಸರ್ವೇಷಾಮನುರೋಧೇನ ಬ್ರಹ್ಮಕರ್ಮ ಸಮಾರಭೇ" ಎಂದು ನಿರ್ವಹಿಸಿ ಸುಖಶಾಂತಿಗಳ ಅನುಭವಕ್ಕೆ ಕಾರಣರೂ ಪಾತ್ರರೂ ಆಗಬೇಕಾಗಿರುತ್ತದೆ.

ವರ್ಣಕಾರ್ಯಗಳನ್ನು ನೆರವೇರಿಸುವ ದೇಹಿಗಳು ತಮ್ಮ ವಾಸನಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರ ವಿಶೇಷಗಳಿಂದಲೂ, ತಾತ್ಕಾಲಿಕವಾದ ದ್ವಿಜಸಂಸ್ಕಾರಗಳಿಂದ ಲೂ ಆತ್ಮ ಶಕ್ತಿಯನ್ನು ಬೆಳಗುವ ತಪೋ ವಿಶೇಷಗಳನ್ನು ಆಚರಿಸಲು ಪೂರ್ಣವಾದ ಅವಕಾಶ ಮತ್ತು ಅಧಿಕಾರಗಳು ಸದಾ ಸನ್ನಿಹಿತವಾಗಿ ರುತ್ತವೆ. ಸನ್ನಿವೇಶ ಪರಿಸ್ಥಿತಿಗಳು ಪ್ರೋತ್ಸಾಹಿಸುವ ಸುಸಂದರ್ಭಗಳಿಂದ ಸಾಧ್ಯವಾಗುವುವು. ಪ್ರತಿಯೊಂದು ವ್ಯವಸಾಯಕ್ಕೂ ಬೇಕಾದ ದ್ವಿಜ ಸಂಸ್ಕಾರವು ಇದನ್ನೇ ಅನುಗ್ರಹಿಸುವುದು. ಇಂತಹ ವ್ಯವಸಾಯದ ಫಲವು ಋಣಾನುಬಂಧ ರೀತ್ಯಾ ತನಗೂ ಇತರರಿಗೂ ಅನುಭವಕ್ಕೆ ಬಂದು ನ್ಯೂನಾತಿರಿಕ್ತಗಳ ನಿವಾರಣೆಗೆ ಅವಕಾಶವಾಗುವುದು. ಹಿಂದು ಹಿಂದಿನ ಸಂಸ್ಕಾರ ಮತ್ತು ಕರ್ಮಗಳ ಫಲವನ್ನು ಅನುಭವಿಸಬೇಕಾಗಿರುವ ಇಂತಹ ದೇಹಿಗಳು ವಿಶೇಷ ಸಂಸ್ಕಾರ ಮತ್ತು ವ್ಯವಸಾಯಗಳಿಂದ ಆರ್ಜಿಸಿದ ತಪಃಫಲದಿಂದ, ತಾವು ತಾವು ಅನುಭವಿಸಬೇಕಾಗಿದ್ದ ಹಿತ ಮತ್ತು ಅಹಿತ ಕರ್ಮ ಫಲವನ್ನು ಸಂತೋಷವಾಗಿ ಆಯಾ ಮಿತಿಯಲ್ಲಿ ಅನುಭವಿಸುವ ಶಕ್ತಿಯನ್ನು ಹೊಂದುವರು. ಆರ್ಜಿಸಿದ ಇಂತಹ ತಪಃ ಶಕ್ತಿಗಳಿಂದ ಇತರರಿಗೆ ಉಪಕಾರ ಮಾಡಬಹುದಾದರೂ ತಾವು ಪ್ರಾಪಂಚಿಕವಾಗಿ ಉಚ್ಛ್ರಾಯ ಸ್ಥಿತಿಯನ್ನು ಪಡೆಯುವ ಮತ್ತು ಪಡೆದು ಅನುಭವಿಸುವ ಸ್ಥಿತಿಯನ್ನು ಹೊಂದಬೇಕಾಗಿರುವುದಿಲ್ಲ.

ತನ್ನ ಕರ್ಮ ಫಲಪ್ರಾಪ್ತಿಗೆ ತಕ್ಕಂತೆ ವ್ಯಾಧಿಗ್ರಸ್ತನಾದ ಪಾಚಕ ನು ಅತ್ಯುತ್ತಮವಾದ ಭೋಜನ ಸಾಮಗ್ರಿಗಳನ್ನು ಸಿದ್ಧಗೊಳಿಸಿದರೂ ಅನುಭವಿಸಲಾರನು ಎಂಬುದು ನ್ಯಾಯ ಸಮ್ಮತವಾದುದೇ ಆಗಿದೆ. ಉತ್ತಮೋತ್ತಮವೂ ದೇಶದ ರಾಜನಿಗೆ ಅರ್ಹವೂ ಆದ ವೇಷ, ಭೂಷಣ, ಆಸನ, ವಸನಗಳನ್ನು ಸಿದ್ಧಪಡಿಸುವ ಕರ್ಮ ಕಾರನು ಅಂತಹ ಪದಾರ್ಥ ಗಳನ್ನು ತನ್ನ ಇಂದ್ರಿಯಗಳ ಭೋಗಕ್ಕೆ ಅಪೇಕ್ಷಿಸುವುದಿಲ್ಲ. ಭೋಗದ ಹೊಣೆಗಾರಿಕೆ ಮಟ್ಟದಲ್ಲಿ ಬರುವುದೂ ಇಲ್ಲ. ಅತನು ತನ್ನ ಕರ್ಮದ ದ್ವಿಜ ಸಂಸ್ಕಾರ ವಿಶೇಷದಿಂದ ಉತ್ತಮವಾದ ಕೈಗಾರಿಕೆ ಚಮತ್ಕಾರವನ್ನು ಪ್ರದರ್ಶಿಸುವ ಖ್ಯಾತಿಯುಳ್ಳವನಾಗಿರುತ್ತಾನೆ. ಇದು ವಿಶೇಷ ಹೊಣೆ ಗಾರಿಕೆಯನ್ನು ನಿರ್ವಹಿಸುವ ವರ್ಣ ವಿಶೇಷವೇ ಹೊರತು ಅದರ ಫಲ ವನ್ನು ಅನುಭವಿಸುವ ಹೊಣೆಗಾರಿಕೆಯಲ್ಲ. ಆರ್ಥಿಕವಾಗಿ, ಪ್ರಾಪಂಚಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ ಕೆಳಗಿನ, ಮಧ್ಯಮ ಮತ್ತು ಮೇಲು ಮೇಲಿನ ಮಟ್ಟಗಳ ಸ್ಥಿತಿಗಳು ವಿವಿಧ ವ್ಯಕ್ತಿಗಳಲ್ಲಿ ವಿವಿಧವಾಗಿ ಕಾಣಬರುವುವು. ಆದರೆ ಲಘುತಮ ಸಾಮಾನ್ಯ ಅವಶ್ಯವಾದ ಮನುಷ್ಯತ್ವ - ಮನುಷ್ಯ ಧರ್ಮ ನಿರ್ವಾಹವು ಸರ್ವರಿಗೂ ಏಕ ಪ್ರಕಾರವಾಗಿರುವುದು. ಲಕ್ಷಕನಾದರೂ ಸರ್ವಕಾಲದಲ್ಲಿಯೂ ಒಂದೇ ವಿಧವಾದ ಉತ್ತಮ ಭೂಷಣ, ವಸನಗಳನ್ನು ಅನುಭವಿಸಲಾರನು. ಇದೆಲ್ಲಾ ಅವಸ್ಥಾ ವಿಶೇಷಕ್ಕನುಗುಣವಾಗಿರುವುವು; ಸಮವಾಯ ಸಂಬಂಧದಂತೆ ಅಂಟಿರುವುದಿಲ್ಲ; ಋಣಾನುಬಂಧವೂ ಸಹ ಅವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು

ಸನ್ನಿವೇಶ ಪರಿಸ್ಥಿತಿಗಳು, ಉದ್ಯಮ ದ್ವಿಜ ಸಂಸ್ಕಾರಗಳು ಎಷ್ಟರ ಮಟ್ಟಿಗೆ ವ್ಯಕ್ತಿಗಳಿಂದ ಕಾರ್ಯ ನಿರ್ವಾಹಕ್ಕೆ ಅವಕಾಶ ಕೊಡುವುವೋ ಅಷ್ಟರ ಮಟ್ಟಿಗೆ ಕಾರ್ಯನಿರ್ವಾಹ ಮಾಡಲು ಉದಾಸೀನರಾಗಬೇಕಾಗಿಲ್ಲ ಹಾಗೂ ವ್ಯವಸಾಯ ದ್ವಿಜ ಸಂಸ್ಕಾರಗಳಿಂದ ಅಧಿಕಾರ ಹೊಂದಿದ್ದರೂ ಸನ್ನಿವೇಶಪರಿಸ್ಥಿತಿಗಳು, ಋಣಾನುಬಂಧಗಳು ಅಡಚಣೆಯಾಗಿ ಬರುವುದರಿಂದ ಕಾರ್ಯ ನಿರ್ವಾಹವಾಗುವುದೇ ಇಲ್ಲ.

ನಿಗ್ರಹಾನುಗ್ರಹ ಸಮರ್ಥನೂ, ಅಘಟನ ಘಟನಾ ದಕ್ಷನೂ ಆದ ಯೋಗಿಯು ಪರೋಪಕಾರ ಮಾಡಬಲ್ಲವನಾಗಿದ್ದರೂ ತಾನು ಮಾತ್ರ ವನವಾಸಿಗಳಂತೆ ಪ್ರಾಪಂಚಿಕ ಮೊದಲಾದ ಸ್ವದೇಹೇಂದ್ರಿಯ ಭೋಗಗಳನ್ನು ದೂರೀಕರಿಸುವುದರಿಂದ ತನ್ನ ತಪಶ್ಶಕ್ತಿಯನ್ನು ರೂಢಿಸಿಕೊಳ್ಳಬಹುದಾಗಿದೆ.

ಹೀಗೆ ವರ್ಣದ ಮಿತಿಯು ವ್ಯಕ್ತಿಗಳ ಇಚ್ಛಾ, ಸಂಕಲ್ಪ, ಶಕ್ತಿ, ಧರ್ಮಗಳಿಗೆ ತಕ್ಕಂತೆ ಸಾಮಾನ್ಯವಾಗಿಯೂ, ವಿಶೇಷವಾಗಿಯೂ ಇರುವುದು. ಸಾಮಾನ್ಯವಾಗಿ ಪಂಚ ವರ್ಣಗಳು ಪ್ರತಿ ವಸ್ತುವಿನಲ್ಲಿಯೂ ಇರುತ್ತವೆ. ಒಂದೊಂದು ವರ್ಣವು ಅವರವರ ಇಚ್ಛಾ ಪ್ರಯತ್ನಗಳಿಗೆ ತಕ್ಕಂತೆ ವಿಶೇಷವಾಗಿ ರೂಢಿಸಲ್ಪಟ್ಟು ಪ್ರತಿಯೊಬ್ಬರೂ ವಿಶೇಷ ವರ್ಣವನ್ನು ಅಥವಾ ವರ್ಣ ವಿಶೇಷವನ್ನು ಹೊಂದಿರುತ್ತಾರೆ.

ಪ್ರತಿ ವ್ಯಕ್ತಿಯೂ ಕುಟುಂಬ, ಸಮಾಜ, ವಲಯಗಳಲ್ಲಿ ಎಲ್ಲಾ ಕೆಲಸಗಳನ್ನು ತನ್ನ ತನ್ನ ಕಾರ್ಯ ನಿರ್ವಾಹಕ ಶಕ್ತಿಗನುಗುಣವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಹಿಸಿಕೊಳ್ಳಬೇಕು. ಒಂದು ಮನೆಯಲ್ಲಿರುವ ಜನಗಳೆಲ್ಲರೂ ಮನೆಯ ಎಲ್ಲಾ ಕೆಲಸಗಳನ್ನೂ ಪರಿವರ್ತನೆ ಕ್ರಮದಲ್ಲಿ ನಿರ್ವಹಿಸಿ ಅಭ್ಯಾಸ ಮಾಡಿಕೊಂಡು, ಸಮಯೋಚಿತವಾಗಿ ತಮ್ಮಲ್ಲಿರುವ ಪಂಚವರ್ಣಗಳನ್ನೂ ವಿಶೇಷ ವರ್ಣವನ್ನೂ ಕಾರ್ಯ ರೂಪಕ್ಕೆ ತರಲು ಸಮರ್ಥರಾಗಿರಬೇಕು. ಹೀಗೆ ಸಮರ್ಥರಾದವರು ಪ್ರಪಂಚದಲ್ಲಿ ಆಯಾ ಪರಿಸ್ಥಿತಿ ಮತ್ತು ಕಾಲಕ್ಕೆ ತಕ್ಕಂತೆ ನಡೆಯುವ ನಡೆಯಬಹುದಾದ ಕಾರ್ಯಗಳಲ್ಲಿ ಭಾಗ ವಹಿಸಿ ಶಾಂತಿಯುತ ಸಹ ಜೀವನಕ್ಕೆ ಸಹಕರಿಸುವವರಾಗುತ್ತಾರೆ.

'ಆಳಾಗುವವ ಅರಸಾಗಬಲ್ಲ' ಎಂಬಂತೆ ಸಾಮ್ರಾಜ್ಯ ಶಕ್ತಿ ಧುರಂಧರರಾಗಬೇಕಾದ ಪ್ರತಿ ವ್ಯಕ್ತಿಯೂ ಕಸ ಗುಡಿಸುವುದೂ ನೆಲ ಸಾರಿಸುವುದೂ ಮೊದಲಾದ, ಅವರವರ ಶಕ್ತಿಗೆ ಒಳಪಟ್ಟ ಕೆಲಸಗಳನ್ನೆಲ್ಲಾ ಹಂಚಿಕೆಯ ಕ್ರಮದಲ್ಲಿ ಕುಟುಂಬದಲ್ಲಿ ಅಭ್ಯಾಸ ಮಾಡಬೇಕು. ಇದರಿಂದ ಪಂಚವರ್ಣಗಳ ಕಾರ್ಯಗಳು ನಿರ್ವಹವಾದಂತಾಗಿ ಪ್ರಜೆಯಾಗುವ ಅರ್ಹತೆಯುಂಟಾಗುವುದು ಮತ್ತು ಋತ, ಅನೃತ ಕಾರ್ಯ ಭಾರವು ಪಾಲಿಸಲ್ಪಟ್ಟಂತಾಗುವುದು

ಯಾವ ವ್ಯಕ್ತಿಯೂ ಜೀವಿತಕಾಲದಲ್ಲಿ ಪ್ರತಿದಿನವೂ 60ಘಳಿಗೆಯ ಮತ್ತು ಹೃದಯದ ರಕ್ತಚಲನೆಯು ನಡೆಯುವ ಕಾಲದಲ್ಲಿ ಪೂರ್ಣವಾಗಿ ಶ್ರೋತ್ರಿಯತ್ವವನ್ನಾಗಲೀ ಕ್ಷತ್ರಿಯತ್ವವನ್ನಾಗಲೀ ವೈಶ್ಯತ್ವ, ಶೂದ್ರತ್ವ, ನಿಷಾದತ್ವಗಳನ್ನಾಗಲೀ ಅನುಸರಿಸಿ ಆಚರಿಸಲು ಸಾಧ್ಯವಿಲ್ಲ. ಸಮಯೋಚಿತವಾಗಿ ಆವಶ್ಯಕತೆಗೂ ಗುಣಕರ್ಮಶಕ್ತಿಗಳಿಗೂ ಸನ್ನಿವೇಶಕ್ಕೂ ತಕ್ಕಂತೆ ಜಗತ್ತಿನಲ್ಲಿ ಪ್ರತಿ ವಸ್ತುವೂ ಸಾಮಾನ್ಯವಾಗಿ ಪಂಚ ವರ್ಣ ಗುಣಶಕ್ತಿಕರ್ಮಗಳನ್ನೂ ವಿಶೇಷವಾಗಿ ಒಂದೊಂದು ವರ್ಣದ ಗುಣಶಕ್ತಿ ಕರ್ಮಗಳನ್ನೂ ಶತಾಂಶ ಪ್ರಮಾಣ ರೀತ್ಯಾ ಪಡೆದು ಶ್ರೇಯಸ್ಸಾಧನೆ ವಿಧಾನಗಳಿಂದ ವರ್ಣವು ತಾನಾಗಿಯೇ ಅಡಗಿ ಸ್ವಸ್ವರೂಪಾವಸ್ಥಾನವು ಲಭಿಸುವಂತೆ ವ್ಯವಸ್ಥಿತವಾಗಿದೆ. ಶರೀರದಲ್ಲಿ (ಪಿಂಡಾಂಡ) ನಡೆಯುವ ವ್ಯಾಪಾರಗಳಲ್ಲೆಲ್ಲಾ ಶ್ರೋತ್ರಿಯತ್ವಾದಿಗಳು ಅಡಗಿರುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩. ವರ್ಣ ವಿವೇಕ

ಪ್ರಪಂಚದಲ್ಲಿರುವ ಸಸ್ಯ, ಕ್ರಿಮಿ, ಕೀಟ, ಜಲಚರ, ಭೂಚರ, ಮೃಗ, ಪಕ್ಷಿ ಪ್ರಾಣಿಗಳಿಗೂ ಮಾನವರಿಗೂ ಸ್ಥಾವರ ಜಂಗಮ ವಸ್ತುಗಳಿಗೂ ವೈಯಕ್ತಿಕವಾದ ಒಂದು ಪ್ರಧಾನ ವರ್ಣವು ಅಂತಃಸ್ಥವಾಗಿ ಇರುವುದು; ಮತ್ತು ಇದರ ಆಶ್ರಯದಿಂದ, ಕುಟುಂಬಾದಿ ವಲಯಗಳ ವರ್ಣಗಳೂ ಜೀವನಯಜ್ಞ ನಿರ್ವಾಹಕ್ಕಾಗಿ ಅವಶ್ಯಕವಾದ ಶತಾಂಶ ಪ್ರಮಾಣದ ಪಂಚ ವರ್ಣಗಳ ಗುಣಶಕ್ತಿಗಳೂ ಇರುತ್ತವೆ. ಇಂದ್ರಿಯ ಗೋಚರವಾದ ಪ್ರಪಂಚವನ್ನೆಲ್ಲಾ ವರ್ಣವು ಆವರಿಸಿರುವುದು. ಎಂದು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಅಂತರಿಕ್ಷದಲ್ಲಿ ನಕ್ಷತ್ರಗಳ ಸಂಖ್ಯಾ ಗಣನೆಯು ಸಾಧ್ಯವಿಲ್ಲದಿರುವಂತೆ ಸಂಯೋಜನ ವಿಭಜನದ ಶತಾಂಶದಿಂದ ಆಗುವ ವೈಯಕ್ತಿಕ ಪ್ರಭೇದಗಳುಳ್ಳ ವರ್ಣಗಳು ಅಸಂಖ್ಯಾತವಾಗಿರುತ್ತವೆ. ಈ ಬಗೆಯ ವೈಯಕ್ತಿಕ ಗುಣಕರ್ಮ ಸೂಚಕವಾದ ವರ್ಣಗಳನ್ನು ವರ್ಗೀಕರಿಸಿ ಕೇವಲ ಪಂಚ ವರ್ಣಗಳಲ್ಲಿಯೇ ಅಡಕವಾಗಿರುವಂತೆ ಪರೀಕ್ಷೆಯಿಂದ ತಿಳಿದು ಅನುಭವದಲ್ಲಿ ಹೊಂದಿಸಿರುತ್ತಾರೆ. ಸಂಖ್ಯಾ ವರ್ಣನಾತೀತವಾದ ವರ್ಣಗಳನ್ನು ಅಥವಾ ಗೊತ್ತಾದ 5 ವರ್ಣ ಸಂಜ್ಞೆಗಳನ್ನು ಮಥಿಸಿ ಸಾರವನ್ನು ತೆಗೆಯುವುದಾದರೆ ಕೇವಲ ಕ್ಷತ್ರವೊಂದೇ ಸಿಕ್ಕುವುದು. ಬ್ರಹ್ಮಾನುಸಂಧಾನದ ಕ್ಷತ್ರವು ಸ್ವಸ್ವರೂಪವಾದ ಬ್ರಹ್ಮವೇ-ಆನಂದವೇ ಆಗುವುದು.

ಋಣ ಶೋಧನಕ್ಕಾಗಿ, ಋಣದ ಅನುಭವಕ್ಕಾಗಿ, ಋಣದ ದೆಸೆಯಿಂದ ಬಿಡುಗಡೆ ಹೊಂದುವುದಕ್ಕಾಗಿ, ಶೂದ್ರವರ್ತನೆಯು ಅನ್ಯಸಂಪರ್ಕವಿಲ್ಲದಿರಬೇಕಾಗುವುದು. ಹೊಸದಾದ ಸಂಕಲ್ಪಗಳಿಲ್ಲದೆ, ಸಂಪಾದಿಸಿದ ಸ್ವಕರ್ಮ ಫಲವನ್ನು ಅನುಭವಿಸಲು ಸಿದ್ಧರಾಗಿ ದೇಹಿಗಳು ಋಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫಲಾನುಭವವನ್ನು ಚಕ್ರನೇಮಿ ಕ್ರಮದಲ್ಲಿ ವರ್ತಿಸುತ್ತಾ ಕಳೆದುಕೊಂಡು ಕೃತಕೃತ್ಯರಾಗಬೇಕು. ಶೋಧನವೆಂಬ ಅನುಭವವು ಅನುಭವವೆಂಬ ಶೋಧನವು ಚಕ್ರನೇಮಿ ಕ್ರಮದಲ್ಲಿ ಋಣಗತಿಯನ್ನೂ ಸನ್ನಿವೇಶ, ಶಾಸನಾದಿಗಳನ್ನೂ ಸ್ವಕರ್ಮ ವಿವರಗಳನ್ನೂ ಅನುಸರಿಸುವುದರಿಂದ ಚರಿತಾರ್ಥವಾಗಿ ಶೂದ್ರವು ಸಾರ್ಥಕವಾಗುವುದು.

ಗುರುವಾಕ್ಯ, ಶಾಸ್ತ್ರವಾಕ್ಯ, ಪಿತೃವಾಕ್ಯ, ಸ್ವಾಮಿವಾಕ್ಯ, ವೃತ್ತಿ-ಉದ್ಯಮ-ನಿಯಮ, ರಾಜಾಜ್ಞೆಗಳನ್ನು ಚಕ್ರನೇಮಿಯಂತೆ ಪಾಲಿಸುವುದರಿಂದ ಇಹಪರ ಸಕಲ ಸಂಪತ್ತುಗಳು ಲಭ್ಯವಾಗುವುವು. ಶೂದ್ರದಿಂದ ಲಭ್ಯವಾದ ಸಂಪತ್ತುಗಳ ಮೇಲೆ ಉದಾಸೀನ ಭಾವವನ್ನು ಹೊಂದಿ ಜೀವಾವಧಿ ಅಥವಾ ಸ್ವಸ್ವರೂಪಾವಸ್ಥಾನ ಪರ್ಯಂತ ಶೂದ್ರವನ್ನು ಸಾಧಿಸುವುದು ಸ್ವಾಭಾವಿಕ. ಹಾಗಲ್ಲದೆ ಶೂದ್ರವನ್ನು ಪ್ರಧಾನವಾಗಿ ಇಟ್ಟುಕೊಂಡು ಶೂದ್ರವನ್ನು ಆಶ್ರಯಿಸಿ ಬಂದ ಸಂಪತ್ತುಗಳನ್ನು ಶ್ರೋತ್ರಿಯ, ಕ್ಷತ್ರಿಯ, ವೈಶ್ಯ ಗುಣಶಕ್ತಿಕರ್ಮಗಳಿಗೆ ಒಳಪಡಿಸಿದರೆ ಆಯಾ ಸಂಸ್ಕಾರದಿಂದ ಋಣ ಬಂಧನಕ್ಕೆ ಕಾರಣವಾಗುವುದು. ಅಂದರೆ ಶ್ರೋತ್ರಿಯಾದಿಗಳ ಸಾಹಸಗಳಿಂದ ಜಯಾಪಜಯಾದಿಗಳ ಫಲಾನುಭವಕ್ಕಾಗಿ ತಕ್ಕ ವ್ಯವಸ್ಥೆಗಳು ಆಗಬೇಕಾಗುವುದು. ಇಂತಹ ಸಂಕಲ್ಪ ಪ್ರಯತ್ನಗಳು ಅಡಗಿ ನೈಷ್ಕರ್ಮ್ಯಸಿದ್ಧಿಯಾಗಲೀ ನಿಷ್ಕಾಮ ಫಲವಾಗಲೀ ದೊರೆಯಬೇಕಾದರೆ ಅವಧೂತ ಚರ್ಯೆಯಂತೆ ಶೂದ್ರೋಪಾಸನೆಯೂ ಶೂದ್ರವರ್ತನೆಯೂ ಆವಶ್ಯಕವಾಗಿರುವುದು. ಪರಿಚರ್ಯಾ, ಶುಶ್ರೂಷಾ ಮೊದಲಾದುವು ಶೂದ್ರ ವಿಶೇಷ ಹೊಣೆಗಾರಿಕೆಯೆನಿಸಿ ಋಣಶೋಧನದ ಪರಿಮಿತಿಯಲ್ಲಿರುವುದಾದರೆ ಶುದ್ಧ ಸಾತ್ವಿಕ ಶೂದ್ರವಾಗುವುದು ಇತರ ವರ್ಣ ಗುಣಗಳ ಸಂಪರ್ಕದಿಂದ ಮಾರ್ಪಡುವುದಾದರೆ ಶೂದ್ರವು ಶೂದ್ರವೆನಿಸದೆ ವರ್ಣ ಬಂಧನವನ್ನು ಹೆಚ್ಚಿಸುವುದು.

ವರ್ಣಗಳಲ್ಲಿ ಮೇಲು ಕೆಳಗು ಎಂಬ ಭಾವನೆಯಾಗಲೀ ಹಿಂದುಮುಂದೆಂಬ ಭಾವನೆಯಾಗಲೀ ಕೆಳಗಿನ ಮಟ್ಟದ ವ್ಯಾವಹಾರಿಕವಾಗಿರುವುದು. ಸ್ವಾಭಾವಿಕವಾದ ಸಾತ್ವಿಕವಾದ ಸ್ವವರ್ಣ ವರ್ತನೆಯು ಎಲ್ಲಕ್ಕಿಂತಲೂ ಮೇಲಾದುದು. ನಿಶ್ಶ್ರೇಯಸಜನಕವಾದ ವರ್ತನೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂಜಾರ್ಹವೇ ಹೊರತು ಕೇವಲ ಸಂಜ್ಞೆಯ ಸಾಮಾನ್ಯ ಧಾರಣೆಯಿಂದ ಲಾಭವಿಲ್ಲ.

ಸರ್ವವರ್ಣಾನಾಂ ಸ್ವಧರ್ಮಾನುಷ್ಠಾನೇ ಪರಂ ಅಪರಿಮಿತಂ ಸ್ಯಾತ್ ।
ತತಃ ಕರ್ಮ ಫಲಶೇಷೇಣ ಜಾತಿಂ ರೂಪಂ ವರ್ಣಂ ಬಲಂ ಮೇಧಾಂ
ಪ್ರಜ್ಞಾಂ ದ್ರವ್ಯಾಣಿ ಧರ್ಮಾನುಷ್ಠಾನಂ ಇತಿ ಪ್ರತಿಪದ್ಯತೇ ।
ತತ್ ಚಕ್ರವತ್ ಉಭಯೋಃ ಲೋಕಯೋಃ ಸುಖ ಏವ ವರ್ತತೇ ।

ಬ್ರಹ್ಮಾನುಸಂಧಾನದ ಜೀವನ ಯಜ್ಞದಲ್ಲಿ ಸರಿಸಮಾನವಾದ ಶ್ರೋತ್ರಿಯಾದಿ ಕಾರ್ಯ ನಿರ್ವಾಹ ಶಕ್ತಿಗಳನ್ನು ವ್ಯವಹರಿಸುವಾಗ 1, 2 ಮೊದಲಾದ ಸಂಖ್ಯೆಗಳನ್ನು ಉಪಯೋಗಿಸುವರು. ಈ ಸಂಖ್ಯಾ ಗಣನೆಯಲ್ಲಿ ಮೊದಲು ಮೊದಲು ಬಂದುದು ಉಳಿದವುಗಳಿಗಿಂತ ಶ್ರೇಷ್ಠ ವೆಂದು ತಿಳಿದರೆ ತಪ್ಪಾಗದಿರದು. ವೇದದ ಭಾಗಗಳನ್ನು ಮೊದಲು, ಕಡೆ ಎಂದು ಕಾಲ, ದೂರಗಳ ಅಳತೆಯ ವಿಷಯವನ್ನು ಪ್ರಧಾನಮಾಡಿ ಹೇಳುವುದು ವಿವೇಕಕ್ಕೆ ದೂರವಾದುದು ಎಂಬಂತೆ ವರ್ಣಗಳಲ್ಲಿ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಪಂಚಮವೆಂಬ ಸಂಖ್ಯಾಕ್ರಮವೂ ಅಖಂಡ ಭಾವನೆಯ ಯಜ್ಞಕ್ಕೆ ಹೊಂದಿಕೊಳ್ಳುವುದಿಲ್ಲ. ಋಕ್, ಸಾಮ, ಅಥರ್ವ, ಯಜುಸ್ ಎಂದು ಹೇಳಿರುವ ವೇದೋಕ್ತಿಗಳ ಪ್ರಕಾರ ವೈಶ್ಯ. ಶ್ರೋತ್ರಿಯ, ಶೂದ್ರ, ಕ್ಷತ್ರಿಯ ಎಂಬ ವೇದ ಲಕ್ಷಣಗಳನ್ನು ಹೇಳುವ ಕ್ರಮದಲ್ಲಿ ವೈಶ್ಯವೇ ಪ್ರಥಮವಾಗುವುದು. ಹೇಗೆ ಹೇಗೆ ಭ್ರಮಿಸಿದರೂ ಭೂಮಿಯು ಉತ್ತರಧ್ರುವ ಗುರಿಯನ್ನು ಹೊಂದಿರುವಂತೆ ಜೀವನಯಜ್ಞದ ನಿರ್ವಾಹದಲ್ಲಿ ಋಣ ಪರಿಹಾರಗಳನ್ನು ಲಕ್ಷ್ಯವಾಗಿಟ್ಟು ಕೊಂಡಿರುವ ಮಾನವತೆಯ ಸಂವಿಧಾನದಲ್ಲಿ ಹಿಂದು ಮುಂದು ಎಂಬ ಭೇದವು ಶ್ರೇಯಃಪ್ರದವಲ್ಲ

ಸಸ್ಯ, ತರುಗಳ ಫಲ ವೃದ್ಧಿಯು ಅಥವಾ ಹೀನಸ್ಥಿತಿಯು ಕ್ಷೇತ್ರ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟಿರುವಂತೆಯ ಬೀಜ, ಕ್ಷೇತ್ರ, ಸಂಸ್ಕೃತಿ, ವ್ಯವಸಾಯಿಗಳಿಗೆ ಅನುರೂಪವಾದ ಉನ್ನತಿ ಅವನತಿಗಳ ಫಲವಾಗಿ ಆಯಾ ಫಲಾನುಭವಕ್ಕೆ ತಕ್ಕಂತೆ ಉತ್ತಮ, ಮಧ್ಯಮ, ಅಧಮ ಸ್ಥಾನಗಳೂ ಶರೀರಗಳೂ ಲಭಿಸುವುವು ಎಂಬುದು ಋಣ ಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫಲದ ಸಿದ್ಧಾಂತ. ಆದುದರಿಂದ ಶ್ರೇಯಃಪ್ರದವಾದ ಗುಣ ಶಕ್ತಿ ಕರ್ಮ ಗಳಿಗೆ ಆಕರವಾದ ಸನ್ನಿವೇಶವನ್ನು ಉಪಾಸನೆ ಮಾಡಬೇಕು, ಆದರಿಸು ತ್ತಿರಬೇಕು. (ಆ. ಧ ಮಂಜರೀ ಪುಟ 3)

ದರ್ಶನ ಶಾಸ್ತ್ರಗಳು ಪರಸ್ಪರ ಭಿನ್ನವಾದ ದಾರಿಯಲ್ಲಿ ಹೋಗುತ್ತಿ ರುವಂತೆ ಕಂಡರೂ ಒಂದೇ ಲಕ್ಷ್ಯವನ್ನು ಹೊಂದಿ ಬೆಳೆಯುತ್ತಿರುವುವು. ಒಂದರ ದೃಷ್ಟಿಯಿಂದ ಮತ್ತೊಂದು ಕೀಳು, ದೂಷ್ಯ, ತ್ಯಾಜ್ಯ ಎಂಬದಾಗಿ ಜಿಹ್ವಾ ಖಡ್ಗವನ್ನು ಝಳಪಿಸಿ ಹೇಳುವುದೂ, ತಜ್ಜ್ಞಾನದಿಂದ ಮನೋವಿಕಾರವನ್ನು ಪಡೆದು ದ್ವೇಷಾಸೂಯೆಗಳನ್ನು ಬೆಳಗಿ ಜೀವನ ಯಜ್ಞದ ದಾರಿಯನ್ನೇ ಅಡ್ಡಗಟ್ಟುವುದೂ ಕಂಟಕ ಪ್ರಾಯಗಳು. ದರ್ಶನಗಳಲ್ಲಿ ಸ್ಪಷ್ಟವಾಗಿ ಕಾಣುವ ಅವಸ್ಥಾ ವಿಶೇಷ ವಿಷಯ ಪ್ರತಿ ಪಾದನಗಳು ಒಂದೊಂದು ಕಾಲದಲ್ಲಿ, ವಯಸ್ಸಿನಲ್ಲಿ ಒಂದೊಂದು ವಿಧವಾದ ಆಹಾರ, ವಾಯುಗುಣ, ಪ್ರಕೃತಿಸನ್ನಿವೇಶ, ಬುದ್ಧಿ ಸಂಸ್ಕೃತಿ ಗಳು ಮೊದಲಾದ ಸಂದರ್ಭಗಳಿಗೆ ತಕ್ಕಂತೆ ಸಾಧುವಾಗಿರುವುವು

ಒಂದೇ ವ್ಯಕ್ತಿಯಲ್ಲಿಯೇ ಬೇರೆ ಬೇರೆ ಸನ್ನಿವೇಶಗಳಲ್ಲಿ ವರ್ಣಗಳ ದೃಷ್ಟಿಕೋಣಗಳೂ ಚೇಷ್ಟೆಗಳೂ ಕಲನಗಳೂ ಅಭಿವ್ಯಕ್ತವಾಗುವುವು.

ವೇದಾಂತಿಯ ಜೀವನವು ಚಾರ್ವಾಕ ಸಾಂಖ್ಯಾದಿ ವರ್ತನೆ ಗಳನ್ನು ಒಳಗೊಂಡಿರುವುದು. ಅವೈದಿಕವೆನಿಸುವ ಜೈನ ಬೌದ್ಧಾದಿ ವರ್ತನೆಗಳೂ ವೈದಿಕ ವ್ಯಕ್ತಿಯಲ್ಲಿ ಅಡಗಿವೆ. ಅವೈದಿಕ ವ್ಯಕ್ತಿಗಳಲ್ಲಿ ವೈದಿಕ ವರ್ತನೆಗಳೂ ಪ್ರಕಾಶವಾಗುವ ಅನೇಕ ಘಟ್ಟಗಳಿವೆ. ಇವಕ್ಕೆಲ್ಲಾ ವೇದ–ಬ್ರಹ್ಮ–ಪರಂಬ್ರಹ್ಮವೇ ಆಶ್ರಯವಾಗಿರಬೇಕಲ್ಲವೇ ! ಸಮನ್ವಯ ಬುದ್ಧಿಯು ಅಭ್ಯಾಸದಿಂದ ಬರಬೇಕಾಗುವುದು. ಈ ಅಭ್ಯಾಸಕ್ಕೆ ತಕ್ಕ ಆವರಣಗಳನ್ನು ಕಲ್ಪಿಸುವುದೇ ಪ್ರತಿ ವ್ಯಕ್ತಿಯ–ಸಂಸ್ಥೆಯ ಪರಮ ಕರ್ತವ್ಯ ಮತ್ತು ಪ್ರಥಮ ಕರ್ತವ್ಯವಾಗಿರುತ್ತದೆ.

ಶ್ರೋತ್ರಿಯಾದಿಗಳು ಪೂರ್ಣವಾಗಿ ಪರಸ್ಪರ ಭಿನ್ನವಲ್ಲವೆಂದು ಸಿದ್ಧಾಂತವಾಗಿದೆ. ಒಬ್ಬ ದೇಹಿಯಿಂದ ಶ್ರೋತ್ರಿಯಾದಿಗಳ ಆಚರಣೆ ಯು ಯಜ್ಞ ನಿರ್ವಾಹ ಪ್ರಮಾಣಕ್ಕೆ ತಕ್ಕಂತೆ ಮತ್ತು ಋಣಾನುಬಂಧ ಸಂಸ್ಕೃತಿಯ ಮಿತಿಗೆ ಅನುಗುಣವಾಗಿ ಸೇರಿ ನಡೆಯಬೇಕಾಗಿರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಸಾಯನೌಷಧಿಗಳಿಗೆ ಸೇರುವ ವಸ್ತುಗಳ ಗಾತ್ರ, ಪ್ರಮಾಣ, ತೂಕಗಳು ಹೆಚ್ಚು ಕಡಿಮೆಯಾದರೂ, ಫಲದ ದೃಷ್ಟಿಯಿಂದ ಅವುಗಳ ಕಾರ್ಯವು ಸಮ ಭಾಗವನ್ನು ಹೊಂದುವುವು. ಯಾವ ಒಂದು ವಸ್ತುವಾದರೂ ಅದರ ಫಲ ಕೊಡುವ ಶಕ್ತಿಯನ್ನು ಹೊಂದಿರುವ ಗಾತ್ರ ಪ್ರಮಾಣ ತೂಕಗಳಿಗಿಂತ ಕಡಿಮೆಯಾದರೂ ಅಥವಾ ಹೆಚ್ಚಾದರೂ ಅಥವಾ ಆ ವಸ್ತುವೇ ಸೇರದಿದ್ದರೂ – ಫಲವು ಸಿದ್ಧಿಸಲಾರದು

ಅದರಂತೆ ಒಂದು ವ್ಯಕ್ತಿಯಲ್ಲಿ ಶ್ರೋತ್ರಿಯಾದಿ ಪಂಚವರ್ಣ ಶಕ್ತಿ ಗುಣಕರ್ಮಗಳು [illegible] ಕರ್ಮಫಲ ಪ್ರಮಾಣ ರೀತ್ಯಾ ಸೇರಿರುವುವು. ಹಾಗೆಯೇ ಒಂದು ಗೃಹ, ಸಮಾಜ, ಪ್ರದೇಶ ದೇಶ-ವಾ-ರಾಷ್ಟ್ರಗಳಲ್ಲಿ ಜೀವನಯಜ್ಞವು ಸಾಗ ಬೇಕಾದರೆ ಫಲಕ್ಕೆ ತಕ್ಕಂತೆ ವಿಶೇಷ ಹೊಣೆಗಾರಿಕೆಯ ಶ್ರೋತ್ರಿಯಾದಿಗಳು ಸಮ್ಮಿಶ್ರವಾಗಿ ಸಮತೆಯಿಂದ ಮತ್ತು ಪ್ರತ್ಯೇಕವಾಗಿ ಕಾರ್ಯ ನಿರ್ವಾಹ ಮಾಡಬೇಕಾಗುವುದು. ಯಾವುದೊಂದು ಕಡಿಮೆಯಾದರೂ. ಅಧಿಕವಾದರೂ ಇಲ್ಲದೇ ಇದ್ದರೂ ಫಲವು ಅಸ್ತವ್ಯಸ್ತವಾಗಿ ಜೀವನ ಯಜ್ಞಕ್ಕೆ ಕುಂದುಂಟಾಗುವುದು. ಈ ರಹಸ್ಯವನ್ನು ಅರಿತು ಕ್ರಮಪಡಿಸುವ ಹೊಣೆಗಾರಿಕೆಯುಳ್ಳ ರಾಜನೀತಿಯು ಸ್ವಕರ್ತವ್ಯವನ್ನು ನೆರವೇರಿಸಿದಾಗ ಜೀವನ ಯಜ್ಞದ ದೋಣಿಯು ಕರ್ಮದ ಸಮುದ್ರದಲ್ಲಿ ಸಮತೆಯಿಂದ ಸಾಗಿ ದಡವನ್ನು ಸೇರುವುದು

ವರ್ಣ ರಹಸ್ಯ

ವರ್ಣವು ಗುಣಶಕ್ತಿ ಕರ್ಮಗಳ ಅವಸ್ಥೆಯನ್ನು ಪ್ರತಿಕ್ಷಣ, ಪ್ರತಿ ದಿನ, ವಾರ, ಮಾಸ, ಅಯನ, ವತ್ಸರಗಳಲ್ಲಿ ಸೂಚಿಸುವುದಾದರೆ ಜೀವನ ಯಜ್ಞದಲ್ಲಿ ಆಗಾಗ್ಗೆ ದೇವತಾ ನಾಮ, ದೇವತಾ ಮಂತ್ರ ಜಪಾದಿಗಳಿಗಿರುವಷ್ಟು ಮಹಿಮೆ ಮತ್ತು ಫಲಗಳು ದೇವತ್ವಕ್ಕೆ ಕಾರಣಗಳಾದ ಗುಣ ಶಕ್ತಿಕರ್ಮಗಳಿಗೂ ಇರುವುವು. ಅದರಂತೆ ಶ್ರೋತ್ರಿಯಾದಿ ವರ್ಣ ಸೂಚಕಗಳಾದ ಪದಗಳ ಉಚ್ಚಾರಣೆಗೂ ಆ ಪದಗಳ ಅರ್ಥ ಜ್ಞಾನ ವಿಮರ್ಶೆ ಮೊದಲಾದುವುಗಳಿಗೂ ಫಲವು ಇರುವುದು ಈ ಶಬ್ದಾರ್ಥಗಳ ರಹಸ್ಯವು ವಿವೇಚನೆಗೆ ಅಧೀನವಾಗಿ ವಿಮರ್ಶಕರಿಗೆ ಸಮಾಧಾನವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಂಟುಮಾಡಿ ಕರ್ತವ್ಯವನ್ನು ಸ್ಪಷ್ಟಪಡಿಸುವುದು. ಪ್ರತಿಯೊಂದು ವರ್ಣವೂ ಉಳಿದ ನಾಲ್ಕು ವರ್ಣಗಳ ಸಂಪರ್ಕವಿಲ್ಲದೆ ಶುದ್ಧವಾಗಿರದು. ವರ್ಣ ಸೂಚಕ ಪದಗಳು ಪೂರ್ಣವಾಗಿ ಆಯಾ ವರ್ಣಗಳ ಅರ್ಥ ಲಕ್ಷಣಾದಿಗಳನ್ನು ನಿಸ್ಸಂದೇಹವಾಗಿ ಸೂಚಿಸುವುವು. ಇವುಗಳಲ್ಲಿ ವೈಶ್ಯ ಕ್ಷತ್ರಿಯ, ಶ್ರೋತ್ರಿಯಗಳು ಸಾಹಸಕರ್ಮ ಪ್ರಧಾನವಾದುವು. ಇವುಗಳ ಅರ್ಥ ಮತ್ತು ಲಕ್ಷಣಗಳನ್ನು ಸುಲಭವಾಗಿ ಗ್ರಹಿಸಬಹುದು. ನಿಷಾದ ಪದವೂ ಸಹ ಶ್ಲೇಷಾದಿ ವಿಕಲ್ಪಗಳಿಗೆ ಅವಕಾಶ ಕೊಡದೆ ನೇರವಾದ ಅರ್ಥವನ್ನು ಸೂಚಿಸುವುದು. ವರ್ಣಾಧಾರವಾದ, ವರ್ಣ ಸಾಮಾನ್ಯ ವಾದ ಶೂದ್ರವು ಜೀವನಕ್ಕೆ ಅತ್ಯವಶ್ಯಕವಾಗಿರುವ ಪ್ರಮಾಣದಲ್ಲಿ ಶೂದ್ರ ಶಬ್ದಾರ್ಥವೂ ಸಹ ಗಂಭೀರವಾಗಿ ಗಹನವಾಗಿ ಅವಗಾಹನೆಗೆ ದುರ್ಲಭ ವಾಗಿರುತ್ತದೆ. ಇವುಗಳ ರಹಸ್ಯ ಜ್ಞಾನಕ್ಕೆ ಯತ್ನಿಸಿದಷ್ಟೂ ಫಲಾಧಿಕ್ಯವು ಕಂಗೊಳಿಸುವುದು.

ದೃಷ್ಟವಾದ ವಸ್ತುವಿಗೆ ಸ್ಥಿತಿ, ಅಭ್ಯುದಯಾದಿಗಳಿಗೆ ಪೋಷಣೆಯು ಅವಶ್ಯಕವಾದುದರಿಂದ ಪ್ರಾಪಂಚಿಕವಾಗಿ ವೈಶ್ಯವೇ ಪರಮ ಪ್ರಿಯವಾಗಿ ಪ್ರಥಮವಾಗಿರುವುದು.

ವೈಶ್ಯ ರಹಸ್ಯ

ಸಂಪದಭ್ಯುದಯ ಜ್ಞಾನವು ಪ್ರಕೃತಿಯಿಂದಲೂ ಋತದಿಂದಲೂ ಸ್ವತಃ ಜನಗಳಿಗೆ ದ್ಯೋತವಾಗುವುದು. ಪ್ರಕೃತಿಯ ಒಳಹೊಕ್ಕು ಅದರ ಮರ್ಮವನ್ನು ತಿಳಿದು ಋತವನ್ನು ಅನುಸರಿಸಿ ಪ್ರಕೃತಿಯನ್ನು ಅನುಕರಿಸಿ ಮಾಡುವ ಪ್ರಯತ್ನವು ಕ್ಷಿಪ್ರಫಲದಾಯಕವಾಗುವುದು. ಸಂಪದಭ್ಯುದಯ ಸಾಧನಗಳಾದ ಗುಣಶಕ್ತಿಕರ್ಮಗಳೇ ವೈಶ್ಯ ವೆನಿಸುವುದು.

ರಾಜನೀತಿಯಿಂದಲೂ ಶ್ರೋತ್ರಿಯ ಸಾರವನ್ನು ಪರಮಲಕ್ಷ್ಯವಾ ಗಿಟ್ಟುಕೊಳ್ಳುವುದರಿಂದಲೂ ದೇಹಿಯು ತನ್ನ ಮತ್ತು ಇತರರ ಉನ್ನತಿಗೆ ಶ್ರಮಿಸುವುದೇ ವೈಶ್ಯವು. ಪಶುಪಾಲನೆ, ಭೂ ವ್ಯವಸಾಯ, ವಾಣಿ ಜ್ಯಾದಿ ಉದ್ಯಮಗಳೂ ಧನ ಸಂಪತ್ಸಾಧಕ ಕಾರ್ಯಗಳೂ ಶಾರೀರಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪತ್ತನ್ನು ರೂಢಿಸುವುದೂ ವೈಶ್ಯದಲ್ಲಿ ಅಡಕವಾಗಿರುವುವು. ಈ ಕರ್ಮಗಳು ಅಥವಾ ವೃತ್ತಿಗಳು ಎದ್ದು ಕಾಣುವ ಸನ್ನಿವೇಶಗಳಲ್ಲೆಲ್ಲಾ ವೈಶ್ಯವನ್ನು ಪರಿಗಣಿಸಿ ವೈಶ್ಯಕರ್ಮವೆಂದು ವ್ಯವಹರಿಸಬೇಕಾಗಿದೆ. ಲಭ್ಯವಾದ ಪ್ರಾಸಂಗಿಕ ಸಂಪತ್ತನ್ನು ಸ್ವಾತಂತ್ರ್ಯ ಮತ್ತು ಶಕ್ತಿಗಳ ಪ್ರಯೋಗದಿಂದ ಪ್ರಜೆಗಳಿಗೆ ಲಭಿಸುವಂತೆ ಮಾಡುವ "ಅಘಟನ ಘಟನೆಗಳುಳ್ಳ ತಪಸ್ಸು" ಎಂಬ ಯೋಗವೇ ವೈಶ್ಯವು. ವೈಶ್ಯದ ಯೋಗ ಮತ್ತು ಕ್ಷೇಮಗಳಿಗೆ ಉಳಿದ ಶಕ್ತಿಕರ್ಮಗಳು ಅವಶ್ಯಕವಾಗಿರುವುವು.

ಕ್ಷತ್ರಿಯ ರಹಸ್ಯ

ದೇಹಿಗಳು ಪ್ರಕೃತಿಯ ಮತಾನುಸಾರವಾಗಿ ಮತ್ತು ಅತಿಕ್ರಮಿಸಿ ನಡೆಸುವ ವ್ಯವಹಾರದಲ್ಲಿ ಭಯವೇ ಮೊದಲಾದ ಈತಿ ಬಾಧೆಗಳು ಉಂಟಾಗುವುವು. ಮತ್ತು ಬಲಿಷ್ಠರಿಂದ ದುರ್ಬಲರಿಗೆ ತೊಂದರೆಗಳು ಉಂಟಾಗುವುವು. ತಾಮಸಾಹಾರ ಸೇವನೆಯಿಂದ ಮತ್ತರಾದವರು ಸಾತ್ವಿಕರಾದ ಪ್ರಜೆಗಳಿಗೆ ವೃಥಾ ಕಿರುಕುಳವನ್ನು ಕೊಡುವರು. ಇಂತಹ ಸನ್ನಿವೇಶಗಳಲ್ಲಿ ನೀತಿ ನ್ಯಾಯಗಳಿಗೆ ಅನುಗುಣವಾಗಿ ಕಂಟಕಗಳನ್ನು ಪರಿಹರಿಸಿ ಶಾಂತಿಯನ್ನು ಉಂಟುಮಾಡುವ ವ್ಯವಸ್ಥೆಯು ಕ್ಷತ್ರಿಯವೆನಿಸುವುದು. ಜಗತ್ತಿನ ಈ ಬಗೆಯ ಸಂರಕ್ಷಣ ವ್ಯವಸ್ಥೆಯು ದೇಹಿಗಳ ಇಚ್ಛೆಗೆ ಒಳಪಟ್ಟು ಋಣದಿಂದ ಆಯಾ ದೇಹಿಗಳನ್ನು ಬದ್ಧಪಡಿಸುವುದು. ಇದು ವಿಶೇಷ ಹೊಣೆಗಾರಿಕೆಯಾಗಿ ಕೆಲವು ಪ್ರಜೆಗಳ ನಿತ್ಯಕರ್ಮವಾಗಿ ಇರುವುದು. ಸಾಮಾನ್ಯವಾದ ಕ್ಷತ್ರಿಯ ತತ್ವವು ಸರ್ವ ಪ್ರಜೆಗಳ–ದೇಹಿಗಳ ಪರಿಮಿತಿಯಲ್ಲಿ ಶತಾಂಶ ಪ್ರಮಾಣದಲ್ಲಿರುವುದು. ಆದರೆ ಪೂರ್ಣವಾಗಿ ಕ್ಷತ್ರಿಯ ವರ್ಣಜ್ಞಾನ–ಕಲಾ ವಿಷಯಗಳನ್ನು ಅಭ್ಯಾಸಮಾಡಿ ವಿಶೇಷವಾಗಿ ಆ ಕರ್ಮಕ್ಕೆ ಲಗ್ನವಾಗಿ, ಬದ್ಧವಾಗಿ ಸರ್ವರನ್ನೂ ರಂಜನೆಗೊಳಿಸುವುದೆಂಬ ಆಜ್ಞೆ-ಶಾಸನ ಕಾರ್ಯವು ಕ್ಷತ್ರಿಯ ವಿಶಿಷ್ಟವಾದುದು. ಪ್ರಭುತ್ವ ಪ್ರಕಾಶಕತ್ವ ವ್ಯವಹಾರೋದ್ದೀಪನಾದಿ ಗುಣಗಳಿಂದ ಕೂಡಿದ ಕ್ಷತ್ರಿಯ ಕರ್ಮ ನಿರ್ವಾಹವನ್ನು ರಾಜನ್ಯ, ರಾಜ ಶಬ್ದಾದಿಗಳಿಂದ ವ್ಯವಹರಿಸುತ್ತಾರೆ. ಕ್ಷತ್ರಿಯವು ಶ್ರೋತ್ರಿಯ ವೈಶ್ಯ ಶೂದ್ರ ನಿಷಾದಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಾಯವನ್ನು ಪಡೆದು ಸ್ವಾತಂತ್ರ್ಯದಿಂದ ಸಾಹಸವನ್ನೆಸಗುತ್ತಾ ಸರ್ವ ಕರ್ಮಗಳ ಸದನುಷ್ಠಾನಾದಿ ವ್ಯವಸ್ಥೆಗಳನ್ನು ನಡೆಸುವುದು. ಸ್ವಸ್ವ ರೂಪಾವಸ್ಥಾನ ಲಾಭದ ಗುರಿಯಿಂದ ಋಣವನ್ನು ಪರಿಹರಿಸಿ ನಿತ್ಯಸುಖ ದಾಯಕವಾಗಿಯೂ ಇರುವುದು.

ಶ್ರೋತ್ರಿಯ ರಹಸ್ಯ

ಮೇಲ್ಕಂಡಂತೆ ಪ್ರಕೃತಿಯ, ಋತದ ಮರ್ಮವನ್ನೂ ಋಣಕರ್ಮ ತತ್ವವನ್ನೂ ನಿತ್ಯಸುಖ ನಿತ್ಯಾನಂದ ಸ್ವಸ್ವರೂಪಾವಸ್ಥಾನದ ವಿಚಾರ ವನ್ನೂ ತಿಳಿದು ಸರ್ವ ಸಾಮಾನ್ಯವಾದ ಅಂತಶ್ಶಾಂತಿ ಬಹಿಶ್ಶಾಂತಿಗಳನ್ನು ಕ್ರಮಪಡಿಸಿ ಸುಧಾರಿಸಬೇಕಾದ ಪರಿಸ್ಥಿತಿ ದೇಹಿಗಳಿಗೆ ಸ್ವಭಾವವಾಗಿರು ವುದು. ಸ್ವಾತಂತ್ರ್ಯದಿಂದ ಸಾಹಸವನ್ನೆಸಗಿ ಅಪ್ರತಿಹತವಾದ ಸಿದ್ಧಾಂತ ಗಳಿಂದ ತುಂಬಿದ ಮೂಲ ಗ್ರಂಥಗಳನ್ನು ಚಕ್ರನೇಮಿ ಕ್ರಮವೆಂಬ ಶೂದ್ರ ನಿತ್ಯನುಶಾಸನ (ಶುಶ್ರೂಷೆ) ಪದ್ಧತಿಯಿಂದ ಅಧ್ಯಯನವಾಡಿ, ಪ್ರಯೋಗ ಶಿಕ್ಷಣವನ್ನು ಹೊಂದಿ ಸ್ವಾಧೀನಕ್ಕೆ ತಂದುಕೊಳ್ಳುವುದು ಶ್ರೋತ್ರಿಯವು. ಮತ್ತು ಅದನ್ನು ಪ್ರಪಂಚದ ಯೋಗಕ್ಷೇಮ ಕಾರ್ಯ ಗಳಿಗೆ ನಿಯೋಗಿಸುವುದೂ ಶ್ರೋತ್ರಿಯದ ಹೆಚ್ಚಿನ ಹೊಣೆಗಾರಿಕೆಯಾಗಿ ರುವುದು. ಗ್ರಂಥಾಧ್ಯಯನೆಗಳನ್ನು ಗೌಣವಾಗಿಟ್ಟುಕೊಂಡು ಜೀವನದ ಅನುಭವಗಳನ್ನು ಗುರು ಸಂಸ್ಕೃತಿಯ ಮೂಲಕ ಸ್ವಾಧೀನಕ್ಕೆ ತಂದು ಕೊಳ್ಳಬಹುದು.

ಪ್ರಕೃತಿಯಲ್ಲಿಯೂ ಮಾನವರಲ್ಲಿಯೂ ಇತರ ಸನ್ನಿವೇಶಗಳಲ್ಲಿ ಯೂ ಗುಣಕರ್ಮಾನುಗುಣವಾಗಿ ಘಟನಾಘಟನೆಗಳನ್ನು ಉಂಟು ಮಾಡುವುದೂ, ಬ್ರಹ್ಮವರ್ಧಕವಾದ ಬ್ರಹ್ಮಕರ್ಮಗಳಿಗೆ ಲಗ್ನವಾಗಿ ಮತ್ತು ಅವುಗಳಿಗೆ ಬದ್ಧವಾಗಿ ನಡೆಯುವುದೂ ಶ್ರೋತ್ರಿಯವು ಹೀಗೆ ನಡೆಯುವುದರಿಂದ ದೈವೀ ಸಂಪತ್ತೂ, ಶಾಂತಿಯೂ ಹೆಚ್ಚುವುದಕ್ಕೆ ಅಥವಾ ಸಂಸ್ಥಾಪಿಸಲ್ಪಡುವುದಕ್ಕೆ ಅವಕಾಶವಾಗುವುದು. ಇವು ಪುನ ರುಜ್ಜೀವಿತವಾಗಲು ಶ್ರೋತ್ರಿಯವು ಸಾಹಸ ಮಾಡಬೇಕಾಗಿದೆ; ಪ್ರಾಯಶ್ಚಿತ್ತಾದಿಗಳಿಂದ ಸ್ವ – ಪರ – ಕ್ಲೇಶ ಪರಿಹಾರವಾಗುವುದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಪಸ್ಸನ್ನಾಚರಿಸಬೇಕಾಗಿದೆ ; ಸರ್ವ ಸಾಮಾನ್ಯವಾಗಿ ಉಪಕಾರವಾಗುವ ಶೂದ್ರದಂತೆ, ವೈಶ್ಯದಂತೆ, ಕ್ಷತ್ರಿಯದಂತೆ ಅತ್ಯಂತೋಪಕಾರಕವಾಗಿ ಮಾನವ ಪ್ರಪಂಚದಲ್ಲಿ ದೇವತ್ವವನ್ನು ಸಾಧಿಸಿ ಯೋಗದಲ್ಲೆಲ್ಲಾ ಯೋಗ ವೆನಿಸಿರುವುದು ; ಇಂದ್ರಿಯ ವಿಷಯಗಳಾದ ಮತ್ತು ಇಂದ್ರಿಯಾತೀತ ಗಳಾದ ವಿಶ್ವಶಕ್ತಿಗಳ ಮರ್ಮವನ್ನು ಭೇದಿಸಿ ಜಗತ್ತಿನ ಯೋಗಕ್ಷೇಮಕ್ಕೆ ಆಶ್ರಯವಾಗಿರುವುದು. ಬ್ರಾಹ್ಮಣವಾದ ಜಗತ್ತಿನಲ್ಲಿ ಮತ್ತು ಜಗತ್ಕಾ ರ್ಯಗಳಲ್ಲಿ ಕೇವಲ ಶ್ರೋತ್ರಿಯ ಕಾರ್ಯವನ್ನು ಪ್ರಧಾನವನ್ನಾಗಿ ಆರಿಸಿ ವೈಯಕ್ತಿಕ ಸಾಮರ್ಥ್ಯದಿಂದ ನಡೆಯುವ ಅನುಷ್ಠಾನವನ್ನು ಬ್ರಾಹ್ಮಣ-ಬ್ರಾಹ್ಮಣ ಎಂಬ ಸಪ್ತಮೀ ತತ್ಪುರುಷ ಸಮಾಸ ಪದದಿಂದ ಕರೆಯಬೇಕಾಗಿದೆ. ಬ್ರಾಹ್ಮಣ ಸಾಮಾನ್ಯದಲ್ಲೆಲ್ಲಾ ಬ್ರಾಹ್ಮಣ ಎಂಬುದರ ಪರ್ಯಾಯ ಪದವಾದ ಶ್ರೋತ್ರಿಯ ಶಬ್ದವನ್ನು ಪ್ರಯೋಗಿಸಿ ನಿಷ್ಕೃಷ್ಟತೆ ಯನ್ನು ಪ್ರತಿಪಾದಿಸುವುದು ಮೇಲು.

ನಿಷಾದ ರಹಸ್ಯ

ನಿಷಾದದಲ್ಲಿ ಅಪರಿಮಿತವಾದ ಹೊಣೆಗಾರಿಕೆಯಿರುವುದು. ನಿ + ಸದ್ ಎಂಬ ಧಾತುವಿನಿಂದ ವ್ಯುತ್ಪನ್ನವಾದ ನಿಷಾದ ಶಬ್ದಕ್ಕೆ ಎಡೆ ಬಿಡದೆ ಕಾದು ಕುಳಿತಿರುವುದೆಂದರ್ಥ. (ನಿಷಾಂ ದದಾತಿ-ಸುಖಂ ದದಾತಿ ಎಂಬ ವಿವರಣೆಯನ್ನೂ ಕೊಡುತ್ತಾರೆ.)

ಬದ್ಧವಾದ ನಿತ್ಯಕರ್ಮನಿರ್ವಾಹದಿಂದ ಎಷ್ಟು ಮಹಿಮೆಯುಂಟಾ ಗುವುದೋ ಅದಕ್ಕಿಂತಲೂ ಹೆಚ್ಚಾದ ಮಹಿಮೆಯುಳ್ಳ ಹೊಣೆಗಾರಿಕೆ ಯು ಆಕಸ್ಮಿಕವಾದ ಕರ್ತವ್ಯ ಕರ್ಮ ನಿರ್ವಾಹಕ್ಕೆ ಇರುವುದು ಹಿಂದೆ ಹೇಳಿದಂತೆ ನಿಷಾದವು ರಕ್ಷಣೆಗೆ (ಆಕಸ್ಮಿಕ) ಅತ್ಯವಶ್ಯಕವಾಗಿರುವುದು. ಇದು ರುದ್ರಾಂಶವೆಂದು ವೇದವು ಘೋಷಿಸುತ್ತದೆ. ಕಿರಾತ ವೇಷ ಧಾರಣೆಯೂ ಇದಕ್ಕೆ ಸಂಬಂಧಿಸಿ ಆಯುಧಾದಿಗಳಿಂದ ಸದಾ ಸಿದ್ಧವಾಗಿ ರುವ ನಿಷಾದಕ್ಕೆ ರುದ್ರವೇ ಅಧಿದೇವತೆಯು. ಈ ಬಗೆಯ ರಕ್ಷಣೆಯ ಕಾರ್ಯವು ಅದೃಶ್ಯವಾದರೆ ಯಾವ ವಿಧವಾದ ಜೀವನ ಯಜ್ಞವೂ ಮಾನವ ಮಟ್ಟದಲ್ಲಿ ನಡೆಯಲಾರದು ; ಅಲ್ಲದೆ ಮಾನವ ಜೀವನವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವೇಕದಿಂದ ದೂರವಾಗಿ ಮೃಗಗಳ ವರ್ತನೆಯಾಗಿ ಪರಿಣಮಿಸುವುದು. ಆದುದರಿಂದ ನಿಯಮಬದ್ಧವಾಗಿ ಸದಾ ಕಾರ್ಯ ತತ್ಪರವಾಗಿ ಋಣ ಮುಕ್ತಿಗೂ, ಸುಖಾದಿಗಳ ಅನುಭವಕ್ಕೂ ಶ್ರೇಯೋಭ್ಯುದಯಗಳಿಗೂ ಯತ್ನಿಸುವ ಶೂದ್ರಾದಿಗಳಂತೆ ನಿಷಾದವೂ ಸಹ ಆಕಸ್ಮಿಕವಾಗಿ ವರ್ಣ ನಿರ್ವಾಹಗಳಿಗೆ ಒದಗಬಹುದಾದ ದುರ್ಘಟನೆಗಳ ನಿವಾರಣೆಗಾಗಿ ಸಿದ್ಧ ವಾಗಿರುವುದೆಂಬ ನಿಯಮಕ್ಕೆ ಮಾತ್ರ ಬದ್ಧವಾಗಿ, ಸ್ವತಂತ್ರವಾಗಿದ್ದು ಕಾರ್ಯನಿರ್ವಾಹಮಾಡುವುದಾಗಿದೆ. ಈ ಬಗೆಯ ಸ್ವಂತ ಕಾರ್ಯದಲ್ಲಿ ಅಸ್ವತಂತ್ರವೇ ಆಗಿರುವ ನಿಷಾದವು ಬ್ರಹ್ಮಾನುಸಂಧಾನ ಲಕ್ಷ್ಯದಿಂದ ಋಣ ಮುಕ್ತಿಯನ್ನೂ ಸುಖಾನುಭವವನ್ನೂ ಸರ್ವ ಸಮಾನವಾಗಿ ಹೊಂದುವ ಅರ್ಹತೆಯನ್ನುಳ್ಳುದಾಗಿರುವುದು.

ಶೂದ್ರ ರಹಸ್ಯ

ಋಣದ ಪ್ರಭಾವದಿಂದ ನಿರ್ವಾಹವಾಗಬೇಕಾಗುವ ಕರ್ಮಕ್ಕೆ ಮತ್ತು ಅದರ ಫಲಾನುಭವಕ್ಕೆ ಲಗ್ನವಾಗಿ, ಬದ್ಧವಾಗಿ, ಹೆಚ್ಚು ಪುನಃ ಕ್ಲೇಶಗಳಿಗೆ ಅವಕಾಶ ತಂದುಕೊಳ್ಳದೆ ಇರುವುದು ; ಇಂದ್ರಿಯಗಳ ಹತೋಟಿ ಮತ್ತು ಮಿತಿಗಳಲ್ಲಿ ಸುಖವಾಗಿದ್ದು ಆ ಜನ್ಮದಲ್ಲಿ ಆಗಬೇಕಾದ ಋಣಪರಿಹಾರವನ್ನು (ಋಣಶೋಧನವನ್ನು-ಕರ್ಮಫಲಾನುಭವವನ್ನು) ಮಾತ್ರ ಗುರಿಯಾಗಿಟ್ಟುಕೊಂಡಿರುವುದು ; ಹೊಸದಾಗಿ ಸ್ವಾತಂತ್ರ್ಯ ದಿಂದ ಸಾಹಸವನ್ನೆಸಗದೆಯೂ ಇಚ್ಛಾ ಸಂಕಲ್ಪಾದಿಗಳಿಂದ ಋಣವನ್ನು ಹೊತ್ತುಕೊಳ್ಳದೆಯೂ ಇರುವುದು ಎಂಬಿವೇ ಮೊದಲಾದ ಸ್ವಸ್ವ ರೂಪಾವಸ್ಥಾನ ಲಾಭ ಪ್ರಾಪಕಸ್ಥಿತಿಯಲ್ಲಿರುವುದೇ ಶೂದ್ರವು. ಪ್ರಾಣಿ ವರ್ಗಕ್ಕಿಂತ ಮೇಲ್ಪಟ್ಟ ವಿವೇಕದ ಹಂತದಲ್ಲಿ ದೇಹಿಗಳು ಶೂದ್ರವನ್ನು ಅಭ್ಯಾಸ ಮಾಡುವುದಕ್ಕೆ ಯತ್ನಿಸಬಹುದಾಗಿದೆ. ಶೋಧನಾತ್ಮಕ ಶೂದ್ರದಿಂದ, ಶೂದ್ರಕರ್ಮದಿಂದ, ನೈಷ್ಕರ್ಮ್ಯ ಸಿದ್ಧಿಯುಂಟಾಗುವುದು. ಬ್ರಾಹ್ಮಣ ಸಾಮಾನ್ಯದ-ಮಾನವತೆಯ-ಮುಖ್ಯವಾದ ಆಶಯವೂ ಇದೇ ಆಗಿರುತ್ತದೆ.

ಶೂದ್ರ ಕರ್ಮವು ಮಿತವಾದುದು ; ನಿಯತವಾದುದು. ವ್ಯಕ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾತಂತ್ರ್ಯವನ್ನು ಸ್ವೇಚ್ಛೆಗೆ ಗುರಿಪಡಿಸದಿರುವುದು. ಸ್ವಾಭಾವಿಕಕರ್ಮ ನಿರ್ವಾಹಕ್ಕೆ ಬೇಕಾದಷ್ಟು ಗೊತ್ತಾದ ನಿತ್ಯಕರ್ಮವನ್ನು ಸಾಗಿಸಿ ಋಣ ಮುಕ್ತನಾಗುವ ಸನ್ನಿವೇಶದಲ್ಲಿ ಸುಖಪಾಗಿ ಮಿತಿ ಸಂಪನ್ನತೆಯಿಂದ ಪ್ರಪಂಚವನ್ನು ಪೋಷಿಸುವುದು. ಶಕ್ತರಾದವರು ಅಶಕ್ತರನ್ನೂ ರೋಗಿ ಗಳನ್ನೂ ಸೇವಿಸುವಂತೆ ಶೂದ್ರವು ಪ್ರಪಂಚವನ್ನು ಸುಖಕರವಾಗಿ ಹಿತ ವಾಗಿ ಸೇವಿಸುವುದು. ಪ್ರಕೃತಿಯಿಂದ ಸಕಲ ಸೌಕರ್ಯಗಳೂ ಲಭಿಸುವ ಸಂದರ್ಭದಲ್ಲಿ ಶೂದ್ರವು ತೃಪ್ತಿಯಿಂದ ತೃಪ್ತಿಕರವಾಗಿ ಸ್ವಸ್ವ ಕರ್ಮ ತಪೋ ಯೋಗವಾಗುವಂತೆ ಸರ್ವ ದಿಕ್ಕುಗಳಲ್ಲಿಯೂ ನಿರ್ವಾಹ ಮಾಡಿ ದೇಹಿಗಳು ಕೃತಕೃತ್ಯರಾಗುವಂತೆ ಸಹಕರಿಸುವುದು.

ಶೂದ್ರಕರ್ಮವಿಲ್ಲದೆ ಜಗತ್ತು ನಡೆಯುವುದಿಲ್ಲ.

ಶೂದ್ರವಿಲ್ಲದ ಜಗತ್ತು ಸರ್ವಶೂನ್ಯವಾಗಿರುತ್ತದೆ. ಶ್ರೋತ್ರಿಯ ಕರ್ಮವಾಗಲೀ ಕ್ಷತ್ರಿಯಕರ್ಮವಾಗಲೀ ವೈಶ್ಯಕರ್ಮವಾಗಲೀ ನಿಷಾದ ಕರ್ಮವಾಗಲೀ ಶೂದ್ರದ (ಆಧಾರದ) ಅಡಿಗಲ್ಲಿನ ಮೇಲೆ ರೂಪಿಸಿ ರೂಢಿಸಿಕೊಳ್ಳಬೇಕಾಗುವುದು. ಶೂದ್ರದಿಂದ ಜಗದ್ವ್ಯಾಪಾರವೆಲ್ಲಾ ಸ್ವಭಾವತಃ ಸಾಗಿಹೋಗುವುದು.

ಸೌರ ವ್ಯೂಹದ ಸೂರ್ಯ ಚಂದ್ರ ಭೂಮಿ ಮೊದಲಾದುವುಗಳೂ, ನಕ್ಷತ್ರಗಳೂ, ವಾಯು ಮಂಡಲ, ಮೇಘ ಮಂಡಲಗಳೂ ಪೃಥಿವ್ಯಾದಿ ಪಂಚ ಭೂತಗಳೂ ತಮ್ಮ ತಮ್ಮ ವ್ಯಾಪಾರಗಳನ್ನು ವಿಧೇಯತೆಯಿಂದ ಋತಕ್ಕೆ ಅನುಸಾರವಾಗಿ ತಮ್ಮ ಸ್ವಾತಂತ್ರ್ಯವನ್ನು ಚಕ್ರನೇಮಿ ಕ್ರಮ ದಲ್ಲಿ ಮಿತಿಗೊಳಿಸಿ ನಡೆಸಬೇಕೆಂಬ ಶೂದ್ರವನ್ನು ಪಾಲಿಸುವುದರಿಂದಲೇ ಜಗತ್ತು ಜಗತ್ತಾಗಿ ನಿಂತಿರುವುದು.

ಶ್ರೋತ್ರಿಯ-ಕ್ಷತ್ರಿಯ-ವೈಶ್ಯ-ಶೂದ್ರ-ನಿಷಾದ ಕರ್ಮಗಳು ಶೂದ್ರದಿಂದ ಸುಸಂಸ್ಕೃತಗಳಾಗಿ ಉನ್ನತ ಮುಖಗಳಾಗುವುವು. ಇಹ ಪರ ಗತಿಗೆ ಅತ್ಯವಶ್ಯಕಗಳಾದ ಇಂತಹ ಸುಸಂಸ್ಕೃತ ಶ್ರೋತ್ರಿಯಾದಿ ಗಳನ್ನು ವೇದಾಧ್ಯಯನ-ಶಾಸ್ತ್ರಾಧ್ಯಯನ-ಕಲಾಭ್ಯಾಸ-ಸ್ವಕರ್ಮ-ಸಂಪನ್ನರೆಲ್ಲಾ ತಿಳಿದು ಆಚರಿಸಬೇಕಾಗಿದೆ.

ಶೂದ್ರವು ದ್ವಿಮುಖವಾಗಿರುವ ವಿಚಾರವನ್ನು ಮರೆಯಬಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇವಲ ಶೋಧನ ಪ್ರಧಾನವಾದುದು ಒಂದು ಮುಖ. ಶೋಧನ ಲಕ್ಷ್ಯ ವಾಗಿದ್ದು ಚಕ್ರನೇಮಿ ಕ್ರಮದಲ್ಲಿ ಶೋಧನಕ್ಕಾಗಿ ಕರ್ಮವನ್ನು ಜಾಗರೂಕವಾಗಿದ್ದುಕೊಂಡು ನಿರ್ವಹಿಸುವುದು ಎರಡನೆಯದು. ಇಂತಹ ಶೂದ್ರವು ಇಚ್ಛಾ ಸಂಕಲ್ಪಾದಿಗಳನ್ನು ಸನ್ನಿವೇಶ ಪ್ರಾಬಲ್ಯಕ್ಕೆ ಒಳಪಡಿಸಿ ಅವಲಂಬಿಸಿದರೆ ಋಣ ಕಲ್ಪನೆಯಾಗಿ ನೂತನವಾಗಿ ಬಂಧನಗಳು ಪ್ರಾಪ್ತವಾಗುವುವು.

'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ' ಎಂಬಂತೆ ಶೋಧನದಿಂದ ಋಣ ನಿವೃತ್ತಿಯಾಗಿ ವಿದ್ಯೆಯಿಂದ ಅಂದರೆ ಋಣ (ಬಂಧನ) ವಿವೇಚನೆಯಿಂದ ಅಮೃತ ಲಾಭವಾಗುವುದು. ಅಮೃತವನ್ನು ಒದಗಿಸುವುದು ಶೂದ್ರವೇ ಆಗಬೇಕು ಪ್ರಕೃತಿಯ ಋತವನ್ನು ಅನುಸರಿಸಿ ಸ್ವಸ್ವಾತಂತ್ರ್ಯವನ್ನು ದೂರೀಕರಿಸಿ ಶೂದ್ರದ ಆಶ್ರಯದಲ್ಲಿ ಅವಧೂತರಂತೆ ನಡೆದರೆ ವಿದ್ಯಾಲಾಭವಾಗುವುದು. ಈ ಬಗೆಯ ಅನುಭವವು ಜೀವನ್ಮುಕ್ತರ ಜೀವನದಲ್ಲಿ ಕಾಣುವುದು. ನಿಷಾದ ವೈಶ್ಯ ಶ್ರೋತ್ರಿಯ ಕ್ಷತ್ರಿಯಗಳು ಸ್ವಾತಂತ್ರ್ಯದಿಂದ ಸಾಹಸವನ್ನು ಪ್ರಯೋಗಿಸುವ ಲಕ್ಷಣವುಳ್ಳವುಗಳಾದುದರಿಂದ ಸ್ವೇಚ್ಛಾ ಪ್ರವರ್ತನೆಗೂ ಸಾಹಸಕ್ಕೂ ಬಂಧನಕ್ಕೂ ಅವಕಾಶವನ್ನು ಹೊಂದಿವೆ. ಆದುದರಿಂದ ಅವು ಅವಿದ್ಯೆಗೆ ಕಾರಣವಾಗುವುವು. ಪುಣ್ಯಕಾರ್ಯವಾಗಲೀ ಪಾಪಕಾರ್ಯವಾಗಲೀ ಫಲಾನುಭವವನ್ನು ಉಂಟುಮಾಡುತ್ತವೆ. ಬಂಧನಗಳಿಗೆ ಮೂಲವಾಗಿವೆ. ಇವುಗಳನ್ನು ಮೀರಿ ಬ್ರಹ್ಮನಿಷ್ಠ ಬ್ರಹ್ಮಸಾಕ್ಷಾತ್ಕಾರದ ಅಪರೋಕ್ಷಾನುಭವವುಳ್ಳ ಜೀವನ್ಮುಕ್ತರ ಸ್ಥಿತಿಯನ್ನು ಹೋಲುವ ಶೂದ್ರವು ಪುಣ್ಯಪಾಪ ಕಾರ್ಯಗಳಿಂದ ದೂರವಾಗಿರುತ್ತದೆ.

ಆಹತ ಪ್ರತ್ಯಾಹತ ಘಟನಾಘಟನೆಗಳನ್ನು ಪ್ರೋತ್ಸಾಹಿಸಿ ಹೆಚ್ಚಿಸುವುದು ಅವಿದ್ಯೆಯು. ಶ್ರೋತ್ರಿಯ ಕ್ಷತ್ರಿಯ ವೈಶ್ಯ ಕರ್ಮಗಳಿಂದ ವಿದ್ಯೆ ಮತ್ತು ಅವಿದ್ಯೆಗಳು ಉಂಟಾಗುವುವು. ಮಿತಿ ಮೀರಿದ ಮತ್ತು ಮಿತಿಯಿಂದ ಕೆಳಗೆ ಜಾರಿದ ಶೂದ್ರವೂ ಅವಿದ್ಯೆಯನ್ನು ಹೊಂದುವುದು. ಎಂದು ಹೇಳಿಯೇ ಇದೆ. ಚಕ್ರನೇಮಿ ಕ್ರಮದಲ್ಲಿ ಗುರ್ವಾಜ್ಞಾ ಪರಿಪಾಲನವೆಂಬ ಶೂದ್ರವು ವರ್ಜಿತವಾದಾಗ ಆಸುರೀ ಕ್ರಿಯಾ ಪ್ರವೃತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಗುವುದರಿಂದಲೂ ಅವಿದ್ಯೆಗೆ ಕಾರಣವಾಗುವುದು. ಶ್ರೀರಾಮನು ಕೈಕೆಯ ಮತ್ತು ದಶರಥನ ವಾಕ್ಯವನ್ನು ಪರಿಪಾಲನ ಮಾಡುವ ಶೂದ್ರದಿಂದ (ವಿಧೇಯತೆ, ಶುಶ್ರೂಷಾ) ಲೋಕವಂದಿತನಾದನು. ಶ್ರೋತ್ರಿಯಾಗ್ರೇಸರನಾಗಿ ರಾಮನಿಂದಲೂ ವಂದಿಸಲ್ಪಡಬಹುದಾದ ಸನ್ನಿವೇಶವನ್ನು ಹೊಂದಿದ ರಾವಣನು ಶ್ರೋತ್ರಿಯ ಬ್ರಹ್ಮಕರ್ಮಾಚರಣೆಯ ಅಹಂಭಾವದಿಂದ ಋತ (–ಆಚಾರ) ಪರಿಪಾಲನೆಯೆಂಬ ಶೂದ್ರವನ್ನು ವರ್ಜಿಸಿದನು. ವಿಭೀಷಣನು ಆಚಾರ–ಸಂಸ್ಕೃತಿಯನ್ನು ಚಕ್ರನೇಮಿಕ್ರಮವಲ್ಲಿ ಪಾಲಿಸುವ ಶೂದ್ರವನ್ನವಲಂಬಿಸಿ ರಾಮನ ಆಶ್ರಯದಲ್ಲಿ ಇಹ ಪರಗಳನ್ನು ಗೆದ್ದನು. ರಾಜನೀತಿ ವಿಶಾರದನೂ ಬ್ರಹ್ಮಕರ್ಮರಹಸ್ಯವೇತ್ತನೂ, ಕ್ಷತ್ರವನ್ನು ಅನುಸರಿಸಿದವನೂ ಆದ ಆಂಜನೇಯನ ಶೂದ್ರಕ್ಕಿಂತಲೂ ಅತಿಶಯವಾದ ಮಾದರಿ ಅಥವಾ ಆದರ್ಶವು ಬೇರೊಂದಿಲ್ಲ.

ಶೂದ್ರವು ದಾಸ್ಯವಲ್ಲ. ದಾಸ್ಯವು ದೂಷಿತವಾಗಬಹುದು. ಕ್ಷುದ್ರವಾದ ಪ್ರಾಪಂಚಿಕ ದಾಸ್ಯವನ್ನು ಆಂಜನೇಯನು ಯೆಂದಿಗೂ ಆದರಿಸಲಿಲ್ಲ; ರಾಮನೂ ಪ್ರೋತ್ಸಾಹಿಸಲಿಲ್ಲ.

ನ ನರಸ್ಯ ನರೋ ದಾಸೋ ದಾಸಸ್ತ್ವರ್ಥಸ್ಯ ಕಸ್ಯಚಿತ್| ಯಾರೂ (ಯಾವ ವ್ಯಕ್ತಿಯೂ) ಯಾರಿಗೂ (ಯಾವ ವ್ಯಕ್ತಿಗೂ) ದಾಸನಾಗಲಾರರು. ಆದರೆ ಸ್ವಕರ್ತೃತ್ವಾರೋಪದಿಂದ ಸ್ವೇಚ್ಛಾಪೂರ್ತಿಗಾಗಿ ಸ್ವೇಚ್ಛಾವಿಷಯಕ್ಕೆ ದಾಸರಾಗುವರು

ದಾಸ್ಯವು ಒಂದು ಗುಂಪಿಗೆ ಮಾತ್ರ ಸಂಬಂಧಿಸಿರುವಂತೆ ಗ್ರಂಥಗಳಲ್ಲಿ ಪ್ರತಿಪಾದಿತವಾಗಿದೆ ಎಂದು ತಿಳಿಯುವುದರಿಂದ ಮಿಥ್ಯಾಜ್ಞಾನ ಮಿಥ್ಯಾ ಪ್ರಚಾರವಾಗುವುದು; ಜನಗಳ ಇಂಗಿತ, ಮರ್ಮ ಮತ್ತು ಸೃಷ್ಟಿಯ ವೈಚಿತ್ರ್ಯ ಮತ್ತು ಮೂಲಗಳನ್ನು ತಿಳಿಯದೆ ಇರುವುದರಿಂದ ಅಪಹಾಸ್ಯಕ್ಕೆ ದಾರಿಯಾಗುವುದು.

ಆಂಜನೇಯನ ಶೂದ್ರಾವಲಂಬನವು ಆಂಜನೇಯನಿಗೆ ದೇವತ್ವವನ್ನು ಸಾಧಿಸಿ ಕೊಟ್ಟಿತು. ಉಪಮನ್ಯು, ಆರುಣಿ, ಬೈದ ಎಂಬ ಶಿಷ್ಯವರ್ಗದವರು ಧೌಮ್ಯನ ಬಳಿ ಶೂದ್ರವನ್ನು ಧರಿಸಿಯೇ ಸಕಲ ವಿದ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾರಂಗತರಾದರೆಂದು ಇತಿಹಾಸವು ಹೇಳುತ್ತದೆ. ಗುರ್ವಾಜ್ಞಾ ಪರಿಪಾಲನವೆಂಬ ಶೂದ್ರವು ಶಿಷ್ಯನ ಶ್ರೇಯಸ್ಸಿಗಾಗಿರುವುದು; ಸ್ವೇಚ್ಛಾ ವಿಹಾರಕ್ಕಲ್ಲ. ಆದುದರಿಂದ ಶೂದ್ರವು ಸಂಸ್ಕೃತಿಯಿಂದ ಕೂಡಿದ ಶ್ರೋತ್ರಿಯ ಕ್ಷತ್ರಿಯ ವೈಶ್ಯ ಶಕ್ತಿಗಳಿಗೆ ಸಮಾನವಾಗಿ ಚತುರ್ವರ್ಣಗಳಲ್ಲಿ ಒಂದಾಗಿ ಮಿತಿಯಿಂದ ಬದ್ಧವಾಗಿರುವುದು. ಈ ಪ್ರಪಂಚವನ್ನು ಆಳುವುದೇ 'ವಿಧೇಯತೆ' ಯೆಂಬ ರಾಜನೀತಿ ವಿಹಿತವಾದ ಚಕ್ರನೇಮಿ ಕ್ರಮದ ಶೂದ್ರಶಕ್ತಿ. ಶ್ರುತಿಗೋಚರವಾಗಿರುವ ಶೂದ್ರವಿಲ್ಲದ ಅಥವಾ ಶೂದ್ರದ ಸಹಾಯವಿಲ್ಲದ ಶೂದ್ರದೊಡನೆ ಸಮವಾಯವನ್ನು ಹೊಂದದ ಶ್ರೋತ್ರಿಯವಾಗಲೀ ಶಾಸಕ ಕ್ಷತ್ರಿಯವಾಗಲೀ ಸಂಪದಭ್ಯುದಯದ ವೈಶ್ಯವಾಗಲೀ ಮುರಿದುಬೀಳುವುವು.

ಬ್ರಾಹ್ಮಣ ದೇಶದಲ್ಲಿ ಸಂಹಿತಾ, ಪದ, ಕ್ರಮ, ಜಟೆ, ಘನಗಳೆಂಬ ಅಧ್ಯಯನ ಮಾರ್ಗಗಳಲ್ಲಿ ಅಮೃತ ಪ್ರಾಪ್ತಿಗಾಗಿ ಮಥನ ಮಾಡಿದಂತೆ ವೇದವನ್ನು ಅಭ್ಯಾಸ ಮಾಡುವ ಸಂಸ್ಕೃತಿಯು ಹಂತಕ್ಕೆ ಏರಿದ ಪ್ರಜೆಗಳೆಲ್ಲರೂ ವೇದ ಪ್ರೋಕ್ತವಾದ, ಪವಿತ್ರವಾದ ಶೂದ್ರವೆಂಬ ಪದವನ್ನು ಉಚ್ಚರಿಸುತ್ತಾರೆ. ವೇದಾಧ್ಯಯನದ ವಿಶೇಷ ಹೊಣೆಗಾರಿಕೆಯನ್ನು ಹೊತ್ತಿರುವವರು ಮಂತ್ರ ಪಠನ ಪಾರಾಯಣಾದಿಗಳನ್ನು ನಡೆಸುತ್ತಲೇ ಇದಾರೆ. ಪುರುಷಸೂಕ್ತದಲ್ಲಿರುವ ಶೂದ್ರ ಪದೋಚ್ಚಾರಣೆಯಿಂದಲೂ, ರುದ್ರಾಧ್ಯಾಯದಲ್ಲಿ ಕಂಡ ನಿಷಾದ ಪದೋಚ್ಚಾರಣೆಯಿಂದಲೂ ಭಗವದಭಿಷೇಕ, ಜಪ, ಹೋಮಗಳೇ ಮೊದಲಾದ ಉಪಚಾರ ಪೂಜಾ ಯಜ್ಞ ಕ್ರತುಗಳು ನೆರವೇರುವುವು. ಹೀಗೆ ದೇಶದಾದ್ಯಂತ ದಿನಕ್ಕೆ 8-10 ಕೋಟಿ ಸಂಖ್ಯೆಗಿಂತ ಕಡಿಮೆಯಿಲ್ಲದಂತೆ ಶೂದ್ರ ನಿಷಾದ ಪದೋಚ್ಚಾರಣೆಗಳು ಪವಿತ್ರವೆನಿಸಿ ಪವಿತ್ರೀಕರಣಕ್ಕಾಗಿ ನಡೆಯುವುವು. ಶೂದ್ರ ನಿಷಾದ ಪದೋಚ್ಚಾರಣೆಯ ಸಮಕಾಲದಲ್ಲಿಯೇ ಅಭಿಷೇಕ ಜಲವು, ಹೋಮದ್ರವ್ಯವು ಬಿಂಬದಲ್ಲಿ ಆರಾಧ್ಯ ದೇವನ ಶಿರಸ್ಸು ಮುಖಗಳ ಮೇಲೆ ಉರುಳುವುದರಿಂದ ಆರಾಧಿಸಲ್ಪಟ್ಟ ಸ್ವಾಮಿಗೆ ಆತ್ಯಾನಂದವಾಗುವುದೆಂದು ಕರ್ಮ ರಹಸ್ಯ ಬೋಧಕವಾದ ಶೂದ್ರ ಮೀಮಾಂಸೆಯಿಂದ ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದ ಪಾರಾಯಣಾದಿಗಳಿಂದ ಪರಿಚಿತವಾದ ಮತ್ತು ಮಂತ್ರಾಂತರ್ಗತವಾದ ಶೂದ್ರ ಪದದ ಮಹಿಮೆಯನ್ನು ಸರ್ವರೂ ಆವಶ್ಯಕವಾಗಿ ತಿಳಿಯಬೇಕು. ಸುಖಕರವೂ ಪವಿತ್ರವೂ ಆದ ಶೂದ್ರವನ್ನು, ಶೂದ್ರ ಗುಣವನ್ನು, ಶೂದ್ರಶಕ್ತಿಯನ್ನು, ಶೂದ್ರಕರ್ಮವನ್ನು ಪಡೆಯದ ಮಾನವನು ಜಗತ್ತಿನಲ್ಲೇ ಕಾಣಲಾರನು. ಶೂದ್ರವು ಬ್ರಹ್ಮಾಂಡವನ್ನು ಆವರಿಸಿ ಸಕಲ ಚೇತನ ಮತ್ತು ಅಚೇತನ ವಸ್ತುಗಳಲ್ಲಿ ಸಮವಾಯ ಸಂಬಂಧದಿಂದ ಸೇರಿಕೊಂಡಿರುತ್ತದೆ.

'ಗೃಹೇ ಗೃಹೇ ವ್ಯಕ್ತೌ ವ್ಯಕ್ತೌ ಶೂದ್ರತ್ವಂ' ಎಂದು ಕಡಬದ ಶ್ರೀ ನಿತ್ಯಾನಂದ ಸ್ವಾಮಿಗಳು ಹೇಳುತ್ತ, ಶೂದ್ರವು ಮಾನವ-ಪ್ರಪಂಚದಲ್ಲಿ ಎಡೆಬಿಡದೆ ಸುತ್ತಿಕೊಂಡಿರುವುದು. ಶೂದ್ರವಿಲ್ಲದ ಸಗುಣ ಪದಾರ್ಥವೇ ಇರುವುದಿಲ್ಲವೆಂದು ಸ್ವಧರ್ಮ ವಿವೇಕದಲ್ಲಿ ವಿಸ್ತರಿಸಿ ಬಹಳ ಸ್ಪಷ್ಟವಾಗಿ ಹೇಳಿದೆ. ಈ ಜಿಜ್ಞಾಸೆಯು ಮಾನವಸಾಮಾನ್ಯಜ್ಞಾನವು ಹರಡಿರುವ ಸನ್ನಿವೇಶದಲ್ಲಿ ಸ್ವತಃ ಏನ ಉಂಟಾಗುವುದು.

ಶೂದ್ರವು ಸರ್ವಾರ್ಥಭ್ಯುದಯ ಮೂಲ. ಸರ್ವ ಕರ್ಮಗಳೂ ಪ್ರಯೋಗಗಳೂ ಗೊತ್ತಾದ ನಿಯಮಗಳಿಗನುಗುಣವಾಗಿ ನಿರ್ವಾಹವಾದರೆ ಫಲದಾಯಕವಾಗುವುವು. ಆದುದರಿಂದ ಋಣ ಶೋಧನ ಕರ್ಮವನ್ನು ನಿರ್ವಹಿಸುವ ಮತ್ತು ಶುಶ್ರೂಷಾ ಪ್ರಧಾನವಾದ ಶೂದ್ರವೆಂಬ ನಿಯಮ ಪರಿಪಾಲನೆಯಿಂದಲೇ ಎಲ್ಲಾ ವೃತ್ತಿಗಳೂ ಕರ್ಮಗಳೂ ನಡೆಯಬೇಕಾಗಿವೆ. ಶರೀರೇಂದ್ರಿಯಾನುಭವಗಳಿಗೆ ಆವಶ್ಯಕವಾದ ಶೋಧನ ಶುದ್ಧೀಕರಣ ಕಾರ್ಯಗಳನ್ನು ಶರೀರಾವಯವಗಳು ನಿರ್ವಹಿಸುವುದರಿಂದ ಚಿತ್ತಶುದ್ಧಿ ಆತ್ಮಶುದ್ಧಿಗಳುಂಟಾಗಿ ಆತ್ಮಸಾಕ್ಷಾತ್ಕಾರಕ್ಕೆ ಸಹಾಯಕವಾಗುವ ಶೂದ್ರವು ಅಪಾರ ಮಹಿಮೆಯುಳ್ಳದ್ದು. ಅವಿಧೇಯವಾಗಿ ಸ್ವತಂತ್ರವಾಗಿ ನಡೆಸಿದ ಕರ್ಮಗಳು ವಿರುದ್ಧಫಲವನ್ನೇ ಕೊಡುವುವು.

ವ್ಯಕ್ತಿಯು ನಿರ್ವಹಿಸುವ ಶುಶ್ರೂಷೆಯು ಸ್ವಹಿತಕ್ಕೂ ಪರಹಿತಕ್ಕೂ ಶ್ರೇಯಸ್ಸಿಗೂ ಸಾಧನವಾಗಿರುವುದರಿಂದ ಶುಶ್ರೂಷೆಯು ಪರರನ್ನು ಸೇವಿಸುವುದರಲ್ಲಿ ಮಾತ್ರ ಪರ್ಯವಸಾನ ಹೊಂದುವುದೆಂಬ ತಪ್ಪಾದ ಮತ್ತು ಕೀಳಾದ ಮನೋಭಾವವನ್ನು ವರ್ಜಿಸಬೇಕು. ಯೋಗಶಾಸ್ತ್ರವು ತಿಳಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭ್ಯಾಸಗಳನ್ನೂ ವೇದೋಕ್ತ ಯಜ್ಞಾದಿಗಳನ್ನೂ ಸಹ ವಿಧಿ ನಿಷೇಧ ನಿಯಮಗಳಲ್ಲಿ ಕೂಡಲು ಪ್ರಮಾಣದಷ್ಟು ವ್ಯತ್ಯಾಸವಾಗದಿರುವಂತೆ ಶುಶ್ರೂಷಾ ಶೂದ್ರದಿಂದಲೇ ಪಾಲಿಸಬೇಕಾಗಿರುತ್ತದೆ.

ಸ್ವತಂತ್ರಿಸಿ ಋಣವನ್ನು ಕಲ್ಪಿಸಿಕೊಂಡು ಅದರ ಅನುಭವಕ್ಕಾಗಿ ಜನ್ಮವನ್ನೆತ್ತಿದಾಗ ಜತೆಯಲ್ಲಿ ಬರುವ ಶೂದ್ರವು ಪ್ರಬಲವಾಗಿ ದುಷ್ಟ ಫಲವನ್ನು ಹರಿಸಬೇಕಾಗುತ್ತದೆ ಅದು ಮಿತವಾಗಿ ಪರ್ಯವಸಾನವಾಗಲು ತಂತ್ರಗಳನ್ನು ಅನುಸರಿಸಬೇಕು ಶೂದ್ರದ ಸಾಧಕ ಬಾಧಕಗಳನ್ನು ವಿಮರ್ಶಿಸಿ ತಿಳಿಯುವುದು ಆವಶ್ಯಕ. ಸರ್ವಥಾ ಶಾಂತಿ ಸಾಧಕವಾದ ಋಣಕಲ್ಪನೆಗಳಿಂದ ಶೂದ್ರವೂ ಪವಿತ್ರವಾಗಬೇಕಾಗುತ್ತದೆ. ಇದೆಲ್ಲವೂ 'ಸ್ವಧರ್ಮವಿವೇಕ'ದಲ್ಲಿ ಋಣಪ್ರಕರಣದಲ್ಲಿ ವಿಸ್ತೃತವಾಗಿದೆ.

ಶುದ್ಧವಾದ ಶೂದ್ರವು ಒಂದೇ ಇದ್ದು ತಾನೇ ತಾನಾಗಿ ಏನನ್ನೂ ಮಾಡಲಾರದು. ಏನನ್ನೂ ಮಾಡದೇ ಇರುವ ಅವಧೂತವೇ ಶೂದ್ರ ಪ್ರಧಾನವಾಗಿರುವುದು. ಶೂದ್ರಾದಿ ಪಂಚಕಗಳು ವಿವಿಧ ಪ್ರಮಾಣಗಳಲ್ಲಿ ಪರಸ್ಪರ ಸೇರಿಕೊಂಡೇ ಪ್ರಪಂಚವು ಪ್ರಪಂಚವಾಗಿರುವುದು.

ಅಥರ್ವ ಪ್ರಯೋಗಗಳಲ್ಲಿ ಧನುಶ್ಶಾಸ್ತ್ರ-ಕಲೆ, ವೈದ್ಯಶಾಸ್ತ್ರ-ಕಲೆ, ಭೌತಿಕಶಾಸ್ತ್ರ, ರಸಾಯನಶಾಸ್ತ್ರಾದಿ ಪ್ರಯೋಗಗಳು ಆಯಾ ಪ್ರಕ್ರಿಯಾ ಮರ್ಯಾದೆಯನ್ನು ಪಾಲಿಸಿ ನಡೆಯಬೇಕಾಗುವುವು. ಋತಕ್ಕೆ ಅನುರೋಧವಾಗಿ ಕರ್ಮಗಳು ನಿರ್ವಾಹವಾಗುವ ದೇವತಾ ಪ್ರಪಂಚವಲ್ಲಿಯೂ ಸಸ್ಯ ಪ್ರಾಣಿವರ್ಗಗಳಲ್ಲಿಯೂ ಶೂದ್ರವು ಪ್ರಧಾನವಾಗಿದ್ದು ವಿಶ್ವವ್ಯಾಪಿಯಾಗಿರುವುದನ್ನು ಸರ್ವರೂ ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳಬಹುದು.

ಯೋಗಶಾಸ್ತ್ರ, ಮನಶ್ಶಾಸ್ತ್ರ, ಶಾರೀರಕ ಶಾಸ್ತ್ರಗಳ ದೃಷ್ಟಿಯಿಂದ ಸಮೀಕ್ಷಿಸಿದಾಗ ಶೂದ್ರವು ಪ್ರಥಮ ಸ್ಥಾನವನ್ನು ಹೊಂದಿರುವುದು ಸ್ಪಷ್ಟವಾಗಿ ಕಂಡುಬರುವುದು

ಬ್ರಹ್ಮರಂಧ್ರದಲ್ಲಿ ಗುರುಪಾದುಕೆಯು ಸಾಕ್ಷಾತ್ಕೃತವಾಗುವ ವಿಚಾರವು ಸರ್ವರಿಗೂ ತಿಳಿದಿದೆ. ಶರೀರದೊಳಗೆ ನಾಡೀಕರ್ಮಗಳಿಂದ ಸುರಕ್ಷಿತವಾದ ಕುಂಡಲಿನಿಯ ವ್ಯಾಪಾರಗಳು ನಿಷಾದಾದಿ ಗುಣಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಹಸ್ಯವನ್ನು ಒಳಗೊಂಡಿರುತ್ತವೆ. ಪಿಂಡಾಂಡ ಮತ್ತು ಬ್ರಹ್ಮಾಂಡ ಗಳಲ್ಲಿ ಕುಂಡಲಿನಿಯು ಸೂರ್ಯಾದಿ ನವಜ್ಯೋತಿಗಳಿಗೆ ಆಶ್ರಯಸ್ಥಾನ ವಾಗಿದೆ. ನವಜ್ಯೋತಿಗಳು ಶ್ರೋತ್ರಿಯ ನಿಷಾದಾದಿ ಕಾರ್ಯಗಳ ನಿರ್ವಾಹಕ್ಕೆ ಪ್ರಸಿದ್ಧಿಯಾಗಿವೆ.

ಆಧಾರೇ ಪ್ರಥಮಂ ಸಹಸ್ರಕಿರಣಂ ತಾರಾಧಿಪಂ ಸ್ವಾಶ್ರಯೇ
ಮಾಹೇಯಂ ಮಣಿಪೂರಕೇ ಹೃದಿ ಬುಧಂ ಕಂಠೇ ಚ ವಾಚಸ್ಪತಿಂ।
ಆಜ್ಞಾಯಾಂ ಭೃಗುನಂದನಂ ದಿನಮಣೇಸ್ಸೂನುಂ ಪ್ರಕೂಟಸ್ಥಲೇ
ನಾಡೀಕರ್ಮಸು ರಾಹುಕೇತುಗುಳಿಕಾನ್ ನಿತ್ಯಂ ನಮಾಮ್ಯಾಯುಷೇ॥

ಎಂದು ಯೋಗಶಾಸ್ತ್ರದ ಜ್ಯೋತಿರ್ಭಾಗದಲ್ಲಿ ಹೇಳಿದೆ.

ಬ್ರಹ್ಮರಂಧ್ರದಲ್ಲಿನ ಗುರುಪಾದುಕೆಯ ಮಹಿಮೆಯು ಅತ್ಯಧಿಕ ವಾಗಿರುವುದು. ಪಾದಸೇವೆ-ಪಾದಕ್ಕೆರಗುವುದು ಶ್ರೇಯಸ್ಸಿಗೆ ಮೂಲವು. ಪಾದ-ಅಂಗುಷ್ಠಸ್ಪರ್ಶಮಾಡಿ ನಮಸ್ಕರಿಸುವುದು ಪರಮಲಾಭದಾಯಕ. ಪಾದಾಂಗುಷ್ಠ ಸ್ಪರ್ಶದಿಂದ ಶ್ರೇಯಃ ಪ್ರವಾಹವು ನಮಸ್ಕರಿಸುವವರ ಶಿರಃಸ್ಥಾನಕ್ಕೆ ಪ್ರವಹಿಸುವುದು. ಹೀಗೆ ಕುಂಡಲಿನಿಯ ವ್ಯಾಪಾರವು ಅನುಸ್ಯೂತವಾಗಿ ಪರಂಪರೆಯಾಗಿ ಮರಣವನ್ನೇ ಕಾಣದಂತೆ ಅಮೃತ ವಾಗಿ ನಡೆಯುತ್ತಿರುವುದು. ಪಾದಸ್ಪರ್ಶಕ್ಕೆ ಅವಕಾಶ ಕೊಡದೆ ಮಸ್ಕಾರವನ್ನು ಸ್ವೀಕರಿಸುವುದರಿಂದ ಪವಿತ್ರತೆಯು ಭಂಗವಾಗುವುದಿಲ್ಲ. ಪಾದ ಶುಶ್ರೂಷೆಗೆ ಹೊಂದಿಕೊಂಡ ಶುಶ್ರೂಷೆಯೇ ಶೂದ್ರವು ಎಂದು ಹೇಳುವುದು ರೂಢಿಯಲ್ಲಿದೆ.

ಪಾದ ಶುಶ್ರೂಷಾ-ಶೂದ್ರವು ಪರಮತಾರಕವಾದುದು ; ವಿವೇಕಿ ಗಳಾದ ಪ್ರಜೆಗಳೆಲ್ಲರಿಗೂ ಬೇಕಾದುದು. ಒಂದು ಗುಂಪಿಗೆ ಮಾತ್ರ ವಿಸಾಸಲಾಗಿರುನಂತೆ ಕಾದಿರಿಸಲು ಸಾಧ್ಯವಿಲ್ಲ. ಯಾವ ಒಂದು ಗುಂಪಿ ನವರೂ ತಮಗಾಗಿ ಪ್ರತ್ಯೇಕವಾಗಿರುವಂತೆ ಶೂದ್ರವನ್ನು ಸ್ವಾಯತ್ತೀ ಕರಿಸಿಕೊಳ್ಳುವುದಕ್ಕೆ ಶಕ್ತರಲ್ಲ. ಶಿಷ್ಯಸ್ಥಾನವೇ ಶೂದ್ರವು. ಶಿಷ್ಯಭಾವ ವಿರುವ ಕಡೆಗಳಲ್ಲೆಲ್ಲಾ ಶೂದ್ರವು ತಪ್ಪದೇ ಇರುವುದು. ಶ್ರೇಯೋಭಿಲಾಷಿ ಯಾದ ಮಾನವ ಪ್ರಪಂಚವೇ ಶಿಷ್ಯವಾಗಿ ಶೂದ್ರವೆನಿಸುವುದು.

ಪ್ರಕೃತಿ ಅಥವಾ ಜಗತ್ತೇ ಪ್ರತಿವ್ಯಕ್ತಿಗೂ ಗುರುವಾಗಿರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಷ್ಯ ಗುರು ವೃತ್ತ (ವಲಯ) ದಲ್ಲಿ ಸರ್ವರೂ ಶಿಷ್ಯರಾಗಿ ಪಾದಸೇವೆ ಮೊದಲಾದ ಸಂಜ್ಞಾಸೂಚಕವಾದ ಶ್ರೇಯಃ ಪ್ರದವಾದ ಶೂದ್ರವನ್ನು ಭಜಿಸುವುದು ಸ್ವಭಾವವಾಗಿರುತ್ತದೆ. ಸ್ವತಂತ್ರರಾದ ಸರ್ವರೂ ಈ ಸಂದರ್ಭದಲ್ಲಿ ಅಸ್ವತಂತ್ರರೇ ಆಗಿದಾರೆ. ಪತಿಸೇವೆ ಮಾಡುವ ಪತ್ನಿಯು ಶೂದ್ರವನ್ನು ಧರಿಸಬೇಕು. ಪತ್ನೀ ಸೇವೆ ಮಾಡುವ ವಿಶೇಷ ಸಂದರ್ಭಗಳಲ್ಲಿ ಪತಿಗೂ ಶೂದ್ರವು ಆವಶ್ಯಕವಾಗಿರುತ್ತದೆ. ಪ್ರಪಂಚದಲ್ಲಿ ಆಶ್ರಯವನ್ನು ಹೊಂದತಕ್ಕದ್ದೆಲ್ಲವೂ ಶೂದ್ರವು. ಆಶ್ರಯದ ಮತ್ತು ಆಶ್ರಿತರ ಸಹಾಯದಿಂದ ಸ್ವಾತಂತ್ರ್ಯವನ್ನು ಅಡಗಿಸಿಕೊಂಡು ಋಣಾನುಭವ (ಶೋಧನ) ವ್ರತವನ್ನು ಕೈಕೊಂಡು ಶ್ರೇಯಸ್ಸಿನ ಮೆಟ್ಟಲನ್ನು ಏರುವುದು ಮತ್ತು ಏರಿಸುವುದು ಶೂದ್ರವು. ಕೆಳಗಿಳಿಯದೆ ಮಿತಿಯಾಗಿ ಮಧ್ಯವರ್ತಿಯಾಗಿರುವುದು ಶೂದ್ರವು. ಗುಣದಲ್ಲಿ ಕರ್ಮದಲ್ಲಿ ನ್ಯೂನಾತಿರಿಕ್ತಗಳನ್ನು ಹೊಂದಬಹುದಾದ ಇತರ ಗುಣಶಕ್ತಿಕರ್ಮಗಳಿಗಿಂತಲೂ ಮಿತಿಯಲ್ಲಿರುವ ಶೂದ್ರವು ಶ್ರೇಷ್ಠವಾದುದು. ಅಲ್ಪಾಯಾಸದಿಂದ ಇಹಪರಗಳನ್ನು ಗೆಲ್ಲುವುದಕ್ಕೂ ಉನ್ನತಿಗೆ ಏರುವುದಕ್ಕೂ ಶೂದ್ರವೇ ಸಾಧನವು. ಶೂದ್ರವನ್ನು ಮೀರಿದ ಶಿಷ್ಯತ್ವವು ಅಧೋಮುಖವಾಗಿರುವುದಕ್ಕೆ ಅನೇಕ ನಿದರ್ಶನಗಳಿವೆ, ಅನೇಕರ ಅನುಭವಕ್ಕೂ ಬಂದಿದೆ.

ಉಪಮನ್ಯುವು ಮೊದಲು ಮೊದಲು ಸ್ವತಂತ್ರಿಸಿ ಸೇವಾಕಾರ್ಯವನ್ನು ನಡೆಸುವ ಅತಿ ಬುದ್ಧಿಯನ್ನು ಹೊಂದಿದ್ದನು ಇದನ್ನು ತಡೆಗಟ್ಟಿ ಶೂದ್ರವನ್ನು ಅನುಸರಿಸುವಂತೆ ಧೌಮ್ಯ ಋಷಿಗಳು ಯತ್ನಿಸಿದರು. ಗುರುಗಳ ಅನುಗ್ರಹದಿಂದ ಶಿಷ್ಯಮಿತಿಯನ್ನು ಸಾಕ್ಷಾತ್ಕರಿಸಿ ಶೂದ್ರಾನುಷ್ಠಾನದಿಂದ ಶ್ರೇಯಸ್ಸಿಗೆ ಪಾತ್ರನಾದನು.

ಸ್ವಾತಂತ್ರ್ಯದಿಂದ ಸ್ವಚ್ಛಂದವಾಗಿ ಪ್ರವರ್ತಿಸಿ ಅನುಪಮ ಋಣಗಳನ್ನು ಕಲ್ಪಿಸಿಕೊಳ್ಳುವ ಶೂದ್ರೇತರ ವರ್ಣಗಳ ಗುಣಶಕ್ತಿಕರ್ಮಗಳಂತೆ ಸ್ವಾತಂತ್ರ್ಯವನ್ನು ಪ್ರಯೋಗಿಸದೆ ಅಸ್ವತಂತ್ರವಾಗಿದ್ದು ಸುಖ ಶಾಂತಿಗಳನ್ನು ಸಾಧಿಸುವುದು ಶೂದ್ರವು. ಈ ಮರ್ಮವನ್ನು ತಿಳಿದೇ ಬೀಜ, ಶಕ್ತಿ, ಕೀಲಕಗಳೆಂಬ ಆಗಮಶಾಸ್ತ್ರೋಕ್ತ ಕಲ್ಪದಲ್ಲಿ ಶಕ್ತಿಯು ಪಾದಕ್ಕೆ ವಹಿಸಲ್ಪಟ್ಟಿದೆ. ಸ್ಥಾದದಲ್ಲಿ ಪಾದದ ಹೆಬ್ಬೆರಳು ಛಿನ್ನವಾದರೆ ಚೈತನ್ಯವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾರಿ ಹೋದಂತಾಗಿ ಶರೀರವೇ ದೂಷ್ಯವಾಗಿ ಮೃತಪ್ರಾಯವಾಗುವುದು. ಶಕ್ತಿಯುಕ್ತವಾದ ಶೂದ್ರರಿಂದ ಪ್ರಪಂಚದ ಕಲನ ವ್ಯಾಪಾರಗಳು ಅವಿಚ್ಛಿನ್ನವಾಗಿ ನಡೆಯುವುವು ಎಂದು ಹಿಂದೆ ಹೇಳಿದೆ. ಪಾದುಕಾ-ಪಾದ ಎಂಬುದೇ ತೇಜಸ್ಸು; ಕಾಂತಿಯು; ಬೆಳಕು; ಕಿರಣದೋಪಾದಿಯಲ್ಲಿರುವುದು. ಪಾದುಕಾ ಎಂಬ ಸ್ತ್ರೀಲಿಂಗ ಶಬ್ದವೇ ಶಕ್ತಿ ಎಂಬ ಇಂದ್ರಿಯಾತೀತ ವಿಷಯವನ್ನು ಬೋಧಿಸುತ್ತದೆ.

ಶ್ರೀ ಗು ರು ದ ತ್ತಾ ತ್ರೇ ಯ ಮಾ ಹಾ ತ್ಮ್ಯ ವೆಂಬ ಬ್ರಹ್ಮಾಂಡ ಪುರಾಣ ಭಾಗದಲ್ಲಿ ಗುರುಪಾದಸೇವೆ–ಗುರುಸೇವೆ ಮಹಿಮೆ ಕ್ರಮಗಳು ವಿವರಿಸಲ್ಪಟ್ಟಿವೆ; ರುದ್ರಾಧ್ಯಾಯದಲ್ಲಿ ಹೇಳಿರುವ ವಿಷಯಗಳಿಗೆ ನಿದರ್ಶನಗಳೂ ಅನುಭವ ಚರಿತ್ರೆಗಳೂ ಅಲ್ಲಿ ಅಡಕವಾಗಿವೆ. ಹರಿಶ್ಚಂದ್ರಾದಿಗಳ ಚರಿತ್ರೆಯಲ್ಲಿ ಕಂಡ ಹರಿಶ್ಚಂದ್ರಾನುಭವಗಳು ಗುರುಶಿಷ್ಯಭಾವ-ಶೂದ್ರವರ್ತನೆಯ ನಿಯಮೋಲ್ಲಂಘನೆಯ ಬಾಧಕ ಮತ್ತು ಪರಿಪಾಲನೆಯ ಸಾಧಕಗಳನ್ನು ಸ್ಪಷ್ಟಪಡಿಸುವುವು.

ವರ್ಣ–ಜನ್ಮ

ಜನ್ಮವು ಋಣಾನುಬಂಧದಿಂದ ಋಣ ಶೋಧನ (ಅನುಭವ)ಕ್ಕಾಗಿ ವಿವಿಧವಾದ ಸಸ್ಯ, ಕ್ರಿಮಿ, ಮೃಗ, ಜಲಚರ, ಪಶು, ಪಕ್ಷಿ, ಮಾನವ ದೇಹಗಳಲ್ಲಿ ಉಂಟಾಗುವುದು.

ಪುತ್ರಾದಿ ಪ್ರಾಪ್ತಿಯು ಋಣ ಸಂಬಂಧವಿಲ್ಲದೆ ಯಾವ ವ್ಯಕ್ತಿಯೂ ಉದರದಲ್ಲಿ ಜನಿಸುವ ಯೋಗವಿಲ್ಲದಿದ್ದಾಗ ದೇಹಿಗಳಿಗೆ ಪುತ್ರಯೋಗದ ಗೀಳನ್ನು ಸಮಾಧಾನಗೊಳಿಸಲು ಅತ್ಯುತ್ಕಟವಾದ ದೇವಕಾರ್ಯಗಳನ್ನು ನಡೆಯಿಸಿ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡಾಗ ವಿಶ್ವಶಕ್ತಿಯಾದ ಸಗುಣ ಬ್ರಹ್ಮವೇ ಅತ್ಯುತ್ಕಟವಾದ ತಪಸ್ಸಿನ ಬಂಧನಕ್ಕೆ ಒಳಗಾಗಿ ಋಣಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ. ಅದರ ಪರಿಹಾರಕ್ಕಾಗಿ ತಪಸ್ವಿಯ ಕೋರಿಕೆಯಂತೆ ಪುತ್ರತ್ವವನ್ನು ವಿಶ್ವಶಕ್ತಿಯೇ ಹೊಂದಬೇಕಾಗುತ್ತದೆ.

ಹೀಗೆ ಒಬ್ಬ ದೇಹಿಯ ಸಂಪರ್ಕ ಸಹವಾಸಾದಿಗಳನ್ನು ಅಪೇಕ್ಷಿಸಿದ ದೇಹಿಯ ಇಚ್ಛಾಸಂಕಲ್ಪ ಋಣವನ್ನು ಬಗೆಹರಿಸಲು ಆ ಒಬ್ಬ ದೇಹಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನಗೆ ಅರಿವಿಲ್ಲದೆಯೇ ಮತ್ತೊಬ್ಬ ದೇಹಿಯ ಅಪೇಕ್ಷಾಋಣದಿಂದ ಕಟ್ಟಿ ಹಾಕಲ್ಪಟ್ಟು ಇಬ್ಬರೂ ಯಥೋಚಿತ ಕಾಲ, ಸನ್ನಿವೇಶಗಳಲ್ಲಿ ಜನ್ಮವನ್ನೆತ್ತಬೇಕಾಗುವುದು.

ದೇಹಿಗಳು ಇಚ್ಛಾಸಂಕಲ್ಪ ಋಣಗಳ ಪೂರೈಕೆಗಾಗಿ ಅವಶ್ಯಕವಾದ ಉಪಾಧಿಗಳನ್ನು ಯಥೋಚಿತವಾಗಿ ಹೊಂದಬೇಕಾಗುವುದು; ವ್ಯಕ್ತಿಗೆ ಜನ್ಮವನ್ನು ಹೊಂದಿಸುವ ಕ್ಷೇತ್ರ, ಬೀಜಗಳೊಡನೆ ಪರಸ್ಪರ ಋಣವು ಹಿಂದೆ ಇದ್ದ ಅಥವಾ ಮುಂದೆ ಅದು ಪರಿಹೃತವಾಗಬೇಕಾದ ಋತ ನಿಯಮವನ್ನು ಪಾಲಿಸುವುದಾಗಬೇಕು. ಇಂತಹ ಸಂದರ್ಭಗಳಲ್ಲಿ ಜನನಕ್ಕೆ ಕಾರಣರಾದ ಕ್ಷೇತ್ರಬೀಜಗಳ ವರ್ಣವೂ ಜನಕನ ವರ್ಣವೂ ಅಂತತಃ ಸರ್ವಥಾ ಸಮವಾಗದೆ ಇದ್ದು ಬಹಿಃ ಋಣಾನುಬಂಧಕಾಲ ಪರ್ಯಂತ ವರ್ಣವನ್ನು ಅನುಕರಿಸಿ ವೇಷಧಾರಿಯಾಗಬಹುದಾದ ಸನ್ನಿವೇಶಗಳನ್ನು ಕರ್ಮ ಮೀಮಾಂಸೆಯು ಸ್ಪಷ್ಟಪಡಿಸುತ್ತದೆ.

ಮಹಾತ್ಮರ ದರ್ಶನದಿಂದ ಆಗುವ ಸದ್ಗತಿಯ ವಿಚಾರವನ್ನು ತಿಳಿಸಲು ಶ್ರೀ ಕೃಷ್ಣನು ಹೇಳಿದ ಸೂಕ್ತಿಯಂತೆ ನಾರದನು, – ತಾನು ದರ್ಶನ ಕೊಟ್ಟುದರ ಪರಿಣಾಮವಾಗಿ ಗಿಳಿಯು ಮರಿಯು ಮೃತವಾಗಿ ಕೂಡಲೆ ಹಸುವಿನ ಕರುವಾಗಿ ಜನ್ಮವೆತ್ತಿದುದನ್ನೂ, ಹಸುವಿನ ಕರುವು ಮೃತವಾಗಿ ಕೂಡಲೆ ರಾಜನ ಶಿಶುವಾಗಿ ಜನಿಸಿದುದನ್ನೂ ಪ್ರತ್ಯಕ್ಷವಾಗಿ ನೋಡಿ "ಮಹಾತ್ಮನಾದ ನಾರದನ ದರ್ಶನದಿಂದ ರಾಜನಾಗಿ ಜನಿಸುವ ಯೋಗವುಂಟಾಯಿತೆಂ"ದು ಕೃತಜ್ಞತೆಯಿಂದ ಹೇಳಿದ ರಾಜಶಿಶುವಿನ ಮಾತನ್ನು ಕೇಳಿ ತೃಪ್ತನಾದನೆಂದು ಉದಾಹೃತವಾಗಿದೆ.

ಜನ್ಮ-ಕ್ಷೇತ್ರ-ಬೀಜಗಳಿಂದ ಆಪಾತತಃ ಜನ್ಮವನ್ನು ಹೊಂದಿ ಆಯಾ ಜನ್ಮಕ್ಕೆ ಉಕ್ತವಾದ ಜನ್ಮವರ್ಣಕಾರ್ಯಗಳನ್ನು ಸಾಧಿಸಬಹುದಾದರೂ ಅದು ಶಾಸ್ತ್ರಬದ್ಧವಾದುದಲ್ಲ. ಅಂತೆಯೇ ವ್ಯಕ್ತಿಯು ಅನುಸರಿಸುತ್ತಿರುವ ವರ್ಣಕಾರ್ಯಗಳಿಂದ ಅವನ ಜನ್ಮವನ್ನು ಸಾಧಿಸುವುದೂ ತಪ್ಪಾಗುವುದು.

ಜಾತಿಯೆಂಬುದು 'ಜನ್ಮ' ಮತ್ತು 'ಸಮೂಹ' ಅಥವಾ 'ಸಾಮಾನ್ಯ' ಎಂಬ ಅರ್ಥಗಳಲ್ಲಿ ಪ್ರಯೋಗಿಸಲ್ಪಡುವುದು. ಆತ್ಮವರ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-(ಜೀವವರ್ಣ)- ದ ಒಂದು ಅಂಶವನ್ನು ಸಾಧಿಸುವುದಕ್ಕಾಗಿ ಋಣಾ ಸಂಬಂಧದಿಂದ ಜನ್ಮವುಂಟಾಗುವುದು. ಜನ್ಮ ಕಾರಣವಾದ ಬೀಜಕ್ಷೇತ್ರ ಗಳಲ್ಲಿ ಆತ್ಮತಃ ಬೀಜಕ್ಕೆ ವಿಶೇಷ ಪ್ರಾಧಾನ್ಯವುಂಟಾಗಿದೆ. ದೇಹಿಯು ಜನ್ಮಬೀಜವು ಪ್ರಕಟವಾಗುವುದಿಲ್ಲ ಪ್ರತ್ಯಕ್ಷವಾದ ಕ್ಷೇತ್ರವೇ ಜನ್ಮಕ್ಕೆ ಮಾತೃಸ್ಥಾನವಾದುದರಿಂದ ದೇಹಕ್ಕೆ ಕ್ಷೇತ್ರದೊಡನೆ ಹೆಚ್ಚಿನ ಸಂಬಂಧ ವಿರುವುದು. ಕಾ ತೇ ಕಾಂತಾ ಕಸ್ತೇ ಪುತ್ರಃ। ಕಸ್ಯ ತ್ವಂ ವಾ ಕುತ ಆಯಾತಃ। ಕಸ್ತ್ವಂ ಕೋಽಹಂ। ಕಾ ಮೇ ಜನನೀ ಕೋ ಮೇ ತಾತಃ ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಆತ್ಮವು ಒಂದೇ ಎಂಬುದೂ ಆ ಒಂದು ಆತ್ಮವೇ ಭಿನ್ನ ಜೀವಗಳಾಗಿ ಕಾರ್ಯ ಕಾರಣ (ಋಣ) ಸಂಬಂಧದಿಂದ ಒಂದು ಕಡೆ ಜೀವಿಸುವ ಸನ್ನಿವೇಶಗಳುಂಟಾಗಿ ಆ ಸನ್ನಿ ವೇಶದ ವಿವರಣೆಗಾಗಿ ಪುತ್ರ, ಕಾಂತಾ, ಜನನೀ ಇತ್ಯಾದಿ ಶಬ್ದಗಳಿಂದ ವ್ಯವಹರಿಸಬೇಕಾಗಿದೆ ಎಂಬುದೂ ಶಾಸ್ತ್ರದಿಂದಲೂ ಅನುಭವದಿಂದಲೂ ಸಿದ್ಧವಾಗುವುವು

ಸಾಮಾನ್ಯವಾಗಿ ವಿವಾದಾಸ್ಪದವಿಲ್ಲದಿರುವ ಕಡೆಗಳಲ್ಲಿ ಕ್ಷೇತ್ರಬೀಜ ಗಳಿಗೂ ಅವುಗಳಿಂದ ಜನ್ಮವನ್ನು ಅನುಭವಿಸುವ ದೇಹಿಯ ದೈಹಿಕ ಮತ್ತು 'ಜೀವ'ದ ಗುಣಕರ್ಮಗಳಿಗೂ ಶತಾಂಶ ಪ್ರಮಾಣ ರೀತ್ಯಾ ಹೊಂದಿಕೆಯಿರುವುದು. ಅನೇಕ ಸಂದರ್ಭಗಳಲ್ಲಿ ಜನ್ಮವನ್ನೆತ್ತಿದ ದೇಹಿ ಯು ಕ್ಷೇತ್ರ ವ್ಯತಿರಿಕ್ತವಾದ ಅಥವಾ ಬೀಜ ವ್ಯತಿರಿಕ್ತವಾದ ಮತ್ತು ತನ್ನದೇ ಆದ ವರ್ಣವನ್ನೂ ಗುಣಕರ್ಮಗಳನ್ನೂ ಹೊಂದಿರುತ್ತದೆ.

ಜನ್ಮ ಸಹಾಯದಿಂದ ವರ್ಣ ಸಮಸ್ಯಾ ಪರಿಹಾರವು ಆಗದಿದ್ದರೂ ಅದಕ್ಕೆ ಸಂಬಂಧಪಟ್ಟ ಆರ್ಥಿಕವ್ಯವಹಾರಸಮಸ್ಯೆಗಳು ಬಗೆಹರಿಯುವುವು ಆದರೆ ವರ್ಣದ ಸಹಾಯದಿಂದ ಅಂದರೆ ಗುಣಶಕ್ತಿಕರ್ಮಗಳ ಸಹಾಯ ದಿಂದ ಜನ್ಮಕ್ಕೆ ಸಂಬಂಧಪಟ್ಟ ಸಮಸ್ಯೆಗಳೂ ಪರಿಹಾರವಾಗಿ ಆರ್ಥಿಕ ವ್ಯವಹಾರ ಕ್ಲೇಶಗಳೂ ದೂರವಾಗುವುವು.

ಅನೇಕ ಸನ್ನಿವೇಶಗಳಲ್ಲಿ ಜನ್ಮವು ದೇಹಿಯಲ್ಲಿ ಅಡಗಿರುವ ಸ್ವಂತ ಗುಣಶಕ್ತಿಕರ್ಮಗಳಿಗೆ ತಕ್ಕ ವರ್ಣವನ್ನು ರೂಪಿಸುವುದಕ್ಕೆ ಅಡ್ಡಿಯಾಗಿ ಬರುವುದು ದೇಹಿಯ ಜನ್ಮದಿಂದ ಸಾಧಿತವಾದ ವರ್ಣವು ಆ ಗುಣಶಕ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮಗಳಿಂದ ಹೀನವಾಗಿ ವರ್ಣವನ್ನು ಕೆಡಿಸುವುದಲ್ಲದೆ ಮೂಲಜನ್ಮಕ್ಕೆ ವಿರೋಧವನ್ನು ತಂದು ಆರ್ಥಿಕ ಕ್ಲೇಶಪರಂಪರೆಗಳನ್ನುಂಟುಮಾಡುವುದು.

ಜನ್ಮ ಮತ್ತು ವರ್ಣಗಳೆಂಬ ಬೇರೆ ಬೇರೆಯಾಗಿರುವ ಎರಡು ವಸ್ತುಗಳು ಒಂದರೊಡನೆ ಒಂದು ಐಕ್ಯವಾಗುವಂತೆ ಜೀವನದ ಘಟನೆಯಾದರೆ ಯಾವ ಸಮಸ್ಯೆಗೂ ಅವಕಾಶವಿಲ್ಲದೆ ಆರ್ಥಿಕ – ಐಹಿಕ ಮತ್ತು ಪಾರಮಾರ್ಥಿಕಗಳೆರಡೂ ಸಾಧಿಸಲ್ಪಡುವುವು.

ಜನ್ಮ ಮೂಲಕ್ಕೂ ದೇಹಿಯ ವರ್ಣಕ್ಕೂ ಶತಾಂಶ ಪ್ರಮಾಣ ರೀತ್ಯಾ ಹೋಲಿಕೆ ವ್ಯತ್ಯಾಸಗಳಿರುವುವೇ ಹೊರತು ಸರ್ವಥಾ ಸಮವು ಎಂದಿಗೂ ಉಂಟಾಗುವುದಿಲ್ಲ. ದೇಹಿಯ ಋಣಾನುಬಂಧಕ್ಕೆ ತಕ್ಕಂತೆ ಕೆಲವು ಸಮಾನಗುಣಗಳು ಕಂಡುಬರಬಹುದು. ದೇಹಿಯು ಸ್ವಂತವಾದ ವೈಶಿಷ್ಟ್ಯವನ್ನು ಪ್ರತ್ಯೇಕವಾಗಿ ಸಾಧಿಸಿ ಜೀವನವನ್ನು ಸಾಗಿಸುವ ಸ್ಥಿತಿಯನ್ನು ಹೊಂದಿರುವುದು.

'ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ' ಇಲ್ಲಿ ಶ್ರೀಮಾನ್ ಅಂದರೆ ಹಣವಂತನಲ್ಲ; ಶ್ರೇಯಃ ಪರವಾದ ಗುಣಶಕ್ತಿ ಕರ್ಮಗಳೆಂಬ ಸಂಪತ್ ಉಳ್ಳವನು ಎಂದರ್ಥ. ಪೂರ್ಣತೆಯ ಸಾಕ್ಷಾತ್ಕಾರವು ಘಟಿಸುವುದಕ್ಕೆ ಅಡ್ಡಿಯಾದ ಋಣ ಬಂಧನನಿವೃತ್ತಿಗಾಗಿ ಋಣಾನುಬಂಧರೀತ್ಯಾ ಶ್ರೀಮಂತರ ಕ್ಷೇತ್ರದಲ್ಲಿ ದೇಹಿಗಳು ಜನಿಸುವರು. ಜನ್ಮ ಮೂಲವಾದ ಕ್ಷೇತ್ರಬೀಜಗಳ ವರ್ಣವೂ ಯೋಗಭ್ರಷ್ಟ ದೇಹಿಯ ವರ್ಣವೂ ಸಮಾನವಾಗಿರಬಹುದು. ಅಥವಾ ಕೇವಲ ಜನ್ಮದಲ್ಲಿಯೇ ಚರಿತಾರ್ಥವಾಗಬಹುದು. ಜನನದಿಂದ ದೇಹಿಯ ಹಿಂದಿನ ಸಂಸ್ಕಾರವು ಶ್ರೇಯಃ ಪ್ರದವಾಗಿತ್ತೆಂದು ಊಹಿಸಲು ಸಹಾಯಕವಾಗುವುದು.

ನ್ಯಾಯ ವ್ಯವಸ್ಥೆ ಮೊದಲಾದ ಶಾಸನಗಳು ಲೋಕ ವ್ಯವಹಾರ ಸೌಲಭ್ಯಕ್ಕಾಗಿ ಆರ್ಥಿಕ ನಿರ್ಣಯಗಳನ್ನು ರೂಪಿಸುವುವು. ಕುಲದ ಗೌರವ ಸ್ಥಾನ ಮಾನಗಳನ್ನು ಎತ್ತಿಹಿಡಿಯುವುದಕ್ಕಾಗಿ ಜನ್ಮವನ್ನೂ ಪ್ರಶಂಸಿಸಬೇಕಾದ ಅಥವಾ ಸೂಚಿಸಬೇಕಾದ ಸಂದರ್ಭಗಳು ಒದಗುವುವು. ಋಣ ಕರ್ಮಗಳಿಗನುಸಾರವಾಗಿ ವ್ಯಕ್ತಿಗಳು ಅಥವಾ ಕುಟುಂಬಗಳು ಅವಲಂಬಿಸಿರುವ ವೃತ್ತಿಗಳ ಸಮಾನತೆ ಮತ್ತು ಸಾಮ್ಯದಿಂದ ಸಮಾಜ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು (ಗುಂಪು) ಪ್ರಕಾಶವಾಗುವುವು. ಸಾಮಾನ್ಯ ಲಕ್ಷಣಗಳುಳ್ಳ ವ್ಯಕ್ತಿಗಳ, ಕುಟುಂಬಗಳ ಸಮೂಹಗಳು ಆಗಾಗ್ಗೆ ಸಂದರ್ಭಾನುಸಾರ ಏರುವುದೂ ಅಳಿಯುವುವೂ ಸ್ವಭಾವವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಗುಂಪು (ಜಾತಿ-ಸಮೂಹ) ಬಲದಿಂದ ಮತ್ತು ಒತ್ತಾಸೆಯಿಂದ ಅದಕ್ಕೆ ಸೇರಿದ ಕುಟುಂಬಗಳೂ ವ್ಯಕ್ತಿಗಳೂ ಸ್ವಂತವಾಗಿ ತಮ್ಮದೇ ಆದ ವಿಶಿಷ್ಟ ಗುಣಕರ್ಮ ಮತ್ತು ಋಣಗಳನ್ನು ರೂಪಿಸಿ ರೂಢಿಸಿಕೊಳ್ಳುವ ಅಧಿಕಾರಾವಕಾಶವನ್ನು ಹೊಂದಿ ಶಕ್ತರೂ ಸ್ವತಂತ್ರರೂ ಆಗಿರುತ್ತಾರೆ. ಶಕ್ತರೂ ಸ್ವತಂತ್ರರೂ ಆದ ವ್ಯಕ್ತಿಗಳೂ ವ್ಯಕ್ತಿಗಳುಳ್ಳ ಕುಟುಂಬಗಳೂ ಸಮಾಜಕ್ಕೆ ಬಲವನ್ನು ಕೊಡುವುವು.

ರಾಜನೀತಿ ಶಾಸ್ತ್ರದ ನಿಯಮಗಳನ್ನು ಉಲ್ಲೇಖಿಸುವ ಗ ವ್ಯವಹಾರ ವ್ಯಾಪಾರಗಳ ನಿಷ್ಕೃಷ್ಟತೆಗಾಗಿ ಪ್ರಪಂಚಕ್ಕೆಲ್ಲಾ ಅನ್ವಯಿಸುವಂತೆ ವರ್ಣಗಳ ಸಾಮಾನ್ಯವಾದ ಪಂಚಶಕ್ತಿ ಗುಣಕರ್ಮ (ವ್ಯಾಪಾರ) ಮಿತಿಗಳನ್ನು ವಿವರಿಸಿರುತ್ತಾರೆ. ವಿವರಣೆಯಲ್ಲಿರುವ ಆ ಶಬ್ದ ಪ್ರಯೋಗಗಳಿಂದ ಆಯಾ ಸಂದರ್ಭದಲ್ಲಿ ಅನುಕ್ತವಾದ ವ್ಯವಹಾರಗಳನ್ನು ಊಹಿಸುವುದಕ್ಕೆ ಅಧಿಕಾರವೂ ಅವಕಾಶವೂ ಇರುತ್ತವೆ. ವರ್ಣ ಕರ್ತವ್ಯ ನಿರ್ಣಯಕ್ಕಾಗಿ ವಿಶಾಲವಾಗಿ ವಿಮರ್ಶೆ ಮಾಡಿ ಮಥನಮಾಡಬಹುದಾದ ಹೆಚ್ಚು ಆವಶ್ಯಕತೆಯಿಲ್ಲದೆ ಇದ್ದಾಗಲೂ, ಸಂದೇಹಾದಿಗಳಿಗೆ ಅವಕಾಶವಿಲ್ಲದಿರುವಾಗಲೂ ದೇಹಿಗಳು ತಮ್ಮ ತಮ್ಮ ಅನುಭವಗಳ ಮಟ್ಟದಲ್ಲಿ ಜೀವನದ ಆಗುಹೋಗುಗಳೆಂಬ ವರ್ಣ ವ್ಯವಹಾರ ಸಮಸ್ಯೆಗಳನ್ನು ಅಂತಃ ಕರಣ ಪ್ರವೃತ್ತಿ ಎಂಬ ಪ್ರಮಾಣದಿಂದಲೇ ಪರಿಹರಿಸಿಕೊಳ್ಳಬೇಕಾಗುವುದು. 'ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ' ಶಕುಂತಲೆಯ ಮೇಲೆ ದುಷ್ಯಂತನ ಮನಸ್ಸು ಪ್ರವೃತ್ತವಾದ ಸಾಧುತ್ವವನ್ನು ಪೋಷಿಸಿ ಕಾಳಿದಾಸನು ಹೇಳಿರುತ್ತಾನೆ. ಇವರಿಂದ ಪ್ರಜೆಗಳು ಪ್ರಕೃತಿಯ ಆಶ್ರಯದಲ್ಲಿ ಸುಖವಾಗಿ ಜೀವನವನ್ನು ಸಾಗಿಸಿಕೊಂಡು ವೈಭವದಿಂದಲೂ ಅಟ್ಟಹಾಸದಿಂದಲೂ ಅವರವರ ವರ್ಣ ಮಿತಿಯಲ್ಲಿ ಇರಬಹುದೆಂದು ಸ್ಪಷ್ಟವಾಗುತ್ತದೆ.

ವಿವಾದಕ್ಕೆ ಆಸ್ಪದವಿದ್ದ ಕಡೆ ಅನುಕ್ತವೂ ಅಸ್ಪಷ್ಟವೂ ಆದ ವರ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯವಹಾರ ಬದ್ಧತೆಗಳ ಸ್ಪಷ್ಟತೆ ಮತ್ತು ನಿರ್ಣಯಗಳು ಕ್ಲೇಶಕರವಾಗುವುವು. ಈ ಸನ್ನಿವೇಶದಲ್ಲಿ ಮಧ್ಯಮಮಾರ್ಗವಾದ ರಾಜನೀತಿಯು ಸಮಸ್ಯೆಯನ್ನು ಪರಿಹರಿಸುವುದಾದರೂ ಆ ನೀತಿ ಶಾಸನವನ್ನು ಸದುಪಯೋಗಿಸಿಕೊಳ್ಳಲು ಸಾಮರ್ಥ್ಯವು ಸಾಲದೆ, ತಾತ್ಕಾಲಿಕವಾಗಿ ಸೀತಾ ಪರಿತ್ಯಾಗ, ಶಕುಂತಲಾ ಪರಿತ್ಯಾಗಗಳಿಗೆ ಅವಕಾಶವಾದಂತೆ ತೊಂದರೆಯಾಗಬಹುದು.

ಸರ್ವಥಾ ಕ್ಷೇತ್ರದ ಎಲ್ಲೆಕಟ್ಟಿನೊಳಗೆ ಅನನ್ವಯ ನಿವಾರಣೆಗಾಗಿ ಮತ್ತು ವ್ಯವಹಾರ ಸೌಕರ್ಯಕ್ಕಾಗಿ ಅರ್ಥಸಂಪತ್ತಿನ ಋಣಾನುಭವಗಳು ನಿರ್ದೇಶಿಸುವಂತೆ ವಸ್ತೂಪಲಕ್ಷಣಗಳಲ್ಲಿ ಗುಣ ಶಕ್ತಿ ಕರ್ಮಗಳೆಂಬ ಸಾಮರ್ಥ್ಯದ ಶತಾಂಶಪ್ರಮಾಣದಿಂದ ಸೂಚಿತವಾಗಿ ವರ್ಣವು ಪ್ರಥಮ ಸ್ಥಾನವನ್ನೂ ಜನ್ಮವು (ವಂಶವು) ಗೌಣಸ್ಥಾನವನ್ನೂ ಹೊಂದಿರುವುವು. ವರ್ಣವಾಗಲೀ ಜನ್ಮವಾಗಲೀ ಸಂಸ್ಕಾರಾನುಗುಣವಾಗಿ ಉಳಿಯುವುವು. ಮತ್ತು ಅಳಿಯುವುವು. ವರ್ಣ ಮತ್ತು ಜನ್ಮ ಸಂಸ್ಕಾರಗಳೆಂಬ ಊರುಗೋಲು–ವಾ–ಆಧಾರಸ್ತಂಭ–ಅವಷ್ಟಂಭದಿಂದ ಆರ್ಥಿಕಸಂಪದ್ವ್ಯವಹಾರವು ನಿಸ್ಸಂದೇಹವಾಗಿ ಬಗೆಹರಿಯುವುದು.

ಊರ್ಜಿತವಾಗಬೇಕಾದ ಉದ್ದೇಶದಿಂದ ಜನ್ಮತಃ ಮತ್ತು ವಂಶತಃ ಆರ್ಥಿಕ ಸಂಪತ್ತಿಗೆ ಸಂಬಂಧಿಸಿದ್ದರೆ ಆಹಿತಾಗ್ನಿ ವರ್ಣವು ಆರ್ಥಿಕ ಸಂಪತ್ತಿಗೆ ಸ್ವಾಮ್ಯವನ್ನು ಹೊಂದಿದ್ದರೂ ಆಹಿತಾಗ್ನಿವರ್ಣ ವಿರಹಿತವಾದಾಗ ಆರ್ಥಿಕ ಸಂಪತ್ತೂ ಸಹ ದೂರೀಕೃತವಾಗಬಹುದು.

ಪರಮತಪಸ್ವಿಗಳಾದ ಶುನಃಶೇಫರೆನಿಸುವ ಮಕ್ಕಳು ಅಜೀಗರ್ತರಾದ ತಮ್ಮ ತಮ್ಮ ತಂದೆಗಳಿಗೆ, ಶೂದ್ರವನ್ನು ಶ್ಲಾಘಿಸಿ 'ಶೌದ್ರಾತ್ ನ್ಯಾಯಾತ್ ಮಾಪಗಾಃ' ಎಂದು ಎಚ್ಚರಿಸಿ ಹೇಳಿ, ಅರ್ಥ ಸಮಸ್ಯೆಯು ಬಿಕ್ಕಟ್ಟಿಗೆ ಸಿಕ್ಕಿದಾಗ ಶೂದ್ರವನ್ನು, ಶುಶ್ರೂಷೆ–ಸೇವಾ–ಕರ್ಮವನ್ನು, ಅವಲಂಬಿಸಿದವರು ಸೇವಾನಿಯಮಕ್ಕೆ ಬದ್ಧರಾಗಬೇಕೆಂದು ತಿಳಿಸಿರುವರು. (ಐತರೇಯ ಬ್ರಾಹ್ಮಣ–ವೇದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣಪ್ರಕಾಶಕ ಉಪಲಕ್ಷಣಗಳು

ತತ್ತದುಚಿತವಾದ ವರ್ಣ ಕಾರ್ಯಗಳ ಅನುಷ್ಠಾನವು ದೇಹಿಗಳಿಗೆ ಕಾಂತಿಯನ್ನೂ ವರ್ಚಸ್ಸನ್ನೂ ಉಂಟುಮಾಡುವುವು. ನಡೆನುಡಿಗಳು ವರ್ಣಾನುಷ್ಠಾನಕ್ಕೆ ತಕ್ಕಂತೆ ಹೊಂದಿಕೊಳ್ಳುವುವು. ಹೀಗೆ ದೇಹಿಯ ರೂಪು, ನಡೆ ನುಡಿ ವೇಷ ಭೂಷಣಗಳು ದೇಹಿಯನ್ನು ಅಪರಿಚಿತರಿಗೆ ಪರಿಚಯ ಮಾಡಿಕೊಡುವುವು. ವ್ಯಕ್ತಿಯ ನಿಷ್ಕೃಷ್ಟವಾದ ಪರಿಚಯದಿಂದ ರಾಜ್ಯದ ಪಂಚ ವಲಯಗಳಲ್ಲಿಯೂ ರಾಜನೀತಿಯು ಸುಗಮವಾಗಿ, ಹಿತವಾಗಿ ಶಾಂತಿ ಸಂಪದಭ್ಯುದಯಗಳನ್ನು ಸಾಧಿಸಬಹುದಾಗಿದೆ. ವರ್ಣ, ಅನುಷ್ಠಾನ, ಲಕ್ಷಣಾದಿಗಳನ್ನು ತಿಳಿಯದೆ ಇರುವ ಕಾರಣದಿಂದ ದೇಹಿಗಳ ಪಾತ್ರತೆ, ಸ್ಥಾನ ಮಾನಾದಿಗಳನ್ನು ಊಹಿಸಲು ಸಾಮಾನ್ಯರಿಗೆ ಕಷ್ಟವಾಗುತ್ತದೆ. ಈ ವಿಧವಾದ ಪರಿಚಯದಿಂದ ಮಿತಿ ಮೀರಿ ಅಥವಾ ಮಿತಿಯಿಂದ ಕೆಳಗೆ ವ್ಯವಹಾರಗಳು ನಡೆಯಲು ಅವಕಾಶವಾಗಿ ಶಾಂತಿ ಭಂಗ ಪರಿಸ್ಥಿತಿಯುಂಟಾಗುವುದು.

ದರ್ಶನಮಾತ್ರದಿಂದಲೇ ದೇಹಿಗಳ ಮಹಿಮೆ; ಸ್ಥಾನ, ಮಾನಗಳು ಪರಿಚಯವಾಗುವಂತೆ ಪ್ರಕಟಣೆಗೆ ಅವಕಾಶವಾಗಬಹುದಾದ ಮತ್ತು ಸಮಾಜಾದಿ ವಲಯಗಳಲ್ಲಿ ಆಚರಣೆಯಲ್ಲಿರುವ ವರ್ಣ ಸೂಚಕವೇಷಾದಿಗಳ ಧಾರಣೆಯು ಆವಶ್ಯಕ. ಇದರಿಂದ ಪವಿತ್ರವಾದ ಸಂಸ್ಕೃತಿಸಾಧನೆಗೆ ಸಹಾಯವಾಗುವುದು. ವರ್ಣದ ನಿಜರೂಪವನ್ನು ಮರೆಮಾಡಿ ಅನ್ಯಥಾ ಪ್ರದರ್ಶಿಸುವುದರಿಂದಲೂ ಆತ್ಮವಂಚನೆ, ದೇಶವಂಚನೆ ಮೊದಲಾದ ದುಷ್ಟ ಘಟನೆಗಳುಂಟಾಗಿ ಅವನತಿಗೆ ಕಾರಣವಾಗುವುದು. ದೇಶೀಯ ಪದ್ಧತಿಗಳೆಂದು ಹೇಳಲ್ಪಡುವ ವರ್ಣಸೂಚನೆಗಳನ್ನು ವಿದೇಶೀಯರೂ ಗೌರವಿಸಿ ಗೌರವಕ್ಕೆ ಪಾತ್ರರಾದರು.

ವಿವಿಧ ವಾತಾವರಣ, ವಾಯುಗುಣವುಳ್ಳ ಭಾರತ ದೇಶದಲ್ಲಿ ಏಕೈಕವಾದ ಧರ್ಮ, ಆಚಾರ, ಸಂಸ್ಕೃತಿ, ರಾಜನೀತಿ ಭಾವನೆಗಳಲ್ಲಿ ವಾಯುಗುಣಾನುಗುಣವಾದ ವರ್ಣ ಸೂಚನೆಗಳು ವಿವಿಧವಾಗಿರುವುವು. ದೇಶದ ಪರಿಸ್ಥಿತಿಯನ್ನು ಪರಿಗಣಿಸಿ ಯಶಸ್ಸಾಧನದಿಂದ ಪರಸ್ಪರಸಂತೋಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನಕವಾಗುವಂತೆ ವ್ಯಕ್ತಿ ಪರಿಚಯ ಮಾಡಿಕೊಂಡು ಮರ್ಯಾದೆ ಮಾಡಬೇಕಾಗಿರುವುದು. ದೇಶೀಯ ಪದ್ಧತಿಗಳನ್ನು ತಾತ್ಸಾರ ಮಾಡಿ ವಿದೇಶೀ ರೂಪಗಳನ್ನು ಧರಿಸಿದರೆ ಸಂಸ್ಕೃತಿ ಮನೋಭಾವಗಳು ವಿರೂಪವಾಗಿ ಅವನತಿಯನ್ನು ಹೊಂದುವುವು. ದೇಹಿಯೂ ಕೆಳಗಿನ ಮಟ್ಟಕ್ಕೆ ಇಳಿಯುವ ಸ್ಥಿತಿಯುಂಟಾಗುವುದು. ಆಯಾ ಸ್ವದೇಶೀ ಮನೋಭಾವ ಪ್ರೇಮವುಳ್ಳ ವಿದೇಶೀಯರೂ ಸಹ, ಅನ್ಯರ ವೇಷವನ್ನು ತಾಳಿರುವ ಜನಗಳನ್ನು ತಿರಸ್ಕರಿಸುವರಲ್ಲದೆ, ಪರೋಕ್ಷವಾಗಿ, ದೇಶೀಯರ ಉನ್ನತ ಸಂಸ್ಕಾರವು ವಿಕಾರವಾಗುವ ಸನ್ನಿವೇಶಗಳಿಂದ ತಮ್ಮ ಮೇಲ್ಮೆಗೆ ಅವಕಾಶವಾಗುವುದೆಂದು ಹರ್ಷಿಸುತ್ತಾರೆ.

ವರ್ಣ ಲಕ್ಷಣವು ಋಣಾನುಬಂಧ ರೀತ್ಯಾ ದೇಹಿಯೊಡಗೂಡಿರುವುದರಿಂದ ಸ್ವಾಭಾವಿಕವಾಗಿರುವುದು. ಮತ್ತು ದೇಹಿಯ ರೂಪು, ನಡೆ ನುಡಿಗಳಲ್ಲಿ ಅಭಿವ್ಯಕ್ತವಾಗುವುದು. ಉನ್ನತ ಮಟ್ಟದ ಜೀವನು ಋಣಾನುಭವದಿಂದ ವಿವಿಧ ದೇಹಗಳನ್ನು ವಿರುದ್ಧವಾಗಿರುವಂತೆ ಹೊಂದಿದರೂ ಉದಾತ್ತ ಭಾವವು ಆ ದೇಹದಲ್ಲಿಯೇ ಬೆಳಗುವುದು.

ಮುಖ, ನೋಟ, ನಡಿಗೆ ಮೊದಲಾದುವುಗಳಿಂದ ದೇಹಿಯ ವರ್ಣವು ಸ್ವತಃ ವ್ಯಕ್ತವಾಗುತ್ತದೆ. ತಿಳಿವಳಿಕೆ ಅನುಭವಗಳು ಸಾಲದೆ ಇರುವ ದೇಹಿಗಳಿಗೆ ಸಾಮಾನ್ಯವಾಗಿ ಇಂತಹ ಲಕ್ಷಣಜ್ಞಾನವಿರುವುದಿಲ್ಲ. ಶ್ರೋತ್ರಿಯಾದಿ ವರ್ಣ ಲಕ್ಷಣಗಳು ಸ್ವಾಭಾವಿಕವಾಗಿ ಒಂದು ಜನ್ಮದ ಶರೀರದಲ್ಲಿ ಹೊರಗಡೆ ಸುಖವಾಗಿ ಕ್ಲೇಶವಿಲ್ಲದೆ (ಅನಾಯಾಸವಾಗಿ) ತಿಳಿಯಬರುವಂತೆ ತಕ್ಕ - ಆಯಾ ಸಂಸ್ಕಾರದ ಚಿಹ್ನೆಗಳನ್ನು ಗೊತ್ತು ಮಾಡಿರುತ್ತಾರೆ. ಈ ಚಿಹ್ನೆಗಳ ಜ್ಞಾನದಿಂದ ಜೀವತತ್ವದ ವರ್ಣವನ್ನು ತಿಳಿಯಬಹುದಾಗಿದೆ.

'ಧರ್ಮಸ್ಯ ರಕ್ಷಾಧ್ವಜಃ' ಎಂಬಂತೆ ಬ್ರಾಹ್ಮಣಧರ್ಮವನ್ನೂ ಮತ್ತು ಬ್ರಾಹ್ಮಣಾಚಾರವನ್ನೂ ಸಾಂಪ್ರತವಾಗಿ ಕಲಿಸುವ ಬ್ರಾಹ್ಮಣ ಪ್ರಜೆಗಳು ಜ್ಯೋತಿ - ಅಗ್ನಿಯನ್ನು ಪೂಜಿಸಿ ರಕ್ಷೆಯನ್ನು ಭ್ರೂಮಧ್ಯದಲ್ಲಿ ಧರಿಸುತ್ತಾರೆ. ರಕ್ಷಾಚಿಹ್ನೆಯಿಂದ ಪ್ರಜೆಯು ಗೌರವಾರ್ಹವಾದ ಆರ್ಯ ಎಂಬ ಪ್ರಶಸ್ತಿಯು ಹೊರಹೊಮ್ಮಿ ಆನಂದ ಪ್ರಸಾರವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಹ್ಯ ಚಿಹ್ನೆಗಳೂ ವೇಷಗಳೂ ನಾಟಕದಲ್ಲಿ ಅಭಿನಯಿಸುವ ನಟ ನಟಿಯರು ಮಾಡುವಂತೆ ಕೇವಲ ಅನುಕರಣದಿಂದ ಲಬ್ಧವಾದರೆ ಜೀವಿಯ ವರ್ಣವನ್ನು ಮರೆ ಮಾಡುವುವು. ಇದರಿಂದ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಪ್ರಾದೇಶಿಕ, ರಾಷ್ಟ್ರೀಯವಾದ ಕಷ್ಟನಷ್ಟಗಳೂ ಲೋಪ ದೋಷಗಳೂ ಉಂಟಾಗುವುವು. ಇದನ್ನು ತಪ್ಪಿಸುವುದಕ್ಕಾಗಿಯೇ ಸರ್ವ ಧರ್ಮಾಂತರ್ಗತವಾದ ರಾಜನೀತಿಯು ರಾಜ್ಯದ ಪಂಚವಲಯಗಳಲ್ಲಿಯೂ ವರ್ಣ ವಿಕಾಸವಾಗುವಂತೆಯೂ ಜನ್ಮವೂ ಜೀವನವೂ ದೇಶವೂ ಶಾಂತಿಯ ನೆಲೆವೀಡಾಗುವಂತೆಯೂ ಮಾಡುವುದಕ್ಕೆ ದೀಕ್ಷೆಯನ್ನು ಧರಿಸಿರುವುದು. ರಾಜನೀತಿಯ ವ್ಯವಸ್ಥೆಯು ಕುಸಿದು ಹೋದಾಗಲೂ, ವಕ್ರವಾದಾಗಲೂ, ದಾರಿತಪ್ಪಿದಾಗಲೂ, ಹದಗೆಟ್ಟಾಗಲೂ ವ್ಯಕ್ತ್ಯಾದಿ ಪಂಚವಲಯಗಳಿಗೂ ಅಧೋಗತಿ ಪ್ರಾಪ್ತವಾಗುತ್ತದೆಂಬ ವಿಚಾರವು ಕರತಲಾಮಲಕವಾಗಿ ಅನುಭವಸಿದ್ಧವಾಗಿರುತ್ತದೆ.

ವರ್ಣ ವೈರೂಪ್ಯ

ಹೆಸರು ಮತ್ತು ಬಾಹ್ಯವೇಷ ಚಿಹ್ನೆಗಳಿಂದ ವರ್ಣವನ್ನು ಹೊರಗೆ ಸೂಚಿಸುವ ದೇಹಿಯು ತದ್ವರ್ಣಕ್ಕೆ ಸಂಬಂಧಿಸಿದ ಗುಣಕರ್ಮಶಕ್ತಿಗಳನ್ನಾಗಲೀ ಅವುಗಳಿಗೆ ಅರ್ಹತೆಯನ್ನಾಗಲೀ ಹೊಂದದೆ ಇರಬಹುದು. ಋಣಾನುಬಂಧ – ಅನುಭವಗಳಿಗೆ ತಕ್ಕ ಅನೇಕ ಬಗೆಯ ದ್ವಿಜಸಂಸ್ಕಾರಗಳನ್ನು ಶಾಸ್ತ್ರೀಯವಾಗಿಯೂ ಕಾರ್ಯರೂಪವಾಗಿಯೂ ಪಡೆಯುವ ಸಾಮರ್ಥ್ಯ ಮತ್ತು ಅರ್ಹತೆಯುಳ್ಳ ದೇಹಗಳು ಸಂಸ್ಕಾರಾನುಗುಣವಾಗಿ ಗುಣಶಕ್ತಿಕರ್ಮಗಳಲ್ಲಿ ಆಸಕ್ತರಾಗಿದ್ದರೂ ಅವರ ಹೆಸರು ಮತ್ತು ಬಾಹ್ಯಚಿಹ್ನೆ-ವೇಷ ಇತ್ಯಾದಿಗಳು ಜೀವನದಲ್ಲಿ ಹೊಂದಿ ಹೆಣೆದುಕೊಂಡಿರುವ ಸಂಸ್ಕಾರ ಕಾರ್ಯನಿರ್ವಾಹಗಳಿಗೆ ವಿರೋಧವಾಗಿಯೂ ಪ್ರತ್ಯೇಕವಾಗಿಯೂ ಇರುವಂತೆ ತೋರಿರಬಹುದು. ಬಾಹ್ಯಚಿಹ್ನೆಗಳು ಸೂಚಿಸುವ ಗುಣಶಕ್ತಿಕರ್ಮಗಳು ವ್ಯಕ್ತಿಯಿಂದ ತ್ಯಕ್ತವಾಗಿರುವುದೂ, ಸ್ವತಃ ಅಭ್ಯಾಸದಲ್ಲಿರುವ ಗುಣಶಕ್ತಿಕರ್ಮಗಳು ಹೊರಗೆ ಸೂಚಿಸಲ್ಪಡದಿರುವುದೂ ಅಭ್ಯಾಸದ ಗುಣ ಶಕ್ತಿ ಕರ್ಮಗಳು ಸೂಚಿತವಾದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕಿಂತ ಬೇರೆಯಾಗಿರುವ ಗುಣಶಕ್ತಿಕರ್ಮಗಳು ವಸ್ತುತಃ ದೇಹಿಯಲ್ಲಿ ಅಡಗಿರುವಂತೆ ಕಾಣುವುದೂ ವರ್ಣ ವಿರೂಪಗಳೆನಿಸುವುವು.

ವರ್ಣಸಾಮಾನ್ಯ ಮುಖ್ಯಲಕ್ಷಣ; ಬಾಹ್ಯಾಲಂಕಾರ

ಬ್ರಾಹ್ಮಣಧರ್ಮದಲ್ಲಿ ಶ್ರೋತ್ರಿಯಾದಿ ಪಂಚ ವರ್ಣಗಳೂ ಗುಣ ಶಕ್ತಿಕರ್ಮಗಳಿಗೆ ಅನುಬದ್ಧನಾಗಿರುವುದು ಸ್ಪಷ್ಟವಾಗಿದೆ. ಇಚ್ಛಾ, ಸಂಕಲ್ಪ-ಋಣಗಳೆಂಬ ಶಕ್ತಿಯಿಂದ ಪ್ರಪಂಚದ ಕಲನಗಳು ನಿರ್ವಾಹ ವಾಗುವುವು. ಸರ್ವಾಧಾರವಾದ ಶಕ್ತಿಯು ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಪೂರ್ಣವಾಗಿ ವ್ಯಾಪಿಸಿಕೊಂಡಿರುವುದು; ಮತ್ತು ಯೋಗಶಾಸ್ತ್ರರೀತ್ಯಾ ಯೋಗಿ ಹೃದ್ಗೋಚರವಾಗಿ ಶರೀರದಲ್ಲಿರುವ, ನರಮಂಡಲಕ್ಕೆ ಮೂಲ ವಾಗಿರುವ ಕುಂಡಲಿನಿಯು ಸೃಷ್ಟಿಸಾರಭೂತವಾಗಿದೆ. ಇದರ ಪ್ರಭಾವ ದಿಂದ ಪಿಂಡಾಂಡಗಳಲ್ಲಿಯೂ ಬ್ರಹ್ಮಾಂಡದಲ್ಲಿಯೂ ಸೃಷ್ಟಿಸ್ಥಿತಿಲಯಗಳು ನಡೆಯುವುವು.

ಪ್ರಪಂಚವನ್ನೆಲ್ಲಾ ಆವರಿಸಿ ಬಳಸಿ "ನೀಲತೋಯದ ಮಧ್ಯ-ಸ್ಥಾತ್ ವಿದ್ಯುಲ್ಲೇಖೇವ ಭಾಸ್ವರಾ" ಎಂದು ವೇದದಲ್ಲಿ ವರ್ಣಿಸಿರುವ ಕುಂಡಲಿನಿಯೇ ಸರ್ವ ವಿಶ್ವಾಧಾರವು.

ಕುಂಡಲಿನೀ ಶಕ್ತಿಯು ಸದಾ ಸ್ಮೃತಿಪಥಕ್ಕೆ ಬರುವಂತೆಯೂ ಶಕ್ತಿಯನ್ನು ರೂಢಿಸಿ ಪರಿಣಾಮಕಾರಿಯಾಗಲು ಪ್ರವರ್ತಿಸುವಂತೆಯೂ ಉತ್ತೇಜನಗೊಳಿಸಲು ಕುಂಡಲಿನೀ ಶಕ್ತಿವಾಹಕ ನರಗಳ ಬಿಂಬ ಪ್ರತಿ ಬಿಂಬದಂತೆ ಶರೀರದ ಹೊರಗೆ ಅದನ್ನು ಧರಿಸುತ್ತಾರೆ. ಬ್ರಾಹ್ಮಣಧರ್ಮ-ಬ್ರಾಹ್ಮಣಾಚಾರ ನಿಯಮಗಳನ್ನು ಪರಿಪಾಲಿಸುವವರ ದೃಷ್ಟಿಗೆ ಸರ್ವದಾ ಬೀಳುವುದಕ್ಕೆ ಅನುಕೂಲವಾಗಿರುವಂತೆಯೂ ತಂತುಗಳ ಸೂತ್ರವನ್ನು ರಚಿಸಿ, ಆತ್ಮ, ಮನಸ್ಸು ಇವುಗಳ ಸಂಸ್ಕಾರಕ್ಕೆ ಅಳವಡಿಸಿ ಉಚಿತವಾದ ಸಂಸ್ಕೃತವಾದ ತಂತುಗಳನ್ನು ಧರಿಸುತ್ತಾರೆ.

ಕುಂಡಲಿನೀ ಸಂಕೇತ ಸೂಚಕವಾದ ಪವಿತ್ರಸೂತ್ರವು ಶರೀರದಲ್ಲಿ ಆಯಾ ವರ್ಣಮಿತಿಯ ಮಟ್ಟದ ಸಂಸ್ಕಾರಕ್ರಮದಲ್ಲಿ ಧರಿಸಲ್ಪಡಬೇಕು. ಬ್ರಾಹ್ಮಣ ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳ ಮೂಲಕ ವಿಷಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನೂ ರಹಸ್ಯವನ್ನೂ ಸಾಕ್ಷಾತ್ಕರಿಸಿಕೊಂಡ ಋಷಿಗಳು ಅನುಭವವನ್ನು ವಿವರಿಸಿರುವಂತೆ ಜೀವನ ಯಜ್ಞಕಾರ್ಯಕ್ಕೆ, ಕಾರ್ಯನಿರ್ವಾಹಕ್ಕೆ ಆಯಾ ವಿತ್ತಿಗನುಗುಣವಾಗಿ ದ್ವಿಜಸಂಸ್ಕಾರವೆಂಬ ತತ್ತದ್ಗುರುಕುಲ ವಿಹಿತ ಸಂಸ್ಕಾರಗಳು ನಡೆಯಬೇಕು.

ಶ್ರೋತ್ರಿಯಾದಿ ಪಂಚವರ್ಣಸೂಚಕವಾದ ಪವಿತ್ರ ಸೂತ್ರ ಮತ್ತು ಸೂತ್ರ ಧಾರಣೆಗಳ ವಿವರವನ್ನೂ ರಹಸ್ಯವನ್ನೂ ಭೇದಿಸಿ ತಿಳಿಯಬೇಕು. ಶ್ರೋತ್ರಿಯ ಕ್ಷತ್ರಿಯ ವೈಶ್ಯಗಳು ವೇದಾಧ್ಯಯನ ದ್ವಿಜದ ಪರಿಮಿತಿಯಲ್ಲಿ ಬಂದು ತತ್ತದುಚಿತ ಪವಿತ್ರ ಸೂತ್ರಧಾರಣೆಯ ಸಂಸ್ಕಾರಗಳನ್ನು ಮನ್ನಿಸುವುವು. ವೇದೋಕ್ತ ಜೀವನ ಯಜ್ಞಕಾರ್ಯವನ್ನು ವಿಧಿವತ್ತಾಗಿ ನೆರವೇರಿಸಲು ವೇದೋಕ್ತ ಸೂತ್ರಧಾರಣೆಯ ಪೂರ್ವಕ ಸ್ವಕರ್ಮಾನುಷ್ಠಾನಕ್ಕೆ ವರ್ಣಕಾರ್ಯ ಶಿಕ್ಷಣೋಪನಯನ ಸಂಸ್ಕಾರವನ್ನು ಹೊಂದಬೇಕು.

ವರ್ಣ ಯಜ್ಞ ಸೂತ್ರ

ಕುಂಡಲಿನೀ ಪ್ರತಿಬಿಂಬ ತಂತುಗಳೇ ಯಜ್ಞೋಪವೀತ ಯಜ್ಞ ಸೂತ್ರಗಳೆನಿಸುವುವು. ಕುಂಡಲಿನಿಯ ಅಗ್ರವು ಬ್ರಹ್ಮರಂಧ್ರವೆಂದೂ ಇದರ ಸೂಚಕವಾಗಿ 'ಶಿಖಾ' ಅಥವಾ ಚೂಡಾಮಣಿಯಾಗಿರುವುದೆಂದೂ ಸಂಸ್ಕಾರ ವಿವರಣೆಯಲ್ಲಿ ಗೊತ್ತಾಗಿದೆ.

ಯಜ್ಞೋಪವೀತ ಧಾರಣೆ ಎಂಬ ಪ್ರಮಾಣ ಪೂರ್ವಕವಾದ ಸಂಸ್ಕಾರದಿಂದ ತಪಃ ಕ್ಲೇಶಾದಿಗಳನ್ನು ಆಹ್ವಾನಿಸಿ ಸ್ವಾಗತಿಸಿ ಆಚರಿಸುವ ಬಂಧನ - ಋಣವು (commitment) ಶ್ರೋತ್ರಿಯಾದಿಗಳಿಗೆಲ್ಲಾ ಸಂಬಂಧಿಸಲ್ಪಟ್ಟಿರುವುದು. ಸ್ತ್ರೀಯರಿಗೂ, ಮಕ್ಕಳಿಗೂ ಸಹ ಆಯಾ ವಯೋನುಗುಣವಾಗಿ ಸಂಸ್ಕಾರಗಳು ಉಕ್ತವಾಗಿರುವುವು. ಸ್ತ್ರೀಯರ ಯಜ್ಞಸೂತ್ರವೂ ತದುಚಿತ ಪಾರಿಭಾಷಿಕ ನಾಮಧೇಯವನ್ನು ಹೊಂದಿರುವುದು.

ಆಭರಣ, ವಸ್ತ್ರಧಾರಣೆ ಕ್ರಮವಾಗಲೀ, ಆರೋಗ್ಯಶಾಸ್ತ್ರ ರೀತ್ಯಾ ಸ್ನಾನಕ್ಕೆ ಪೂರ್ವ ಮತ್ತು ಸ್ನಾನಾನಂತರ ಆವಶ್ಯಕವಾಗಿ ಧರಿಸಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಸರಿಸುವ ವಸ್ತುಗಳಾಗಲೀ ವರ್ಣ ಪ್ರಕಾಶನಗಳೇ ಆಗಿರುತ್ತವೆ. (ತಪಸ್ಸಂಗ್ರಾಮ ಕವಚಂ ಇತ್ಯಾದಿ ಪು. 12 ಸಾಲು 25)

ಆದುದಾ ವಿಶೇಷ ಹೊಣೆಗಾರಿಕೆಯ ನಿರ್ವಾಹವೆಂಬ ತಪೋಧನವನ್ನು ಗಳಿಸಿ, ಪ್ರಪಂಚದ ಯೋಗಕ್ಷೇಮವನ್ನೇ ಚಿಂತಿಸಿ, ಪ್ರಾಪಂಚಿಕವಾದ ಇಂದ್ರಿಯ ಭೋಗಗಳನ್ನು ಸಂಯಮದ ಮಿತಿಗೆ ಗುರಿಮಾಡಿ, ಪಶುವರ್ಗಕ್ಕಿಂತ ಮೇಲಿನ ಹಂತದಲ್ಲಿರುವುದನ್ನು ಸೂಚಿಸುವ ಸಂಕೇತವನ್ನು ಸದಾ ಧರಿಸುವುದು ಮಾನವ ವರ್ಣಕ್ಕೆ ಉತ್ತಮಗುಣವಾಗಿದೆ. ಈ ಸಂಕೇತವಾದ ಯಜ್ಞೋಪವೀತ ಮೊದಲಾದುವುಗಳೂ ಗುರು ಪಾದುಕಾ ಸಂಕೇತವಾದ ಶಿಖಾದಿಗಳೂ ಮಿತಿಯನ್ನು ದಾಟದೆ-ವಾ-ಮಿತಿಯಿಂದ ಜಾರದೆ ಇರುವುದಕ್ಕೂ ಉಚ್ಛೃಂಖಲ ಪ್ರವರ್ತನೆಯನ್ನು ಎದುರಿಸಿ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೂ ಸಾಮಾನ್ಯ ಜೀವನ ಸಹಜ ಜೀವನ (ಪ್ಲೇನ್ ಲಿವಿಂಗ್) ಮತ್ತು ಬುದ್ಧಿಕುಶಲತೆ ವ್ಯಾಪಾರ (ಹೈ ಥಿಂಕಿಂಗ್ –ಜ್ಞಾನಯೋಗ) ಗಳನ್ನು ಸರ್ವದಾ ಜ್ಞಾಪಿಸಿ, ರಕ್ಷಿಸಿ ಯೋಗಕ್ಷೇಮಸಾಧನೆ ಮಾಡುವುದಕ್ಕೆ ಶರೀರದ ಮೇಲೆ ಏರಿ ಸದಾ ಸನ್ನಿಹಿತವಾಗಿರುವ ಮಿತ್ರರಂತಿರುವುವು.

ವಿಶೇಷ ಹೊಣೆಗಾರಿಕೆಯನ್ನು ಹೊತ್ತ 'ಮೊದಲಿಯರ್' ಮೊದಲಾದ ಗುಂಪುಗಳಲ್ಲಿ ಶ್ರಾದ್ಧಾದಿಗಳನ್ನು ನಡೆಸುವಾಗಲೂ ವಿವಾಹಾದಿಗಳ ಕಾಲದಲ್ಲಿಯೂ ಯಜ್ಞೋಪವೀತವನ್ನು ಧರಿಸುವ ವಿಚಾರವನ್ನು ಪುರೋಹಿತರೆಲ್ಲರೂ ಪ್ರಮಾಣೀಕರಿಸಿರುತ್ತಾರೆ.

ಸನ್ನಿವೇಶ ಪರಿಸ್ಥಿತಿಗಳ ದುಃಸ್ಥಿತಿಗಳಿಂದ, ಯಜ್ಞೋಪವೀತ ಧಾರಣೆಯು ಶ್ರೇಯಸ್ಸಾಧನವೆಂದು ತಿಳಿಯಲಾಗದೆ ಕೇವಲ ಬಂಧನವೆಂದು ಭಾವಿಸಿ, ಅನಿವಾರಣಿಯವಾದ ಸಂಸ್ಕಾರ ವಿಶೇಷಗಳಾಗಿರುವುದರಿಂದ ಆವುಗಳನ್ನೂ ಜೀವಾವಧಿ ತ್ಯಜಿಸಲಾರದೆ ವೇದೋಕ್ತ-ಕಲ್ಪೋಕ್ತ-ಕರ್ಮ ಸಮಯಗಳಲ್ಲಿ ಮಾತ್ರ ಧರಿಸಿ ಅನಂತರ ವಿಸರ್ಜನೆ ಮಾಡುವ ಘಟನೆಯು ಬಳಕೆಗೆ ಬಂದುಹೋಗಿದೆ. ಸುಖವನ್ನು ಮಾತ್ರ ಅಪೇಕ್ಷಿಸಿ ಸುಖಪ್ರಾಪಕ ಹೊಣೆಗಾರಿಕೆ-ಬಾಧ್ಯತೆಗಳನ್ನು ಹೊರಲೊಲ್ಲದೆ ಇರುವಂತೆ ಅನುಷ್ಠಾನವೈರೂಪ್ಯವನ್ನು ಹೊಂದುವ ಹೊಣೆಗಾರಿಕೆಯ ಪ್ರಜಾಂಗಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕೃತಿಯ ಅವನತಿಗೆ ಹೊಣೆಯಾಗಿರುವುವು.

ವಿದೇಶಗಳಲ್ಲಿಯೂ, ಪರಮತಗಳಲ್ಲಿಯೂ ಸಹ ವಿವಿಧವಾದ ಸಂಸ್ಕಾರಗಳು ತತ್ತನ್ಮನೋನುಗುಣವಾಗಿ ದೇಶೋಚಿತವಾಗಿ ವಾಯು ಗುಣೋಚಿತವಾಗಿ ಇರುವುವು - ಎಂಬುದನ್ನು ತಿಳಿದು ವಿಶ್ವವ್ಯಾಪಕ ವಾಗಿರುವ ವರ್ಣ ಸಂಸ್ಕಾರದ ಮಹಿಮೆಯನ್ನು ಮನಸ್ಸಿಗೆ ತಂದುಕೊಳ್ಳ ಬೇಕಾಗಿದೆ

ಬ್ರಾಹ್ಮಣ ಸಂಸ್ಕೃತಿಯನ್ನು ಅರಿಯದೇನೆ ಅದನ್ನು ಟೀಕಿಸಲು ರಾಜಕೀಯ ಬೆಂಬಲದಿಂದ ಕೊಬ್ಬಿ,

Nations are liable to these epidemics in their youth and in their dotage. These works deserve to be studied as the physician studies the twaddle of idiots and the ravings of mad men

ಎಂದು ಪುಟ 100 ರಲ್ಲಿ 'ಏನ್ಶಿಯಂಟ್ ಸಂಸ್ಕೃತ ಲಿಟರೇಚರ್' ಎಂಬ ಪುಸ್ತಕದಲ್ಲಿ ಮ್ಯಾಕ್ಸ್ ಮುಲ್ಲರ್ ಬರೆದಿದ್ದಾನೆ.

ಬ್ರಾಹ್ಮೀ ಸಂಸ್ಕೃತಿ ಎಂದರೆ ಏನು ? ಎಂದು ತಿಳಿಯದ, ಮತ್ತು ಪಾಶ್ಚಾತ್ಯ ಗ್ರಂಥಗಳನ್ನವಲಂಬಿಸಿ ಅವುಗಳ ಮೂಲಕ ವಿದೇಶೀ ಬಣ್ಣದ ಸುಲೋಚನದಿಂದ ಅನಧಿಕೃತರು ಬರೆದಿರುವ ವಿಷಯವನ್ನು ಓದಿದ ಭಾರತೀಯ ಮಖಂಡರಾದ ಡಾ|| ಬಿ. ಆರ್. ಅಂಬೇಡಕರರು Who were Sudras ? ಎಂಬ ಗ್ರಂಥದಲ್ಲಿ ಪ್ರಕಾಶಪಡಿಸಿರುವ ವಿಷಯಗಳು 'grapes are sour' ಎಂಬ ವಿಫಲಗೊಂಡ ನರಿಯ ಅನುಭವವನ್ನೇ ಹೇಳುವುವಲ್ಲದೆ ಮಿಥ್ಯಾಪ್ರಚಲಿತವಾದ ಆ ವಿಷಯಗಳೇ ಆ ಲೇಖಕರನ್ನು ಪ್ರತಿಭಟಿಸಿ ಕಳಂಕವನ್ನುಂಟು ಮಾಡುವುವು ಎಂದು ಹೇಳಬೇಕಾಗುತ್ತದೆ.

ವರ್ಣ ಸಂಕರ

ವರ್ಣಸಂಕರ ಅಂದರೆ ವರ್ಣಗಳ ಮಿಶ್ರಣವು ಅನಿಷ್ಟಸೂಚಕ ವೆಂಬ ಅರ್ಥದಲ್ಲಿ ರೂಢಿಯಲ್ಲಿರುವುದು. ಇದರ ಸೂಕ್ಷ್ಮವಾದ ರಹಸ್ಯ ವನ್ನು ತಿಳಿಯಲಾರದೆ ಔದಾಸೀನ್ಯದಿಂದ ಒಂದು ವಿಧವಾದ ದುರ್ಭಾವನೆ ಯನ್ನು ಹೊಂದಿ ನಿರಾಶಾವಾದವನ್ನು ಮುಂದಿಡುತ್ತಾರೆ. ವರ್ಣಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್ಲೆಯನ್ನು ಮೀರಿ ಹೋಗುವ ಸೀಮೋಲ್ಲಂಘನವು ಸಂಕರವಾಗಲಾರದು. ವರ್ಣಗಳು ಉಚಿತ ಪ್ರಮಾಣದಲ್ಲಿ ಸೇರಿದ ಹೊರತು ವರ್ಣವ್ಯಾಪಾರವಾಗಲೀ ಪ್ರಪಂಚದ ಸ್ಥಿತಿಗತಿಗಳಾಗಲೀ ನಡೆಯಲಾರವು.

'ಸ್ತ್ರೀಷು ದುಷ್ಟಾಸು, ಜಾಯತೇ ವರ್ಣಸಂಕರಃ' ಎಂಬುದು ಭಗವದ್ಗೀತೆಯಲ್ಲಿ ಉಕ್ತವಾಗಿದೆ ಎಂದ ಮಾತ್ರಕ್ಕೆ ವಿಮರ್ಶೆಗೆ ದೂರವೆಂದು ಭಾವಿಸಬೇಕಾಗಿಲ್ಲ. ವರ್ಣ ಸಂಕರ ದೂಷಿತಗಳಾದ ಸ್ತ್ರೀ ಗುಣಕರ್ಮಶಕ್ತಿಗಳೇ ಅನುಭವದ ಉಕ್ತಿಯ ಕಾರಣ. ಅರ್ಜುನನು ಸಂಶಯಾತ್ಮಕನಾಗಿ ವಿಷಾದದಿಂದ ಆಚಾರ್ಯರ ಮುಂದಿಟ್ಟ ಒಂದು ಸಮಸ್ಯೆ. ಸ್ತ್ರೀಷು ದುಷ್ಟಾಸು ಎಂಬುದು ಸ್ತ್ರೀಯರು ದೂಷಿತರಾದಾಗ ಎಂಬ ಅರ್ಥವನ್ನು ಕೊಡುವುದು. ಸ್ವತಃ ಸ್ತ್ರೀಯರು ದುಷ್ಟರಾಗಲಾರರು; ವರ್ಣಸಂಕರವೂ ಆಗಲಾರದು. ಕ್ಷೇತ್ರ ಬೀಜಗಳ ಸಮಾಗಮಕ್ಕೂ ಜಾತನ ಜನನಕ್ಕೂ ಅವರವರ ಇಚ್ಛಾ ಸಂಕಲ್ಪ ಋಣಗಳೇ ಕಾರಣವಾದುದರಿಂದ ಸರ್ವಶಕ್ತನಾದ 'ಆತ್ಮನು' ಪ್ರಕೃತಿಯ ಪರಿಮಿತಿ – ಲೀಲೆಗಳ ಪರಿಮಿತಿಯಲ್ಲಿ ಸಂಕಲ್ಪ ಮಾಡುವುದರಿಂದ ಋಣವಾಗಿ ಪರಿಣಮಿಸಿ ಯಾವ ಉಪಾಧಿಯಿಂದ ಯಾವ ಸಂಕಲ್ಪವು ಯಾವಾಗ? ಎಲ್ಲಿ? ಹೇಗೆ? ಪೂರೈಕೆಯಾಗಬೇಕೋ ಅದಕ್ಕೆ ತಕ್ಕ ಸನ್ನಿವೇಶಗಳನ್ನು ಶ್ರದ್ಧಾಭಕ್ತಿ ಪೂರಿತಳೂ ಪುರುಷ ಸೇವಾತತ್ಪರಳೂ ಆದ ಪ್ರಕೃತಿಯು ಒದಗಿಸುವಳು.

ಪುರುಷ-ಬ್ರಹ್ಮ-ಮಯ ಪ್ರಪಂಚದಲ್ಲಿ ಚೇತನಾಚೇತನ ವಸ್ತುಗಳಲ್ಲೆಲ್ಲಾ ಶಾಶ್ವತನಾದ ಪುರುಷನು–ಆತ್ಮನು ಕ್ಷರವಾದ ಪ್ರಕೃತಿಯ ಗುಣಕರ್ಮಶಕ್ತಿಗಳಿಗೆಲ್ಲಾ ಸಾಕ್ಷಿಯಾಗಿಯೂ, ಅವುಗಳ ಫಲಗಳನ್ನು ಅನುಭವಿಸುವವನಾಗಿಯೂ ಇರುವನು. ಜಗತ್ತಿನಲ್ಲಿ ಪುರುಷ ವ್ಯಕ್ತಿಗಳಲ್ಲಿ ಗುಣಕರ್ಮಶಕ್ತಿಗಳೆಂಬ ಸ್ತ್ರೀತ್ವವು ಎದ್ದು ಕಾಣುವುದು. ಗುಣಕರ್ಮಶಕ್ತಿಗಳೇ ಸ್ತ್ರೀ ಆಗಿರುವುದು. ಆದುದರಿಂದ ಲೈಂಗಿಕವಾಗಿಯೂ ವ್ಯಾವಹಾರಿಕವಾಗಿಯೂ ಹೇಳಲ್ಪಡುವ ಸ್ತ್ರೀ ವ್ಯಕ್ತಿಯು ದುಷ್ಟವೆಂತಲೂ ಪುರುಷ ವ್ಯಕ್ತಿಯು ಸಾಧುವೆಂತಲೂ ಹೇಳಲಾಗದು. ಪುರುಷವ್ಯಕ್ತಿಯಲ್ಲಾಗಲೀ ಸ್ತ್ರೀ ವ್ಯಕ್ತಿಯಲ್ಲಾಗಲೀ ಗುಣಕರ್ಮಶಕ್ತಿಗಳೆಂಬ ಸ್ತ್ರೀತ್ವವು "ಪುರುಷ"ಗಳನ್ನು ಬಳಸಿರುವುದು. ಸ್ತ್ರೀ ಮತ್ತು ಪುರುಷ ವ್ಯಕ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿರುವ ಗುಣಕರ್ಮಶಕ್ತಿಗಳಾದ ಸ್ತ್ರೀಯು ಮಿತಿಯನ್ನು ಮೀರಿ ಅಥವಾ ಮಿತಿಯಿಂದ ಜಾರಿದಾಗ ವರ್ಣಗುಣಕರ್ಮಶಕ್ತಿಗಳು ಅಸ್ತವ್ಯಸ್ತ ವಾಗಿ ವರ್ಣ ಸಂಕರದ ದುಷ್ಟ ಪರಿಣಾಮಗಳು ಕಾಣಿಸಿಕೊಳ್ಳುವುವು.

ಪಿಂಡಾಂಡ (ಶರೀರ) ಗಳಲ್ಲಿ ಸ್ತ್ರೀ ಎನಿಸುವ ಗುಣಕರ್ಮಶಕ್ತಿಗಳ ದುಷ್ಟ ವ್ಯಾಪಾರಗಳಿಂದ ಆರೋಗ್ಯವು ಕೆಟ್ಟು ದೇಹವು ಸುಖದಿಂದ ದೂರೀಕೃತವಾಗುವುದು. ಇಂದ್ರಿಯಗಳೂ ಅವಯವಗಳೂ ಮನಸ್ಸೂ ಇವುಗಳಿಗೆ ಸಂಬಂಧಿಸಿದ ಶ್ರೋತ್ರಿಯಾದಿ ಪಂಚವರ್ಣ ಗುಣಕರ್ಮ ಶಕ್ತಿಗಳ ಸಾಧು (ಸಮ) ವ್ಯಾಪಾರದಿಂದ ಶರೀರವು ಸುಖಾಶ್ರಯವಾಗು ವುದು. ಆರೋಗ್ಯವೇ ಬ್ರಹ್ಮ, ಆನಂದ. ಆ ವ್ಯಾಪಾರಗಳು ದುಷ್ಟ ವಾದರೆ ವರ್ಣ ಸಂಕರವಾಗಿ ಶರೀರಕ್ಕೆ ಬಾಧೆ ನಷ್ಟಗಳುಂಟಾಗುವುವಲ್ಲದೆ ಬಾಹ್ಯ ಪ್ರಪಂಚವನ್ನೂ ಕೆಡಿಸಿ, ಪಂಚಭೂತಗಳು ಸೃಷ್ಟಿಸ್ಥಿತಿಲಯ ಗಳನ್ನು ಸುವ್ಯವಸ್ಥೆಗೊಳಿಸದಂತೆ ತಡೆಮಾಡುವುವು. ಋಜುಮಾರ್ಗದಲ್ಲಿ ವಿನಿಯೋಗವಾಗುವ ಶ್ರೋತ್ರಿಯಾದಿ ವರ್ಣಗುಣಕರ್ಮಶಕ್ತಿಗಳು ಬಾಹ್ಯ ಪ್ರಪಂಚದ, ಬ್ರಹ್ಮಾಂಡದ ಪಂಚಭೂತ ವ್ಯಾಪಾರಗಳನ್ನು ಸುವ್ಯವಸ್ಥೆ ಗೊಳಿಸಿ ಕಾಲಕಾಲಕ್ಕೆ ಮಳೆ, ಬೆಳೆಗಳು ಆಗುವುದಕ್ಕೆ ಪ್ರೋತ್ಸಾಹಕರ ವಾಗುವುವು – ಎಂಬ ವಿವೇಚನೆಯಿಂದ ತಿಳಿಯಬೇಕಾದ ಕರ್ತವ್ಯವನ್ನು ಮರೆತು ದೂಷಿತಗಳಾದ 'ಸ್ತ್ರೀ' ಎಂಬ ಗುಣಕರ್ಮಶಕ್ತಿಗಳಿಗೆ ಪುರುಷರೂ ಸ್ತ್ರೀಯರೂ ವಶರಾದಾಗ ವರ್ಣಸಂಕರವಾಗಿ ವಿಶ್ವದಲ್ಲಿ ಪಿಂಡಾಂಡ ಬ್ರಹ್ಮಾಂಡ ವ್ಯಾಪಾರಗಳು ದುಃಖಕರವಾಗುವುವು. ಯಂತ್ರಗಾರಿಕೆ ಎಂಬ ಮಕ್ಕಳಾಟದ ವ್ಯಾಪಾರಗಳಿಂದ ಗುಣಕರ್ಮಶಕ್ತಿಗಳೆಂಬ ಸ್ತ್ರೀಯ ನ್ನು ಜನತೆಯು ಕೆಡಿಸಿದಾಗ ಜೀವನಕ್ಕೆ ಅತ್ಯವಶ್ಯಕವೆಂದು ಪ್ರಕೃತಿಯು ಸೃಷ್ಟಿಸಿದ ವಸ್ತುಗಳನ್ನು ಸಹಜವಾಗಿ ಉಪಯೋಗಿಸಲಾಗುವುದಿಲ್ಲ. ಮತ್ತು ಮೋಹದ ಕಗ್ಗತ್ತಲೆಯಲ್ಲಿ ಅವುಗಳನ್ನು ಯಂತ್ರಗಳಿಂದ ಸತ್ವಹೀನ ಗಳನ್ನಾಗಿ ಮಾಡಿದರೆ ಸಾರ್ವತ್ರಿಕವಾಗಿ, ಸಾರ್ವಜನಿಕವಾಗಿ ಅಂತಹ ಉತ್ತಮವಾದ ಸಹಜವಾದ ಸಂಜೀವನಗಳು ದೊರೆಯದಂತಾಗುವುದು ಮತ್ತು ಇದರಿಂದ ಪ್ರಜೆಗಳ ಜೀವನ ಮತ್ತು ಸಂಸ್ಕೃತಿಗಳು ಕುಂಠಿತ ವಾಗುವುವು ಪ್ರಜಾತ್ವವಾಗಲೀ ಪ್ರಭುತ್ವವಾಗಲೀ ಪರಸ್ಪರ ಭಿನ್ನವೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂರೀಕರಿಸಿ ತಿರಸ್ಕರಿಸಿದಾಗಲೂ ವರ್ಣಸಂಕರವಾಗುವುದು.

ಈ ಪ್ರಕಾರವಾಗಿ ಶ್ರೋತ್ರಿಯಾದಿ ವರ್ಣ ಗುಣಕರ್ಮಶಕ್ತಿಗಳೆಂಬ ಸ್ತ್ರೀಯಿಂದ ದುಷ್ಟವಾಗುವ ಭೂಗರ್ಭ, ಭೂಮಿ, ಜಲಾಶಯ, ವಾಯು ಮಂಡಲಗಳೂ ತದ್ವ್ಯಾಪಾರಗಳೂ ಕಲುಷಿತವಾಗಿ ವರ್ಣಸಂಕರವಾಗಿ ಆಸುರೀವೃತ್ತಿಯನ್ನು ಜನತೆಯಲ್ಲಿ ಹರಡಿ ದುಷ್ಟ ಪರಿಣಾಮವನ್ನು ಉಂಟುಮಾಡುವುವು.

ಆದಕ್ಕಾಗಿಯೇ ಆಪಸ್ತಂಬರು ಅಪ್ರಮತ್ತಾಃ ರಕ್ಷಥ ತಂತುಮೇತಂ ಇತ್ಯಾದಿ ಎಚ್ಚರಿಕೆಗಳನ್ನು ಸೂಚಿಸಿರುತ್ತಾರೆ. (ಆ. ಧ. ಸೂ. ಮಂಜರೀ ಪುಟ 35)

ಸ್ತ್ರೀಯರು ದಾರಿತಪ್ಪಿಹೋದರೆಂದು ಕಂಡುಬರುವುದಕ್ಕೂ ದಾರಿ ತಪ್ಪಿಹೋಗಿರುವ ಪುರುಷರೂ ಮತ್ತು ಸನ್ನಿವೇಶ ಪರಿಸ್ಥಿತಿಗಳೂ ಕಾರಣ. ಯಾವ ವಿಧವಾದ ಹಿಂದಿನ ಋಣಾನುಬಂಧದ ಪ್ರಾಬಲ್ಯವು ಇಲ್ಲದೇ ಇದ್ದರೂ, ತಾತ್ಕಾಲಿಕವಾಗಿ ಋಣ ಬಂಧನಕ್ಕೆ ಅವಕಾಶವಾಗಲು ಪ್ರಕೃತಿ ಯಲ್ಲಿ ಶಕ್ತಿತ್ರಯ ವ್ಯಾಪಾರಗಳೇ ಕಾರಣವು. ಶುದ್ಧವಾದ ಹಾಲು ಒಡೆದುಹೋಗಬೇಕಾದರೆ ಹಾಲು ಸ್ವತಃ ಕಾರಣವಾಗುವುದಿಲ್ಲ. ವಿಜಾತೀ ಯಗಳಾದ ಶಕ್ತಿಗಳ ಸಂಪರ್ಕವೇ ಕಾರಣ. ಹಾಲು ಕೆಟ್ಟುಹೋಯಿತು ಎಂಬ ಲೋಕೋಕ್ತಿಯು ಹಾಲಿನ ಮೇಲೆ ಕೇವಲ ದೋಷವನ್ನು ಹೊರಿ ಸುವುದಕ್ಕೆ ಉತ್ಪನ್ನದ. ಸ್ಥೂಲವಾಗಿ ನಡೆದ ಸಂಗತಿಯನ್ನು ಹೇಳುವುದು. ಆದರೂ ಕೆಟ್ಟು ಹೋಯಿತೆಂಬ ಹಗುರವಾದ ಮಾತು ಅರ್ಥವಾಗಲಾರದು. ಇವೆಲ್ಲವೂ ಸ್ವಾಭಾವಿಕವಾದುವು. ವಿಜಾತೀಯ ಸಂಪರ್ಕವು ಸ್ವಾಭಾವಿಕವಾಗಿ ಆತ್ಮತೋಷಕ್ಕೆ ಪ್ರಕೃತಿ ಲೀಲೆಯಿಂದ ನಡೆಯುವುದು. ಅಷ್ಟರಿಂದಲೇ ವರ್ಣಸಂಕರವೆಂದು ಹೇಳುವುದು ಸರಿಯಲ್ಲ ಜೀವನವೆಂಬ ಪ್ರಯೋಗ ಶಾಲೆಯಲ್ಲಿ ಸಂಕರವೇ ಪ್ರಥಮಕಲ್ಪ. ಸಂಕರ ವೆಂದು ತಾತ್ಸಾರ ಮಾಡುವ ಧ್ವನಿಯಿಂದ ಹೇಳುವುದು ಸರಿಯಲ್ಲ.

ಕ್ಷೇತ್ರಬೀಜ ಸಮಾಗಮದಿಂದ ಶರೀರವನ್ನು ಧರಿಸಿ ಹೊರಗೆ ಕಾಣಿಸಿಕೊಳ್ಳುವ ದೇಹಿಗೆ ಆಶ್ರಯವಾದ ಕ್ಷೇತ್ರವು ಇಂದ್ರಿಯ ಗೋಚರ ವಾಗಿ ಪ್ರತ್ಯಕ್ಷ ಪ್ರಮಾಣಕ್ಕೆ ಗುರಿಯಾಗುವುದು. ದೇಹಿಯ ಉತ್ಪತ್ತಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಮಿತ್ತವಾದ ಬೀಜದ ಮೂಲವು ಅನೇಕವೇಳೆ ಪ್ರಮಾಣಕ್ಕೆ ದೂರವಾಗಿರುತ್ತದೆ. ವೇದಮಂತ್ರಗಳಲ್ಲಿಯೂ ಈ ಬಗೆಯ ಸಂದೇಹವನ್ನು ಜೀವನದ ಕ್ರಮಕ್ಕೆ ತಕ್ಕಂತೆ, ಬೆಳಗಿ ಪರಿಹಾರೋಪಾಯದಿಂದ ಸಮಾಧಾನವನ್ನು ಹೊಂದಲು ಅವಕಾಶವು ಸೂಚಿತವಾಗಿವೆ. ಇಂತಹ ಸಂದೇಹಕ್ಕೆ ಸ್ತ್ರೀಯು ಎಷ್ಟುಮಟ್ಟಿಗೆ ದೋಷಭಾಗಿಯೋ ಅಷ್ಟು ಪ್ರಮಾಣದಲ್ಲಿ ವ್ಯಾಪಾರೋನ್ಮುಖರಾದ ಪುರುಷರೂ ಪರೋಕ್ಷವಾಗಿ ಸಹಕರಿಸಿದ ಪುರುಷರೂ ಸ್ತ್ರೀಯರೂ ಸನ್ನಿವೇಶವೂ ದೋಷವನ್ನು ಹಂಚಿಕೊಳ್ಳಬೇಕಾಗಿದೆ.

ಜನ್ಮ ಕ್ಷೇತ್ರವು ಪ್ರತ್ಯಕ್ಷವಾಗಿದ್ದು ಜನ್ಮಬೀಜವು ಋಣಾನುಬಂಧ ರೂಪೇಣ ವಸ್ತುತಃ ಬೇರೆಯಾಗಿರುವಾಗ ಬಹಿಃ ಬೇರೊಂದಾಗಿ ಪ್ರಕಟಣೆಯಾಗುವ ವಿಚಾರವು ಸತ್ಯಕ್ಕೆ ದೂರವಾಗಿರುವುದರಿಂದ ಮಿಥ್ಯಾ ಎನಿಸುವುದು. ಈ ಅರ್ಥದಲ್ಲಿ ಮಾತ್ರ ಸಂಕರವೆಂಬ ಅರ್ಥಮಿತಿಯನ್ನು ಕಲ್ಪಿಸಬೇಕಾಗಿದೆ. ಸಂಕರದಿಂದ ಸ್ವಭಾವತಃ ಗೊತ್ತಾದ ವಿಶೇಷ ಹೊಣೆಗಾರಿಕೆಯನ್ನು ತಿಳಿಯದಂತಾಗುವುದು. ತನ್ನ ನೈಜವಾದ ಹೊಣೆಗಾರಿಕೆಯನ್ನು ಮರೆತು ತನ್ನ ಮಿತಿಗೆ ಮೀರಿದ ಅಥವಾ ಮಿತಿಗೆ ಏರದೇ ಇರುವ ಬೇರೆ ಹೊಣೆಗಾರಿಕೆಯನ್ನು ವ್ಯವಹಾರಾನುಗುಣವಾಗಿ ಪಾಲಿಸಬೇಕಾಗುವುದು. ಇದರಿಂದ ಕರ್ಮ ಕ್ಷೇತ್ರದಲ್ಲಿ ನೈಜವಾಗಿ ಅನುಸರಿಸಿಕೊಂಡು ಬಂದ ಗುಣ ಕರ್ಮ ಶಕ್ತಿಗಳಲ್ಲಿಯೂ ಘರ್ಷಣೆಯುಂಟಾಗಿ ವರ್ಣ ವ್ಯಾಪಾರಗಳು ಸುಖಕರವಾಗುವುದಕ್ಕೆ ಅವಕಾಶವಿಲ್ಲವಾಗುವುದು. ಈ ಸನ್ನಿವೇಶ ಪರಿಸ್ಥಿತಿಗಳು ವಸ್ತುತಃ ಸಂಕರಗಳಾಗಿರುವುವು.

ಸಂಕರಕ್ಕೆ ಕಾರಣವಾದ ಮಿಥ್ಯಾ ಪ್ರತಿಪಾದನೆಗಳನ್ನು ಹೋಗಲಾಡಿಸಿ ನಿಜವನ್ನು ತಿಳಿದು ವರ್ಣಸಂಕರವಾಗದಂತೆ ನೋಡಿಕೊಳ್ಳುವುದು ಕೇವಲ ಸಾತ್ವಿಕವೂ ಶುದ್ಧವೂ ಆದ ಮಾರ್ಗವಾಗಿದೆ. ತ್ರಿಕಾಲ ಜ್ಞಾನಿಗಳಾದವರು ಈ ಸಮಸ್ಯೆಗಳನ್ನು ಪರಿಹರಿಸಲು ಸಮರ್ಥರಾಗಿದ್ದಾರೆ. ಈ ಸಾಮರ್ಥ್ಯವನ್ನು ಸಂಪಾದಿಸುವುದಕ್ಕಾಗಿ ಶ್ರೋತ್ರಿಯ ಸಂಸ್ಕೃತಿಗಳು ವಿವರಿಸಲ್ಪಟ್ಟಿವೆ.

ಸಂಸ್ಕೃತಿ ಜ್ಞಾನವನ್ನು (ಆಳ್ವಿಕೆಯ) ರಾಜ್ಯದ, ದೇಶ ಪ್ರದೇಶಗಳ ಮಟ್ಟಗಳ ರಾಜನೀತಿ ಶಾಸನಗಳ ಮೂಲಕ ಸಾಮಾನ್ಯರ ತಿಳವಳಿಕೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರಬೇಕಾಗಿದೆ. ಋಣಾನುಬಂಧ ಸಂಕಲ್ಪಕಾಮನಾಗಳಿಗೆ ತಕ್ಕಂತೆಯೂ ಮಾನವ ಮಿತಿಯನ್ನು ಮೀರಿಯೂ ನಡೆಯುವ ವ್ಯಾಪಾರಗಳ ಫಲವಾಗಿ ಉಂಟಾಗುವ ಸಂಕರ ದೋಷವು ಹರಡದಂತೆ ಮಾಡಿ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಲೋಕಶಾಂತಿ ಸಂಪದಭ್ಯುದಯ ಸಾಧನೆಗೆ ಪ್ರತಿಯೊಬ್ಬ ವ್ಯಕ್ತಿಯೂ ಯತ್ನಿಸಬೇಕಾಗಿದೆ.

ವರ್ಣ – ಪ್ರಭೇದ ಉಪಭೇದಗಳು

ಜೀವನಯಜ್ಞದ ಅಂಗಗಳು ಅನೇಕ ಮುಖಗಳಾಗಿ ಅನೇಕರಿಂದ ಐಚ್ಛಿಕವಾಗಿಯೂ, ಸ್ವಾಭಾವಿಕವಾಗಿಯೂ ಶಕ್ತಿಗನುಸಾರವಾಗಿ ನಿರ್ವಾಹವಾಗಬೇಕಾಗುವುದು. ಒಂದೊಂದು ವರ್ಣದಲ್ಲಿಯೂ ಒಂದೊಂದು ಅಂಶವು ಒಬ್ಬೊಬ್ಬರಿಂದ, ಒಂದೊಂದು ಕುಟುಂಬದಿಂದ, ಸಮಾಜದಿಂದ, ಪ್ರದೇಶ, ದೇಶ (ರಾಷ್ಟ್ರ) ದಿಂದ ಸಾಧ್ಯವಾಗಬೇಕಾಗಿರುತ್ತದೆ. ಎಲ್ಲಾ ಆವಶ್ಯಕತೆಗಳನ್ನೂ ಒಬ್ಬರೇ ಹೊಂದಿಸಿಕೊಳ್ಳುವುದು ಸೃಷ್ಟಿತತ್ವಕ್ಕೆ ಹೊರಗಾಗಿರುತ್ತದೆ. ವಿಶ್ವದಲ್ಲಿ ಯಾವಾಗಲೂ ಕೆಲಸದ ಹಂಚಿಕೆಯು ವೈಯಕ್ತಿಕ ಇಚ್ಛೆ, ಮಿತಿ, ಶಕ್ತಿ, ಸಹವಾಸ (ಆವರಣ) ಗಳಿಗೆ ಒಳಪಟ್ಟು ಸ್ವಾಭಾವಿಕವಾಗಿ ನಡೆಯುವುದು. ಎಂಬ ವಿಚಾರವು ವಿವೇಕ-ಮನು-ವುಳ್ಳ ಮಾನವ ಪ್ರಜಾವರ್ಗದ ವೃತ್ತಿ ಮೊದಲಾದ ರಾಜ್ಯದ ಪಂಚವಲಯಗಳ ರಾಜ್ಯಭಾರದಲ್ಲಿ ಸ್ಪಷ್ಟವಾಗಿ ವಿಧಾಯಕವಾಗಿರುತ್ತದೆ.

ಚೇತನಾಚೇತನ ವಸ್ತುಗಳ ಒಳಗೆ ಮತ್ತು ಹೊರಗೆ ಇರುವ ಸೃಷ್ಟಿಯ ಸೂಕ್ಷ್ಮ ರಚನೆಗಳನ್ನು ಸವಿಕ್ಷಿಸಿದಾಗ ಅಂಗೈಮೇಲಿನ ನೆಲ್ಲಿಕಾಯಿಯ ರೇಖೆ ಮೊದಲಾದುವು ಸ್ವಚ್ಛವಾಗಿ ಕಾಣುವಂತೆ ಈ ರಚನೆಗಳು ಗೋಚರವಾಗುವುವು. ಹೀಗೆ ಒಂದೊಂದು ಅಂಶವನ್ನು ಜೀವನ ನಿರ್ವಾಹಕ್ಕಾಗಿ ಅವಲಂಬಿಸಿದ ಪ್ರಜೆಗಳು ಸಣ್ಣ ಪುಟ್ಟ ಗುಂಪುಗಳಾಗಿ ಸೇರಿ ಪೃಥಕ್ಕಾಗಿ ಸ್ವತಂತ್ರವಾಗಿ ವರ್ತಿಸುವರು. ಮೂಲವಾದ ಜೀವನದ ಸಮಷ್ಟಿ ತತ್ವವನ್ನು ಮರೆತು ವಿಭಾಗ ಭೇದಗಳನ್ನೇ ಪ್ರಧಾನವಾಗಿಟ್ಟುಕೊಂಡು, ವರ್ತಿಸುವರು. ಈ ಬಗೆಯ ಸಂಕುಚಿತ ಮನೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವವು ಪ್ರಗತಿಗೆ ವಿಘ್ನವೆಂದು ಯೋಚಿಸಲಾರದೆ ಮಾನವ ಮಟ್ಟಕ್ಕಿಂತ ಕೆಳಗೆ ಇರುವ ಸಾಮಾನ್ಯ ದೇಹಿಗಳಂತೆ ವರ್ತಿಸುತ್ತಾರೆ. ಹೀಗೆ ಪ್ರತಿಯೊಂದು ವರ್ಣದಲ್ಲಿಯೂ ಶತ-ಸಹಸ್ರ-ಅಯುತ ಭೇದಗಳು ಪ್ರಜೆಗಳ ವಾಸಸ್ಥಳ, ಆಹಾರ, ದೇಶ. ಭೂ ವಾಯುಗುಣಗಳ ಉಪಲಕ್ಷಣಗಳಿಗೆ ತಕ್ಕಂತೆ ವ್ಯಕ್ತವಾಗುವುವು. ಇವು ತಾತ್ಕಾಲಿಕವಾಗಿ ಹೊಂದಿಕೊಂಡು ವಂಶ ಪಾರಂಪರ್ಯವಾಗಿ ಬರುವ ಗುರುತುಗಳಾಗುವುವು ಮತ್ತು ಕಾಲಾನುಕ್ರಮದಲ್ಲಿ ಸಂಪೂರ್ಣವಾಗಿ ಪರಸ್ಪರ ಭಿನ್ನವಾದ ಪಂಗಡಗಳೆಂದು ಭಾವಿಸುವ ಸಂಕುಚಿತ ಸಂಪ್ರದಾಯವೆಂಬ ಮುದ್ರೆಯಿಂದ ಮುದ್ರಿತವಾಗುತ್ತವೆ.

ಅನೇಕ ಸಂಖ್ಯೆಯಲ್ಲಿರುವ ವೇದಸೂಕ್ತಗಳು- ಅಧ್ಯಯನ, ಅಭ್ಯಾಸ ಪಾಠಗಳ ಸೌಕರ್ಯಕ್ಕೆ ವಿಷಯಾನುಗುಣವಾಗಿ ವಿಂಗಡಿಸಲ್ಪಟ್ಟಿವೆ. ಯಜ್ಞ ನಿರ್ವಾಹಕಾಲದಲ್ಲಿ ಹಗ್ಗದಂತೆ ಹೆಣೆದುಕೊಂಡಿರುವ ಋಕ್, ಯಜುಸ್, ಸಾಮ, ಅಥರ್ವಗಳೆಂಬ ಯಜ್ಞಾಂಗಗಳನ್ನೂ ಸಹ ವಿಭಜಿಸಿ ಒಂದೊಂದು ಸಂಪುಟದಲ್ಲಿ ರಕ್ಷಣೆಗಾಗಿ ಕೂಡಿಸಿರುತ್ತಾರೆ. ಈ ಬಗೆಯ ಸಂಪುಟೀಕರಣ ಪದ್ಧತಿಯು ಅಭ್ಯಾಸಕ್ಕೂ ಪ್ರಾವೀಣ್ಯಕ್ಕೂ ಸಹಕಾರಿಯಾಗಿದೆ.

ಒಂದೊಂದು ಭಾಗವನ್ನು ಮಾತ್ರವೇ ಅಭ್ಯಾಸ ಮಾಡಿ ವೈದುಷ್ಯವನ್ನು ಹೊಂದಿರುವವರ ಗುಂಪೇ ಬಲವಾಗುವ ಸಂಭವವಿರುತ್ತದೆ. ಇಂತಹವರು ಸ್ವಪ್ರತಿಷ್ಠೆಯಿಂದಾಗಲೀ, ಪರಾಸಹಿಷ್ಣುತೆಯಿಂದಾಗಲೀ ಋಗ್ವೇದ ಜಾತಿ (ಗುಂಪು) ಯಜುರ್ವೇದ ಜಾತಿ, ಸಾಮ ಜಾತಿ, ಅಥರ್ವ ಜಾತಿ, ಪ್ರಯೋಗ ಜಾತಿ, ದರ್ಶನ-ಶಾಸ್ತ್ರ ಜಾತಿ, ಪುರಾಣಜಾತಿಗಳಿಗೆ ಸೇರಿದವರೆಂದು ಉಪಲಕ್ಷಣ ಪ್ರಧಾನವಾಗಿ ಹೇಳಿಕೊಳ್ಳುವುದು ಸ್ವಾಭಾವಿಕವೆನಿಸಬಹುದು. ಆದರೆ ಇದು ವರ್ಣೈಕ್ಯವುಳ್ಳ ಬ್ರಾಹ್ಮಣಾಚಾರಕ್ಕೆ ವಿರುದ್ಧವಾದ ಭೇದವನ್ನೇ ಪ್ರಧಾನವಾಗಿ ಎಣಿಸುವಂತಾಗಿ ಇವು ಯಜ್ಞಾಂಗವಾಗಿರುವ ವಿಚಾರವನ್ನೇ ಮರೆಮಾಡುವುದು. ಈ ಬಗೆಯ ಹಂಚಿಕೆಯು ಮಾನಸಿಕ, ಶಾರೀರಕ ಕೆಲಸಗಳನ್ನು ಸ್ವತ್ವವನ್ನಾಗಿ ಭಾವಿಸಿ ಜನ್ಮತಃ ಕರ್ಮತಃ ವರ್ಣತಃ ಸ್ವತಂತ್ರವೆಂಬ ಸಂಕುಚಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವನೆಗೆ ಬಲಿಯಾಗುವುದು ಅವನತಿ ಸೂಚಕವಾಗುವುದು.

ಶಾಸಕರಿಗೂ ಈ ರಹಸ್ಯವು ಗೋಚರವಾಗದಂತೆಯೂ ರಾಜನೀತಿಯು ಮೇಲೆ ಮುಸುಕು ಹಾಕಿದಂತೆಯೂ ಆಗಿರುವುದರಿಂದ ಶಕ್ತಿಗುಂದಿದ, ಕಳೆಗುಂದಿದ ರಾಜನೀತಿಯು ಸಂರಕ್ಷಣೆಯ ಕರ್ತವ್ಯಲೋಪಕ್ಕೆ ಗುರಿಯಾಗಿ ಜನತೆಯೇ ತಿರ್ಯಗ್ಜಂತುಗಳ ಮಟ್ಟಕ್ಕೆ ಇಳಿಯುವಂತಾಗುವುದು.

ಕ್ಷತ್ರಿಯ ವೈಶ್ಯಾದಿ ಪಂಚವರ್ಣಗಳ ಅಂಗಗಳು ಉಪಾಂಗಗಳು ಭೇದ ಪ್ರಧಾನದಿಂದ ಶತ-ಸಹಸ್ರ-ಅಯುತ ಛಿದ್ರಗಳಾಗಿ ಐಕ್ಯಸಾಧನೆಯ ಗುರಿಯನ್ನು ಮರೆತಿರುವುವು. ಇದರಿಂದ ಸಂಸ್ಕೃತಿಯೂ ಮಲಿನವಾಗಿ ವಿಭಜಿಸಲ್ಪಟ್ಟು ಮೂಲವಾದ ಧ್ಯೇಯವನ್ನೇ ದೂರೀಕರಿಸುವಂತಾಗುವುದು

ಇಂತಹ ಸಣ್ಣ ಪುಟ್ಟ ಸಾಮಾನ್ಯ ದೋಷಾದಿಗಳನ್ನು ಎಣಿಸದೆ ಮತ್ತು ಪ್ರೋತ್ಸಾಹಿಸದೆ, ಸೂಕ್ಷ್ಮವಾಗಿ ವರ್ಗೀಕರಣ ಮಾಡಿದ ಪ್ರಧಾನ ಅಂಗಗಳಲ್ಲಿ (ಸರ್ವಂ ಬ್ರಹ್ಮ) ಎಂಬಂತೆ 'ಸಮ' ದರ್ಶನ ಭಾವದಿಂದ ಅಡಕಮಾಡಿದರೆ ಮನಶ್ಶಾಂತಿಯಿಂದ ತಪಸ್ಸಿದ್ಧಿಗೆ ಅಂತಃಬಹಿಃ ಸಹಾಯ ದೊರೆತಂತಾಗಿ ರಾಷ್ಟ್ರೈಕ್ಯ, ಧರ್ಮೈಕ್ಯ, ಆಚಾರೈಕ್ಯ, ಸಂಸ್ಕೃತ್ಯೈಕ್ಯ, ರಾಜನೀತ್ಯೈಕ್ಯಗಳು ಸಾಧಿತವಾಗುವುವು ಮತ್ತು ಬಲಗೊಳ್ಳುವುವು.

ವರ್ಣ ಅವಸ್ಥೆಗಳು

ಗುಣ ಶಕ್ತಿ ಕರ್ಮಗಳ ಮೌಢ್ಯದಿಂದ ಜಡವಾಗಿರುವ ಭಾವ ಸ್ಥಿತಿಗಳು ಕಲಿಯೆನಿಸುವುವು. ಕಲಿಯು ಆಲಸರಂತೆ ಮಲಗಿರುವ ಲಕ್ಷಣವುಳ್ಳದ್ದು. (ಶಯಾನಃ ಕಲಿಃ)* ಗುಣ ಶಕ್ತಿ ಕರ್ಮ ಜ್ಞಾನದಲ್ಲಿ ಆಸಕ್ತಿಯನ್ನು ತೋರ್ಪಡಿಸುವ ದ್ವಾಪರವು ಸಂದೇಹಾತ್ಮಕವಾಗಿಯೇ ಇರುವುದು. (ಸಂದಿಹಾನಸ್ತು ದ್ವಾಪರಃ)* ಗುಣಶಕ್ತಿಕರ್ಮಗಳ ಜ್ಞಾನ ಪ್ರಯೋಗಾದಿಗಳನ್ನು ತಿಳಿದು ಸಂದೇಹವನ್ನು ನೀಗಿ ಕಾರ್ಯೋನ್ಮುಖವಾಗುವಿಕೆಯು ತ್ರೇತಾ ಎನಿಸುವುದು (ಉತ್ತಿಷ್ಠನ್ ತ್ರೇತಾ)*.

ಕಾರ್ಯವನ್ನೆಸಗಿ ಇಷ್ಟಾರ್ಥ ಸಿದ್ಧಿಯನ್ನು ಹೊಂದಿದ ಭಾವ ಸ್ಥಿತಿಗಳು (ಕೃತಂ ಸಂಪದ್ಯತೇ)* ಎಂಬಂತೆ ಕೃತವೆನಿಸುವುವು. ಶ್ರೋತ್ರಿಯಾದಿ ವರ್ಣಗಳಲ್ಲಿ ಪ್ರತಿವ್ಯಕ್ತಿಯಲ್ಲಿಯೂ ಸಾರ್ವತ್ರಿಕವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ನಾಲ್ಕು ಅವಸ್ಥೆಗಳು ಆಯಾ ಸಂದರ್ಭದಲ್ಲಿ ತಲೆದೋರುವುವು. (*ಐತರೇಯ ಬ್ರಾಹ್ಮಣ)

ಕಲಿ, ಕೃತ ಶಬ್ದಗಳನ್ನು ಯುಗ ಕಾಲಮಾನದ ಶಬ್ದಗಳನ್ನಾಗಿ ವ್ಯವಹರಿಸಿರುತ್ತಾರೆ. ಆ ಯುಗಗಳಲ್ಲಿ ಪೂರ್ಣವಾಗಿ ಆಯಾ ಅವಸ್ಥೆಯು ಮಾತ್ರ ತೋರುತ್ತದೆ ಎಂದಲ್ಲ. ಎಲ್ಲಾ ಕಾಲ ಎಲ್ಲಾ ಯುಗಗಳಲ್ಲಿಯೂ ಮೇಲ್ಕಂಡ ಎಲ್ಲಾ ಅವಸ್ಥೆಗಳೂ ಇರುತ್ತವೆ. ಈ ಸೂಕ್ಷ್ಮವನ್ನರಿತು ನಿರಾಶಾವಾದದ ಅಂಕುಶದ ಏಟಿಗೆ ಬಲಿಯಾಗದೆ ಶ್ರೇಯಃ ಪ್ರಗತಿ ಸಾಧನೆಯ ಇಷ್ಟಾರ್ಥ ಸಿದ್ಧಿಗೆ ಯತ್ನಿಸಿ ವರ್ಣ. ಆಶ್ರಮಗಳ ಅವಸ್ಥಾ ವಿಶೇಷಗಳನ್ನೂ ಅವುಗಳ ಲಕ್ಷಣ, ಉಪಲಕ್ಷಣ, ಸ್ವರೂಪ, ವೇಷ, ಆಕಾರಗಳನ್ನೂ ತಿಳಿದು,

ತಪಸ್ಸಂಗ್ರಾಮಕವಚಂ ನಿಯಮದ್ವಿರದಾಂಕುಶಃ ।
ಖಲೀನಮಿಂದ್ರಿಯಾಶ್ವಾನಾಂ ಗೃಹ್ಯತಾಂ ಧರ್ಮಸಾರಥಿಃ ॥ ಎಂದು

ಭಾಸ ಹೇಳಿರುವಂತೆ ಆಕಾರ ವೇಷಾದಿಗಳು ಅವಸ್ಥೆಗಳನ್ನು ಬಹಿರಂಗ ಪಡಿಸಿ ಶ್ರೇಯಸ್ಸಾಧಕವಾಗಿರುವ ಅಂಶವನ್ನು ಪುನಃ ಪುನಃ ಚರ್ವಿತ ಚರ್ವಣ ಕ್ರಮದಲ್ಲಿ ರೂಢಿಸಿಕೊಂಡು ಪರಕೀಯರ ಪ್ರಲೋಭಾದಿಗಳನ್ನು ಎದುರಿಸಿ ಸ್ವಕೀಯ ಸಂಸ್ಕೃತಿಯ ಮೇಲ್ಮೆಗೆ ಯತ್ನಿಸಬೇಕಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪. ವರ್ಣಾಶ್ರಮ

"ವರ್ಣಾಶ್ರಮ-ಸಮಾಚಾರಾದೇವ ಮುಕ್ತಿರ್ನಚಾನ್ಯತಃ"

ಸೂತಸಂಹಿತಾ 21-14.

ವರ್ಣಗಳ ಮಿತಿಯಲ್ಲಿ ವರ್ತಿಸುವ ದೇಹಿಗಳು ಜೀವಾವಧಿ ಅನೇಕ ವಿಧವಾದ ಸಂಸ್ಕಾರಗಳನ್ನು ಹೊಂದಿ ಪ್ರಗತಿಯನ್ನು ಸಾಧಿಸುವರು. ಅಹಿತವೂ ಅನಿಷ್ಟವೂ ಕ್ಲೇಶವೂ ಆದ ಅನುಭವವನ್ನು ವರ್ಣದ ಮಿತಿಯಿಂದ ಅಳೆದು ನೋಡುವೆವು. ಆ ಅನುಭವಗಳೂ ಸಹ ತುಚ್ಛವೆಂದಾಗಲೀ ತಿರಸ್ಕೃತವೆಂದಾಗಲೀ ಭಾವಿಸಲಾಗದು. ಅವೂ ಸಹ ಒಳ್ಳೆಯ ಪರಿಣಾಮವನ್ನುಂಟುಮಾಡುವುವು. ಜೀವಸಂಚಾರವೆಂಬ ಸಂಸಾರದಲ್ಲಿ ಸತ್ಕರ್ಮ ದುಷ್ಕರ್ಮ ಘಟನೆಗಳು 'ಸ್ವ'-'ಪರ' ಇಚ್ಛೆಗಳಿಗೆ ತಕ್ಕಂತೆ ಒದಗುವುವು. ಒಂದು ಬಾರಿ ಅನುಭವಿಸಿದ ದುರ್ಘಟನೆಗಳು ಪುನಃ ಒದಗದಂತೆ ಎಚ್ಚೆತ್ತುಕೊಳ್ಳಬಹುದಾಗಿರುವುದೆಂಬ ಸಂಸ್ಕಾರವು ಪರಮೋಪಕಾರಕವಾಗಿರುತ್ತದೆ.

ವಯೋನುಗುಣವಾಗಿ ಸಂಸ್ಕಾರಗಳೂ ಕರ್ತವ್ಯ ಕರ್ಮಗಳೂ ಸ್ವಾಭಾವಿಕವಾಗಿಯೇ ನಡೆಯುತ್ತಿರುತ್ತವೆ. ದೇಹಿಗಳು ಸಂಸ್ಕಾರ ವಿಜ್ಞಾನ ಬಲದಿಂದ ವಿಶೇಷ ಸಂಸ್ಕಾರಗಳನ್ನು ಹೊಂದಿ ಕ್ಷಿಪ್ರಸಿದ್ಧಿಯನ್ನು ಹೊಂದಬಹುದು.

ಪ್ರಪಂಚದಲ್ಲಿ ದೇಹಿಗಳ ಜನ್ಮ ಮೊದಲ್ಗೊಂಡು ಮರಣಪರ್ಯಂತ ನಡೆಸಬಹುದಾದ, ನಡೆಯಬಹುದಾದ ಸಾಮಾನ್ಯ ವಿಶೇಷ ಕರ್ಮಗಳನ್ನು ಪರೀಕ್ಷಿಸಿ ವಯೋನುಗುಣವಾಗಿ ಮುಖ್ಯವಾದ 4-5 ಅವಸ್ಥೆಗಳಲ್ಲಿ ಅವೆಲ್ಲವೂ ಅಡಕವಾಗುವಂತೆ ವರ್ಗೀಕರಿಸಿರುತ್ತಾರೆ. ಶೈಶವ, ಬಾಲ್ಯ, ಯೌವನ, ಕೌಮಾರ, ವಾರ್ಧಕ್ಯ, ತುರೀಯಗಳೆಂಬ ವರ್ಗೀಕರಣ ಭಾಗಗಳನ್ನು ಸಂಸ್ಕಾರಾನುಗುಣವಾಗಿ ಅವಸ್ಥೆಗಳೆಂದು ಕರೆಯುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯಾಭ್ಯಾಸಕ್ಕಾಗಿ ಗುರುಕುಲವಾಸ ಸಂಸ್ಕೃತಿ, ದಾಂಪತ್ಯ ನಿರ್ವಾಹಕ್ಕಾಗಿ ಗೃಹ ವಸತಿ ಸಂಸ್ಕಾರ; ವಾರ್ಧಕ್ಯ ವಯಸ್ಸು ಬಂದಾಗ ಗೃಹ - ಪ್ರಾಪಂಚಿಕ ಸುಖದಲ್ಲಿ ವೈರಾಗ್ಯಾನುಸಂಧಾನ ಸಂಸ್ಕಾರ (ವೈರಾಗ್ಯ ಸಂಸ್ಕಾರ) ; ಅಂತ್ಯವಾದ ಜೀವನ್ಮುಕ್ತಿ-ವಾ-ವಿದೇಹಮುಕ್ತಿ ಎಂಬದಾಗಿ ಆಶ್ರಮಗಳನ್ನು ಆಶ್ರಮ ಸಂಸ್ಕಾರ - ಕರ್ತವ್ಯಗಳನ್ನು ಅನುಭವದಿಂದ ತಿಳಿಸಿರುತ್ತಾರೆ.

ಆಶ್ರಮ ಕರ್ತವ್ಯ ಕರ್ಮಗಳ ಪರಿಶ್ರಮವು ದೇಹಿಯನ್ನು ಮಿತವಾದ ರಾಜಮಾರ್ಗದಲ್ಲಿ ಒಯ್ದು ಸ್ವಸ್ವರೂಪಾನುಸಂಧಾನಕ್ಕೂ ಸ್ವಸ್ವರೂಪಾವಸ್ಥಾನಕ್ಕೂ ಸಹಾಯ ಮಾಡುವುದು.

ವರ್ಣಗಳಿಗೂ ಆಶ್ರಮಗಳಿಗೂ ನಿಕಟ ಸಂಬಂಧವಿರುವುದು. ಒಂದೊಂದು ವರ್ಣದಲ್ಲಿಯೂ ಆಯಾ ಪರಿಸ್ಥಿತಿಗೆ ತಕ್ಕಂತೆ ಆಶ್ರಮಗಳೂ ಆಶ್ರಮ ಪ್ರಕಾಶಕ ವೇಷ ಭೂಷಣಗಳೂ ಕರ್ತವ್ಯಗಳೂ ತಾವಾಗಿಯೇ ರೂಪಿತವಾಗುವುವು. ಇವು ಆಶ್ರಮಗಳಿಗೆ ಹೊಂದಿಕೊಳ್ಳುವುವು. ಕರ್ತವ್ಯ ವ್ಯವಸ್ಥೆಗೆ ಒಳಪಟ್ಟ ಆಶ್ರಮಗಳನ್ನು ಸ್ವೀಕರಿಸಿ ಆಯಾ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಶ್ರೇಯಸ್ಸು ಲಾಭವಾಗುವುದು. ಆಶ್ರಮವನ್ನು ಐಚ್ಛಿಕವಾಗಿ ಸಂಪ್ರದಾಯ ಶರಣಾಗತಿಯಿಂದ ಪಡೆದ ನಂತರ ತತ್ಕರ್ತವ್ಯ ಮಿತಿಯನ್ನು ಮೀರಿದರೂ ಮಿತಿಯಿಂದ ಜಾರಿದರೂ ಸಂಸ್ಕಾರಗಳಿಂದ ದೂರವಾಗಿ ಉಂಟಾಗಬಹುದಾದ ಕ್ಲೇಶಗಳ ಅನುಭವ ದನಂತರ ಪುನಃ ಆಯಾ ಆಶ್ರಮಗಳನ್ನು ಪಡೆದು ಮೇಲಕ್ಕೇರ ಬೇಕಾಗುವುದು.

ವರ್ಣಾಶ್ರಮ ವ್ಯವಸ್ಥೆ

ಮಹಾರಾಜನು (ರಾಜ್ಯವು) ವರ್ಣಾಶ್ರಮಗಳಿಗೆ ಗುರು ; ಎಂದೂ ಮಹಾರಾಜನು 'ಧರ್ಮ ಮೂಲ'ನೆಂದೂ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಜಗದ್ಗುರುಗಳು ಅಪ್ಪಣೆ ಕೊಡಿಸಿರುತ್ತಾರೆ. ಸ್ವವರ್ಣ - ಸ್ವಕರ್ಮ ಮೊದಲಾದುವುಗಳನ್ನು ಮಿತಿಗನುಸಾರವಾಗಿ ಋತಕ್ಕೆ ಅವಿರೋಧವಾಗದಂತೆಯೂ ಸುತ್ತಮುತ್ತಲಿನ ಸನ್ನಿವೇಶ ಪರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಿತಿಗಳಿಗೆ ಅನುರೋಧವಾಗಿಯೂ ನಿರ್ವಾಹ ಮಾಡಬೇಕಾಗಿರುತ್ತದೆ. ಈ ವರ್ಣಕರ್ಮಗಳು, ಆಶ್ರಮ ಕರ್ಮಗಳು, ಸ್ವಕರ್ಮಗಳು ಎಲ್ಲವನ್ನೂ ವ್ಯವಸ್ಥೆಗೊಳಿಸಲು ಪ್ರಪಂಚದ ಸ್ಥಿತಿಗತಿಗಳ ಜ್ಞಾನವೂ ನಿಯಂತ್ರಣ ಶಕ್ತಿ ಮತ್ತು ವಿವೇಕಗಳೂ ಅತ್ಯವಶ್ಯಕವಾಗಿವೆ.

ಬ್ರಹ್ಮಾಂಡವನ್ನೆಲ್ಲಾ ಆವರಿಸಿರುವ ಬ್ರಹ್ಮ ಮತ್ತು ಕ್ಷತ್ರಗಳಲ್ಲಿ ಬ್ರಹ್ಮವು ಸರ್ವ ಸಾಮಾನ್ಯವಾಗಿ ಸರ್ವವಸ್ತುಗಳಿಗೂ ಅನ್ವಯಿಸಿ ಅಂತಃ ಬಹಿಃ ಪೂರ್ಣನಾಗಿದೆ. ಕ್ಷತ್ರದಲ್ಲಿ ಶ್ರೋತ್ರಿಯಾದಿ ವರ್ಣ ಪಂಚಕಗಳು ಗರ್ಭೀಕೃತವಾಗಿರುತ್ತವೆ.

ಪ್ರತಿಯೊಬ್ಬ ದೇಹಿಯು ಈ ಶಕ್ತಿಸಾಮರ್ಥ್ಯಗಳನ್ನು ಹೊಂದಿ ರಾಜನೀತಿಜ್ಞರಾಗಿ ಸಾಮ್ರಾಜ್ಯ-ಸ್ವರಾಜ್ಯಗಳನ್ನು ನಿರ್ವಹಿಸುವ ರಾಜ ರಾಜ್ಞೀ ಆಗಿರುತ್ತಾರೆ. ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ (ರಾಷ್ಟ್ರ) ಗಳೆಂಬ ರಾಜ್ಯದ (ಆಳ್ವಿಕೆ ಶಕ್ತಿಯ) ಐದು ವಲಯಗಳಲ್ಲಿಯೂ ಸಾಮ್ರಾಜ್ಯ ಸ್ವರಾಜ್ಯ ನಿರ್ವಾಹವು ದೇಹಿಗಳ ವ್ಯಷ್ಟಿ ಸಮಷ್ಟಿರೂಪದ ಕಲ್ಯಾಣಾಭ್ಯುದಯವನ್ನು ಸಾಧಿಸುವುದು. ಈ ವಲಯಗಳಿಗೆ ಸಂಬಂಧಿಸಿದ ಪ್ರತಿಯೊಬ್ಬ ರಾಜನೂ ವರ್ಣವ್ಯವಸ್ಥೆ ಸ್ವಕರ್ಮ ನಿರ್ವಹವಾಗುವಂತೆ ಶಾಸನವನ್ನು ಏರ್ಪಡಿಸಿ ನಡೆಸುವುದರಿಂದ ಸುಖ ಶಾಂತಿ ಯೋಗ ಕ್ಷೇಮಗಳು ಸ್ವತ ಏವ ಉಂಟಾಗುವುವು.

ವರ್ಣಕರ್ಮಗಳು ಸ್ವಕರ್ಮಗಳು ವ್ಯವಸ್ಥೆಗೆ ಒಳಪಡದೆ ಇರುವಾಗಲೂ ಮಾನವನು ಮಾನವನ ಮಿತಿಗೆ ಮೀರಿದ ಅಥವಾ ಮಿತಿಯಿಂದ ಜಾರಿದ ವರ್ತನೆಯಲ್ಲಿ ವರ್ತಿಸಿದಾಗಲೂ ಕರ್ಮಗಳು ಅಸ್ತವ್ಯಸ್ತವಾಗಿ ಅಹಿತವಾದ ಫಲವನ್ನು ಕೊಡುವುವು. ಸರ್ವ ಪ್ರಕಾರದಲ್ಲಿಯೂ ರಾಜನೀತಿ-ರಾಜಧರ್ಮದ ನಿಯಮಗಳನ್ನು ಪಾಲಿಸುವುದರಿಂದ ಸ್ವಸ್ವ-ವರ್ಣ ಸ್ವಸ್ವಕರ್ಮಗಳ ಕರ್ತವ್ಯ ಪರಿಪಾಲನೆಯೂ ಆಗುವುದು; ಸ್ವ-ಸ್ವವರ್ಣ ಸ್ವಸ್ವಕರ್ಮಗಳ ಕರ್ತವ್ಯ ಪರಿಪಾಲನೆಯಿಂದ ರಾಜನೀತಿ-ರಾಜಧರ್ಮದ ನಿಯಮಗಳನ್ನು ಪಾಲಿಸಿದಂತೆಯೇ ಆಗುವುದು.

ರಾಜ್ಯದ ಪಂಚ ವಲಯಗಳ ಶಾಸನಗಳನ್ನು ಆಯಾ ವಲಯದ ಪರಿಸ್ಥಿತಿಯಲ್ಲಿರುವವರೂ ಇತರ ವಲಯಗಳಿಗೆ ಸೇರಿದವರೂ ಪರಸ್ಪರವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಕರಿಸಿ ಚಕ್ರ ನೇಮಿಕ್ರಮದಲ್ಲಿ ಪಾಲಿಸುವುದೇ ವರ್ಣದ, ರಾಜ್ಯದ ಮತ್ತು ದೇಹಿಯ ಮುಖ್ಯೋದ್ದೇಶವಾಗಿರುತ್ತದೆ.

ಬ್ರಾಹ್ಮೀ ಸಂಸ್ಕೃತಿಗೆ ಸಂಬಂಧಪಟ್ಟ ವರ್ಣ ಕರ್ಮಾದಿಗಳು ರಾಜನೀತಿಯನ್ನು ಸುಲಲಿತವನ್ನಾಗಿ ಮಾಡುವುವು. ಮತ್ತು ಬ್ರಾಹ್ಮೀ ರಾಜನೀತಿಯು ಬ್ರಾಹ್ಮೀ ಸಂಸ್ಕೃತಿಯನ್ನು ರಕ್ಷಿಸುವುದು. ಈ ರಹಸ್ಯವನ್ನು ತಿಳಿದ ಪೂರ್ವಿಕರು ಪುರಾಣಾದಿ ಧರ್ಮಶಾಸ್ತ್ರಗಳಲ್ಲಿ ವರ್ಣವ್ಯವಸ್ಥೆಗೆ ಸಂಬಂಧಪಟ್ಟಂತೆ ಕೆಲವೇ ಮಾತುಗಳಲ್ಲಿ ರಾಜನೀತಿಯನ್ನು ಸೂಕ್ಷ್ಮವಾಗಿ ಸೂಚಿಸಿರುವರು. ಜೀವನದ ಒಂದು ಅಂಶವನ್ನು ರಾಜನೀತಿಯ ಮೇಲೆ ಗಮನವಿಟ್ಟು ನೋಡಿದಾಗ ಅದು ರಾಜನೀತಿಮಯವಾಗಿರುವ ವಿಚಾರವು ಸ್ಪಷ್ಟವಾಗಿ ಗೋಚರವಾಗುವುದು; ಅದನ್ನೇ ಧರ್ಮ-ಆಚಾರ-ಸಂಸ್ಕೃತಿಗಳ ದೃಷ್ಟಿಯಿಂದ ಭಾವಿಸಿದಾಗ ಅದು ಧರ್ಮಮಯ ಆಚಾರಮಯ ಸಂಸ್ಕೃತಿಮಯವಾಗಿರುವ ವಿಚಾರವು ತೋರುವುದು.

ಬ್ರಾಹ್ಮೀಸಂಸ್ಕೃತಿಯ ತಿಳಿವಳಿಕೆಗೆ ಅರ್ಹತೆಯಿಲ್ಲದ ಪ್ರಾಪಂಚಿಕವಾದ ಸಾಮಾನ್ಯ ವ್ಯವಹಾರಗಳ ಮಟ್ಟದಲ್ಲಿರುವ ವಿದೇಶೀಯರ ಸಂಪರ್ಕವು ಹೆಚ್ಚಿದಂತೆಲ್ಲಾ ಸಂಸ್ಕೃತಿಯ ಮೇಲಣ ಅವಧಾನವು ಕಡಿಮೆಯಾಗಿ ರಾಜನೀತಿಯ ಅಂಗವಾದ ಆರ್ಥಿಕ ದೃಷ್ಟಿಯೇ ಪ್ರಧಾನವಾಗುವುದು. ಹೀಗೆ ನೀಚ ಸೋಪಾನದ ಅಂತಸ್ತಿನಲ್ಲಿರುವ ಮಾನವರಿಗೆ ಆರ್ಥಿಕ-ಜೀವನ ಕ್ರಮದಲ್ಲಿ ಸಂಸ್ಕೃತಿಯನ್ನೂ ಉನ್ನತ ಮಟ್ಟದ ಮನೋಧರ್ಮವನ್ನೂ ತಿಳಿಸಬೇಕಾಗಿರುತ್ತದೆ. ಮೇಲಾಗಿ ಸರ್ವಧರ್ಮಗಳೂ ರಾಜಧರ್ಮದಲ್ಲಿ ಅಂತರ್ಗತವಾಗಿರುವ ವಿಚಾರವು ಸಾಧುವಾದುದೆಂದು ಅನುಭವವೆಂಬ ಪಂಚಮ ವೇದ ವಿಷಯಗರ್ಭಿತವಾದ ಮಹಾಭಾರತದಲ್ಲಿ ಹೇಳಲ್ಪಟ್ಟಿದೆ.

ಇಂತಹ ಗಹನವಾದ ವಿಷಯಗಳ ತಿಳಿವಳಿಕೆಯಿಲ್ಲದವರ ಸಹವಾಸವು ನೀತ್ಯನುಶಾಸನ ಸೀಮೋಲ್ಲಂಘನಕ್ಕೆ ಕಾರಣವಾಗುವುದು. ಅವರವರ ಸ್ವಕೀಯ ಸಂಸ್ಕೃತಿಯನ್ನು ತಿಳಿದು ಪರಕೀಯರಿಗೂ ಸಂಸ್ಕೃತಿಯನ್ನು ತಿಳಿಸಿ ಅವರನ್ನೂ ಮೇಲಕ್ಕೆ ಎತ್ತುವ ಯತ್ನಮಾಡಬೇಕಾಗಿರುವ ಪರಿಸ್ಥಿತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ಕಲ್ಪಿಸುವುದು ವಿಶ್ವರಾಜನೀತಿ ವಲಯಕ್ಕೆ ಸಂಬಂಧಿಸಿರುವುದು.

ವಿಶ್ವದಲ್ಲಿ ಇಂದ್ರಿಯಗಳಿಗೆ ಗೋಚರವಾಗುವ, ಗೋಚರವಾಗದಿರುವ ಸಮಸ್ತ ಚೇತನವಸ್ತುಗಳೂ ಅಚೇತನವಸ್ತುಗಳೂ ಶಕ್ತಿಗಳೂ ಗುಣಗಳೂ ಕರ್ಮಗಳೂ ಕಲನಗಳೂ ಮಂಥನಗಳೂ ಜ್ಯೋತಿರ್ಘನ ಭ್ರಮಣಗಳೂ ಮನೋಭಾವಗಳೂ ಬ್ರಹ್ಮಾಂಡ ಪಿಂಡಾಂಡಗಳಲ್ಲಿ ವ್ಯಕ್ತಿಗಳ ಇಚ್ಛೆಗೆ ಒಳಪಟ್ಟು ಮತ್ತು ವ್ಯಕ್ತಿಗಳ ಇಚ್ಛೆಯ ನಿರಪೇಕ್ಷೆಯಿಂದ ಅನೇಕ ಕೋಟಿ ಸಂಖ್ಯೆಯಲ್ಲಿ ನಡೆಯುವ ಸಮಸ್ತಗತಿ, ವ್ಯಾಪಾರಗಳೂ ಸಹ ಪರಿಣಾಮಕಾರಿ (ಡೈನಮಿಕ್) ಗಳೇ ಆಗಿರುತ್ತವೆ. ಅವುಗಳೆಲ್ಲವೂ ದಿವ್ಯತೆ (ಡಿವಿನಿಟಿ) ಗಳೆಂದು ವಿಧಾಯಕವಾಗಿವೆ. ವರ್ಗೀಕರಣ ಕ್ರಮದಲ್ಲಿ ಭಾಗ ವಿಭಾಗಗಳನ್ನು ಮಾಡಿ ಮಹತ್ತ್ವದ ಸಾಮಾನ್ಯ ಸಂಖ್ಯೆಯ ದೇವತಾ–ದಿವ್ಯತಾ–(ಡಿವಿನಿಟಿ) ಸಮೂಹಗಳನ್ನು ಗೊತ್ತು ಮಾಡಿರುತ್ತಾರೆ. ಅವುಗಳನ್ನು ಸಾಕ್ಷಾತ್ಕರಿಸಲು, ಅವುಗಳ ಒಲುಮೆಯನ್ನು ಸಂಪಾದಿಸಲು ಅವುಗಳು ಹೆಚ್ಚಾದಾಗ ತಗ್ಗಿಸಿಯೂ ಕಡಿಮೆಯಾದಾಗ ಹೆಚ್ಚಿಸಿಯೂ ಒಂದು ಸಮತೂಕದಲ್ಲಿಡಲು ಅವುಗಳಿಗೆಲ್ಲಾ ಕರಚರಣಾದಿ ಅವಯವಗಳುಳ್ಳ ಭಾವನಾ ಶರೀರಗಳನ್ನು ಕಲ್ಪನೆಮಾಡಿ ದೇವ ಮತ್ತು ದೇವೀ ರೂಪಗಳನ್ನು ವಿವರಿಸಿರುತ್ತಾರೆ. ವ್ಯವಹಾರದ, ಪ್ರಪಂಚದಲ್ಲಿ ದೇವತ್ವ (ರೂಪ)ಗಳನ್ನು ವಸ್ತುಗಳಲ್ಲಿ ಐಕ್ಯಮಾಡಿಯೂ ವಸ್ತುಗಳೇ ದೇವತ್ವಗಳೆಂತಲೂ ಅಥವಾ ದೇವತ್ವಗಳೇ ವಸ್ತುಗಳ ಅಭಿಮಾನದೇವತೆಗಳೆಂತಲೂ ದಿವ್ಯತಾ ಪ್ರಯೋಗ ಕಲನ ವ್ಯವಹಾರಗಳಾಗಿ ವ್ಯವಸ್ಥೆಯಾಗಿರುತ್ತದೆ.

'ದೇವತಾ'–ದೇವತ್ವ ದಿವ್ಯತೆಗಳಿಗೆ ವಿರೋಧವಾಗಿ ವಿಮುಖವಾಗಿರುವುದೆಲ್ಲಾ ಅಸುರ, ರಾಕ್ಷಸಗಳೆನಿಸಿ ಪರಿಣಾಮಕಾರಿಗಳಾಗಿರುತ್ತವೆ.

ಇವುಗಳೆಲ್ಲವೂ ಋತವೆಂಬ ಪ್ರಕೃತಿ ವ್ಯವಸ್ಥೆಗೂ, ದಿವ್ಯ ರಾಜನೀತಿಗೂ ಋತಾನುವರ್ತಿಯಾದ ಮಾನವ ವ್ಯವಸ್ಥೆ ಎಂಬ ರಾಜನೀತಿಗೂ ಸಮಾನವಾದ ಮನ್ನಣೆಯನ್ನೀಯುವುವು.

ರಾಜನೀತಿ ವ್ಯವಸ್ಥೆಯು, ಋತಕ್ಕಾಗಿ ದೇವತಾ ಪ್ರೀತಿಗಾಗಿ ದಿವ್ಯತಾ ಪ್ರಯೋಗಕ್ಕಾಗಿ "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭವತಿ" ಎಂಬಂತೆ ಸಮಸ್ತ ಜೀವರಾಶಿಗಳ ಇಚ್ಛೆಯಂತೆ ಪ್ರಿಯವಾಗಿರ ಬೇಕು. ಸರ್ವವೂ ಪ್ರಿಯವಾಗಿರುವಂತೆ ನೋಡಿಕೊಂಡು ವ್ಯತ್ಯಾಸ ವಾದರೆ ವ್ಯತ್ಯಾಸವನ್ನು ಸರಿಪಡಿಸಿ ಋತ-ತುಲೆಯ ದಂಡವು ಸಮವಾಗಿ ಶಾಂತಿ ವ್ಯವಸ್ಥೆ ಮಾಡಬೇಕಾದುದು ರಾಜನೀತಿ. (ರಾಜಮಾರ್ಗ - ಮಧ್ಯಮಮಾರ್ಗ - ಸರ್ವಪ್ರಿಯವಾದ ನಯ.) ಪ್ರತಿ ದೇಹಿಯಲ್ಲಿಯೂ ಅಡಗಿರುವ ರಾಜ್ಯಶಕ್ತಿಯ ಅಂಶಗಳೆಲ್ಲವೂ ಸಾರ್ವಜನಿಕ ಸಾರ್ವಕಾಲಿಕ-ಸಾರ್ವತ್ರಿಕವಾಗಿ ಸದಾ ಸನ್ನಿಹಿತವಾಗಿರಬೇಕಾದ ಕ್ಷತ್ರದ ಪರವಾಗಿ ಘನೀಭೂತವಾಗಿ ದೇಹಿಗಳ ವಿಶೇಷ ಹೊಣೆಗಾರಿಕೆಯ ಪರಿಮಿತಿಯಲ್ಲಿ ಯೂ, ಸ್ವವರ್ಣ - ಸ್ವಕರ್ಮ - ಸ್ವವೃತ್ತಿಗಳ ಪರಿಮಿತಿಯಲ್ಲಿಯೂ ರಾಜ್ಯದ ವಿಸ್ತೃತವಾದ ವಲಯಗಳಲ್ಲಿ ನೆಲಸಿ ಪ್ರಕಾಶಕ್ಕೆ-ರಂಜನೆಗೆ- ಬರುವ ರಾಜನೀತಿ ರಾಜ್ಯನೀತಿಯಾಗಿ ರೂಪಿತವಾಗುವುವು.

ದೇಹಿಗಳ ಇಚ್ಛಾ, ಸಂಕಲ್ಪ, ಋಣಗಳಿಗನುಗುಣವಾಗಿ ಆಹಾರ ವಿಹಾರ, ವಸತಿಗಳ ಮತ್ತು ವಾಯುಗುಣ, ಭೂಗುಣ - ಕರ್ಮವಾಸನಾ ನುಸಾರ ಮನೋಧರ್ಮ ಮನೋ ವ್ಯಾಪಾರ ಶಾರೀರಕ ವ್ಯಾಪಾರಗಳ ನಿತ್ಯ ಬದಲಾವಣೆಯಿಂದ ಆಗಬಹುದಾದ ಅ ಹಿ ತ ಅಪ್ರಿಯಗಳನ್ನು ತಡೆಗಟ್ಟುವ ವ್ಯವಸ್ಥೆಯನ್ನು ಮಾಡುವುದು ಕ್ಷತ್ರಿಯ- (ರಾಜನೀತಿಯ) ಕರ್ತವ್ಯ; ಶಾರೀರಕ ಮಾನಸಿಕ ವರ್ತನೆಗಳು ವ್ಯತ್ಯಸ್ತವಾದಾಗ ಶಾಂತಿ ಭಂಗವಾಗುವುದು. ಇಂತಹ ಸಂದರ್ಭಗಳಲ್ಲಿ ರಾಜ್ಯದ ಪಂಚವಲಯ ಗಳಲ್ಲಿಯೂ ರಕ್ಷಣಾ ವ್ಯವಸ್ಥೆಯು ಅವಶ್ಯಕ. 'ವಿದ್ಯಾ' ವಿಚಾರವನ್ನು ಪ್ರಕಟಪಡಿಸಿ ಬುದ್ಧಿವಾದ - ಭಯೋತ್ಪಾದನೆ - ದಂಡಾದಿಗಳಿಂದ ದೇಹಿ ಗಳಿಗೆ ವಿವೇಕವುಂಟಾಗುವಂತೆ ಸಂವಿಧಾನವನ್ನೇರ್ಪಡಿಸುವುದು ಸ್ವಾಭಾವಿಕವಾಗಿರುತ್ತದೆ.

ಋಣಾನುಭವಕ್ಕಾಗಿ ವ್ಯಕ್ತಿಯು ಹಿಂದೆ ಹಿಂದೆ ಮಾಡಿದ ಕರ್ಮ ಫಲದ ಪ್ರೇರಣೆ ಮತ್ತು ಬಲದ ಮೇಲೆ ತಾತ್ಕಾಲಿಕವಾಗಿ ಅಹಿತವನ್ನಾಚ ರಿಸಬಹುದಾದಾಗ ಶಾಂತಿ ರಕ್ಷಣಾ ಕರ್ತವ್ಯವುಳ್ಳ ರಾಜನೀತಿ ವ್ಯವಸ್ಥೆಗೆ ಒಳಪಟ್ಟ ಅಧಿಕೃತ ವ್ಯಕ್ತಿಗಳು ಅದನ್ನು ತಡೆಯುವುದಕ್ಕೂ ಪ್ರಾಯಶ್ಚಿತ್ತ ರೂಪದಲ್ಲಿ ಋಣಾನುಭವವನ್ನು ಪ್ರಾಪಂಚಿಕವಾದ ಮತ್ತು ದಿವ್ಯತಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧದ ಬೇರೆ ಮಾರ್ಗದಲ್ಲಿ ವಿನಿಯೋಗ ಮಾಡುವುದಕ್ಕೂ ಶಕ್ತರಾಗಿರುತ್ತಾರೆ.

ತಾತ್ಕಾಲಿಕವಾಗಿ ಪ್ರಕೃತಿ ಸನ್ನಿವೇಶದಿಂದ ಪ್ರೇರಿತರಾಗಿ ಕರ್ತವ್ಯ ಲೋಪ – ವಾ – ಸೀಮೋಲ್ಲಂಘನ ಮಾಡಿದರೂ ಅನಿರೀಕ್ಷ್ಯವಾಗಿ ದಾರಿ ತಪ್ಪಿದರೂ ತಾತ್ಕಾಲಿಕ ಋಣ ಪ್ರಭಾವಕ್ಕೆ ಸಿಕ್ಕಿ ವರ್ತನೆಯು ವ್ಯತ್ಯಾಸ ವಾದರೂ ಧರ್ಮ ಸಂರಕ್ಷಣಾರ್ಥವಾಗಿಯೇ ರಾಜನೀತಿ ವ್ಯವಸ್ಥೆಯನ್ನು ಕ್ರಮಪಡಿಸಿ ರಕ್ಷಣಾಧಿಕಾರಿಗಳು ಮಾರ್ಗದರ್ಶಕರಾಗಿರುತ್ತಾರೆ.

ವ್ಯಕ್ತಿಗಳು ದುರುಪಯೋಗಿಸಿದ್ದ ಅಥವಾ ವಿರೋಧಿಸಿದ್ದ ಮತ್ತು ದಿವ್ಯತೆಗಳಾಗಿ (ಡಿವಿನಿಟಿ) ಪರಿಣಾಮಕಾರಿಯಾದ (ಡೈನಮಿಕ್) ಗುಣ ಶಕ್ತಿಕರ್ಮಗಳನ್ನು ಸುಮುಖಗಳನ್ನಾಗಿ ಮಾಡಿಕೊಳ್ಳಲು ಪ್ರಾಯಶ್ಚಿ. ತ್ತಾದಿ ಶಾಂತಿ ಕರ್ಮಗಳಿಗಾಗಿ ತದ್ವಿದರೂ ಮಂತ್ರ ಪ್ರಯೋಗದಕ್ಷರೂ, ಆದವರನ್ನು ಆಶ್ರಯಿಸಿ ದುಃಖನಿವಾರಣೆ ಮಾಡಿಕೊಳ್ಳಬಹುದು. ಈ ಅವಸರದಲ್ಲಿ ಪ್ರವೇಶಿಸಿದ ಮಂತ್ರಪ್ರಯೋಗದಕ್ಷರೂ ಶ್ರೋತ್ರಿಯವರ್ತನೆ ಯವರೂ ರಾಜನೀತಿ ವ್ಯವಸ್ಥೆಗೆ ಒಳಪಟ್ಟ ಅಧಿಕಾರಿಗಳಂತೆ ಕರ್ತವ್ಯ ತತ್ಪರರಾಗಿ, ಸ್ವತಂತ್ರವಾಗಿ, ನೇರವಾಗಿ, ಸಾಕ್ಷಾತ್ತಾಗಿ ರಕ್ಷಣೆಯನ್ನು ನೀಡಿದಂತಾಗುತ್ತದೆ.

ಆರೋಗ್ಯವಿಲ್ಲದ ವ್ಯಕ್ತಿಯು ರೋಗವನ್ನು ಪರಿಹರಿಸಿಕೊಳ್ಳಲು ಯತ್ನಿಸುವುದು ಸ್ವಾಭಾವಿಕ. ಆದರೆ ಒಂದು ವ್ಯಕ್ತಿಯು ತನ್ನೊಂದು ವ್ಯಕ್ತಿಯ ರೋಗ ಪರಿಹಾರಕ್ಕಾಗಿ ಅಸಾಧಾರಣ ಪ್ರಯತ್ನಗಳನ್ನು ಮಾಡ ಬೇಕಾಗುವುದರಿಂದಲೂ, ಅನೇಕ ವ್ಯಕ್ತಿ ಕುಟುಂಬಗಳ ಅಂತಹ ರೋಗ ಪರಿಹಾರಕ್ಕಾಗಿಯೂ ರೋಗ ಪರಿಹಾರ ಕಾರ್ಯವೇ ಸ್ವಕರ್ಮವಾಗಿ ಉಳ್ಳ ವೈದ್ಯ ವೃತ್ತಿಯು ಧರ್ಮವೆನಿಸಿ ರಾಜನೀತಿ ವ್ಯವಸ್ಥೆಯ ಮಿತಿ ಯಲ್ಲಿ ಬರುವುದು. ಹೀಗೆ ರೋಗಬಾಧೆಯಿಂದ ತಪ್ಪಿಸಲು ನೀಡುವ ರಕ್ಷಣೆಯೇ ಸ್ವವೃತ್ತಿ, ಸ್ವವರ್ಣ, ಸ್ವಕರ್ಮವೆಂಬಂತೆ ಇರುವವರೂ ಧರ್ಮ ಪಾಲಕರೂ ರಾಜನೀತಿ ಜ್ಞಾನ – ಕಲಾವಿದರೂ ಆಗಿಯೇ ಇರುತ್ತಾರೆ.

ಧರ್ಮಮಯ, ಋತಮಯ, ರಾಜನೀತಿಮಯವಾದ ಪ್ರಪಂಚದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮಾಂಗವಾಗಿ ಖುತ ರಾಜನೀತಿಗಳೂ ಖುತಾಂಗವಾಗಿ ಧರ್ಮ ಖುತಗಳೂ, ಇವೆಲ್ಲವೂ ಸಂಸ್ಕೃತಿಯ ಅಂಗಗಳಾಗಿಯೂ ಸಂಸ್ಕೃತಿಯ ಅಂಗಗಳಾಗಿ ಇವೆಲ್ಲವೂ ಆಗಿರುವುದರಿಂದ ಒಂದನ್ನು ಮತ್ತೊಂದರಿಂದ ಪೂರ್ಣವಾಗಿ ಪ್ರತ್ಯೇಕಿಸುವುದು ಆಭಾಸ ಮತ್ತು ಅಪರಾಧವಾಗುತ್ತದೆ.

ಸಂಸ್ಕೃತಿ, ಧರ್ಮಗಳ ಅಂತರಂಗ ರಹಸ್ಯವನ್ನು ತಿಳಿಯದವರು ಆರ್ಥಿಕ ದಂಡದಿಂದ ಪ್ರಪಂಚದ ವ್ಯವಹಾರ, ಜೀವನವನ್ನು ಆಳೆಯುತ್ತಾರೆ; ರಾಜನೀತಿಯ ಖಡ್ಗದಿಂದ ಕ್ರಮಪಡಿಸಬಹುದು ಎನ್ನುತ್ತಾರೆ. ಆದರೆ, ಧರ್ಮಸೂಕ್ಷ್ಮವನ್ನರಿಯದ ರಾಜನೀತಿಯ ಖಡ್ಗವು ಮೊಂಡಾಗಿ ಕೆಲಸಮಾಡಲಾರದಾಗುತ್ತದೆ. ಕೇವಲ ಧರ್ಮ ಸೂಕ್ಷ್ಮದ ಪ್ರಾಧಾನ್ಯದಿಂದ ರಾಜನೀತಿಯನ್ನು ದೂರೀಕರಿಸಿದರೆ ಸಾಮಗ್ರಿ ಇಲ್ಲದೆ ಅಡಿಗೆ ಮಾಡಲು ಯತ್ನಿಸಿದಂತೆಯೂ ದರ್ವೀ ಇಲ್ಲದೆ ಆಜ್ಯ ಹೋಮ ಮಾಡಲು ಯತ್ನಿಸಿದಂತೆಯೂ ವಿಫಲವಾಗುವುದು ರಾಜನೀತಿಯ ಪ್ರತಿಯೊಂದು ಹಜ್ಜೆಯ ಸೂಕ್ಷ್ಮಗತಿಯಲ್ಲಿ ಧರ್ಮವನ್ನೂ ಧರ್ಮದ ಪ್ರತಿಸೂಕ್ಷ್ಮಗತಿಯಲ್ಲಿ ರಾಜನೀತಿಯನ್ನೂ ಸಾಕ್ಷಾತ್ಕರಿಸುತ್ತಲೇ ವ್ಯವಹರಿಸಬೇಕಾಗಿದೆ ಧರ್ಮವೇ ರಾಜನೀತಿ; ರಾಜನೀತಿಯೇ ಧರ್ಮವೆಂದು ಭಾವಿಸುವುದು ಬ್ರಾಹ್ಮೀ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿ ಗೋಚರವಾಗುವುದು. ಇದನ್ನು ಪ್ರಮಾಣೀಕರಿಸಿ ಎಚ್ಚರಿಸುವುದಕ್ಕಾಗಿಯೇ ಗೀತೆಯಲ್ಲಿ ಅಧಿಕೃತವಾದ ರಾಜನೀತಿ ವಿಚಾರಗಳು ಪ್ರಸ್ಥಾನ ತ್ರಯದ ಮಟ್ಟಕ್ಕೆ ಏರಿರುತ್ತವೆ.

ಧರ್ಮಾಧಿಕಾರಗಳೆಂದರೆ ಕೇವಲ ಗೊಡ್ಡು ಧರ್ಮ ಶಬ್ದಗಳ ವಿಚಾರಗಳನ್ನು ಹೇಳುವುದಲ್ಲ. ಅಮಾತ್ಯರೆಂದರೆ ಮಾರ್ಗ ತಪ್ಪಿ ನಡೆಯುವ ಕುಹಕಿಗಳೆಂತಲೂ ಅಲ್ಲ. ಎರಡು ವರ್ಗಗಳಲ್ಲಿಯೂ ಎರಡು ತತ್ವಗಳೂ ಸಮ ಬಲದಿಂದ ಸೇರಿ ರಾಜ್ಯವನ್ನು ಧರಿಸುವುವು. ರಸ ವಿಮರ್ಶಕರು ಕೂಲಂಕಷವಾಗಿ ವಿಚಾರಿಸಿ ಸಮಾಧಾನ-ಸಮತೆಯ ದೃಷ್ಟಿಗಳಿಂದ ರಾಜ್ಯ ಸಾಧನೆಗೆ ಯತ್ನಿಸಬೇಕಾಗಿರುತ್ತದೆ. "ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ" ಎಂದು ವಿದ್ಯಾರಣ್ಯ ಮಹಾಮುನಿಗಳು ಸಂದೇಶವನ್ನಿತ್ತು ಸ್ವತಃ ಜಲದಲ್ಲಿರುವ ತಾವರೆ ಎಲೆಯಂತೆ ಕರ್ತವ್ಯ ನಿಷ್ಠರಾಗಿ, ವ್ಯವಹಾರದ ಸೋಂಕನ್ನು ಅಂಟಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಳ್ಳದೆ ಲೌಕಿಕ ವೈದಿಕ ದಿಗ್ವಿಜಯಗಳನ್ನು ಮಾಡಿ ಮಾರ್ಗದರ್ಶಕರಾಗಿರುತ್ತಾರೆ. ಚಾಣಕ್ಯ ಮಹರ್ಷಿಗಳೂ ಧರ್ಮ ಸಂಸ್ಥಾಪನೆಯೇ ರಾಜನೀತಿ ಎಂದು ಭಾವಿಸಿ, ಶ್ರಮಿಸಿ ಋಷಿ ಧರ್ಮವನ್ನು ಬೆಳಗಿರುತ್ತಾರೆ.

ವರ್ಣಾಶ್ರಮ ವ್ಯವಸ್ಥೆಗೆ ರಾಜನೀತಿಯೇ ಮೂಲ. ರಾಜನೀತಿಯ ಪರಮ ಧ್ಯೇಯವೂ ಸಾಧನೆಯೂ, ಕರ್ತವ್ಯವೂ - ವರ್ಣಾಶ್ರಮ ವ್ಯವಸ್ಥೆಗಾಗಿಯೇ ಎಂಬುದು ಸಿದ್ಧಾಂತ. ಪ್ರಪಂಚದಲ್ಲಿ ಕಂಡುಬರುವ ವ್ಯಾಪಾರಗಳೆಲ್ಲಕ್ಕೂ ವರ್ಣಾಶ್ರಮ ವ್ಯವಸ್ಥೆಯು ತಾಯಿಯಂತೆಯೂ ರಾಜನೀತಿಯು ತಂದೆಯಂತೆಯೂ ಇದ್ದು ಪ್ರಜೆಗಳೆಂಬ ಮಕ್ಕಳ ರಾಜ್ಯವು ಚರಿತಾರ್ಥವಾಗಬೇಕಾಗಿರುತ್ತದೆ. ಈ ರಹಸ್ಯವನ್ನೂ ಮರ್ಮವನ್ನೂ ಇಂಗಿತವನ್ನೂ ತಿಳಿದ ಋಷಿಗಳು ಧರ್ಮವನ್ನೇ, ಆಚಾರವನ್ನೇ, ಸಂಸ್ಕೃತಿಯನ್ನೇ, ರಾಜನೀತಿ ಎಂದು ಭಾವಿಸಿ ರಾಜನೀತಿ ಎಂಬ ಅಧ್ಯಾಯವಲ್ಲಿ ಪುನರುಕ್ತಿಯಾಗುವುದರಿಂದ ವಿವರಿಸದೆ ರಾಜನೀತಿಯು ವರ್ಣಾಶ್ರಮದಲ್ಲಿ ಅಂತರ್ಗತವಾದಂತೆ ಧರ್ಮಶಾಸ್ತ್ರಗಳನ್ನು ಉಲ್ಲೇಖಿಸಿರುತ್ತಾರೆ. ಪರಮ ಶ್ರೇಷ್ಠವೂ ಶಕ್ತಿಪ್ರದವೂ ಶಕ್ತಿಯುತವೂ ಆದ ರಾಜನೀತಿಯಿಲ್ಲದಿದ್ದರೆ ಧರ್ಮವೂ ಇಲ್ಲ; ವರ್ಣವೂ ಇಲ್ಲ; ಆಶ್ರಮ ಮೊದಲೇ ಇಲ್ಲ; ಎಲ್ಲವೂ ಗೊಂಡಾರಣ್ಯವಾಗಿ ಪರಿಣಮಿಸುವುದು.

ರಾಜನೀತಿಯು ವಿಶಾಲ ಪ್ರಪಂಚಕ್ಕೆ ಸಾರ್ವತ್ರಿಕ ಸಾರ್ವಜನಿಕ ಸಾರ್ವಕಾಲಿಕವಾಗಿ ಅನ್ವಯಿಸುವುದರಿಂದ ತದಧೀನವಾಗಿರುವಂತೆ ಧರ್ಮವು ವರ್ತಿಸಿ ಆನಂದಪ್ರದವಾಗಬೇಕಾಗಿದೆ. ರಾಜನೀತಿಯನ್ನು ಆದರಿಸುವುದರಿಂದ ಧರ್ಮವು ಸುರಕ್ಷಿತವಾಗುವುದು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು ವರ್ಣಾಶ್ರಮ ಕರ್ಮಗಳಿಂದಲೇ ಸಾಧಿಸಲ್ಪಡಬೇಕಾಗಿವೆ. ಇವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಪುರುಷಾರ್ಥಗಳು ಹಗ್ಗದಂತೆ ಹೆಣೆದುಕೊಂಡೇ ಇರುತ್ತವೆ. ಅರ್ಥವೂ, ಕಾಮವೂ, ಮೋಕ್ಷವೂ ಸಹ ಧರ್ಮವೇ ಆಗಿರುತ್ತದೆ. ಕಾಮ ಮತ್ತು ಅರ್ಥಗಳು ಮೋಕ್ಷದ ತತ್ವವನ್ನು ಒಳಗೊಂಡಿರುತ್ತವೆ. ಮನೋಭಾವನೆಗೆ ಅನುಗುಣವಾಗಿ ದೇಹಿಗಳು ಏಕೈಕವಾದ ಶ್ರೇಯಸ್ಸನ್ನು ಧರ್ಮವಾಗಿಯೂ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥವಾಗಿಯೂ ಅಥವಾ ಕಾಮವಾಗಿಯೂ ಅಥವಾ ಮೋಕ್ಷವಾಗಿಯೂ ಕಲ್ಪಿಸುವರು.

ಆರ್ಥಿಕ ರಾಜನೀತಿಯೆಂದು ಕೇವಲ ಪ್ರಾಪಂಚಿಕವಾದ ಅಧೋದೃಷ್ಟಿಕೋಣದಿಂದ ಕರ್ತವ್ಯಾಕರ್ತವ್ಯಗಳೂ ಆಗುಹೋಗುಗಳೂ ಪುರುಷಾರ್ಥಗಳಿಗಿಂತ ಹೆಚ್ಚೆಂದು ಹೆಮ್ಮೆ ಪಡಬೇಕಾಗಿಲ್ಲ. ಅಥವಾ ಧರ್ಮದ ಉನ್ನತ ಶಿಖರದಿಂದ ಕೆಳಗೆ ನೋಡಿ ಆರ್ಥಿಕ ರಾಜನೀತಿಯು ಕುತ್ಸಿತ-ಕೀಳು ಮಟ್ಟದ್ದೆಂದು ಭಾವಿಸಬೇಕಾಗಿಲ್ಲ.

ರಾಜನೀತಿ ತತ್ವವಿಲ್ಲದ ಧರ್ಮ- (ಸಂಸ್ಕೃತಿ-ಆಚಾರ) ವಿಲ್ಲ. ಈ ಸಮಸ್ಯೆಗಳನ್ನು ರುದ್ರಾಧ್ಯಾಯದ ಶಕ್ತಿವಿವರಣೆಗಳು ಸ್ಪಷ್ಟಗೊಳಿಸುವುವು.

ಶ್ರೀ ವಿದ್ಯಾರಣ್ಯ ಶ್ರೀಜಗದ್ಗುರು ಶಂಕರಾಚಾರ್ಯರುಗಳ ವರ್ತನೆಗಳನ್ನು ಬೆಳಗುವ ಗ್ರಂಥಗಳಲ್ಲಿಯೂ, ವೇದಗಳಲ್ಲಿಯೂ, ರಾಜ-ರಾಷ್ಟ್ರ-ನೀತಿಗಳುಳ್ಳ ಯಜ್ಞಗಳಲ್ಲಿಯೂ "ಅರ್ಥವಾದ" ನಿದರ್ಶನ, ಕಥಾಂಶಗಳಲ್ಲಿಯೂ ವಿವರಿಸಲ್ಪಟ್ಟಿರುವ ರಾಜನೀತಿಯ ತಿಳಿವಳಿಕೆಯು ವೇದಾರ್ಥಜ್ಞಾನದಲ್ಲಿ ಆಸಕ್ತರಾದವರಿಗೆ ಹೃದಯಂಗಮವಾಗುವುದು.

ಬ್ರಹ್ಮಾಂಡ ಪಿಂಡಾಂಡಗಳಲ್ಲಿ ನಡೆವ ಕಲನ-ಮಂಥನ ವ್ಯಾಪಾರಗಳಿಗೆ ಮೂಲವಾದ ಋತವೇ ರಾಜನೀತಿಯಾಗಿರುವುದು. ಧರ್ಮದ ಆಧಾರದ ಮೇಲೆ ನಡೆಯುವ ವ್ಯವಹಾರ ರಾಜನೀತಿಯ ಪಾಲನೆಯಿಂದ ತಾತ್ಕಾಲಿಕ ಮತ್ತು ಜೀವಾವಧಿ ಜೀವನ ವರ್ತನೆಯು ಸುಗಮವಾಗಿ ನಡೆಯುವುದಾದರೆ, ವರ್ಣಾಶ್ರಮ ವ್ಯವಸ್ಥೆಯು ಹಿತವಾಗಿರುವುದು. ಅಂದರೆ ಶ್ರೇಯಸ್ಸಾಧನೆಯಾಗಿ ಉತ್ತಮವಾದ ಶ್ರೇಯಸ್ಸೋಪಾನಗಳನ್ನು ಸ್ವಸ್ವರೂಪಾವಸ್ಥಾನ ಪರ್ಯಂತ ಆಶ್ರಯಿಸಬಹುದಾಗಿರುತ್ತದೆ. ರಾಜನೀತಿಯೂ ಧರ್ಮ ಸಾಧನವೇ ! ಧರ್ಮವೇ ! - ಎಂದು ಪ್ರತಿಕ್ಷಣದಲ್ಲಿಯೂ ವರ್ತನೆಗಳನ್ನು ರಾಜನೀತಿಯಿಂದ ಅಳವಡಿಸಿಕೊಂಡರೆ ಧರ್ಮವಾಗುವುದು. ಇಂದ್ರಿಯಾತೀತವಾದ ಧರ್ಮವು ಇಂದ್ರಿಯ ಗೋಚರವಾದ ರಾಜನೀತಿಯಿಂದಲೇ ಕರಗತವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೫. ವರ್ಣಾರ್ಥ ವಿಮರ್ಶೆ

ಇದುವರೆಗೂ ವಿಮರ್ಶಿಸಿ ತಿಳಿದ ಲಕ್ಷಣ, ಸಂಕೇತ ಮೊದಲಾದ ವಿವರಣೆಗಳಿಂದ ಶ್ರೋತ್ರಿಯತ್ವಾದಿಪಂಚವರ್ಣಗಳ ಅಥವಾ ವರ್ಣಸಂಜ್ಞೆಗಳ ಅರ್ಥಗಳು ಶಕ್ಯವಾದಷ್ಟುಗೆ ಪುಷ್ಟೀಕರಿಸಲ್ಪಡುವುವು. ಶ್ರೋತ್ರಿಯ, ಕ್ಷತ್ರಿಯ, ವೈಶ್ಯಗಳ ಅರ್ಥ ವಿವರಣೆಯು ಜನತೆಯ ಅಂಗೀಕಾರವನ್ನು ಹೊಂದಿರುವುದು. ಶೂದ್ರ ಶಬ್ದಾರ್ಥ ವಿವರಣೆಯು ಸಂದಿಗ್ಧವಾಗಿ ಮನಃಕ್ಷೋಭೆಯನ್ನುಂಟುಮಾಡಿರುವುದು. ನಿಷಾದ ಶಬ್ದಾರ್ಥ ಪರಿಕಲ್ಪನೆಯು ಔದಾಸೀನ್ಯಕ್ಕೆ ಪಾತ್ರವಾಗಿರುವುದು. ವರ್ಣಗಳಲ್ಲೆಲ್ಲಾ ಪ್ರಧಾನವಾದುದು ನಿಷಾದವು. ಇದರ ಆವರಣದೊಳಗೆ ಸುರಕ್ಷಿತವಾಗಿ ಉಳಿದ ವರ್ಣಗಳು ಪ್ರಗತಿಯನ್ನು ಸಾಧಿಸುವುವು. ಪ್ರಗತಿಯನ್ನು ಸಾಧಿಸುವ ವರ್ಣಗಳಲ್ಲಿ ಪ್ರಧಾನವಾದುದು ಶೂದ್ರವು. ವಿಶ್ವದಲ್ಲಿ ಜನ್ಮವೆತ್ತಿದ ದೇಹಿಗಳಿಗೆಲ್ಲಾ ಶೂದ್ರಕ್ಕಾಗಿ ಶೂದ್ರದಿಂದ ಶೂದ್ರವಾಗಿರುವ ಸ್ಥಿತಿಯು ಸಾಮಾನ್ಯವಾಗಿರುವುದು. ಈ ಶಬ್ದದ ಅರ್ಥವು ಬೆಳಕಿಗೆ ಬಂದು ಜನತೆಯ ಅವಗಾಹನೆಗೆ ಬಂದರೆ ಶತಶಃ, ಸಹಸ್ರಶಃ, ಕೋಟಿಶಃ ಶ್ರೇಯಸ್ಸು ಹೆಚ್ಚುವುದಕ್ಕೆ ಅನಕಾಶವಾಗುವುದು. ಶೂದ್ರ ಶಬ್ದಾರ್ಥವು ಮರೆಯಾಗಿರುವ ಕಾರಣ ಪ್ರಜೆಗಳ ಮನಃಕ್ಲೇಶವು ಹೆಚ್ಚುತ್ತಿದೆ. ಶೂದ್ರ ಶಬ್ದಾರ್ಥವನ್ನು ನಿಷ್ಪಕ್ಷಪಾತತೆಯಿಂದ ಸಮದರ್ಶಕ ಯಂತ್ರದಿಂದ ನೋಡುವುದು ಪ್ರಥಮಕಲ್ಪವಾಗಿರುತ್ತದೆ.

ದರ್ಶನ ಶಾಸ್ತ್ರಗಳ ಅಧ್ಯಯನ ಪ್ರಭಾವಕ್ಕೆ ಸಿಕ್ಕಿದ ಪ್ರಜೆಗಳ ವೇದಪ್ರತಿಪಾದಿತವಾದ ವಿಷಯಗಳಲ್ಲಿ ಯಾವುದೋ ಒಂದೊಂದು ಇಂದ್ರಿಯಾತೀತ ವಿಷಯದ ಸಮಸ್ಯೆಯ ಕಡೆಗೆ ಗಮನಕೊಡುವ ಸಂಘಟನೆಯು ಕಂಡುಬಂದಿದೆ. ಈ ಸನ್ನಿವೇಶದಲ್ಲಿ ಸರ್ವ ಸಾಮಾನ್ಯವಾಗಿರುವ ಕಾರಣದಿಂದ ಔದಾಸೀನ್ಯಕ್ಕೆ ಪಾತ್ರವಾದ ಶೂದ್ರನಿಷಾದಾದಿ ವಿಷಯಗಳ ಅರ್ಥ ವಿಮರ್ಶೆಗಳನ್ನು ಕೈಬಿಟ್ಟಂತೆ ಕಾಣುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕೃತಿಯಿಂದ ಸುಪೋಷಿತರಾದ ಪ್ರಜೆಗಳು ಒಳ್ಳೆಯ ವಸತಿಗಳಲ್ಲಿ ಸೇರಿ ಅಖಿಲ ಭೂಪ್ರದೇಶಗಳ ಅರಿವನ್ನು ದೂರೀಕರಿಸುವುದರಿಂದ ಸಂಕುಚಿತ ಪ್ರದೇಶದಲ್ಲಿ ಮುಂದುವರಿಯುತ್ತಾ 'ಆಚಾರ ವಿವೇಚನಾಭ್ಯುದಯ'ವೆಂಬ ಕ್ಲಿಷ್ಟ ಕಾರ್ಯದಲ್ಲಿ ಪ್ರವರ್ತಿಸಲಾರರು. ಪೂರ್ವ ಮೀಮಾಂಸಾದಿ ಶಾಸ್ತ್ರ ಪಾರಂಗತರೂ ಸಹ ಅತ್ತಿತ್ತ ನೋಡಿ ವಿಮರ್ಶಿಸದೆ ಒಂದೇ ದಿಕ್ಕಿನಲ್ಲಿ ಮುಂದುವರಿದು ಆಯಾ ಶಾಸ್ತ್ರದ ಪ್ರಕ್ರಿಯೆಯ ಪರಾಕಾಷ್ಠದಶೆಯನ್ನು ಹೊಂದಿದರೇ ಹೊರತು ಪ್ರಜೆಗಳ ಆಚಾರ, ವ್ಯವಹಾರ, ಆರ್ಥಿಕ, ಪಾರಮಾರ್ಥಿಕ ವಿಷಯಗಳನ್ನು ನಿತ್ಯ ಕರ್ಮಯಜ್ಞಗಳಿಗೆ ಹೊಂದಿಸಿಕೊಂಡು ವಿಶಾಲ ದೃಷ್ಟಿಯಿಂದ ಸಮನ್ವಯ ಮಾಡುವುದಕ್ಕೆ ಯತ್ನಿಸಿದಂತೆ ಕಾಣುವುದಿಲ್ಲ. ಶೂದ್ರವನ್ನು ಕೆಲವು ಪ್ರಜೆಗಳ ಮೇಲೆ ಮಾತ್ರ ಆರೋಪಿಸಿ ಬೇರ್ಪಡಿಸಿದಂತೆ ವರ್ತಿಸಿರುವುದು ಸಮಾಜವೆಂಬ ಆಯತನಕ್ಕೆ ಒಡಕನ್ನುಂಟುಮಾಡಿದಂತಾಗಿದೆ.

ಪ್ರಭಾವಯುತವಾದ ಶೂದ್ರವನ್ನು ಅರ್ಥಮಾಡಿಕೊಳ್ಳದೆಯೋ ಅಸೂಯೆಯಿಂದಲೋ ಅಹಂಕಾರದಿಂದಲೋ ಬ್ರಾಹ್ಮಣ ದೇಶದ ಕೆಲವು ಭೂಭಾಗಗಳಲ್ಲಿ ಶೂದ್ರನು ಬೇಯುವಂತಾಗಿ ಇತರ ಗುಣ ಶಕ್ತಿಕರ್ಮಗಳನ್ನೂ ಬೇಯಿಸುತ್ತಿರುವುದರ ಮರ್ಮವು ಜನಗಳ ತಿಳಿವಳಿಕೆಗೆ ಬರದಂತೆ ಅಡಗಿರುತ್ತದೆ. ಗಹನವಾಗಿರುವ ಇದರ ರಹಸ್ಯವನ್ನು ಭೇದಿಸಿ ಹೊರಗೆಡುವುದರ ಔಚಿತ್ಯವು ಸಾಧುವಾದುದೇ ಅಹುದು. ಆದರೆ ಜನತೆಯು ಉತ್ತೇಜನವಾಗಲೀ ಪ್ರೋತ್ಸಾಹವಾಗಲೀ ರಹಸ್ಯವನ್ನು ಬಯಲಿಗೆ ತರುವುದಕ್ಕೆ ಸಾಕಾಗುವಷ್ಟು ಹಿತಕರವಾಗಿಲ್ಲ; ಆದುದರಿಂದ ಶಾಸ್ತ್ರೋಕ್ತವಾಗಿ, ವೇದೋಕ್ತವಾಗಿ, ವಿಧ್ಯುಕ್ತವಾಗಿ–ಭೇದ ಭಾವಗಳನ್ನು ಬಿಟ್ಟು ವ್ಯವಹರಿಸುವ ತಪಸ್ವಿಗಳು ಉದಾಸೀನರಾಗಿರುವ ಪರಿಸ್ಥಿತಿಯೇ ಉಂಟಾಗಿದೆ. ವೈಶ್ಯಾದಿ ಪಂಚಕರ್ಮಗಳು ಸಮಾನಾಂತರದಲ್ಲಿ ಸಮವನ್ನು ಗುರಿಯಾಗಿಟ್ಟುಕೊಂಡು ಸಮವಾಗಿ ವರ್ತಿಸುವುದಕ್ಕೆ ಬದಲಾಗಿ ಪರಸ್ಪರ ಘರ್ಷಣಕ್ಕೆ ಬಲಿಯಾಗಿರುವುದರಿಂದ ಶಾಂತಿಯು ಭಂಗವಾಗುವುದಕ್ಕೆ ಅವಕಾಶವಾಗಿದೆ.

ಸಂಕುಚಿತವಾದ ಒಂದೊಂದು ಪ್ರದೇಶದಲ್ಲಿ ಸ್ವಪರಿಪೂರ್ಣತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಂದ ತೃಪ್ತಿ ಮತ್ತು ಪರಸ್ಪರ ಸೌಹಾರ್ದವು ತುಂಬಿರುವುದಕ್ಕೆ ಭೂ ಮಂಡಲ ಜ್ಞಾನವು ಮರೆಯಾಗಿದ್ದುದೂ ವಿದೇಶೀಯ ವಾತಾವರಣದ ಬಾಧೆಯು ಇಲ್ಲದಿದ್ದುದೂ ಕಾರಣವಾಗಿದ್ದುವು. ಇದರಿಂದ ಶೂದ್ರ ಶಬ್ದ ನಿರ್ವಚನವು ನಿಷ್ಪಕ್ಷಪಾತವಾಗಿಯೂ ರಸಾಭಿನಿವಿಷ್ಟ ವಿಮರ್ಶಾತ್ಮಕವಾಗಿ ಯೂ ಸರ್ವ ಸಾಮಾನ್ಯವಾಗಿರುವಂತೆಯೂ ನಡೆಯಲಿಲ್ಲ; ಆವಶ್ಯಕತೆ ಯೂ ಉಂಟಾಗಲಿಲ್ಲ. ಕಾಲ ಕ್ರಮೇಣ ಜೀವನದ ಹೋಲಿಕೆ ವ್ಯತ್ಯಾಸ ಗಳ ಸಾಮಾನ್ಯ ವಿಮರ್ಶೆಯು ಮಾತ್ರ ಹೆಚ್ಚುತ್ತಾ ಬಂದಿತು. ಜೀವನದ ನೆಲೆಯನ್ನು ತಿಳಿಯುವ ಸಂಭ್ರಮದಲ್ಲಿ ತತ್ವಾನ್ವೇಷಕರ ದರ್ಶನ ಪಂಥ ಗಳು ಬೇರೆ ಬೇರೆಯಾಗಿ ಬಿಡಿಬಿಡಿಯಾಗಿ ಕಾಣಿಸಿಕೊಂಡ ಕಾರಣದಿಂದ ಜನಗಳ ಹೃದಯವು ಬೇಯಲಾರಂಭಿಸಿತು. ತುಚ್ಛವೆಂಬ ಭಾವನೆಯಿಂದ ಸಾಮಾನ್ಯವಾದ ವಸ್ತು ವಿವೇಚನೆ ಕಡೆಗೆ ವಿದ್ವಾಂಸರ ಮನಸ್ಸು ಹೋಗಲಿಲ್ಲ. ಆದುದರಿಂದ ಜಗತ್ತಿನಲ್ಲಿ ಋಣಕರ್ಮಗಳು ಅಪರಿಮಿತ ವಾಗಿ ಕೊನೆಮೊದಲಿಲ್ಲದೆ ಹಬ್ಬುವಂತಾಯಿತು. ಕಾಣಲು ಆಗದಿರುವ ತತ್ವವನ್ನು ಕಾಣಲಾಗುವುದಿಲ್ಲ.— ಎಂದು ಸಿದ್ಧಾಂತ ಮಾಡುವುದಕ್ಕೆ ಅನೇಕ ತಲೆಮಾರುಗಳು ಕಳೆದು ಹೋದುವು. ಮಾನವರ ಕರ್ಮ ಮತ್ತು ಋಣಗಳ ರಹಸ್ಯವನ್ನು ಬೆಳಗುವ ಸಂಕಲ್ಪವಾಗಲೀ ವ್ಯವಸಾಯವಾಗಲೀ ನಡೆಯುವುದಕ್ಕೆ ತಕ್ಕ ಸನ್ನಿವೇಶ ಸಂದರ್ಭಗಳು ಒದಗಲಿಲ್ಲ.

ಶೂದ್ರ ಶಬ್ದದ ಅರ್ಥಜ್ಞಾನ ರಸಾನುಭವವಾಗಿಲ್ಲವೆಂದಮಾತ್ರಕ್ಕೆ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ನಿಷಾದ ಶಬ್ದಗಳ ಅರ್ಥಜ್ಞಾನರಸಾ ಸ್ವಾದನವು ಹರ್ಷವನ್ನುಂಟುಮಾಡಿದೆ ಎಂದು ನಂಬಕೂಡದು. ನಿಷಾದ ಶಬ್ದದ ಅರ್ಥವಂತೂ ವಿದ್ವದ್ಗೋಷ್ಠಿಯ ಪರಿಮಿತಿಗೆ ಬಂದೇ ಇಲ್ಲವೆಂದು ಹೇಳಬಹುದು. ಇದಕ್ಕೆ ಜನತೆಯ ಔದಾಸೀನ್ಯವೂ, ರಾಜನೀತಿಜ್ಞರು ವಿರಳರಾಗಿ, ಸಮರ್ಥರಾಗಿಲ್ಲದಿರುವುದೂ ಕಾರಣ. ಈ ವಿಚಾರದಲ್ಲಿ ರಸಾಭಿನಿವಿಷ್ಟ ವಿಮರ್ಶೆಗೆ ವಿದ್ವಾಂಸರಾಗಲೀ ಒಂದು ವರ್ಣದವರಾಗಲೀ ವಿಶೇಷ ಹೊಣೆಗಾರಿಕೆಯನ್ನು ಹೊತ್ತಿರುವುದರಿಂದ ಅವರ ಕರ್ತವ್ಯಲೋ ಪವೆಂದು ಎಂದಿಗೂ ಎಣಿಸಲಾಗದು. ವಿಶೇಷ ಹೊಣೆಗಾರಿಕೆ ಹೊತ್ತ ಅಂತಹವರ ಕರ್ತವ್ಯಪರತೆಯೂ ಕಾರ್ಯ ನಿರ್ವಾಹವೂ ಇತರ ವರ್ಣಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷ ಹೊಣೆಗಾರಿಕೆಗಳಿಗೂ ಸೇರಿರುವುದು. ವರ್ಣ ಸಮುಷ್ಟಿಯದ ⅘ ಭಾಗವು ಉಳಿದ ⅕ ವರ್ಣದ ರಕ್ಷಣೆಗೆ ದೀಕ್ಷೆ ವಹಿಸಬೇಕಾದುದರಿಂದ ನಾಲ್ಕು ವರ್ಣಗಳ ಮೇಲೆಯೇ ಹೊಣೆಗಾರಿಕೆಯು ಹೊರಿಸಲ್ಪಡುವುದು.

ಕರ್ತವ್ಯ ಲೋಪವೆಂಬ ಗ್ಲಾನಿಯು ಕಂಡಾಗ, ವಾತಾವರಣದಲ್ಲಿ ಅಸಮತೆಯು, ವೈಷಮ್ಯವು ಹೆಚ್ಚಿದಾಗ, ಋತಪ್ರೇರಣೆಯಂತೆ ವಿಭೂತಿ ಪುರುಷರು ದೇಶ ಪ್ರದೇಶಗಳ ಪ್ರಜೆಗಳ ಕೋರಿಕೆ - ಹಂಬಲದ ಫಲವಾಗಿ ಉದಯಿಸಿ ಲೋಪ ದೋಷಗಳನ್ನು ನಿವಾರಣೆ ಮಾಡುವುದೂ ಸ್ವಾಭಾವಿಕವಾಗಿಯೇ ಇದೆ. ವಾಗರ್ಥಗಳು ಹೊಂದಿಕೊಂಡಿರುವಂತೆ ತುಲನ ವಿಮರ್ಶಾತ್ಮಕವಾಗಿ ರಸಾಭಿನಿವೇಶದಿಂದ ಪ್ರಯತ್ನಮಾಡದಿರುವುದಕ್ಕೆ ಔದಾಸೀನ್ಯವೂ ಕಲಿ = ಶಯನಾವಸ್ಥೆಯೂ ಕಾರಣ. ಸಂಕುಚಿತವಾದ ಶಾಸನವೂ ಭೂ ಪ್ರಪಂಚ ಜ್ಞಾನ ಶೂನ್ಯತೆಯೂ ರಾಜನೀತಿಯನ್ನು ವಿಕಾಸಗೊಳಿಸದಿರುವುದೂ ಸಹ ಕಾರಣವಾಗಿರುತ್ತವೆ.

ಸಾಮಾನ್ಯವಾಗಿ ಶಬ್ದಗಳ ನಿರ್ವಚನವನ್ನು (ಅರ್ಥ ವಿವರಣೆ) ಮಾಡುವಾಗ ಆಯಾ ಮೂಲ ಶಬ್ದಗಳು ಹೇಳುವ ಗುಣ ಕರ್ಮ ಶಕ್ತಿಗಳನ್ನು ಪ್ರಧಾನವಾಗಿ ಎಣಿಸಬೇಕಾಗಿದೆ. ಶೂದ್ರ ಶಬ್ದಕ್ಕೆ ಮೂಲವನ್ನು ಇನ್ನೂ ಹುಡುಕಬೇಕಾದ ಪರಿಸ್ಥಿತಿಯೇ ಮುಂದುವರಿಯುತ್ತಿದೆ. ಇದು ಶೋಚನೀಯವೇ ಹೊರತು, ಶೂದ್ರ ಶಬ್ದವು ಶೋಚನೀಯವಲ್ಲ. ಶೂದ್ರವನ್ನು ಶೋಚನೀಯವೆಂಬ ದೃಷ್ಟಿಯಿಂದ ನೋಡಿದರೆ ಮಹಾ ಪರಾಧವಾಗುತ್ತದೆ. ಎಂದು ವೇದ ಪುರುಷನೇ ಸರ್ವರ ಹೃದಯದಲ್ಲಿ ನಿಂತು ಉದ್ಘೋಷಿಸುತ್ತಿರುತ್ತಾನೆ. ಈಗಿರುವಂತೆ ಶೂದ್ರ ಶಬ್ದ ನಿರ್ವಚನವೂ ಅರ್ಥವೂ ವಿವೇಕಕ್ಕೆ ದೂರವಾಗಿರುವುದರಿಂದ ಅದನ್ನು ಪುನಃ ಪುನಃ ಉದಾಹರಿಸುವುದರಲ್ಲಿ ಔಚಿತ್ಯವಿಲ್ಲ. ಸಮಸ್ತ ದೃಷ್ಟಿ ಕೋಣಗಳನ್ನು (ವೃತ್ತದ 360 ಅಂಶಗಳಿಂದ) ಏಕ ಕಾಲದಲ್ಲಿ ವ್ಯಕ್ತಿಯ ಕಣ್ಣ ಮುಂದೆ ಚಿತ್ರಿಸಿ ತೋರಿಸುವ ಸಾಧನೆಗಳು ಇರುತ್ತವೆ. ಧರ್ಮ ಜಿಜ್ಞಾಸೆಯೆಂಬ ಕಾಮಧೇನುವಿನಿಂದ ಪಡೆದ ಧರ್ಮಾಮೃತದ ಸಾಧನಗಳು ಇರುತ್ತವೆ. ಧರ್ಮ ಜಿಜ್ಞಾಸೆಯೆಂಬ ಕಾಮಧೇನುವಿನಿಂದ ಪಡೆದ ಧರ್ಮಾಮೃತದ ಕ್ಷೀರದ ದಧಿಯಂತಿರುವ ಸರ್ವಶಾಸ್ತ್ರಗಳನ್ನು ಪರಸ್ಪರ ತುಲನಾತ್ಮಕವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಥಿಸಿ ಶೋಧಿಸಿ ಏಕೈಕ ಪ್ರಕಾರವಾದ ನವನೀತವನ್ನು ತೆಗೆದು ಉಣಬಡಿಸಬೇಕು, ಉಣ್ಣಬೇಕು.

ಶೂದ್ರ ಶಬ್ದಾರ್ಥವನ್ನು ಪ್ರತಿಪಾದಿಸುವವರು ಕೃಷಿ ಶಬ್ದಾರ್ಥವನ್ನು ಮುಂದೊಡ್ಡುವರು. ಕೃಷಿ, ವ್ಯವಸಾಯ, ಉದ್ಯಮ ಇತ್ಯಾದಿಗಳು ಪರ್ಯಾಯ ಪದಗಳಾಗಿರುವುವು. 'ಕೆಲಸ ಮಾಡುವುದು' ಎಂಬುದೇ ಕನ್ನಡದಲ್ಲಿ ಅವುಗಳ ಅರ್ಥ. ಕೃಷಿ ಎಂದರೆ ಭೂಮಿಯನ್ನು ನೇಗಲಿನಿಂದ ಉಳುವುದೆಂಬ ಸಮಯೋಚಿತಾರ್ಥವನ್ನು ಸಾರ್ವತ್ರಿಕವಾಗಿ ಬಳಸಲಾಗುವುದಿಲ್ಲ. ಭೂ ಕೃಷಿ, ಭೂವ್ಯವಸಾಯ ಶಬ್ದಗಳನ್ನು ಕೇವಲ ನೆಲವನ್ನು ಉತ್ತು ಪೈರು ಬೆಳೆಯುವುದು ಎಂಬ ಅರ್ಥದಲ್ಲಿ ಐಕ್ಯಗೊಳಿಸಿದರೆ ತೋಟದಲ್ಲಿ ಗುದ್ದಲಿಯಿಂದಾಗುವ ಭೂ ವ್ಯವಸಾಯವೂ ಭೂಕೃಷಿಯಾಗಿರುವ ಕಾಫಿ, ಟೀ ಮೊದಲಾದ ಗಿಡಗಳಿಗೆ ಸಂಬಂಧಿಸಿದ ವ್ಯವಸಾಯವೂ ಹಣ್ಣಿನ ವ್ಯವಸಾಯಗಳೂ ಪ್ರತ್ಯೇಕಿಸಲ್ಪಟ್ಟು ಅರ್ಥ ಪುಷ್ಟಿಗೆ ಬಾಧಕವಾಗುತ್ತದೆ.

ಕೃಷಿ ವ್ಯವಸಾಯ ಶಬ್ದಗಳು ಸರ್ವಸಾಮಾನ್ಯವಾಗಿ ಶ್ರದ್ಧೆಯಿಂದಲೂ ಪರಿಶ್ರಮದಿಂದಲೂ ನಡೆಯುವ ಕೆಲಸವನ್ನು ಸೂಚಿಸುವುವು. ಶರೀರದ ಕೃಷಿ, ವಿದ್ಯೆಗೋಸ್ಕರ ವ್ಯವಸಾಯ, ಮನೋರಥ ಸಿದ್ಧಿಗಾಗಿ ಮಾಡುವ ಕೆಲಸಗಳು ಎಲ್ಲವೂ ಒಂದೇ ವಿಧವಾಗಿ ವ್ಯವಹರಿಸಲ್ಪಡುತ್ತವೆ.

ಸಂಪದಭ್ಯುದಯವನ್ನೇ ಲಕ್ಷ್ಯ (ಉದ್ದೇಶ) ವನ್ನಾಗಿ ಉಳ್ಳ ವೈಶ್ಯವೂ ಕೃಷಿವ್ಯವಸಾಯವಿದ್ದೆಡೆಗಳಲ್ಲಿ ವೈಶ್ಯದ ಉಪಸ್ಥಿತಿಯೂ ಸಮವಾಯ ಸಂಬಂಧದಂತೆ ಹೊಂದಿಕೊಂಡಿರುವುದು. ಆಕಸ್ಮಿಕಗಳಿಂದ ಪಾರುಮಾಡುವುದಾಗಲೀ ವಾಣಿಜ್ಯವಾಗಲೀ ಯುದ್ಧ, ರಾಜ್ಯ ಕಾರ್ಯಾದಿಗಳಾಗಲೀ ಯಜ್ಞ ಯಾಗಾದಿಗಳಾಗಲೀ ಕೃಷಿ ವ್ಯವಸಾಯಗಳಿಂದಲೇ ನಿರ್ವಾಹವಾಗುವುದರಿಂದ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವ ನಿಷಾದ, ಶೂದ್ರ, ಕ್ಷತ್ರಿಯ, ಶ್ರೋತ್ರಿಯ, ವೈಶ್ಯ ವರ್ಣಗಳಲ್ಲಿ ಪ್ರತಿಯೊಂದೂ ಕೃಷಿ, ವ್ಯವಸಾಯ, ಉದ್ಯಮವೆನಿಸಿಕೊಂಡು ವೃತ್ತಿಯಾಗಿ ಪರಿಣಮಿಸಬಹುದು. ಸೋಮಯಾಗ, ರಾಜಸೂಯಯಾಗಾದಿಗಳನ್ನು ಆರಂಭಿಸುವಾಗ ಭೂಮಿಯನ್ನು ಶೋಧಿಸಿ ಪಾಕಮಾಡುವುದಕ್ಕಾಗಿ ನೇಗಲಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಳಬೇಕಾಗಿರುವುದು ಪ್ರಸಿದ್ಧವಾಗಿದೆ. ಆದುದರಿಂದ ಭೂಮಿಯನ್ನು ಉಳುವ ಕೆಲಸ ಶೂದ್ರದ ವಿಶೇಷ ಹೊಣೆಗಾರಿಕೆಯನ್ನು ನಿರ್ವಹ ಮಾಡುವವರ ಮೇಲೆ ಹೊರಿಸಲ್ಪಟ್ಟಿಲ್ಲವೆಂದು ತಿಳಿಯಬರುವುದು. ಭೂ ಸಂಪತ್ತನ್ನು ಹೆಚ್ಚಿಸುವ ಹೊಣೆಗಾರಿಕೆಯು ಶೂದ್ರದ ಪರಿಮಿತಿಯಲ್ಲಿ ಲ್ಲ. ರಾಜನೀತಿವೇತ್ತರು ಕೂಲಂಕಷವಾಗಿ ಪರ್ಯಾಲೋಚಿಸಿ, ವಿಮರ್ಶಿಸಿ ಭೂ ಸಂಪತ್ಕಾರಕವಾದ ಕೃಷಿಯು ನಡೆಯುವ ಸನ್ನಿವೇಶಗಳನ್ನು ವೈಶ್ಯವೆಂಬ ಶೀರ್ಷಿಕೆಯಲ್ಲಿ ಪ್ರಚುರಪಡಿಸಬೇಕಾಗಿದೆ

ಕೃಷ್ ಧಾತುವಿನಿಂದ ವ್ಯುತ್ಪನ್ನವಾದ ಕೃಷಿ, ಕೃಷೀವಲ, ಕರ್ಷಕ ಶಬ್ದಗಳು ಮಾನವ ಸಾಮಾನ್ಯಕ್ಕೆ ಅನ್ವಯಿಸುವುವು. ವ್ಯವಸಾಯ, ಪ್ರಯತ್ನ, ಕೆಲಸ ಮೊದಲಾದ ಶಬ್ದಗಳು ಸೂಚಿಸುವ ಕೆಲಸಗಳು ಸುಸಂಸ್ಕೃತವಾಗಿ ನಡೆದು ಫಲಪ್ರದವೂ ಸಂಪತ್ಪ್ರದವೂ ಅಭ್ಯುದಯ ಕಾರಕವೂ ಆಗಬೇಕಾದರೆ ಕರ್ಷಣ ಪೂರ್ವಕವಾಗಿಯೇ ನೆರವೇರಬೇಕು. ಕರ್ಷಣವು ವೈಶ್ಯ ಪ್ರಧಾನವಾಗಿ ವಿವೇಕಯುತ ಮಾನವರೆಲ್ಲರಿಗೂ ಅತ್ಯವಶ್ಯಕವಾಗಿರುವುದು. ಭೂ ವ್ಯವಸಾಯ, ಹಣ್ಣಿನ ವ್ಯವಸಾಯ ಸಸ್ಯವ್ಯವಸಾಯಗಳೆಂಬಂತೆ ಶಾರೀರಕ ವ್ಯವಸಾಯ, ಮಾನಸಿಕ ವ್ಯವಸಾಯಗಳು ನಡೆಯುವುವು. ವ್ಯವಸಾಯ ಶಬ್ದಸ್ಥಾನದಲ್ಲಿ ಕೃಷಿ ಶಬ್ದವನ್ನು ಉಪಯೋಗಿಸುವುದು ವಾಡಿಕೆಯಾಗಿದೆ.

ಶೂದ್ರದ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವುದಕ್ಕೆ ದೀಕ್ಷಾಬದ್ಧರಾದ ಜನಗಳ ಸಂಘಾತವನ್ನು ಸೂಚಿಸುವುದಕ್ಕೆ ಕೃಷೀವಲ ಶಬ್ದದ ಪ್ರಯೋಗವಾಗಿದೆ. ಭೂಕೃಷಿಯು ಕೇವಲ ಒಂದು ಗುಂಪಿನ ಜನಗಳಿಗೆ ಮೀಸಲು (ಕಾದಿಡಲ್ಪಟ್ಟಿರುವುದು) ಆಗಿದೆ ಎಂದು ತಿಳಿದಿರುತ್ತಾರೆ. ಭೂಕೃಷಿಯ ಸಂಬಂಧದಲ್ಲಿ ಮಾತ್ರ ಕೃಷ್ ಧಾತುವನ್ನು ಉಪಯೋಗಿಸಿ ಭೂಕೃಷಿಗೆ ಅವಶ್ಯಕವಾದ ಉಳುವುದು (ನೇಗಿಲಿನಿಂದ ಉಳುವುದು) ಎಂಬ ಅರ್ಥವನ್ನು ಮಾತ್ರ ಕೃಷ್ ಧಾತುವಿಗೆ ಅಂಟಿಸಿ ಕೃಷ್ ಶಬ್ದಕ್ಕೆ ಉಳುವುದು ಎಂಬ ಅರ್ಥದ ಅರ್ಥದ ಪಟ್ಟವನ್ನು ಕಟ್ಟಿರುತ್ತಾರೆ.

ಶರೀರವನ್ನು ಕೃಷಿ ಮಾಡುವಾಗ ಕೃಷ್ ಧಾತುವನ್ನು 'ಅಂಗ ಸಾಧನೆ' ವ್ಯಾಯಾಮ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನಸಿಕ ಕೃಷಿಯು ಅಭ್ಯಾಸ - ಶಿಕ್ಷಣವೆಂಬ ಭಾವಕೃಷಿಯನ್ನೂ ಸ್ವಾಗತಿಸುವುದು. ಹಣ್ಣಿನ 'ಕೃಷಿ' ಎಂಬಲ್ಲಿ ಕೃಷ್ ಶಬ್ದಸ್ಥಾನದಲ್ಲಿ 'ಕಸಿ' ಶಬ್ದವು ತದ್ಭವವೆನಿಸಿ ರೂಪಿತವಾಗಿದೆ. ಕೃಷಿಯು-ಸಂಪತ್ಕಾರಕ ಕೆಲಸವು - ವೈಶ್ಯದ ಅಂಗವಾಗಿ ವೈಶ್ಯವಾಗಿರುತ್ತದೆಂಬುದು ಸಿದ್ಧಾಂತ ವಾದ ವಿಷಯ. ಕರ್ಷಕರೂ ಕೃಷೀವಲರೂ ಕೃಷಿ ಮಾಡುವವರೆಲ್ಲರೂ ವೈಶ್ಯವನ್ನಾಚರಿಸುತ್ತಾರೆಂದು ತಿಳಿಯುವುದು ಅನಿವಾರ್ಯವಾಗಿರುತ್ತದೆ.

ಕ್ಷತ್ರಿಯ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದ್ದ ಜನಕನು ಯಾಗ ಮಾಡುವುದಕ್ಕೆ ಮೊದಲು ಭೂಮಿಯನ್ನು ನೇಗಲಿನಿಂದ ಕರ್ಷಿಸಿ (ಹದಮಾಡಿ) ಸಂಶೋಧನ ಮಾಡಿದನು ಎಂದು ಹೇಳಿದೆ. ನೇಗಲಿನಿಂದ ಉಳುವ ಕೆಲಸವು ಸರ್ವರಿಗೂ ಆವಶ್ಯಕವಾಗಿರುತ್ತದೆ. ಕ್ಷತ್ರಿಯ ವಿಶೇಷ ಹೊಣೆಗಾರಿಕೆಯುಳ್ಳ ಬಲರಾಮನಿಗೆ ನೇಗಿಲೇ ಆಯುಧವಾಗಿರುವುದು. ಕಸಿ ಮಾಡುವ ಜಾಣ್ಮೆಯನ್ನು ಕಲಿಸುವುದಕ್ಕೇ ಬಲರಾಮನು ಅವತರಿಸಿದನು ಎಂದು ತಿಳಿಯಬೇಕಾಗಿದೆ.

ಯಜ್ಞ ಯಾಗಾದಿಗಳಲ್ಲಿ ಉಪಯೋಗವಾಗುವ ಧಾನ್ಯಗಳನ್ನು ಯಜಮಾನನೇ ಸ್ವಂತವಾಗಿ ಪೈರುಮಾಡುವ ಸಂವಿಧಾನದ ಪರಿಮಿತಿಯಲ್ಲಿ ಭೂಮಿಯನ್ನು ನೇಗಲಿಂದ ಉತ್ತು ಹದಮಾಡಿ ವೇದಘೋಷ, ವೇದಾಧ್ಯಯನ ಪೂರ್ವಕ ಕೃಷಿಯನ್ನು ಉನ್ನತ ಮಟ್ಟದಲ್ಲಿ ಸಂಸ್ಕರಿಸಿ ಸಸ್ಯವನ್ನೂ ಸಸ್ಯದ ಬೆಳವಣಿಗೆಯನ್ನೂ ಫಲಪ್ರಾಪ್ತಿಯನ್ನೂ ಯಜ್ಞವೆಂದು ಯಜ್ಞಾಧಿಪನಿಗೆ ಸಮರ್ಪಿಸುವ ಸಂಸ್ಕಾರವು ಶ್ರೋತ್ರಿಯಕ್ಕೆ ಸೇರಿರುವುದು ಎಂಬುದನ್ನು ತತ್ವತಃ ತಿಳಿದು ಅನುಷ್ಠಾನದಲ್ಲಿಟ್ಟುಕೊಳ್ಳಬಹುದು.

ರಸಾಭಿನಿವೇಶ ಪ್ರಕಾಶಕವಾದ ಈ ವಿಮರ್ಶೆಗಳಿಂದ ಭೂಕೃಷಿಯನ್ನು ಶೂದ್ರಕ್ಕೆ ಅನ್ವಯಿಸುವುದರಿಂದ ವರ್ಣವಿಕಾರವಾಗಿ ವರ್ಣವಿಕಾಸಕ್ಕೆ ಬದಲಾಗಿ ವರ್ಣಾಭಾಸವಾಗುವುದು; ಗೋತ್ರಗುರಿಯಿಲ್ಲದೆ ಅನನ್ವಯವಾಗುವುದು; ರಾಜನೀತಿಯು ಮೊಂಡಾಗಿ, ಮಸುಕಾಗಿ ಪ್ರಪಂಚದ ಶಾಂತಿಭಂಗವಾಗುವುದು. ಭೂಮಿಯನ್ನು ಉಳುವುದೇ ಮೊದಲಾದುದು ವೈಶ್ಯವರ್ಣ; ಶೂದ್ರವಲ್ಲ. ಉಳುವುದರಿಂದ 'ಸೀತಾ' ಪ್ರಾಪ್ತಿಯಾದಂತೆ ಉದ್ಯಮಶೀಲರಾದ ವೈಶ್ಯಾನುಷ್ಠಾನವುಳ್ಳ ಶ್ರೋತ್ರಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಷತ್ರಿಯುಗಳಿಗೆ ಸೌಭಾಗ್ಯ ಪ್ರಾಪ್ತಿಯಾಗುವುದು. ಈ ವೈಶ್ಯವು ಸರ್ವ ಸಾಮಾನ್ಯವಾಗಿ, ಸಾರ್ವಕಾಲಿಕವಾಗಿ ಸಾರ್ವತ್ರಿಕವಾಗಿರುವುದರಿಂದ ಸಮಸ್ತ ಚರಾಚರಾತ್ಮಕ ವಸ್ತುಗಳಿಗೂ ಚೇತನಾಚೇತನವಸ್ತುಗಳಿಗೂ ಪ್ರಿಯವಾದ ವಿಶೇಷ ಹೊಣೆಗಾರಿಕೆ ಮತ್ತು ಗೌಣವಾಗಿಟ್ಟುಕೊಳ್ಳುವ ಪರಿಸ್ಥಿತಿಗಳಿಗೂ ಸರ್ವರಿಂದಲೂ ಸರ್ವವಿಧದಲ್ಲಿಯೂ ಸರ್ವತ್ರ ಸರ್ವದಾ ಸ್ವಾಗತಿಸಲ್ಪಡುವುದು ಮತ್ತು ಅವಲಂಬಿಸಲ್ಪಡುವುದು.

ಯಾಸ್ಕ ಮಹರ್ಷಿಗಳು ವೇದಾಂತರ್ಗತ ಶಬ್ದಗಳಿಗೆ ನಿರ್ವಚನವನ್ನು ಮಾಡುವ ಮಹಾ ಕಾರ್ಯವನ್ನು ದೃಢ ಸಂಕಲ್ಪದಿಂದ ಕೈಕೊಂಡು ವೇದಾರ್ಥಜ್ಞಾನಕ್ಕೆ ದಿವ್ಯಚಕ್ಷುಸ್ಸನ್ನು ದಯಪಾಲಿಸಿರುತ್ತಾರೆ. ವಿದ್ಯಾರಣ್ಯದಲ್ಲಿ ನಿಂತು ನೆರವೇರಿಸಿದ ಆ ಕೆಲಸದ ಮಧ್ಯೆ ಸಮಯೋಚಿತವಾಗಿ ಭಾಸವಾದಂತೆ ಉದಾಹರಿಸಿರುವ ವಿಷಯಗಳನ್ನು ಸರ್ವಾಂಗಸುಂದರವಾಗುವಂತೆ ಸರ್ವತೋಮುಖವಾಗಿ ರಸಪ್ರದವಾಗುವಂತೆ ಮಾಡುವುದಕ್ಕೆ ಪೂರ್ಣಾಧಿಕಾರವನ್ನು ಕೊಟ್ಟು 'ಆತ್ಮನಸ್ತು ಕಾಮಾಯ' ಆತ್ಮನೆನಿಸುವ ಸಕಲ ದೇಹಿಗಳೂ ವ್ಯವಸಾಯ ಮಾಡಬೇಕೆಂದು ಆಶೀರ್ವದಿಸಿ ಚಿರಂಜೀವಿಯಾದ ಆ ಗ್ರಂಥದಲ್ಲಿ ಸೇರಿ, ತತ್ಪರನ ವಿಮರ್ಶಾದಿಗಳನ್ನು ಮಾಡಿ ರಸವನ್ನನುಭವಿಸುವ ಪ್ರಜಾ ವರ್ಗದ ಹೃದಯದಲ್ಲಿ ಐಕ್ಯರಾಗಿ ಸ್ವಯಂ ಅನುಗ್ರಹಿಸುತ್ತಿರುವರು.

ಆ ಯಾಸ್ಕತ್ವಾಂಶ ಸಂಭೂತರಾದ ಪಾಣಿನಿ ಮಹರ್ಷಿಗಳೂ ತಮ್ಮ ಸೇವೆಯನ್ನು ಸಲ್ಲಿಸಿ ಪುಷ್ಟೀಕರಿಸಿ ಅದರಂತೆ ವ್ಯವಸಾಯ ಮಾಡಿ ರಸಾನುಭವ ಮಾಡಲಿ ಎಂದು ಸಮ್ಮಂತಹವರನ್ನು ಪ್ರೋತ್ಸಾಹಿಸಿ ಆಶೀರ್ವದಿಸಿ ಗ್ರಂಥಕರ್ತರೂ ಚಿರಂಜೀವಿಗಳೂ ಆಗಿ ನಮ್ಮ ಬೆನ್ನಹಿಂದೆ ನಿಂತು ಪ್ರಚೋದಿಸುತ್ತಿರುವರು. ಗ್ರಂಥ ರೂಪಿಗಳಾದ ಆ ಪರಮ ಋಷಿಗಳ ಮಾರ್ಗದಲ್ಲಿಯೇ ಅವರು ಕಷ್ಟಪಟ್ಟಂತೆ ತಪಸ್ಸು ಮಾಡಿ, ಆಗಾಗ್ಗೆ ಉಂಟಾಗುವ ಗ್ಲಾನಿಗಳನ್ನು ಬಗೆಹರಿಸಿ ರಸಾಸ್ವಾದನಕ್ಕೆ (ಸ್ವಸ್ವರೂಪಾನುಸಂಧಾನಕ್ಕೆ) ಯತ್ನಿಸಬೇಕಾದುದು ಮಾನವೀಯತೆಯನ್ನೂ ಮನುವನ್ನೂ ಹೊಂದಿದ ಪ್ರತಿ ಮಾನವನ ಕರ್ತವ್ಯವಾಗಿರುತ್ತದೆ.

ಸಾಂಪ್ರತವಾಗಿ, ಶ್ರೇಯಃ ಪ್ರದವಾದ ಶೂದ್ರಶಬ್ದಕ್ಕೆ ಸಂಬಂಧಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂದೇಹಸಂಕುಚಿತ ಮನೋಭಾವಗಳಿಗೆ ಕಾರಣವಾದ ನಿರ್ವಚನವನ್ನು* ರಸಾಭಿನಿವಿಷ್ಟ ವಿಮರ್ಶೆಗೆ ಗುರಿಮಾಡಿ ಸಾಮರಸ್ಯವನ್ನು ಉಂಟುಮಾಡ ಬೇಕಾಗಿರುತ್ತದೆ. ಸಂಕುಚಿತ ಭಾವವು ಹೋದ ಕೂಡಲೇ ಶಾಂತಿ ಸಮಾಧಾನಗಳು ಸ್ವಯಂ ಮೂಡಿ ಪ್ರಜೆಗಳ ಒಗ್ಗಟ್ಟಿಗೂ ರಾಷ್ಟ್ರೈಕ್ಯ ಭಾವನೆಗೂ ಧರ್ಮ ಸಂಸ್ಕೃತಿಗಳ ಪರಿಪೋಷಣೆಗೂ ಅವಕಾಶವಾಗುತ್ತದೆ.

ಶೂದ್ರಶಬ್ದ ವಿವೇಚನೆ ವಿಮರ್ಶೆ

I. ಶೂದ್ರ ಶಬ್ದದಲ್ಲಿ ಶ್ (ಶ ಕಾರ) ಸಂಬಂಧದಲ್ಲಿರುವ 'ಊ' ಕಾರವು ಹ್ರಸ್ವ 'ಉ' ಸ್ವರದ ಸ್ಥಾನವಲ್ಲಿ ನಿಪಾತವಾಗಿ (ಶಾಸ್ತ್ರನಿಯಮ

---

* ಶೋಚತಿ ಇತಿ ಶೂದ್ರಃ ಎಂದು ಶುಕ್ ಧಾತುವಿನಿಂದ ಶೂದ್ರ ಶಬ್ದವನ್ನು ನಿಷ್ಪನ್ನಮಾಡಬಹುದೆಂದು ಯಾಸ್ಕರ ಗ್ರಂಥದಲ್ಲಿ ಕಾಣುವುದು ಶುಕ್ ಎಂಬುದರ ಶು ಅಕ್ಷರವು ಶೂದ್ರ ಶಬ್ದದ 'ಶು' ಕಾರಕ್ಕೆ ಹೊಂದಿ ಕೊಂಡಿರುವುದರಿಂದ ತಾತ್ಕಾಲಿಕವಾಗಿ ಪ್ರವರ್ತಿಸಿದಂತೆ ಕಾಣುವುದು. ಪುನರಾವೃತ್ತಿ ಮಾಡಿ ಪರಿಶೀಲನೆಗೆ ಅವಕಾಶವಿದ್ದಿದ್ದರೆ ಆಗಲೇ ತಿದ್ದು ಪಾಡಾಗುತ್ತಿತ್ತು. ಪಾಣಿನಿಗಳು ಅದನ್ನೇ ಪುಷ್ಟೀಕರಿಸಿ ಶೂದ್ರದ 'ದ' ಮತ್ತು ರೇಫಗಳು ಉಣಾದಿ ಪ್ರತ್ಯಯಾಂತಗಳಾಗಿ ಬಂದಿರುವಂತೆ ವಿವರಿಸಿರುತ್ತಾರೆ. ಶಾಸ್ತ್ರ ಮತ್ತು ಅನುಭವಗಳಿಗೆ ಇದು ವಿರೋಧವೆಂದು ದರ್ಶನ–ಸ್ಮೃತಿ ವಿಮರ್ಶಕಾರರ ಮುಖೇನ ಶ್ರೀ ಯಾಸ್ಕ ಮಹರ್ಷಿಗಳು ತಿದ್ದುಪಡಿಗಾಗಿ 'ಹಾ' ತೊರೆಯುತ್ತಾ, ಹಿಂದಿನಿಂದ ಪ್ರೋತ್ಸಾಹಿಸುತ್ತಾ ಮುಂದೆ ದಾರಿ ತೋರಿಸುತ್ತಾ ಇದಾರೆ. ಇದನ್ನು ಸಾಕ್ಷಾತ್ಕರಿಸಿದವರು ಮುಂದೆ ಬಂದು ಅವರ ಕೋರಿಕೆಯನ್ನು ಈಡೇರಿಸುವ ಹೊಣೆಗಾರಿಕೆಗೆ ಪಾತ್ರರಾಗಿರುತ್ತಾರೆ. ವಿದ್ವಾಂಸರೆನಿಸಿದ ಸರ್ವರೂ 'ಶೋಚತೀತಿ ಶೂದ್ರಃ, ಶುಚೇರ್ದಶ್ಚ, ರೇಫಶ್ಚ' ಇತ್ಯಾದಿ ಪ್ರಸಿದ್ಧವಾಗಿರುವ ವ್ಯಾಕರಣ ವಿಷಯಗಳು ವಸ್ತುತತ್ವದ ವಿಮರ್ಶೆಗೂ ರಸಾನುಭವಕ್ಕೂ ವಿರೋಧವಾಗಿ ರುವುದನ್ನು ಒಪ್ಪಿಕೊಂಡು ಸರ್ವತೋಮುಖವೂ ಅಪ್ರತಿಹತವೂ ಪೂರ್ಣ ದೃಷ್ಟಿಪೂತವೂ ಆಗಿರುವಂತೆ ವಿವರಿಸುವುದು ಅತ್ಯವಶ್ಯಕವೆಂದು ಒಪ್ಪಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬದ್ಧವಲ್ಲದೆ ಅಕಸ್ಮಾತ್ ಸೇರಿಕೊಂಡದ್ದಾಗಿ) ಕಲ್ಪಿತವಾಗಿದೆ. ಶೂದ್ರಃ ಎಂಬುದೇ ಶುದ್ರಃ ; ಶುದ್ರ ಎಂಬುದೇ ಶೂದ್ರಃ ಎಂದು ಕಲ್ಪಿಸಬೇಕಾಗಿದೆ.

ವಿಶಾಲ ಹೃದಯ ಸ್ವಭಾವವನ್ನೂ ಘನತೆಯನ್ನೂ ಪ್ರಕಾಶಪಡಿಸಿರುವುದು ನಿರ್ವಚನದ ಇತಿಹಾಸದಲ್ಲಿ ಸ್ತೋತ್ರಾರ್ಹವಾಗಿರುತ್ತದೆ.—

ಪಂಡಿತರತ್ನಂ, ದರ್ಶನಾಲಂಕಾರ, ಧರ್ಮಾಧಿಕಾರಿ, ಆಸ್ಥಾನ ವಿದ್ವಾನ್, ವಿಶ್ರಾಂತ ವೇದಾಂತ ಪ್ರಾಧ್ಯಾಪಕರಾದ ನವೀನಂ ಎಂ. ಎಸ್. ವೆಂಕಟೇಶ ಶಾಸ್ತ್ರಿಗಳೂ,

ವೈದಿಕ ಧರ್ಮಾಚಾರ್ಯ, ಆಚಾರ ರತ್ನಂ ಶ್ರೀ ಎನ್. ಮಲ್ಲಿಕಾರ್ಜುನ ಶಾಸ್ತ್ರೀ, ಎಂ.ಎ. (ದರ್ಶನ), ಎಂ.ಎ. (ವೇದ), ವಿಶ್ರಾಂತ - ಪ್ರಿನ್ಸಿಪಾಲ್ ಮೈಸೂರು ಸಂಸ್ಕೃತ ಮಹಾರಾಜಾ ಕಾಲೇಜ್ ರವರೂ

ವ್ಯಾಕರಣ, ತರ್ಕ ವೇದಾಂತಾದಿ ಶಾಸ್ತ್ರ ಚತುರರಾದ ವಿದ್ವಾನ್ ಶ್ರೀ ಎಸ್. ಎಲ್. ಶ್ರೀಕಂಠಯ್ಯ, ಬಿ.ಎಸ್‌ಸಿ., ಗಣಿತಶಾಸ್ತ್ರ ವಿಭಾಗ, ನ್ಯಾಷನಲ್ ಎಂಜನಿಯರಿಂಗ್ ಇನ್ಸ್ಟಿಟ್ಯೂಟ್, ಮೈಸೂರು. ಅವರೂ

ಮಹಾರಾಜ ಹೈಸ್ಕೂಲ್ ವಿಶ್ರಾಂತ ಪಂಡಿತರಾದ ಶ್ರೀ ವಿದ್ವಾನ್ ರಾಮಾನುಜಾಚಾರ್ ರವರೂ, ಬ್ರಾಹ್ಮಣಧರ್ಮ ಮೊದಲಾದ ಗ್ರಂಥ ಕರ್ತರಾದ ರುದ್ರಪಟ್ಣಂ ಆರ್. ಎನ್. ಸೂರ್ಯನಾರಾಯಣ ಅವರೂ

— ಶೂದ್ರ ಶಬ್ದ ನಿರ್ವಚನವನ್ನು ವಿವಿಧ ದೃಷ್ಟಿಗಳಿಂದ ಪರಾಮರ್ಶಿಸಿ ಸೂಚನೆಗಳನ್ನಿತ್ತಿರುವರು.

ಷೂದ್ - ಕ್ಷರಣೇ (ಸೂದತೇ ಸೂದಯತಿ) ಧಾತುವಿನಿಂದ ಋಣ ಕ್ಷಯವೆಂಬ ಅರ್ಥದಲ್ಲಿ ಸೂದನಂ ರಾತಿ ಎಂಬಂತೆ ನಿಷ್ಪತ್ತಿ ಮಾಡಬಹುದೆಂದು ಶ್ರೀ ರಾಮಾನುಜಾಚಾರ್ ರವರು ಹೇಳಿರುವ ಸೂಚನೆಗೆ ಧನ್ಯವಾದಗಳು. ವೇದದ ಇಂಗಿತ (ಇಂಪ್ಲಿಕೇಷನ್) ವನ್ನೂ ಪೂರ್ಣವಾಗಿ ಸ್ವತಃ ಪ್ರಮಾಣ ಪೂರ್ವಕ ತಿಳಿಸುವ ಶೋಧನ-ಅರ್ಥವೇ ಶೂದ್ರ ಶಬ್ದಕ್ಕೆ ಸರ್ವಥಾ ಸಮವಾಗಿರುವಂತೆ ವಿವರಿಸಬೇಕೆಂಬ ರಾಜನೀತಿಯ ಶಾಸನದಂತೆ ಶ್ರೀ ಎಸ್. ಎಲ್. ಶ್ರೀಯವರು ವ್ಯಾಕರಣ ಸೂತ್ರಗಳನ್ನು ಸಂಶೋಧಿಸಿ ಶುಂಧ್ ಧಾತುವಿನಿಂದ ಶೂದ್ರ ನಿಷ್ಪತ್ತಿಯನ್ನು ಸಾಧಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2. ಶುದ್ಧಿಂ ಶೋಧನಂ ರಾತಿ – ಶುದ್ಧವನ್ನಾಗಿ ಮಾಡಿ ಸಂಸ್ಕಾರವನ್ನು ಸಾಧನವನ್ನು ಅಥವಾ – ಪರಿಹಾರವನ್ನು – ಅನುಭವವನ್ನು ತರುತ್ತದೆ ಎಂಬರ್ಥದಲ್ಲಿ ಶುಂಧ್ ಧಾತುವಿನಿಂದ ಶೂದ್ರ ಶಬ್ದವು ವ್ಯುತ್ಪನ್ನವಾಗಿದೆ. ಋಣವೆಂಬ ಕಲ್ಮಷವನ್ನು ತೊಳೆದು ಜೀವನಿಗೆ ಪರಿಶುದ್ಧತೆಯನ್ನು ಉಂಟುಮಾಡುವುದು ಶೂದ್ರವು.

ಗಂಗೆಯು ಶೂದ್ರಕ್ಕೆ ಆಕರವಾದ ವಿಷ್ಣುಪಾದದಿಂದ ಹುಟ್ಟಿದೆ – ಎಂದರೆ ವಿಧೇಯತೆಯಿಂದ ಗುರುಪಾದವನ್ನು ಸೇವಿಸುವುದರಿಂದ ಉಂಟಾಗುವ ಪಾದ ತೀರ್ಥವು ಶುದ್ಧಿಯನ್ನು ಮಾಡುವುದು ಎಂದು ಸ್ಪಷ್ಟವಾಗುವುದು.

3. ಸಮ್ಯಕ್ ದ್ರಿಯತೇ ಇತಿ ಸುದ್ರಃ – ಶೂದ್ರಃ ಶುದ್ಧವಾದ ಅಮೃತವು ಬ್ರಹ್ಮರಂಧ್ರದ ಗುರುಸಾದ ಕಮಲದಿಂದ ಸ್ರವಿಸಿ ನಾಲಿಗೆ ಬುಡದಲ್ಲಿ ಸೇರುವುದು— ಎಂಬುದು ಯೋಗಿಗಳ ಅನುಭವ. ಅಂತಹ ಶುದ್ಧವಾದ ಅಮೃತವನ್ನು ಕೊಡುವುದು ಶೂದ್ರವು.

4. ಶುಚಂ ದ್ರಾವಯತಿ – ಶೂದ್ರಃ ದುಃಖವನ್ನು ಹೋಗಲಾಡಿಸುವುದು ಎಂಬ ಅರ್ಥವೂ ಸಾಧುವಾಗಿ ತೋರಬಹುದು. ಋಣವೆಂಬ ವ್ಯಸನವನ್ನು ಹೋಗಲಾಡಿಸುವುದರಿಂದ ಶೂದ್ರವೆನಿಸುವುದು. ಆದರೆ ಶೂದ್ರ ಎಂಬ ಶಬ್ದಕ್ಕೂ ಶುಕ್ ಧಾತುವಿಗೂ ಸಂಬಂಧ ಕಲ್ಪನೆ ಮಾಡುವುದರ ಔಚಿತ್ಯವನ್ನು ಪರಾಮರ್ಶಿಸಬೇಕಾಗಿದೆ.

5. ಸೂದನಂ = ಕ್ಷರಣಂ – ಋಣ ಕ್ಷರಣಂ ರಾತಿ = ಅವಹತಿ ಇತಿ ಶೂದ್ರಃ ಎಂಬುದು ಶೂದ್ರ ವರ್ಣದ ಸಾರ್ಥಕತೆಯನ್ನು ಸ್ಪಷ್ಟಪಡಿಸುವುದು.

ಪ್ರಯತ್ನಮಾಡಿರುತ್ತಾರೆ. ಶ್ರೀ ಮಲ್ಲಿಕಾರ್ಜುನ ಶಾಸ್ತ್ರೀ ಮೊದಲಾದವರು ಈ ಸೂಚನೆಯನ್ನು ಅನುಮೋದಿಸಿ ಶುಂಧ್ ಧಾತುವಿನಿಂದಲೇ ಶೂದ್ರವು ಸಾಧಿತವಾಗಬಹುದೆಂದು ಒಪ್ಪಿರುತ್ತಾರೆ. ಶುಂಧ್ ಧಾತುವಿನ ಸಂಪೂರ್ಣಾರ್ಥವೂ ಅದರ ವ್ಯಾಪ್ತಿಯೂ ಪೂರ್ಣವಾಗಿ ಶೂದ್ರ ಶಬ್ದಕ್ಕೆ ಅನ್ವಯಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಕರಣ, ಭಾಷೆ, ಅನುಭವ, ಶಾಸ್ತ್ರಗಳು ಇವುಗಳ ದೃಷ್ಟಿಯಿಂದ 'ಶೋಧನಂ ರಾತಿ' ಎಂಬ ನಿರ್ವಚನವು ಸರ್ವಪ್ರಕಾರದಲ್ಲಿಯೂ ಶೂದ್ರ ಶಬ್ದಾರ್ಥದ ಸಮನ್ವಯಕ್ಕೆ ಪಾತ್ರವಾಗಿ ಪರಮಸಾಧುವಾಗಿರುತ್ತದೆ.

'ಪಿತೄಣಾಂ ಶೋಧನಂ ನಿತ್ಯಂ ಔರಸೇ ತನಯೇ ಸತಿ |' ಎಂಬ ವಾಕ್ಯಕ್ಕೆ 'ಋಣಮಿತಿ ಶೇಷಃ' ಎಂದು ಸೇರಿಸಿ ಋಣ ಶೋಧನವನ್ನು ಪ್ರಸ್ತಾಪಿಸಿರುತ್ತಾರೆ.

ವ್ಯಕ್ತಿಯು ಋಣ ಶೋಧನೆಗಾಗಿ ಜನ್ಮವನ್ನೂ, ಜನ್ಮದ ಸಹಾಯ ದಿಂದ ಋಣ ಶೋಧನವನ್ನು ಅಂದರೆ ಋಣಾನುಭವವನ್ನು ಹೊಂದಿಸುವ ಮತ್ತು ಋಣ ಶೋಧನೆಗಾಗಿ ಶೋಧನವನ್ನು ಹೊಂದಿರುವ ಶೂದ್ರವು ಜಗನ್ಮೂಲವಾಗಿರುವುದೆಂದು ಸ್ಪಷ್ಟವಾಗುವುದು.

ಈ ಬಗೆಯ ಸಮಿಾಚೀನ ವಿವರಣೆಗಳಲ್ಲಿ ಋಣ - ಶೋಧನಕ್ಕೆ ಪ್ರಧಾನವಾಗಿರುವ ಎಲ್ಲಾ ಜನ್ಮಗಳಿಗೂ ಜನ್ಮಕ್ಕೆ ಅಂಟಿಕೊಂಡಂತಿರುವು ದೆಂದು ಹೇಳಲ್ಪಟ್ಟ ಶೂದ್ರ ಶಬ್ದಕ್ಕೂ ಅನ್ಯೋನ್ಯಸಂಬಂಧವಿರುವುದರಿಂದ 'ಶುಂಧ್' ಧಾತುವಿನ ಸಂಬಂಧವೇ ಶೂದ್ರಕ್ಕೆ ಪ್ರಶಸ್ತವಾದ ಅರ್ಥಪುಷ್ಟಿ ಪ್ರದಾಯಕವಾಗಿಯೂ ಪುರುಷಾರ್ಥ ಸೂಚಕವಾಗಿಯೂ ಶ್ರೇಯಃ ಪ್ರದವಾಗಿಯೂ ಇರುತ್ತದೆ.

'ಊ' ಎಂಬ ದೀರ್ಘಸ್ವರ ನಿಪಾತಕ್ಕೆ ಅವಕಾಶವು ಎಲ್ಲಾ ವಿವರಣೆಗಳಲ್ಲಿಯೂ ಕಲ್ಪಿತವಾಗಿರುವುವು. 'ಸೂದ್' ಧಾತುವಿನಲ್ಲಿ ದೀರ್ಘಕ್ಕೆ ಅವಕಾಶವಿದ್ದರೂ 'ಶ' ಆದೇಶಕ್ಕೆ ಅವಕಾಶವನ್ನು ಯಾಚಿಸು ವುದು. ಉ ಕಾರಕ್ಕೆ ಬದಲು ಊ ಕಾರವು ಬಂದಿರುವುದರಿಂದ ಶುಂಧ್ ಎಂಬಲ್ಲಿ 'ಧ್' ಮಹಾಪ್ರಾಣವು 'ದ' ಅಲ್ಪಪ್ರಾಣವಾಗುವುದು.

ವೇದಗಳಲ್ಲಿ ಮುಖ್ಯವಾಗಿ ಎದ್ದು ಕಾಣುವ ವರ್ಣ ಸಮಸ್ಯೆಯು ಶೂದ್ರ ಶಬ್ದಾರ್ಥದ ಮೇಲೆ ಬೆಳೆಯಬೇಕಾಗಿರುವುದರಿಂದ ಅತ್ಯುತ್ಕೃಷ್ಟವೂ ಅಮೋಘವೂ ಆದ ಈ ಪ್ರಸ್ರಥಮ ಪ್ರಯತ್ನಕ್ಕೆ ಸ್ವಾಗತವು ಸರ್ವತೋ ಮುಖವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೫. ವರ್ಣವ್ಯಾಖ್ಯಾನೌಚಿತ್ಯವಿಚಾರ ಚರ್ಚೆ

ಸರ್ವ ಶಾಸ್ತ್ರಗಳ ದೃಷ್ಟಿಯಿಂದಲೂ ಸರ್ವಾನುಭವ ಸಮನ್ವಯದಿಂದಲೂ ವ್ಯಾಖ್ಯಾನ ರಚನೆಗಳೂ ಮೂಲ ಗ್ರಂಥಗಳೂ ಪ್ರಜೆಗಳಿಗೆ ದಿಗ್ದರ್ಶನ ಮಾಡಬೇಕಾಗಿರುತ್ತವೆ. ದ್ವೇಷಾಸೂಯಾಹಂಕಾರಾದಿಗಳಿಂದ ಈಗಾಗಲೇ ಕಬಳಿಸಲ್ಪಟ್ಟ ಕುಹಕ ಜನಗಳ ಉಪಕಾರಕ್ಕಾಗದಿದ್ದರೂ ಅವರಿಗೆ ತತ್ಕಾಲದಲ್ಲಿ ಹಿತವಾಗದಿದ್ದರೂ ಉತ್ತರೋತ್ತರ ಪ್ರಪಂಚದ ಹಿತಸಾಧನೆಗಾಗಿ, ಅಮೃತ ಪ್ರಾಪ್ತಿಗಾಗಿ ಸತ್ಯ, ಋತ, ಧರ್ಮ, ಆಚಾರ ಸಂಸ್ಕೃತಿ, ರಾಜನೀತಿಗಳ ನಿಷ್ಠೆಗಾಗಿ ಮಂಥನ ಎಂದರೆ ಪರಿಶ್ರಮವೆಂಬ ರೀತ್ಯಾ ಪ್ರಯತ್ನವು ನಡೆಯಬೇಕಾಗಿದೆ.

ವರ್ಣ ವಿವರಣೆಯು ಗ್ರಂಥರಾಶಿಯಲ್ಲಿ ಸ್ಪಷ್ಟವಾಗಿ ಕಾಣದೇ ಇರುವುದರಿಂದ ಉಂಟಾಗಿರುವ ಲೋಪ ದೋಷಗಳನ್ನು ಹೋಗಲಾಡಿಸುವುದಕ್ಕಾಗಿ ಸತ್ಯಾಂಶವನ್ನು ಹೊರಗೆಡವಬೇಕು; ಹೀಗೆ ಇದ್ದಿತು; ಹೀಗೆ ಇರಬೇಕಾಗಿದ್ದಿತು; ಹೀಗೆಯೇ ಇರಬೇಕು ಎಂಬ ಗಂಭೀರವಾದ ಮನೋವಿಕಾಸದಿಂದ ಸಂಕುಚಿತ ಭಾವನೆಗೆ ಅವಕಾಶ ಉಂಟಾಗದಂತೆ ತತ್ವವನ್ನು ಬೆಳಗಬೇಕು; ಸರ್ವಾನುಮತದಿಂದ ಸರ್ವಪರಿಗ್ರಾಹಕವಾಗುವಂತೆ ಪ್ರತಿಪಾದನೆಗಳು ತರಂಗಗಳಂತೆ ಪ್ರವಹಿಸುತ್ತಿರಬೇಕು. "ಮನೋಭಾವಗಳಲ್ಲಿ ನ್ಯೂನಾತಿರಿಕ್ತಗಳು ತೋರಿಬರುವ ವ್ಯಕ್ತಿಗಳ ತೃಪ್ತಿಗಾಗಿ" ಎಂದು ಯತ್ನ ಮಾಡುವುದರಿಂದ ಸತ್ಯವು ಹೊರಬೀಳುವುದಿಲ್ಲ. ಸತ್ಯಕ್ಕಾಗಿ ಸತ್ಯಸಂಬಂಧದ ವಿಷಯಗಳನ್ನು ಸತ್ಯವು ಒಪ್ಪುವ ರೀತಿಯಲ್ಲಿ, ಗ್ರಂಥಗಳನ್ನು ವಿರಚಿಸಬೇಕಾದ ಆವಶ್ಯಕತೆಯು ಮಾನವೀಯತೆಯಲ್ಲಿ ಒಂದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇವಲ ವೇದಿಕೆಯ ಮೇಲಿನ ಮಾತುಗಳಾಗಲೀ ಮತ ಸಮ್ಮೇಳನಗಳಾಗಲೀ ಸಂಸ್ಕೃತಿ ಸಮ್ಮೇಳನಗಳಾಗಲೀ ಮರಳಿನ ಅಸ್ತಿಭಾರದ ಮೇಲೆ ಎಬ್ಬಿಸಿರುವ ಮರಳು ಗೋಡೆಗಳ ಕಟ್ಟಡಗಳಂತೆ ನಿರರ್ಥಕಗಳಾಗುವುವು. ಪ್ರಪಂಚದ ಜೀವನ ಸಮಸ್ಯೆಯನ್ನು ಪರಿಹರಿಸಿ ಶಾಂತಿಯು ಸ್ವಯಂ ಪ್ರಕಟವಾಗುವಂತೆ ಜನತೆಯ ಮನೋಭಾವವನ್ನು ಆಗಾಗ್ಗೆ ಪರಿಷ್ಕರಿಸುವ ಗ್ರಂಥಗಳು ಸದ್ಯಃ ಫಲಕಾರಿಗಳಾಗುವುವು.

ಧರ್ಮ ಮತ್ತು ವೈರಾಗ್ಯದ ತೋರಣೆಯ (ಶುಷ್ಕವಾದ) ನಡೆನುಡಿಗಳಿಂದಲೂ ಉಪನಿಷದ್ವಾಕ್ಯಗಳ ವಿವರಣೆಯಿಂದಲೂ ಋಣ ಪರಿಹಾರ ಕಾರ್ಯವು ನೆರವೇರಲಾರದು. ಶ್ರೀ ಜಗದ್ಗುರು ಆದಿಶಂಕರಾಚಾರ್ಯರೇ ಮೊದಲಾದವರ ಪ್ರಸ್ಥಾನತ್ರಯ ಗ್ರಂಥಗಳಲ್ಲಿ ಸಾಮಾನ್ಯವಾಗಿ ತಿಳಿಯಬಹುದಾಗಿರುವಷ್ಟು ಜ್ಞಾನ ವಿಜ್ಞಾನ ವಿಷಯಗಳೇ ಅಧಿಕ ಪ್ರಮಾಣದಲ್ಲಿರುವುವು. ಇವುಗಳ ವಾಕ್ಯಾರ್ಥ ವಿವರಗಳೂ ವ್ಯಾಖ್ಯಾನ ಭಾಷಾಂತರಾನುವಾದಗಳೂ ಬೇಕಿಲ್ಲವೆಂಬುದು ಫಲಾನುಭವದಿಂದ ಅನುಮೇಯವಾಗಿ ಸಿದ್ಧಾಂತವಾಗಿರುವುದು. ಅನುಸಂಧಾನ ತಪಸ್ಸಿನಿಂದ ಅಪರೋಕ್ಷ ಜ್ಞಾನವಾಗಬಹುದಾಗಿರುವ ವಿಚಾರವು ಸರ್ವಾನುಭವ ವೇದ್ಯವಾಗಿದೆ. ಶ್ರೀ ಶಂಕರಾಚಾರ್ಯರು ಉದಾಹರಿಸಿರುವ ಪ್ರಪಂಚಸಾರ ಮಾರ್ಗವು ಹರಡಬೇಕಾಗಿದೆ. ಅಂದರೆ ಸೃಷ್ಟಿ ಸ್ಥಿತಿಲಯಾತ್ಮಕ ದೈವೀಶಕ್ತಿಗಳನ್ನು ರೂಢಿಸಿಕೊಳ್ಳುವುದಾವಶ್ಯಕವು. ಬ್ರಹ್ಮಸೂತ್ರ ಭಾಷ್ಯಾದಿ ವಿದ್ವತ್ಪಠನಗಳೂ ಸಹ ಉದರ ನಿಮಿತ್ತವಾದ ವೇಷವಾಗಿರುತ್ತವೆಂದು ಶ್ರೀ ಶಂಕರ ಭಗವತ್ಪೂಜ್ಯಪಾದರೇ ಅಪ್ಪಣೆ ಕೊಡಿಸಿರುತ್ತಾರೆ. ಆದರೆ ವಿಶ್ವದ ಒಂದು ಭಾಗವು ತಮ್ಮ ಹೊಗಳಿಕೆ, ಹೆಮ್ಮೆ, ಅಮಾನುಷ ಶಕ್ತಿಸಂಪತ್ತುಗಳಿಗಾಗಿ ಭೌತಿಕ ಶಕ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಯತ್ನದಲ್ಲಿ ತಮ್ಮನ್ನು ತಾವೇ ಮರೆತಿರುವಂತೆ ಜೀವನಯಜ್ಞ ತತ್ವಜ್ಞಾನವನ್ನು ದೂರೀಕರಿಸುವುದೂ ಹೇಯವೇ. ಉದರ ನಿಮಿತ್ತಕ್ಕಾದರೂ ಬ್ರಹ್ಮಸೂತ್ರಾದಿ ಗ್ರಂಥಗಳ ಸ್ವಾಧೀನವೇ, ಆಸುರೀ ರೂಪದ ಭೌತಿಕ ಶಕ್ತಿ ಸ್ವಾಧೀನಕ್ಕಿಂತ ಉತ್ತಮವೆಂದು ಹೇಳಬೇಕು.

ಗೀತೆಯಲ್ಲಿ ಬೋಧಿಸಿರುವ ತತ್ವಕ್ಕೆ ವಿರೋಧವಾಗಿ ಗೀತಾಚಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರನ್ನೇ ಎದುರಿಸುವಂತೆ ಗೀತೆಯು ಪಾಠಗಳನ್ನು ದುರುಪಯೋಗಪಡಿಸಿಕೊಳ್ಳುವ ಪರಿಸ್ಥಿತಿಯಲ್ಲಿ ನಡೆಯುವ ಗೀತಾ ಪಠನ, ಗೀತಾಧ್ಯಯನಾದಿ ಯಜ್ಞಗಳು ದೈವೀ ಪಂಥಕ್ಕೆ ಬೇರೆಯಾದ ಫಲವನ್ನೇ ಹರಡುತ್ತಿವೆ.

ಕನ್ಯಾಕುಮಾರಿಯಿಂದ ಗೌರೀಶಂಕರದವರೆಗೂ ದ್ವಾರಕಾದಿಂದ ಕಲ್ಕತ್ತೆಯ ವರೆಗೂ ಇರುವ ಸಿರಿಭೂವಲಯದಲ್ಲಿ ಧರ್ಮ, ಸಂಸ್ಕೃತಿ ಆಚಾರಗಳ ಪುನರುಜ್ಜೀವನಕ್ಕೆಂದು ಸ್ಥಾಪಿತವಾದ ಸಂಘಗಳು ಸಮಾಜಗಳು. ಸಂಸ್ಥೆಗಳು ಸತ್ಪಥಕ್ಕೆ ಅವಕಾಶವನ್ನು ಹುಡುಕಿ ಹುಡುಕಿ, ಪಡೆಯದೆ ವಿಫಲಗಳಾಗಿವೆ. ರಾಜನೀತಿ ಜ್ಞಾನವಿರಹಿತಗಳಾಗಿ ಠಕ್ಕಿನಿಂದಲೂ, ಕೆಲವು ವ್ಯಕ್ತಿಗಳ ಜೀವನಕ್ಕಾಗಿ ತಲೆಯೆತ್ತಿರುವುವು- ಎಂಬ ಜಡತ್ವದಿಂದಲೂ, ಕೂಡಿರುತ್ತವೆ.

ಸಾಮ್ರಾಜ್ಯತತ್ವವನ್ನು ತಿಳಿಯಲು ಅವಕಾಶಕೊಡದೆ ವಿದೇಶೀಯ ಪರಕೀಯ ಜನಬಾಧೆಯಿಂದ ಬಿಡುಗಡೆಯನ್ನು ಹೊಂದಿ ವಿದೇಶೀಸಂಪರ್ಕ ಜನಿತ ದೋಷವನ್ನು ತೊಳೆದುಕೊಂಡು ಶುಚಿರ್ಭೂತರಾಗಿ ರಸಾಭಿನಿವಿಷ್ಟ ವಿಮರ್ಶೆಯಿಂದ ಯಜ್ಞರಹಸ್ಯವನ್ನು ತಿಳಿಯಲು ರಾಜ್ಯದ ಪಂಚವಲಯಗಳ ಪ್ರತಿಯೊಂದು ಅಂಗವೂ ಈಗ ಶ್ರಮಿಸಬೇಕಾಗಿದೆ. ರಾಜ್ಯದ ವ್ಯಕ್ತ್ಯಾದಿ ಪಂಚವಲಯಗಳಲ್ಲಿ ನಿಷಾದಾದಿ ಪಂಚ ವರ್ತನೆಗಳು ಗುಣ ಕರ್ಮ ಸಂಸ್ಕೃತಿಗಳ ದೆಸೆಯಿಂದ ಸ್ವತಃ ಏವ ಹೊರಹೊಮ್ಮುವುವು— ಎಂಬುದನ್ನು ಪ್ರತಿಯೊಬ್ಬ ದೇಹಿಯೂ ಅವರವರ ದೈಹಿಕ, ಮಾನಸಿಕ ಶಕ್ತಿ ಸಂಸ್ಕಾರಗಳ ಹಂತದಲ್ಲಿ (ಮಿತಿಯಲ್ಲಿ) ಆಲೋಚಿಸಬೇಕು. ವಿವೇಕದಿಂದಲೂ ರಸಾಭಿಜ್ಞತೆಯ ವಿಮರ್ಶೆಯಿಂದಲೂ ಜೀವನಯಜ್ಞದ ರಸವನ್ನು ಹಿಂಡಿ ಸವಿಯಬೇಕು; ಇತರರೂ ಸವಿಯುವಂತೆ ಅವಕಾಶ ಕಲ್ಪಿಸಬೇಕು.

ಪ್ರಜೆಗಳು ತಮ್ಮ ತಮ್ಮ ಮಿತಿಯನ್ನು ಸಹಿಷ್ಣುತೆಯಿಂದಲೂ ಅನಸೂಯೆಯಿಂದಲೂ ರಾಜನೀತಿ ಶಾಸ್ತ್ರಾಧ್ಯಯನದಿಂದಲೇ ತಿಳಿಯ ಬೇಕಾಗಿರುತ್ತದೆ. ಬ್ರಹ್ಮಜ್ಞಾನಕ್ಕೆ ಹೆಸರಾಂತ ದೇಶದಲ್ಲಿ ಅವಿದ್ಯಾವಂತರಿಲ್ಲ. ಅವಿದ್ಯಾವಂತರಿಲ್ಲದಿರುವ ಭೂಪ್ರದೇಶದಲ್ಲಿ ಮೂಢಭಕ್ತಿಗೆ ಅವಕಾಶವಿರುವುದಿಲ್ಲ. ಭಾರತ ಭೂಮಿಯಲ್ಲಿ ಬ್ರಹ್ಮವಿಷಯಕವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯಾಧಿಕಾರವು ಮಾತೃಗರ್ಭದಿಂದಲೇ ಅಂದರೆ ಜನ್ಮಾಂತರ ವಾಸನಾ-ಋಣದ ಫಲವಾಗಿಯೇ ಲಭಿಸುವುದು. ವಿದ್ಯೆಯು, ಬ್ರಹ್ಮವಿದ್ಯೆಯು, ಆಜನ್ಮ ಸಿದ್ಧವಾದ ಸ್ವಾಮ್ಯ. ಹೀಗಿರುವಲ್ಲಿ ಮೂಢಭಕ್ತಿಯಿಂದಲಾದರೂ ಬದುಕಬೇಕೆಂಬ ವ್ಯಾಜವನ್ನು ಹುಟ್ಟಿಸಿ ಮೂಢ ಭಕ್ತಿಯು ಹಂತವೇ ಸಾಕೆಂದು ಘೋಷಿಸಿ ತಿಳಿವಳಿಕೆಯನ್ನು ಮರೆಮಾಡಿ ತಿಳಿವಳಿಕೆಯನ್ನೂ ತಿಳಿದವರನ್ನೂ ಮತ್ತು ಯಥಾರ್ಥಗಳನ್ನು ದ್ವೇಷಾಸೂಯೆಗಳಿಂದ ದೂರೀ ಕರಿಸುವ ಸ್ಥಿತಿಯು ಮಾನವರನ್ನು ಮಾನವೀಯತೆಯಿಂದ ಕೆಳಕ್ಕೆ ಉರುಳಿಸುವುದು. ಈ ಜಾಡ್ಯವನ್ನು ನಿರ್ಮೂಲ ಮಾಡಲು ವಿದೇಶೀ ಆವರಣದ ವಿದೇಶೀಯ ದೃಷ್ಟಿಕೋಣಗಳನ್ನು ದೂರೀಕರಿಸಬೇಕು. ಶಾಸ್ತ್ರಾನುಭವಗಳ ವಿಮರ್ಶೆಯನ್ನು ದೇಶೀಯ ಮಂಥನ ಕ್ರಮದಲ್ಲಿ ರಸವತ್ತಾಗಿ ನಡೆಸಿ ಗ್ರಂಥಗಳ ಮಹಿಮೆಯು ಯಥಾರ್ಥವಾಗುವಂತೆ ವ್ಯಾಖ್ಯಾನಾದಿಗಳ ರಚನೆಯು ಈಗ ನಡೆಯಬೇಕಾಗಿದೆ.

ಧರ್ಮಶಾಸ್ತ್ರಗ್ರಂಥಗಳಲ್ಲಿರುವ ಕೆಲವು ಬರವಣಿಗೆಗಳನ್ನು ನೋಡಿದ ಮಾತ್ರದಿಂದಲೇ ಆಗಲಿ ಶ್ರವಣ ಮಾಡಿದರಾಗಲೀ ಅವುಗಳ ಸಂಕುಚಿತ ವ್ಯವಹಾರದಲ್ಲಿ ಸಿಕ್ಕಿಕೊಂಡಿರುವ ವಿವೇಕಿಗಳಿಗೆ ಖೇದಾಶ್ಚರ್ಯ ಸಂಕಟ ಮನೋವಿಕಾರಗಳು ಉಂಟಾಗಬಹುದು. ವಿವೇಕಕ್ಕಿಂತ ಕೆಳಗಿನ ಮಟ್ಟದವರಿಗೆ ಈ ಸಮಸ್ಯೆಗಳು ಉದ್ಭವಿಸುವುದಿಲ್ಲ. ಚತುಷ್ಪಾದಿಗಳಂತೆ ತಿರ್ಯಕ್ ದೇಹಿಗಳಂತೆ ಸುತ್ತಮುತ್ತಲಿನ ಸನ್ನಿವೇಶಕ್ಕೆ ಅವರು ಬಲಿಯಾಗುತ್ತಾರೆ.

'ಜೀವನದ ನ್ಯಾಯ' ವೆಂಬ ತುಲೆಯು ಸರಿದೂಗುವಂತೆ ವಿವೇಕ ದಿಂದ ನಿಜಾಂಶವನ್ನು ಹೊರಸಡಿಸಿದರೆ ಪದಚ್ಯುತಿಯಾಗುವುದೋ! ಎಂಬ ಸಂಶಯವೂ ಅನೇಕರಿಗೆ ಉಂಟಾಗುವುದಕ್ಕೆ ರಾಜನೀತಿ ಜ್ಞಾನವು ಅಸ್ತವಾಗಿರುವುದೇ ಕಾರಣ. ದುಷ್ಟಪರಿಸ್ಥಿತಿಯು ದೂರವಾದರೂ ದುಷ್ಟ ಪರಿಸ್ಥಿತಿಯಿಂದ ಉಂಟಾದ ದುಷ್ಟವಾಸನೆಯೇ ಇನ್ನೂ ಧಮನಿಯಲ್ಲಿ ಸಂಚರಿಸುತ್ತಿರುವುದರಿಂದಲೂ ರಾಜನೀತಿ ಸ್ವರೂಪಜ್ಞಾನಕ್ಕೆ ಅವಕಾಶ ವನ್ನುಂಟುಮಾಡದಿರುವುದರಿಂದಲೂ ರಾಜನೀತಿ ಸೂರ್ಯೋದಯವು ಇನ್ನೂ ದೂರವಾಗಿದೆ. ಎಂದು ಸೂಚಿತವಾಗುವುದು. ಜ್ಞಾನಲವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಿದಗ್ಧರಾದವರು ಯಾವ ಹಂತದಲ್ಲಿದ್ದರೂ ದ್ವೇಷಾಸೂಯೆಗಳೆಂಬ ವಿಷವನ್ನು ಕಾರುವುದು ವಾಡಿಕೆ.

ಈ ವಿಷಮ ಪರಿಸ್ಥಿತಿಯಲ್ಲಿ ವ್ಯಾಖ್ಯಾನ ಚಮತ್ಕಾರವನ್ನು ಉದಾಹರಿಸುವುದು ಸಾಹಸದ ಕೆಲಸ. ಪಾಂಡಿತ್ಯವೂ ಪಾಂಡಿತ್ಯಾಭಾವವೂ ಸಹ ಔದಾರ್ಯ, ಸಹೃದಯತೆಗಳಿಂದ ರಸಾಭಿನಿವಿಷ್ಟ ವಿಮರ್ಶೆಗೆ ಸಹಕರಿಸಬೇಕು. ಈ ಸಹಕಾರದಿಂದ ವ್ಯಾಖ್ಯಾನ ಸುಧಾರಣೆಗಳನ್ನು ಅನುಮೋದಿಸಬಹುದು. ತ್ರಿಕಾಲಾಬಾಧಿತವಾದ ತತ್ವ ಮತ್ತು ಸಂಸ್ಕೃತಿಗಳ ಆಧಾರದಿಂದಲೇ ವ್ಯಾಖ್ಯಾನ ವಿವರಗಳನ್ನು ಪ್ರದರ್ಶಿಸಿ ಪ್ರಗತಿಯನ್ನು ಸಾಧಿಸುವುದು ಸುಸಂಸ್ಕೃತರ ಲಕ್ಷಣ ಮತ್ತು ಕರ್ತವ್ಯ.

"ಅಥ ಚತ್ವಾರೋ ವರ್ಣಾಃ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾಃ। ತೇಷಾಂ ಪೂರ್ವಃ ಪೂರ್ವಃ ಜನ್ಮತಃ ಶ್ರೇಯಾನ್ । ಧರ್ಮಚರ್ಯಯಾ ಜಘನ್ಯಃ ವರ್ಣಃ ಪೂರ್ವಂ ಪೂರ್ವಂ ವರ್ಣಮಾಪದ್ಯತೇ ಜಾತಿ ಪರಿವೃತ್ತೌ । ಅಧರ್ಮಚರ್ಯಯಾ ಪೂರ್ವಃ ವರ್ಣಃ ಜಘನ್ಯಂ ಜಘನ್ಯಂ ವರ್ಣಮಾಪದ್ಯತೇ ಜಾತಿ ಪರಿವೃತ್ತೌ।

ಯಥೌಷಧೀನಾಂ ವನಸ್ಪತೀನಾಂ ಬೀಜಸ್ಯ ಕ್ಷೇತ್ರಕರ್ಮವಿಶೇಷೇ ಫಲಪರಿವೃದ್ಧಿಃ ಏವಂ । ದೋಷಪರಿವೃದ್ಧಿರುಕ್ತಾ । ಸ್ತೇನಃ ಅಭಿಶಸ್ತಃ ಬ್ರಾಹ್ಮಣಃ ರಾಜನ್ಯಃ ವೈಶ್ಯಃ ಪರಸ್ಮಿನ್ ಲೋಕೇ ಅಪರಿಮಿತೇ ನಿರಯೇ ವೃತ್ತೇ ಜಾಯತೇ ಚಾಂಡಾಲಃ ಬ್ರಾಹ್ಮಣಃ, ಪೌಲ್ಕಸಃ ರಾಜನ್ಯಃ, ವೈಣಃ ವೈಶ್ಯಃ, ಏತೇನ ಅನ್ಯೇ ದೋಷಫಲೈಃ ಕರ್ಮಭಿಃ ಪರಿಧ್ವಸ್ತಾಃ ದೋಷಫಲಾಸು ಯೋನಿಷು ಜಾಯಂತೇ ವರ್ಣಪರಿಧ್ವಂಸಾಯಾಂ।

ಪೂಜಾ ವರ್ಣಜ್ಯಾಯಸಾಂ ಕಾರ್ಯಾ ।

ವರ್ಣಾನಾಂ ಬ್ರಾಹ್ಮಣೋ ಗುರುಃ।

ಸರ್ವ ವರ್ಣಾನಾಂ ಸ್ವಧರ್ಮಾನುಷ್ಠಾನೇ ಪರಂ ಅಪರಿಮಿತಂ ಸುಖಂ। ತತಃ ಪರಿವೃತ್ತೌ ಕರ್ಮಫಲಶೇಷೇಣ ಜಾತಿಂ ರೂಪಂ ವರ್ಣಂ ಬಲಂ ಮೇಧಾಂ ಪ್ರಜ್ಞಾಂ ದ್ರವ್ಯಾಣಿ ಧರ್ಮಾನುಷ್ಠಾನಂ ಇತಿ ಪ್ರತಿಪದ್ಯತೇ। ತಚ್ಚಕ್ರವದುಭಯೋರ್ಲೋಕಯೋಃ ಸುಖ ಏವ ವರ್ತತೇ।"

ಆ. ಧ. ಸೂ. ಮಂಜರೀ ಪುಟ 3.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ವಾಕ್ಯಗಳಲ್ಲಿ ಸೃಷ್ಟಿತತ್ವ, ಅನುಭವ ಮತ್ತು ಕರ್ಮ ಮೀಮಾಂಸಾ ಇವುಗಳ ರಹಸ್ಯಗಳು ಉಲ್ಲೇಖಿಸಲ್ಪಟ್ಟಿವೆ. ಇವು ವ್ಯಕ್ತಿಯನ್ನು ಉದ್ದೇಶಿಸಿ ಹೇಳಿಲ್ಲ. ಕೇವಲ ಕರ್ಮ ರಹಸ್ಯವನ್ನು ಮಾತ್ರ ಬೋಧಿಸುವುವು.

ಋಣ – ಕರ್ಮ – ಬಂಧನ ನಿಯಮಗಳ ಪರಿಮಿತಿಯಲ್ಲಿ ಬರುವ ವರ್ಣಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬದಾಗಿ ನಾಲ್ಕು ಇರುವುವು * ಇವುಗಳಲ್ಲಿ ಬ್ರಾಹ್ಮಣ ಶಬ್ದವು, ಸರ್ವಸಾಮಾನ್ಯವಾಗಿರುವ ಬ್ರಾಹ್ಮಣಕ್ಕಿಂತ ಪ್ರತ್ಯೇಕವಾಗಿರುವ ಅರ್ಥ ವಿಶೇಷವನ್ನು ಸೂಚಿಸಲು ಬ್ರಾಹ್ಮಣ ಬ್ರಾಹ್ಮಣ ಅಥವಾ ಶ್ರೋತ್ರಿಯ ಶಬ್ದಗಳನ್ನು ಉಪಯೋಗಿಸಬೇಕಾಗಿರುತ್ತದೆ. ಕೇವಲ ಶಾಸ್ತ್ರತಃ ವಿವೇಚನೆ ಮಾಡಿದಾಗ ಹಿಂದು ಹಿಂದಿನ ಕರ್ಮ ಮತ್ತು ಕರ್ಮಫಲ ವಾಸನೆಯ ಆಧಾರದ ಮೇಲೆ ಮುಂದು ಮುಂದೆ ಸಾಧಿಸಬೇಕಾದ ಕರ್ಮ ಮತ್ತು ಅನುಭವಿಸಬೇಕಾದ ಕರ್ಮ ಫಲಾನುಭವಗಳಿಗೆ ಅವಶ್ಯಕವಾಗಿರುವಂತೆ ವ್ಯಕ್ತಿಗಳು, ಆಯಾ ವೃತ್ತಿ ವರ್ಣಗಳು ಪ್ರಧಾನವಾಗಿರುವ ಯೋನಿಗಳಲ್ಲಿ ಜನಿಸುವುವು. ಜನ್ಮ ಅಥವಾ ಅವಸ್ಥೆಗಳು ಸೋಪಾನ–ವಲಯ ಕ್ರಮದಲ್ಲಿ ಉಚ್ಚನೀಚಗಳೆಂದು ಸ್ವತ ಏವ ಸಿದ್ಧವಾಗಿ ಪ್ರಕಾಶಕ್ಕೆ ಬರುವುವು. ಇವರ ವ್ಯಾಪ್ತಿಯು ಕೇವಲ ಶಾರೀರಾವಿರ್ಭಾವಕ್ಕೆ ಸಂಬಂಧಿಸಲ್ಪಟ್ಟು ಅಲ್ಲಿ ಕೊನೆಗಾಣುವುದು. (ಸ್ವಧರ್ಮ ವಿವೇಕ ಪು. 293)

ಜನ್ಮವನ್ನು ಹೊಂದಿದ ವ್ಯಕ್ತಿಗೆ ವಯಸ್ಸು ಅನುಭವಗಳು ಹೆಚ್ಚಿದಂತೆ ವಿವೇಚನೆಯನ್ನು ಪ್ರಯೋಗಿಸಿ, ಮನುವುಳ್ಳ ದೇಹಿಗಳು ಋಣ ಕರ್ಮ ಫಲಾನುಭವಗಳನ್ನು ತಿಳಿದು ಅವಕ್ಕೆ ಸಿದ್ಧರಾಗಿರಲೇಬೇಕು.

---

* ನಿಯಮಗಳ ಪರಿಮಿತಿಯಿಲ್ಲದೆ ಇರುವನ್ನು ಸ್ವಾತಂತ್ರ್ಯವುಳ್ಳ ವರ್ಣವು ಐದನೆಯದು ನಿಷಾದವರ್ಣವೆನಿಸುವುದು. ಈ ಧರ್ಮಶಾಸ್ತ್ರ ಜಿಜ್ಞಾಸೆಯು ಕೇವಲ ನಿಯಮಬದ್ಧವಾದ ವರ್ಣಗಳಿಗೆ ಅನ್ವಯಿಸಲ್ಪಟ್ಟು, ಉದಾಹೃತವಾಗಿವೆ. ಚತುರ್ವರ್ಣಗಳ ಚೌಕಟ್ಟಿನಲ್ಲಿಯೇ ಪಂಚಮ ವರ್ಣವನ್ನು ಗ್ರಹಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮತಃ ಉಂಟಾಗುವ ದ್ವಿತೀಯ ಜನ್ಮಸಂಸ್ಕಾರಸ್ಥಿತಿ ಅನುಭವಗಳಿಗೂ ಸಮಯ ಸನ್ನಿವೇಶಗಳಿಗೂ ತಕ್ಕಂತೆ ವರ್ಣ-(ಕರ್ಮ = ವೃತ್ತಿ)-ಗಳು ಹೊರಹೊಮ್ಮುವುವು. ವರ್ಣಕ್ಕೆ ಅಂಗವಾದ ಧರ್ಮಚರ್ಯೆಯಿಂದ ಜಾತಿಯು (ದ್ವಿತೀಯ ಜನನ) ಸಂಸ್ಕಾರವು ಪರಿವೃತ್ತಿ - ಬದಲಾವಣೆಯನ್ನು ಹೊಂದುವಾಗ ಮೇಲು ಮೇಲಿನ ಹಂತಗಳಲ್ಲಿರುವ ವರ್ಣಗಳನ್ನು ಅನುಭವಿಸಲು ಅರ್ಹತೆ - ಅಧಿಕಾರಗಳು ಉಂಟಾಗುವುವು.

ಅಧರ್ಮ ಚರ್ಯೆಯಿಂದ ಜಾತಿಯು ಶರೀರ ಜನನ ಮತ್ತು ವಿಮುಖ ಸಂಸ್ಕಾರದ ಕರ್ಮಗಳ ರೂಪದಲ್ಲಿ ಕೆಳಗಿನ ಹಂತಗಳಲ್ಲಿರುವ ವರ್ಣಸ್ಥಿತಿ ಮತ್ತು ಅನುಭವಗಳಿಗೆ ಬಲಿ(ಗುರಿ)ಯಾಗುವುದು.

ಬೀಜ, ಕ್ಷೇತ್ರ ವ್ಯವಸಾಯ (ಸುಮುಖ ಸಂಸ್ಕಾರ) ವೈಶಿಷ್ಟ್ಯದಿಂದ ಫಲ ಸಮೃದ್ಧಿಯು ಮೂಲಿಕೆ, ಸಸ್ಯ, ತರುಗಳಿಂದ ಉಂಟಾಗುವಂತೆ ಮಾನವ ದೇಹಿಗಳಿಗೂ ಸುಮುಖ ಸಂಸ್ಕಾರ ವಿಶೇಷದಿಂದ ಸತ್ಫಲವೂ ವಿಮುಖ ಸಂಸ್ಕಾರಗಳಿಂದ ಅಥವಾ ಸಂಸ್ಕಾರಹೀನತೆಯಿಂದ ದುಷ್ಟಫಲಗಳ ಆಧಿಕ್ಯವೂ ಉಂಟಾಗುವುವು.

ಶರೀರಜನ್ಮಲೋಕ (ಸ್ಥಾನ) ದಿಂದ ಬೇರೆಯಾದ ಸ್ಥಳವಿಶೇಷಗಳು ಪರಲೋಕವೆನಿಸುವುವು. ಆಯಾ ಕರ್ಮ ಫಲಾನುಭವಕ್ಕೆ ಅನುರೂಪವಾದ ಈ ಸ್ಥಳಗಳಲ್ಲಿ ಸ್ತೇನ, ಅಭಿಶಸ್ತರಾದ ಶ್ರೋತ್ರಿಯ, ರಾಜನ್ಯ, ವೈಶ್ಯರು ಆಯಾ ಕರ್ಮಗಳ ಫಲವನ್ನು ಅನುಭವಿಸಿ ಶರೀರವನ್ನು ನೀಗಿದ ನಂತರ ಈ ಕರ್ಮಗಳ ವಾಸನೆಯ ಫಲವು ಚೋದಿಸುವ ಯೋನಿಗಳಲ್ಲಿ ಜನ್ಮವನ್ನು ಅಂದರೆ ಚಾಂಡಾಲ, ಪೌಲ್ಕಸ, ವೈಣವೆಂಬ ವ್ಯಾವಹಾರಿಕ ಹೆಸರುಗಳ ಅವಸ್ಥಾ ವಿಶೇಷಗಳನ್ನು ಕ್ರಮವಾಗಿ ಸ್ವಾಗತಿಸುವರು.

ಶೂದ್ರವೆಂಬ ಸ್ಥಾಯೀ ವರ್ಣ ಸಾಮಾನ್ಯವು ಸಾಹಸ ಸಂಸ್ಕಾರಗಳಿಂದ ಬೇರೆ ಹೆಸರು ಮತ್ತು ಅವಸ್ಥೆಗಳನ್ನು ಹೊಂದುವುದರಿಂದಲೂ ಶೂದ್ರವು ಶೂದ್ರವಾಗಿಯೇ ಇರುವ ಪರಿಸ್ಥಿತಿಯಾದುದರಿಂದಲೂ ಅದರ ವಿಚಾರವು ಚರ್ಚೆಗೆ ಒಳಪಡುವುದಿಲ್ಲ.

ಉತ್ತಮ ಸಂಸ್ಕಾರಗಳನ್ನು ಹೊಂದಿದ ಶ್ರೋತ್ರಿಯ, ರಾಜನ್ಯ, ವೈಶ್ಯಗಳು ಶರೀರ ಜನ್ಮ ಸ್ಥಾನಗಳಿಗಿಂತಲೂ ಉತ್ತಮವಾಗಿಯೇ ಇರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನ್ಮ ಸ್ಥಾನಗಳಲ್ಲಿ ಉತ್ತಮೋತ್ತಮ ಫಲಗಳನ್ನು ಅನುಭವಿಸಿ ಶರೀರ ವನ್ನು ತ್ಯಜಿಸಿದನಂತರ ಉತ್ತಮ ಯೋನಿ (ಕ್ಷೇತ್ರ) ಗಳಲ್ಲಿ ಜನ್ಮವೆತ್ತಿ ಶ್ರೇಯಃ ಪ್ರದವಾದ ಮತ್ತು ಶ್ರೇಷ್ಠತಮವಾದ ಕರ್ಮ ಸಾಧನೆಗಳನ್ನು ಮಾಡುವವುಗಳಾಗುತ್ತವೆ. ಜನ್ಮಗಳ, ಯೋನಿ (ಕ್ಷೇತ್ರ) ಗಳ, ವ್ಯಕ್ತಿಗಳ ಉನ್ನತಿ, ಅವನತಿ, ಉಚ್ಚನೀಚ ವಿಚಾರಗಳು ಎತ್ತಿಯಾಡಲ್ಪಟ್ಟಂತೆ ಭಾವಿಸಲು ಅವಕಾಶವೇ ಇಲ್ಲ. ವ್ಯಕ್ತಿಗಳು ಶ್ರೇಯಃ ಪ್ರದವಾದಂತೆಲ್ಲಾ ಉನ್ನತವೂ ಹಿರಿಮೆಯುಳ್ಳವೂಯೆನಿಸಿ ಗೌರವಕ್ಕೂ ಸಮಾನತೆಗೂ ಪಾತ್ರವಾಗಿರುತ್ತಾರೆ.

ವರ್ಣಗಳಿಗೆಲ್ಲಾ ಶ್ರೋತ್ರಿಯ ವರ್ಣವೇ ಗುರು ಅಂದರೆ ಶ್ರೇಷ್ಠ. ಹಿಂದೆ ಹೇಳಿದ ವಿವರಣೆಗಳಿಗನುಗುಣವಾಗಿ ಬ್ರಾಹ್ಮಣ ಶಬ್ದವು ಸರ್ವ ಸಾಮಾನ್ಯವಾಗಿದೆ. ಬ್ರಾಹ್ಮಣಕ್ಕೆಲ್ಲಾ ಬ್ರಾಹ್ಮಣವೆನಿಸಿದ ಶ್ರೋತ್ರಿ ಯಾರ್ಥವು ಪ್ರತಿಪಾದಿತವಾಗಲು ಬ್ರಾಹ್ಮಣ ಬ್ರಾಹ್ಮಣ ಶಬ್ದವನ್ನು ಪ್ರಯೋಗಿಸಬೇಕು. ಅದಕ್ಕೆ ಬದಲಾಗಿ ಬ್ರಾಹ್ಮಣ ಎಂದು ಶುದ್ಧವಾಗಿ ವಿಶೇಷಣವಾಗಿ ಕ್ಷತ್ರಿಯಾದಿಗಳಂತೆ ಪ್ರಯೋಗಿಸಲ್ಪಟ್ಟಾಗ ಶ್ರೋತ್ರಿಯ ಎಂಬ ಅರ್ಥದಲ್ಲಿಯೇ ಅದನ್ನು ಗ್ರಹಿಸಬೇಕಾಗಿರುವುದು.

ಸುಮುಖ ಕರ್ಮಗಳು, ಜ್ಞಾನ, ಸಂಸ್ಕೃತಿ ಮೊದಲಾದುವು ಪ್ರಧಾನವಾಗಿ ಇರುವ ಶ್ರೋತ್ರಿಯವು ಎಲ್ಲಾ ವರ್ಣಗಳಿಗಿಂತಲೂ ಶ್ರೇಷ್ಠ ವಾಗಿರುವುದು ಸ್ವಭಾವವೇ ಆಗಿದೆ. ಶ್ರೋತ್ರಿಯ ಎಂಬುದು ಕೇವಲ ವ್ಯಕ್ತಿ-ಶರೀರಗಳಿಗೆ ಮಾತ್ರ ಅನ್ವಯಿಸಿದಂತೆ ಅರ್ಥ ಮಾಡಿಕೊಂಡರೆ ಆಭಾಸಕ್ಕೆ ಕಾರಣವಾಗುವುದು.

ಕರ್ಮಫಲಸಂಸ್ಕಾರದಿಂದ ಬದಲಾವಣೆ ಹೊಂದಿ ಸಮಸ್ತವ್ಯಕ್ತಿಗಳೂ ಉರುಳುವ ಮತ್ತು ಸುತ್ತುವ ಚಕ್ರದಂತೆ ಬದಲಾವಣೆಯಾಗುತ್ತಿರುವ ವಿವಿಧವಾದ ಜಾತಿ, ವರ್ಣ, ರೂಪ, ಬುದ್ಧಿ, ಸಂಪತ್ತು, ಕರ್ಮಾನುಷ್ಠಾನ ದಕ್ಷತೆಗಳನ್ನು ಆಯಾ ಕರ್ಮ, ಪ್ರಯತ್ನ – ಫಲಕ್ಕೆ ಅನುಸಾರವಾಗಿ ಪಡೆಯುತ್ತಾರೆ. ಯಾವುದೂ ಯಾವ ಘಳಿಗೆ – ನಿಮಿಷದಲ್ಲಿಯೂ ಸ್ಥಿರವಾಗಿ ನಿಲ್ಲಲಾರದು. "ನ ವಿಶೇಷೋಸ್ತಿ ವರ್ಣಾನಾಂ ಸರ್ವಂ ಬ್ರಹ್ಮಮಯಂ ಜಗತ್ ॥"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಾಹ್ಮಣಾಃ ಪೂರ್ವ ಸೃಷ್ಟಾ ಹಿ ಕರ್ಮಭಿಃ ವರ್ಣತಾಂ ಗತಾಃ ।
—ಭೃಗು. (ಭಾರತ ಶಾಂತಿ ಪರ್ವ 186)

ಚತುಸ್ಸಾಗರಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು

ವಿಶ್ವದಲ್ಲಿ ಭೂಭಾಗವು ಜಲದಿಂದ ಆವೃತವಾಗಿರುವುದು. ನಾಲ್ಕು (ಎಂಟು)- ದಿಕ್ಕುಗಳಲ್ಲಿ ಭೂಮಿಯನ್ನು ಜಲವು ಆವರಿಸಿರುತ್ತದೆ ಭೂಮಿಯ ಮೇಲೆ ಸಂಚರಿಸುವ ಪ್ರಾಣಿಗಳೂ ಮನುಷ್ಯರೂ ಪ್ರಾಣಿಗಳೂ ಸಂಚಲನ ಸಾಮರ್ಥ್ಯವುಳ್ಳವರು. ಭೂ ಪ್ರದಕ್ಷಿಣೆ ಮಾಡುವ ಪ್ರಾಣಿಗಳಿಗೂ ಮನುಷ್ಯರಿಗೂ ಶುಭವುಂಟಾಗಲಿ ಎಂದು ಸರ್ವರೂ ಸರ್ವರಿಗೂ ಹಿತವನ್ನು ಬಯಸುವವರಾಗಿರುತ್ತಾರೆ. ವಸುಧೆಯೇ ಕುಟುಂಬವೆಂದು ಭಾವಿಸಿ ನಡೆಯುವ ಮಹಾತ್ಮರಿಗೆ ಇದು ಸಾಧಾರಣ ವಿಷಯವಾಗಿದೆ.

'ಗೋ' ಎಂದರೆ ಹಸು ಎಂತಲೂ 'ಬ್ರಾಹ್ಮಣ' ಎಂದರೆ ಶ್ರೋತ್ರಿಯ ವೃತ್ತಿಯ ವ್ಯಕ್ತಿಗಳು ಎಂತಲೂ ಅರ್ಥ ವಿವರಣೆಯನ್ನು ಕೊಡುವುದು ಹಿಮ್ಮೆಯ ವಿಚಾರ ಮತ್ತು ಸಂಕುಚಿತವೂ ಕುತ್ಸಿತವೂ ಆದ ಮನೋಭಾವ. ಗೋ (– ಹಸು) ಸಮೂಹಕ್ಕೂ ಶ್ರೋತ್ರಿಯ ಸಮೂಹಕ್ಕೂ ಮಾತ್ರ ಶುಭವುಂಟಾಗುವುದಾದರೆ ಸಮತೆಯೂ ತೂಕವೂ ತಪ್ಪಿ ಕೊರತೆಯುಂಟಾಗುವುದು. ಗೋವು ಮತ್ತು ಶ್ರೋತ್ರಿಯರು ಶುಭವನ್ನು ಹೊಂದಿದರೆ ಉಳಿದವರೆಲ್ಲರೂ ಶುಭವನ್ನು ಹೊಂದುವರು ಎಂದಾಗಲೀ, ಗೋವು ಮತ್ತು ಶ್ರೋತ್ರಿಯರು ಶುಭವನ್ನು ಹೊಂದಬೇಕಾದರೆ ಉಳಿದ ಪ್ರಾಣಿ ಮನುಷ್ಯವರ್ಗವೆಲ್ಲವೂ ಶುಭವನ್ನು ಹೊಂದಿರಲೇಬೇಕು ; ಆದುದರಿಂದ ಸರ್ವರಿಗೂ ಶುಭವನ್ನು ಹಾರೈಸುವ ಸಲುವಾಗಿ ಗೊತ್ತಾದ ಗೋಬ್ರಾಹ್ಮಣರೆಂಬ ವ್ಯಕ್ತಿಗಳನ್ನು ಉದ್ದೇಶಿಸಿ ಶುಭವನ್ನು ಕೋರಲಾಗಿದೆ ಎಂದು ಹೇಳುವುದು ಸಾಧುವಾದುದು ಆದರೆ ಅದನ್ನು ವಿಮರ್ಶಿಸಿ ತಿಳಿಯದ ಸಾಮಾನ್ಯರ ಅನುಭವಕ್ಕೂ ಮನೋಭಾವಕ್ಕೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂರವಾದ ವಿಷಯು. ವಸುಧಾ ಕುಟುಂಬಿಗಳು ಸಂಚಲನ ಶೀಲರಾದ ಪ್ರಾಣಿ ಮತ್ತು ಮನುಷ್ಯವರ್ಗವನ್ನುದ್ದೇಶಿಸಿ ಪ್ರಪಂಚಕ್ಕೆಲ್ಲಾ ಅನ್ವಯಿಸುವಂತೆ ಶುಭವನ್ನು ಕೋರಲು ಹೊರಟು ಗೋವುಗಳೆನಿಸಿದ ಸಮಸ್ತ ಪ್ರಾಣಿಗಳೂ ಬ್ರಹ್ಮವನ್ನು ಸಾಧಿಸುವವರಾದ ಮನುವುಳ್ಳ ದೇಹಿಗಳೆಲ್ಲರನ್ನೂ ಉದ್ದೇಶಿಸಿ ಗೋಬ್ರಾಹ್ಮಣೇಭ್ಯಃ ಎಂದು ಹೇಳಿ ವೇದ ವೇದಾಂತಗಳ ಸಾರವನ್ನೂ ಘನತೆಯನ್ನೂ ಘೋಷಿಸಿರುತ್ತಾರೆ. ಇದು ಋತವನ್ನು ಪೋಷಿಸುವುದಾಗಿರುತ್ತದೆ.

'ಚತುಸ್ಸಾಗರಪರ್ಯಂತಂ' ಎಂದು ಹೇಳಿರುವುದರಿಂದ ಗೋ ಬ್ರಾಹ್ಮಣ ಶಬ್ದಗಳನ್ನು ವಿಶಾಲವಾದ ಅರ್ಥದಲ್ಲಿ ಅಂದರೆ ಮನುವುಳ್ಳ ಮಾನವರು ಮತ್ತು ಮಾನವೇತರ ಪ್ರಾಣಿಗಳು ಎಂಬ ಅರ್ಥದಲ್ಲಿ ಗ್ರಹಿಸಬೇಕೆಂಬುದು ಸ್ಪಷ್ಟವಾಗುವುದು. ಕೇವಲ ಆಸೇತು ಹಿಮಾಚಲದ ಶ್ರೋತ್ರಿಯ ವ್ಯಕ್ತಿಗಳೆಂದು ಭಾವಿಸಿ ಸಂಕುಚಿತವಾದ ಅರ್ಥ ಗ್ರಹಣ ಮಾಡುವುದಕ್ಕೆ ಚತುಸ್ಸಾಗರ ಪರ್ಯಂತ ಶಬ್ದದ ಪ್ರಯೋಗವು ಅಡ್ಡಿ ಮಾಡುತ್ತದೆ. ಚತುಸ್ಸಾಗರ ಪರ್ಯಂತವಾಗಿಯೂ ಶ್ರೋತ್ರಿಯ ಬ್ರಾಹ್ಮಣರು ಇರಲಾರರು. ಆದುದರಿಂದ ಇಲ್ಲಿ ಬ್ರಾಹ್ಮಣರು ಎಂದರೆ ಕೇವಲ ಮಾನವರು ಎಂತಲೇ ಅರ್ಥಮಾಡಬೇಕಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭. ವಿಮರ್ಶಾತ್ಮಕ ವ್ಯಾಖ್ಯಾನ

ಇದುವರೆಗೂ ವಿವರಿಸಿದಂತೆ ಶಬ್ದ ಸಂಕೇತ ನಿರ್ಣಯವನ್ನು ಹೃದಯದಲ್ಲಿಟ್ಟುಕೊಂಡು, ಕಾತ್ಯಾಯನ ವ್ಯಾಸಮಹರ್ಷಿಗಳು ಪ್ರತಿಪಾದಿಸಿರುವ ಅನುಭವಸಾರದ ಅರ್ಥ–ವ್ಯಾಪ್ತಿಯನ್ನು ದ್ವೇಷಾಸೂಯೆಗಳಿಲ್ಲದೆ ಸರ್ವಭೂತಗಳಿಗೂ ಅಭಯವನ್ನು ಅನುಗ್ರಹಿಸುವಂತೆ ವಿವರಿಸಬೇಕಾಗಿದೆ —

ಯತ್ರ ವಿದ್ವಾನ್ ನ ವಿಪ್ರಃ ಸ್ಯಾತ್ ಕ್ಷತ್ರಿಯಂ ತತ್ರ ಯೋಜಯೇತ್ ।
ವೈಶ್ಯಂ ವಾ ಧರ್ಮಶಾಸ್ತ್ರಜ್ಞಂ ಶೂದ್ರಂ ಯತ್ನೇನ ವರ್ಜಯೇತ್ ॥
ಎಂದು ಕಾತ್ಯಾಯನರು ಹೇಳಿರುತ್ತಾರೆ.

ವೃಷಲಸ್ಯ ಧರ್ಮಶಾಸ್ತ್ರಜ್ಞಾನೇಪಿ ಧರ್ಮನಿರ್ಣಯಾರ್ಥಂ ನ ನಿಯುಂಜೀತ । ತಥಾ ಹಿ —

ಯಸ್ಯ ರಾಜ್ಞಸ್ತು ಕುರುತೇ ಶೂದ್ರೋ ಧರ್ಮವಿವೇಚನಂ ।
ತಸ್ಯ ಸೀದತಿ ತದ್ರಾಷ್ಟ್ರಂ ಪಂಕೇ ಗೌರಿವ ಪಶ್ಯತಃ ॥
ದ್ವಿಜಂ ವಿಹಾಯ ಯಃ ಪಶ್ಯೇತ್ ಕಾರ್ಯಾಣಿ ವೃಷಲೈಸ್ಸಹ ।
ತಸ್ಯ ಪ್ರಕ್ಷುಭ್ಯತೇ ರಾಷ್ಟ್ರಂ ಬಲಂ ಕೋಶಂ ಚ ನಶ್ಯತಿ ॥ ವ್ಯಾಸಃ—

ಮೇಲ್ಕಂಡಂತೆ ಸತ್ಯವಾಕ್ಯ ಸರಣಿಯಲ್ಲಿ ಯಾವ ದೇಹಿಗೂ ಪುರಸ್ಕಾರವಿಲ್ಲ; ಯಾವ ದೇಹಿಗೂ ತಿರಸ್ಕಾರವಿಲ್ಲ. ಯಾರೊಬ್ಬರನ್ನೂ ಯಾವ ಗುಂಪನ್ನೂ ಹಳಿದಿಲ್ಲ; ಯಾರನ್ನೂ ಹೊಗಳಿಲ್ಲ ಅಪರಾಧಿಯ ಹೃದಯವು ತಲ್ಲಣಿಸುವಂತೆ ಗುಣತಃ, ಕರ್ಮತಃ ಯಾರು ಹೀನಾವಸ್ಥೆಯಲ್ಲಿರುತ್ತಾರೋ ಅವರು ಸ್ವತಃ ಕುಹಕಿಗಳಾಗಿ ಕುಹಕವನ್ನೇ ಭಾವಿಸುತ್ತಾ ಗ್ರಂಥದ ಮೇಲೆ ದೋಷಾರೋಪಣೆ ಮಾಡುವುದು ಸ್ವಭಾವ. ಅಂತೆಯೇ ಗ್ರಂಥದಲ್ಲಿರುವ ಬರವಣಿಗೆಗಳು ಪ್ರಶಂಸೆಗೆ ಬೆಂಬಲವಿತ್ತಂತೆ ಆಪಾತತಃ ಹಿಗ್ಗುವುದೂ ಅನುಚಿತ ಮತ್ತು ಅಪರಾಧ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥದ ಗರ್ಭದಲ್ಲಿರುವ ಆಶಯವನ್ನು ತಿಳಿಯದೆ ಮನೋಭಾವ ವನ್ನು ರೂಪಿಸುವುದು ಅಪರಾಧವಾಗಿ ಪರಿಣಮಿಸುವುದು – ಪ್ರತ್ಯಕ್ಷವಾಗಿ ಯೂ ಪರೋಕ್ಷವಾಗಿಯೂ ದಂಡನೆಗೆ ಪ್ರಕೃತಿಯೇ ಗುರಿಪಡಿಸುವಳು. ಅಪರಾಧದ ಫಲವೂ ವಿಪ್ರತಿಕ್ರಿಯಾ (ರೀ ಆಕ್ಷನ್) ಫಲ ಸಮೇತ ಕರ್ತೃವಿನ ತಲೆ ಬೆನ್ನುಗಳ ಮೇಲೆ ತಿರುಗಿ ಬಿದ್ದು ಋಣವಾಗಿ ಅನುಭವ ವನ್ನುಂಟು ಮಾಡುವುದಕ್ಕೆ ಹೊಂಚುಹಾಕುವುದು.

ರಾಜನೀತಿ ಶಾಸನಾಂತರ್ಗತವಾದ ನಿಯಮಗಳ ಅರ್ಥ ವಿವರಣೆ ಯು ಅಡಗಿ ಹೋಗಿರುವುದರಿಂದ ಇಲ್ಲಿ ತೋರಿಸಿರುವಂತೆ ಅದನ್ನು ಉದ್ಧರಿಸಿ ರೂಪುಕೊಡಬೇಕಾಗಿದೆ. ಮತ್ತು ಮನೋಭಾವವನ್ನು ಅದಕ್ಕೆ ಹೊಂದಿಸಿಕೊಂಡು ಆಚಾರ ಮತ್ತು ವ್ಯವಹಾರಗಳ ಸಮನ್ವಯದಿಂದ ಸಂತೃಪ್ತಿ – ಸುಖ – ಶಾಂತಿಗಳನ್ನು ಸಾಧಿಸಬೇಕಾಗಿದೆ. ಅತೀಂದ್ರಿಯ ವಸ್ತುವಾದ ಧರ್ಮವನ್ನು ಇಂದ್ರಿಯಗಳಿಗೆ ತೋರಿಸುವುದೂ ಇಂದ್ರಿಯ ಗಳಿಂದ ಗ್ರಹಿಸುವುದೂ ಸಾಧ್ಯವಲ್ಲ. ಧರ್ಮಿಯನ್ನು ಹೇಳುವ ಶಬ್ದ ಗಳನ್ನು ಉದಾಹರಿಸುವುದರ ಮೂಲಕ ಅದರೊಂದಿಗೆ ಕೂಡಿರುವ ಗುಣ ಧರ್ಮಗಳನ್ನು ಮಾತ್ರ ತಿಳಿಸುತ್ತಾರೆಂದು ದೃಢವಾಗಿ ನಂಬಬೇಕಾಗಿದೆ.

ವಿಪ್ರ ಶಬ್ದವು ಅನುಭವ ; ಶಾಸ್ತ್ರಜ್ಞಾನ ; ಆಚಾರ ವ್ಯವಹಾರಗಳ ಹೊಂದಿಕೆ, ಋತಕ್ಕೆ ಅನುರೋಧವಾಗಿ ಅಥವಾ ವಿರೋಧವಾಗಿ ನಡೆಯುವ ಕರ್ಮಗಳ ಫಲ, ಋಣ ಕರ್ಮಫಲ — ಇವುಗಳನ್ನು ಗೊತ್ತುಮಾಡಿ ಕರ್ತವ್ಯಾಕರ್ತವ್ಯಗಳನ್ನು ಆಯಾ ಪರಿಸ್ಥಿತಿಗೆ ತಕ್ಕಂತೆ ನಿರ್ಣಯಿಸು ವುದು ; ಉತ್ತಮ ಸಂಸ್ಕೃತಿಯನ್ನು ವ್ಯಕ್ತಪಡಿಸುವ ವಿಷಯಗಳ ಬೋಧನ ಮತ್ತು ಆದರ್ಶಾನುಷ್ಠಾನ ಪರತೆ ಸಹಜ ಜೀವನ ಕ್ರಮ — ಇತ್ಯಾದಿಗಳನ್ನು ಸೂಚಿಸುವುದು.

ವಿದ್ವಾನ್ ವಿಪ್ರಃ, ಕ್ಷತ್ರಿಯ, ವೈಶ್ಯಃ, ಶೂದ್ರಃ ಎಂಬ ಶಬ್ದಗಳ ಅರ್ಥಗಳಿಂದ ದ್ಯೋತಕವಾಗಬಹುದಾದ 'ವ್ಯಕ್ತಿ' ಗಳನ್ನು ಧರ್ಮ ಶಾಸ್ತ್ರಜ್ಞಃ ಎಂಬ ಶಬ್ದ ಮತ್ತು ಶಬ್ದಾರ್ಥಗಳಿಗೆ ಹೊಂದಿಸಿಕೊಂಡು ಧರ್ಮ ನಿರ್ಣಯದ ವಿಷಯದಲ್ಲಿ ತೀರ್ಮಾನ ಮಾಡುವ ಪ್ರಯತ್ನವು ಏಕ ಪಕ್ಷಕ್ಕೆ– ಪಕ್ಷಪಾತಕ್ಕೆ ಸಂಬಂಧಿಸಿದುದಾಗಿ ಫಲವನ್ನು ಕೆಡಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವ ವ್ಯಕ್ತಿಯಾದರೂ ಪ್ರಪಂಚದ ಸಾಮಾನ್ಯಜ್ಞಾನವನ್ನು ಹೊಂದಿದ್ದರೆ, ಆಚಾರಹೀನರಾಗಿದ್ದರೆ, ದುರಾಚಾರಿಗಳಾಗಿದ್ದರೆ ಆ ದೇಹಿಗೆ ಧರ್ಮ ಶಾಸ್ತ್ರ ನಿರ್ಣಯವು ದೊರೆಯುವುದಿಲ್ಲ. ಸುಸಂಸ್ಕೃತವಾದ ಆಹಾರ ವಿಹಾರ ಪದ್ಧತಿಗಳನ್ನು ಅನುಸರಿಸದವರಿಗೆ ಇತಿ ಕರ್ತವ್ಯತಾ ವಿವೇಕವು ಇರುವುದಿಲ್ಲ. ಮಾನವ ರಚಿತವಾದ ಶಾಸ್ತ್ರಗಳು ಯಾವ ಅನುಭವವನ್ನು ಹೇಳುತ್ತವೋ ಆ ಅನುಭವಗಳನ್ನು ಭಾಷಾ ಪರಿಚಯ ವಿಲ್ಲದ ಶಾಸ್ತ್ರ ಪರಿಚಯವಿಲ್ಲದ — ಆದರೆ ಅನುಸಂಧಾನ ಪರರಾದ ಯೋಗಿ ಮಾನವರು ಕರತಲಾಮಲಕದಂತೆ ನಿರ್ಣಯವನ್ನು ಕಂಡು ನುಡಿಯುವರು. ಇಂತಹ ಯೋಗಿ ಮಾನವರು ಪಂಚವರ್ತನೆ - ಕರ್ಮ ಗಳ ವಿಶೇಷ ಮತ್ತು ಸಾಮಾನ್ಯ ಹೊಣೆಗಾರಿಕೆಯನ್ನು ಹೊತ್ತಿರುವ ಪಂಚವಿಭಜನಗಳಲ್ಲೆಲ್ಲಾ ಇರುತ್ತಾರೆ. ಆದುದರಿಂದ ವ್ಯಕ್ತಿಯನ್ನು ದ್ವೇಷಿಸಿ ಶಾಸ್ತ್ರತತ್ವಗಳನ್ನು ಪ್ರತಿಪಾದಿಸುವುದಾಗಲೀ ಶಾಸ್ತ್ರ ನಿರ್ಣಯಕ್ಕೆ ವ್ಯಕ್ತಿಯನ್ನು ಗುರಿಪಡಿಸುವುದಾಗಲೀ ಅಪಾಯಕರವಾದುದು. ಅಂದರೆ ಶಾಸ್ತ್ರಾಧ್ಯಯನಕ್ಕೆ ಬೆಲೆಯಿಲ್ಲವೆಂದು ಘೋಷಿಸುವ ಅಲ್ಪಜ್ಞತೆಯನ್ನು ಇದರಿಂದ ಊಹಿಸಬಾರದು. ಇಂತಹ ಪರಿಸ್ಥಿತಿಗಳಲ್ಲಿ ಮೇಲ್ಕಂಡ ಶಬ್ದಗಳೂ ಸಂಕೇತ - ಅವಸ್ಥಾ - ವಾಚಕಗಳೆಂದು ತಿಳಿಯಬೇಕಾಗಿದೆ.

ದ್ವಿಜನನ್ನು ಬಿಟ್ಟು ವೃಷಲರಿಂದ ಕಾರ್ಯಗಳು ನೆರವೇರುವುದಾದರೆ ಹಾನಿಯೆಂದು ತಿಳಿಸುವ ವಾಕ್ಯವನ್ನು ಪರೀಕ್ಷಿಸಬೇಕು. ದ್ವಿಜ ಎಂಬ ಶಬ್ದವು ದ್ವಿಜ ಸಂಸ್ಕಾರವುಳ್ಳ ವ್ಯಕ್ತಿ ಸಾಮಾನ್ಯಕ್ಕೆ ಅನ್ವಯಿಸುವುದೆಂದು ತಿಳಿಯಬೇಕು. ದ್ವಿಜ ಸಂಸ್ಕಾರವಿಲ್ಲದವನು ವೃಷಲನು ಎಂದು ಈ ವಾಕ್ಯದ ಸಂದರ್ಭವೇ ತಿಳಿಸುವುದು. ವೃಷಂ = ಕಾಮ ವನ್ನು ಲಾತಿ = ಕತ್ತರಿಸುತ್ತಾನೆ ಎಂಬ ಅರ್ಥದಲ್ಲಿ ಉಪಯೋಗಿಸುವ ವೃಷಲ ಶಬ್ದವೂ ಸಹ ಆಯಾ ಸಂದರ್ಭದಲ್ಲಿ ವ್ಯಕ್ತಿ ಸಾಮಾನ್ಯಕ್ಕೆ ಅನ್ವಯಿಸುವುದು.

ದ್ವಿಜಸಂಸ್ಕಾರದ ವಿಷಯವನ್ನು 27-31 ಪುಟಗಳಲ್ಲಿ ವಿವರಿಸಿದೆ. ಪ್ರತಿಯೊಂದು ದೇಹಿಯೂ ದ್ವಿಜಸಂಸ್ಕಾರವನ್ನು ಹೊಂದಿದಾಗ ದ್ವಿಜ ನಾಗುತ್ತಾನೆ. ಅದಿಲ್ಲದಿದ್ದಾಗ ವೃಷಲನಾಗುತ್ತಾನೆ. ಒಂದು ವಿಷಯ ದಲ್ಲಿ ಒಂದು ವ್ಯಕ್ತಿಯು ದ್ವಿಜ ಸಂಸ್ಕಾರವನ್ನು ಹೊಂದಿ ದ್ವಿಜ ಎನಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಂಡರೂ ಅದೇ ವ್ಯಕ್ತಿಯು ಮತ್ತೊಂದು ವಿಷಯದಲ್ಲಿ ದ್ವಿಜ ಸಂಸ್ಕಾರವನ್ನು ಹೊಂದದೇ ಇದ್ದರೆ ವೃಷಲ ಎನಿಸಿಕೊಳ್ಳಬೇಕಾಗಿದೆ. ಒಂದು ವಿಷಯವಲ್ಲಿ ದ್ವಿಜ ಸಂಸ್ಕಾರವನ್ನು ಹೊಂದದೆ ವೃಷಲ ಎನಿಸಿಕೊಳ್ಳುವ ದೇಹಿಯು ಮತ್ತೊಂದು ವಿಷಯವಲ್ಲಿ ದ್ವಿಜಸಂಸ್ಕಾರವನ್ನು ಹೊಂದಿದ್ದರೆ ದ್ವಿಜ ಎನಿಸಿಕೊಳ್ಳುವನು. ಅವಶ್ಯಕವಾದ ಒಂದು ವಿಷಯದಲ್ಲಿ ದ್ವಿಜ ಸಂಸ್ಕಾರವನ್ನು ಹೊಂದದ ಯಾವ ವ್ಯಕ್ತಿಯೇ ಆಗಲಿ ಆ ವಿಷಯದಲ್ಲಿ ಪ್ರವರ್ತಿಸುವುದೆಂದರೆ ಉದ್ದೇಶ ಹಾನಿ ಕಾರ್ಯ ಹಾನಿಯಾಗುವುದು ಸ್ವಾಭಾವಿಕ ಮತ್ತು ಸ್ವತಸ್ಸಿದ್ಧ.

ನ್ಯಾಯ ನಿರ್ಣಯದ ವಿಷಯದಲ್ಲಿ ದ್ವಿಜ ಸಂಸ್ಕಾರವನ್ನು ಹೊಂದಿದವನು ಆ ಭಾಗದಲ್ಲಿ ದ್ವಿಜನೆನಿಸಿ ಕಾರ್ಯವನ್ನು ಸಾಧಿಸಬಲ್ಲನು. 'ನ್ಯಾಯ ವಿಷಯದಲ್ಲಿ ದ್ವಿಜ ಸಂಸ್ಕಾರವಿಲ್ಲದವನು ವೃಷಲನು' ಎಂದು ಹೇಳುವುದರಿಂದ ಅಗೌರವವಿಲ್ಲ; ಹಾಸ್ಯವಿಲ್ಲ.

ದ್ವಿಜ ಎಂದರೆ ಋಣ ಸಂಕಲ್ಪಾದಿಗಳಿಂದ ಉತ್ತಮ ಕಾರ್ಯ ಸಾಧನೆಯ ಸ್ವೀಕಾರಕ್ಕಾಗಿ ಗೊತ್ತಾಗಿರುವ ಒಂದು ಸಂಸ್ಕೃತಿಯನ್ನು ಹೊಂದಿದವನು ಎಂದು ಸಾಮಾನ್ಯವಾದ ಅರ್ಥ.* ಇದರಿಂದಲೇ "ಸಾಧಿಸಿದ ಕಾರ್ಯವುಳ್ಳ ಮಹಾತ್ಮಾ" ಎಂದರ್ಥವಾಗಲಾರದು. ಈ ಬಗೆಯ ಸಂಸ್ಕೃತಿಯನ್ನು ಹೊಂದಿದವರೂ ಭ್ರಷ್ಟರಾಗಬಹುದು. ಉದ್ದಿಷ್ಟ ಫಲ ಪ್ರಾಪ್ತಿಗೆ ಪ್ರಯತ್ನಿಸುವ ಅರ್ಹತೆಯನ್ನು ಕೊಡುವ

---

* ದ್ವಿಜ = ಪಕ್ಷಿ ಅಂಡಜಗಳು. ಅಂಡ ಮೊದಲನೇ ಜನ್ಮ; ಸೂಕ್ಷ್ಮವಾದ ದರ್ಶನ ಮೊದಲಾದುವು. ಅಂಡಜ = ಅಂಡದಿಂದ ಹುಟ್ಟಿ ಎರಡನೇ ಜನ್ಮವನ್ನು ಹೊಂದಿದುದು ; (ಭೇದನ) ಕರ್ಮ ವ್ಯಂಜನ; ಸಮಾನ ವಸ್ತುಗಳಲ್ಲಿ ಒಂದು ಸಲ ಕಾಣಿಸಿ ನಶಿಸಿ ಬಿದ್ದು ಅದೇ ಸ್ಥಳದಲ್ಲಿ ಪುನಃ ದೀರ್ಘಕಾಲವಿರುವಂತೆ ಜನಿಸುವ ಕೆಲವು ವಸ್ತುಗಳು ; ಮಾನವ ಮುಖದ ಹಲ್ಲುಗಳು. ಜನ್ಮವೆತ್ತಿದ ಮೇಲೆ ಯಾವುದಾದರೂ ವಿದ್ಯೆ ಕಲೆಗಳಿಗೆ ಸಂಸ್ಕಾರವನ್ನು ಹೊಂದಿದವನು ದ್ವಿಜನಾಗಲೇ ಬೇಕು.

ಪದವೀಧರ : ಬಿರುದಾಂಕಿತ ಎಂಬ ಶಬ್ದಾರ್ಥದ ಮರ್ಮವೂ ಇದೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರವೇ ದ್ವಿಜ ಶಬ್ದದ ಸಂಕೇತಾರ್ಥ. ಆ ಸಂಸ್ಕಾರವುಳ್ಳವನೂ ದ್ವಿಜನೇ ಆಗಿರುತ್ತಾನೆ. "ಭಾವಂ ನ ಚಾಸ್ಯಾಹಮನುಪ್ರದಾತುಂ | ಅಲಂ ದ್ವಿಜೋ ಮಂತ್ರಮಿವಾದ್ವಿಜಾಯ ||"

ರಾಮಾಯಣ, ಸುಂದರಕಾಂಡ 28-5.

ದ್ವಿಜ ಮತ್ತು ಅದ್ವಿಜ ಶಬ್ದಗಳ ಸಂಕೇತವಾದ ಅರ್ಥವನ್ನು ಗ್ರಹಿಸಿ ರಾಜನೀತಿಯು ಸಾರ್ಥಕ್ಯವನ್ನು ಪರಿರಕ್ಷಿಸಬೇಕಾಗಿದೆ. ವ್ಯಕ್ತಿಗೆ ಶರೀರಕ್ಕೆ ಅನ್ವಯಿಸಿ ಭೇದ ಭಾವವನ್ನು ಉಂಟುಮಾಡುವ ಸ್ಥಿತಿಯು ವಿವೇಕ ದಿಂದ ಹೊರಗೆ ಬಹುದೂರ ಇರುವುದು.

ಸಂಸ್ಕಾರವನ್ನು ಹೊಂದಿದವನು ದ್ವಿಜ. ಸಂಸ್ಕಾರವು ವೈಯಕ್ತಿಕ ವಾಗಿರುವುದು. ಆದುದರಿಂದ ದ್ವಿಜತ್ವದಲ್ಲಿಯೂ ವೈವಿಧ್ಯವಿರುವುದು. ಸಾಮಾನ್ಯ ಉದಾಹರಣೆಗಾಗಿ ವೇದಾಧ್ಯಯನಕ್ಕೆ ಬಲಿಯಾಗಿನಿಂತವನು ದ್ವಿಜನೆಂದು ಹೇಳಿರುತ್ತಾರೆ. ಇದರಿಂದಲೇ ಆಯಾ ವೃತ್ತಿ ಮೊದಲಾದು ವುಗಳಿಗೆ ತಕ್ಕ ಪ್ರಥಮ ಸಂಸ್ಕಾರಗಳನ್ನು ಹೊಂದಿದವರೆಲ್ಲರೂ ದ್ವಿಜರೇ ಆಗಿರುತ್ತಾರೆಂಬುದನ್ನು ಊಹಿಸುವುದಕ್ಕೆ ವೇದಪುರುಷನು ಅವಕಾಶವ ನ್ನೂ ಅಧಿಕಾರವನ್ನೂ ಕೊಟ್ಟಿರುತ್ತಾನೆಂಬುದು ಸ್ವತಃ ಸಿದ್ಧವಾಗಿದೆ.

ವೃಷಲ ಎಂಬುದರ ಶಬ್ದಾರ್ಥವು ದ್ವಿಜ ಶಬ್ದದ ಅರ್ಥಗೌರವಕ್ಕೆ ಸಮಾನವಾದುದು. ವೃಷಂ = ಕಾಮಂ / ಪ್ರಾಪ್ತಿಂ/ ಲಾತಿ - ಅದದಾತಿ =ಲಭತೇ, ಆನಯತಿ ಎಂಬ ಅರ್ಥದ ದೃಷ್ಟಿಯಿಂದ ಕಾಮವನ್ನು ಹೊಂದುವ; ಇಷ್ಟಾರ್ಥವನ್ನು ದೊರಕಿಸುವವರೆಲ್ಲರೂ ವೃಷಲರೇ. ವೃಷಂ = ಇಷ್ಟಾರ್ಥಂ ಲುನಾತಿ = ಛೇದಯತಿ ಎಂಬಂತೆ ಇಷ್ಟಾರ್ಥವನ್ನು ಕತ್ತರಿಸುವುದು. ಎಂದರೆ ಪೂರೈಸಿಕೊಳ್ಳುವುದು, ಪರಿಹರಿಸಿಕೊಳ್ಳುವುದು ಅನುಭವಿಸುವುದು. ಋಣ - ಕರ್ಮ ಫಲವನ್ನು ಪರಿಹರಿಸುವ ಅರ್ಥವುಳ್ಳ ಶೂದ್ರ ಶಬ್ದದ ಪರ್ಯಾಯ ಪದವಾಗಿರುತ್ತದೆ. ಆದುದರಿಂದ ಈ ಗುಣ ಶಕ್ತಿಕರ್ಮವುಳ್ಳವರೆಲ್ಲರೂ ಸಾಮಾನ್ಯ ಮತ್ತು ವಿಶೇಷ ಹೊಣೆಗಾರಿಕೆ ಯಿಂದ ಅದನ್ನು ಧರಿಸುವವರೂ ಧರಿಸಿರುವವರೂ ವೃಷಲರಾಗಿರುತ್ತಾರೆ. ವೃಷಲ — ಶೂದ್ರ ಸ್ಥಿತಿಯು ದ್ವಿಜಕ್ಕೆ ಪೂರ್ವರೂಪವಾಗಿರುತ್ತದೆ. ವೃಷಲದ ಆಧಾರದ ಮೇಲೆ ದ್ವಿಜವು ಇಂದ್ರಿಯಗಳ ಸ್ವತಂತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರವರ್ತನೆಗಾಗಿ ಸ್ವೀಕರಿಸಲ್ಪಡುವುದು. ಈ ಎರಡು ಬಗೆಯ ಅರ್ಥಗಳ ದೃಷ್ಟಿಯಿಂದಲೂ ಮೇಲ್ಕಂಡ ನ್ಯಾಯ ಸೂಕ್ತಿಯು ಸಾಧುವಾಗಿ ದ್ವೇಷಾಸೂಯೆಗಳಿಗೂ ಉಚ್ಚನೀಚ ಭಾವನೆಗಳಿಗೂ ಅವಕಾಶವಾಗದಂತೆ, ಗೋತ್ರಾದ ವ್ಯಕ್ತಿಗತವಾಗದೆ, ಇರುವುದಾಗಿದೆ.

ಆಯಾ ಕಾರ್ಯಸಾಧನೆಗೆ ತಕ್ಕಂತೆ ಪೂರ್ವಭಾವವಾದ ಸಂಸ್ಕೃತಿಯನ್ನು ಸರ್ವರೂ ಹೊಂದಲೇಬೇಕು. ದ್ವಿಜತ್ವವು ಪೃಥ್ವಿಯಲ್ಲಿ ಸರ್ವರಿಗೂ ಉಂಟು. ಸಂಕುಚಿತವಾದ ಸನ್ನಿವೇಶದಲ್ಲಿ ವೇದಾಧ್ಯಯನವೆಂಬ ಕಾರ್ಯ ಸಾಧನೆಗಾಗಿ ಉಕ್ತವಾದ ಸಂಸ್ಕೃತಿಯನ್ನೂ ಆಚಾರ್ಯೋಪನಯನ ವಿಧಿ ಗುರುಕುಲವಾಸ ಮೊದಲಾದುವುಗಳನ್ನು ಹೊಂದಿದವರು ದ್ವಿಜರು ಎಂಬದಾಗಿ ಸಾಮಾನ್ಯವಾಗಿ ಹೇಳಿರುತ್ತಾರೆ.

ಸಂಕುಚಿತವಾದ ಈ ಬಗೆಯ ಪ್ರಕೃತೋಪಯೋಗದ ಅರ್ಥದಿಂದ ಸಮಾಧಾನ ಹೊಂದಿ ಹೆಚ್ಚು ವಿವರಣೆಯನ್ನು ಮಾಡದೆ ತಾಟಸ್ಥ್ಯವನ್ನು ವಹಿಸಿರಬಹುದು ಎಂದು ತಿಳಿಯುವುದರಿಂದ ದ್ವಿಜತ್ವವು ವಿಶ್ವವ್ಯಾಪಿಯಾದುದು ಎಂಬ ಸಂಕೇತಾರ್ಥವನ್ನು ಪುಷ್ಟೀಕರಿಸಿ ಹೇಳುವ ಆವಶ್ಯಕತೆ ಇರುತ್ತದೆ.

ಜಾತಿ ಎಂದರೆ ಗುಂಪು, ಸಮೂಹ. ಇದನ್ನು ಉದ್ದೇಶಿಸಿ ಕೀಳು ಮೇಲು ಭಾವನೆಯಿಂದ ಹೇಳಿದ ವಿಚಾರವಲ್ಲವೆಂದು ರಾಜನೀತಿ ತತ್ವಪ್ರತಿಪಾದನೆಯಲ್ಲಿ ಹೇಳಿದೆ. ಜನ್ಮವನ್ನು ಎತ್ತಿಯಾಡುವ ಜಾತಿ ವಿಷಯವೂ ಅಲ್ಲ. ವೇದ ಧರ್ಮ ಶಾಸ್ತ್ರಾದಿಗಳು ಮನುಷ್ಯತ್ವ ದೇವತ್ವಗಳಿಗೂ ಮಾನವ ವರ್ತನೆಗಳಿಗೂ ಸಂಬಂಧಪಟ್ಟವುಗಳೇ ಹೊರತು ವ್ಯಕ್ತಿಯನ್ನೂ ವ್ಯಕ್ತಿಯ ವಿಷಯವನ್ನೂ ಹೇಳುವುದಿಲ್ಲ. ಆದುದರಿಂದ ವಿಶ್ವವ್ಯಾಪಿಯಾಗಿರುವ ದೇವ, ಅಸುರ, ಮಾನವವರ್ತನೆಗಳನ್ನು ಉದ್ದೇಶಿಸಿ ಸಾಮಾನ್ಯವಾಗಿ ಹೇಳಿರುವಂತೆ ಸಂಕೇತಾರ್ಥಗಳನ್ನು ಕಲ್ಪಿಸಬೇಕಾಗುವುದು. ಹಾಗೆ ವಿಶಾಲ ಮನೋಭಾವದಿಂದ ಸಂಕೇತಾರ್ಥ ಮಾಡಿಕೊಳ್ಳಬಹುದಾದ ವಾಕ್ಯಗಳನ್ನು ಓದುವುದರಿಂದ ಯಾವ ವರ್ತನೆಯು ಯಾರಲ್ಲಿ ಯಾವ ಮಟ್ಟದಲ್ಲಿ ಕಂಡುಬರುವುದೋ ಅವರು ಅಂತಹ ವರ್ತನೆಯನ್ನು ಖಂಡಿಸಿ-ವಾ-ಮಂಡಿಸಿ ಅನ್ವಯಿಸಿಕೊಳ್ಳಬಹುದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಿಯು ವಿವಿಧ ಕಾಲ, ದೇಶ, ಸನ್ನಿವೇಶಗಳಿಗೆ ತಕ್ಕಂತೆ ಸಂಕಲ್ಪ ಋಣ ಕರ್ಮಗಳನ್ನು ವಿವಿಧವಾಗಿ ಅಳವಡಿಸಿ ಸಾಧಿಸುವುದರಿಂದ ಯಾವ ವ್ಯಕ್ತಿಯ ಗುಣ, ಸ್ವಭಾವ, ಅಂತಃಸ್ಥಿತಿ, ಬಹಿಃಸ್ಥಿತಿಗಳು ಸಾಮ್ಯ ವೈಷಮ್ಯಾಂಶಗಳು ಮೊದಲಾದುವನ್ನು ಯಾರೂ ಕಂಡು ಹಿಡಿದು ನಿರ್ಧರಿಸಲಾರರು. ಅದಕ್ಕೆ ಯತ್ನಿಸಲೂ ಬಾರದು. ಧರ್ಮ ಶಾಸ್ತ್ರಾದಿಗಳು ಆಪಾತತಃ ಒಂದು ನಡತೆಯ ಜನಕ್ಕೆ ಒಂದು ನಿಯಮವನ್ನು ಉದಾಹರಿಸಿದ್ದರೆ ಅದರ ಮಿತಿಗಿಂತ ಕೆಳಗೆ ಅಥವಾ ಮೇಲೆ ವ್ಯಕ್ತಿಯು ಇರುವುದಾದರೆ ಆ ನಿಯಮವು ಅನುಷ್ಠಾನ ದೃಷ್ಟಿಯಿಂದ ಆ ವ್ಯಕ್ತಿಯ ವಿಚಾರದಲ್ಲಿ ಅನ್ವಯಿಸದೇ ವ್ಯರ್ಥವಾಗಬಹುದು. ಈ ತತ್ವವನ್ನು ಸದಾ ಸರ್ವರೂ ಪ್ರಧಾನವಾಗಿ ತಿಳಿದು ತಮ್ಮ ಮನೋಭಾವವನ್ನು ನಿಯಂತ್ರಣಗೊಳಿಸಿಕೊಳ್ಳುವುದು ಶ್ರೇಯಸ್ಸು. ಪಾರಮಾರ್ಥಿಕವಾಗಿ ವ್ಯಕ್ತಿಯನ್ನು ವ್ಯಕ್ತಿಯ ವೈಶಿಷ್ಟ್ಯದಿಂದಲೇ ಅಳೆಯಬೇಕು. ಶಾಸ್ತ್ರವು ಏನನ್ನೂ ಮಾಡಲಾರದು.

ವಿಪ್ರವು ಕೇವಲ ವ್ಯಕ್ತಿಯನ್ನೂ ಜನ್ಮವನ್ನೂ ಹೇಳುವುದಿಲ್ಲ. ಅಸಂಸ್ಕೃತರ ಮತ್ತು ಸಾಮಾನ್ಯ ಜನಗಳ ದೃಷ್ಟಿಯಲ್ಲಿ ಗುಣಧರ್ಮಗಳನ್ನು ಗುಣೀ ಮತ್ತು ಧರ್ಮಿಗಳಿಗೆ ಆರೋಪ ಮಾಡಿ ಹೇಳುವುದು ಸಹಜ. ಆದರೆ ಶಾಸ್ತ್ರವೆಂಬ ಖಡ್ಗಧಾರೆಯಲ್ಲಿ ಆ ಬಗೆಯ ಸ್ಥೂಲಧರ್ಮಗಳನ್ನು ಸೇರಿಸಲಾಗುವುದಿಲ್ಲ.

ಧರ್ಮನಿರ್ಣಯಕ್ಕೆ ಸ್ವಾತಂತ್ರ್ಯ ಪ್ರಯೋಗ ಸಾಮರ್ಥ್ಯವಿರಬೇಕು. ಈ ಸಾಮರ್ಥ್ಯವು ಋತಕ್ಕೆ ಅನುರೋಧವಾಗಿ ಅದರ ಮಿತಿಯಲ್ಲಿರಬೇಕು. ಇಂತಹ ವಿಪ್ರವು ಪರಚ್ಛಂದಾನುವರ್ತಿಯಾಗದೆಯೂ ಸ್ವೇಚ್ಛೆಯಿಲ್ಲದೆಯೂ ನಿರ್ಣಯವನ್ನು ತೂಗುವುದು. ಹೀಗೆಯೇ ಕ್ಷತ್ರಿಯ, ವೈಶ್ಯ, ಶೂದ್ರ (ವೃಷಲ) ನಿಷಾದಗಳ ಅರ್ಥವ್ಯಾಪ್ತಿಯನ್ನು ಸರ್ವವ್ಯಾಪಿಯಾಗಿಯೂ ಪರಿಮಿತಿಯಲ್ಲಿರುವಂತೆಯೂ ಸಮ ಯೋಜಕವಾಗಿ ನಿರ್ಣಯಿಸಬೇಕಾಗಿರುತ್ತದೆ.

ಧರ್ಮ ನಿರ್ಣಯಕ್ಕೆ ವಿಪ್ರವು, ವಿಪ್ರತ್ವವು, ವಿಪ್ರ ಲಕ್ಷಣವು ವ್ಯಕ್ತಿಗಳಲ್ಲಿ ಕಾಣದೆ ಮರೆಯಾಗಿರುವಾಗ ಅದರ ಸಮೀಪವರ್ತಿಯಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಷತ್ರಿಯವು ಅಂದರೆ ವಿನಾಶದ ದೆಸೆಯಿಂದ ರಕ್ಷಿಸಬೇಕಾದ ದೈಹಿಕ ಮಾನಸಿಕ ವ್ಯವಸ್ಥಾ ಶಕ್ತಿಯು ವಿಪ್ರದಿಂದ ಸಾಧ್ಯವಾಗಬೇಕಾದ ಕಾರ್ಯವನ್ನು ನಿರ್ವಾಹ ಮಾಡಬೇಕು. ಕ್ಷತ್ರಿಯವಲ್ಲಿ ಸ್ವಾತಂತ್ರ್ಯ ದಿಂದ ಕರ್ತವ್ಯದ ಹಿನ್ನೆಲೆಯ ಶಾಸ್ತ್ರಾನುಭವಗಳನ್ನು ತಿಳಿದು ಧರ್ಮ ನಿರ್ಣಯ ಮಾಡಲು ಅರ್ಹತೆಯನ್ನು ಸಂಪಾದಿಸಿಕೊಳ್ಳಬಹುದು.

ವಿಪ್ರ ಮತ್ತು ಕ್ಷತ್ರಿಯಗಳ ಅಭಾವದಲ್ಲಿ ವೈಶ್ಯವು ನಿಂತು ತಾತ್ಕಾಲಿಕವಾಗಿ ಮೇಲ್ಪಟ್ಟದ ನಿರ್ಣಯಕ್ಕೆ ಎಡೆಗೊಟ್ಟು ನಿಲ್ಲುವ ಸನ್ನಿವೇಶವನ್ನು ಹೊಂದಿರುತ್ತದೆ. ಜನಗಳ ಮಧ್ಯೆ ವ್ಯವಹಾರ ಮಾಡಿ ಪ್ರಕೃತಿಯ ಮತ್ತು ಋತದ ಒಳ ಹೊಕ್ಕು ಊಹಾಪೋಹಗಳ ದಕ್ಷತೆ ಯನ್ನು ಹೊಂದಿರುವ ವೈಶ್ಯವು ತಕ್ಕ ಹೊಣೆಗಾರಿಕೆಯಿಂದ ಸ್ವಾತಂತ್ರ್ಯ ವನ್ನು ಪ್ರಯೋಗಿಸಿ ನ್ಯಾಯ ಸೂಕ್ಷ್ಮವನ್ನು ಕಂಡು ಹಿಡಿದು ವ್ಯವಹಾರ ಕಾರ್ಯವನ್ನು ಸಾಧಿಸಬಲ್ಲರು. ವಿಪ್ರ, ಕ್ಷತ್ರಿಯ, ವೈಶ್ಯಗಳೆಲ್ಲವೂ ಧರ್ಮ ನಿರ್ಣಯವನ್ನೂ ಸಾಧಿಸುವ ದ್ವಿ ಜ ಕ ರ್ಮ ಸಂಸ್ಕಾರವನ್ನು ಹೊಂದಿರಬೇಕು.

ಶೂದ್ರ-ವೃಷಲವೆಂಬುದು ಪ್ರಕೃತಿ ಮತ್ತು ಪರಚ್ಛಂದಾನುವರ್ತಿ ಯಾಗಿರುವುದು. ಸ್ವಾತಂತ್ರ್ಯವನ್ನು ಪ್ರಯೋಗಿಸದೆ ಶೋಧನಪರರಾಗಿರು ವುದು. ಸುಖಾತ್ಮಕವಾಗಿರುವುದು. ಸಂಕಲ್ಪಾದಿಗಳನ್ನು ಕಲ್ಪಿಸುವುದಾ ಗಲೀ ಅವುಗಳಿಗೆ ದ್ವಿಜಸಂಸ್ಕಾರವನ್ನು ಹೊಂದುವುದಾಗಲೀ ಶೂದ್ರ ಸಾಮಾನ್ಯಕ್ಕೂ ಸಾಮಾನ್ಯ ಶೂದ್ರಕ್ಕೂ ಸಲ್ಲದು. ಧರ್ಮ ನಿರ್ಣಯ ಮಾಡುವ ಅಥವಾ ಸಿದ್ಧಾಂತಗೊಳಿಸುವ ಹೊಣೆಗಾರಿಕೆಯ ಕ್ಲೇಶವನ್ನು ದೂರೀಕರಿಸಿರುತ್ತದೆ. ಛಂದಾನುವರ್ತನೆಯು ರೂಢಮೂಲವಾಗಿರುವು ದರಿಂದ ಸನ್ನಿವೇಶದ ಪ್ರಾಬಲ್ಯಕ್ಕೆ ಒಳಗಾಗಿ ನಿರ್ಣಯವನ್ನು ವಿಕಾರ ಗೊಳಿಸಬಹುದಾಗಿದೆ. ಸ್ವತಂತ್ರ ವ್ಯಾಪಾರವು ತಲೆದೋರಿ ನಿರ್ಣಯ ಶಕ್ತಿಯು ಉಂಟಾದಾಗ ಅದು ಶೂದ್ರವೆನಿಸುವುದೇ ಇಲ್ಲ; ಬೇರೆಯಾದ ಒಂದು ವರ್ಣದ ಗುಣ ಕರ್ಮಕ್ಕೆ ಸೇರಿ ಬೇರೆಯಾದ ತಕ್ಕ ಹೆಸರನ್ನು ಪಡೆಯುವುದು. ನಿರ್ಣಯದ ಕ್ಲೇಶಕ್ಕೆ ಎಡೆಗುಡದೆ ಆರಾಮವಾಗಿರುವ ಶೂದ್ರವು ಧರ್ಮಾಧಿಕಾರಕ್ಕೆ ಅಪೇಕ್ಷೆಯನ್ನು ಹೊಂದುವುದಾಗಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನ್ಯಾಯಶಾಸ್ತ್ರದಲ್ಲಿ ಪದವೀಧರರೂ ವಿದ್ವಾಂಸರೂ ದ್ವಿಜಸಂಸ್ಕಾರ ವನ್ನು ಹೊಂದಿದ್ದರೂ ನ್ಯಾಯವಾದಿಗಳಾಗುವ ಅರ್ಹತೆಯನ್ನು ಪಡೆದಿರು ವುದಿಲ್ಲ. ಅನೇಕರಿಗೆ ಮನಸ್ಸು ಅಂತರಾತ್ಮವು- ಆ ವೃತ್ತಿಯನ್ನು ಒಪ್ಪುವು ದಿಲ್ಲ. ನ್ಯಾಯ ಶಾಸ್ತ್ರಾಧ್ಯಯನಕ್ಕೆ ತಕ್ಕಷ್ಟು ದ್ವಿಜಕರ್ಮ ಸಂಸ್ಕಾರವು ನಡೆದು ಶಾಸ್ತ್ರಜ್ಞರಾಗಬಹುದು. ವಿವಿಧ ಕಾಲ, ದೇಶ, ಪಾತ್ರಗಳ ಸಂದರ್ಭದಲ್ಲಿ ಶಾಸ್ತ್ರವನ್ನು ಪ್ರಯೋಗಿಸುವುದಕ್ಕೆ ಬೇಕಾದ ಶಿಕ್ಷಣಕಲಾ ಎಂಬ ದ್ವಿಜಸಂಸ್ಕಾರವಿಲ್ಲದಿರಬಹುದು.

ನ್ಯಾಯ ನಿರ್ಣಯವನ್ನು ಗೊತ್ತುಮಾಡಿ ಪ್ರವರ್ತಿಸುವ ನ್ಯಾಯ ವಾದಿಗಳೂ ನ್ಯಾಯವೇತ್ತರೂ ವಿರಳರಾಗಿರುತ್ತಾರೆ. ನ್ಯಾಯನಿರ್ಣಯ ಗಳಲ್ಲಿಯೂ ಒಬ್ಬೊಬ್ಬರ ಅನುಭವ ಸಿದ್ಧಾಂತವು ಒಂದೊಂದು ವಿಧವಾಗಿ ಹೊರ ಹೊಮ್ಮುವುದು. ನ್ಯಾಯ ಶಾಸ್ತ್ರವನ್ನು ಅಧ್ಯಯನ ಮಾಡದೇನೆ ಇಂದ್ರಿಯಾನುಭವವೆಂಬ ದ್ವಿಜ ಸಂಸ್ಕಾರವನ್ನು ಪಡೆದು ನ್ಯಾಯನಿರ್ಣ ಯವನ್ನು ಮಾಡುವವರೂ ಇರುತ್ತಾರೆ. ವಿಪ್ರವು ಎಲ್ಲಿದೆ? ಎಲ್ಲಿ ಕ್ಷತ್ರಿಯವಿದೆ? ವೈಶ್ಯವೆಲ್ಲಿ? ಶೂದ್ರವೆಲ್ಲಿ? ನಿಷಾದವೆಲ್ಲಿ? — ಎಂಬುವನ್ನು ವಿಚಾರಿಸಿ ತಿಳಿದು ಹೊಂದಿಸಿಕೊಳ್ಳುವ ಆನಂದವನ್ನು ಅನುಭವಿಸಬೇಕಾದುದು ದೇವ–ಮಾನವ ಕರ್ತವ್ಯ. ವಿಪ್ರ, ವೈಶ್ಯ ಶೂದ್ರ ನಿಷಾದಗಳು ವೃಷಲತ್ವವನ್ನು ಮುಂದಿಟ್ಟುಕೊಂಡು ವೃಷ (ಪ್ರಾಪ್ತಿ, ಲಾಭ, ಕಾಮ) ಗಳನ್ನು ಸಾಧಿಸುತ ವರ್ತನೆಯಲ್ಲಿ ಮುಳುಗಿದ್ದರೆ ಅಂತಹ ವೃಷಲರಾದ ವಿಪ್ರಾದಿಗಳಿಂದ ರಾಜ್ಯ ದ್ರೋಹ, ರಾಜ್ಯ ಕ್ಷೋಭೆಗಳು ಉಂಟಾಗುವುವು.

ಧರ್ಮ ನಿರ್ಣಯಕ್ಕೆ ನ್ಯಾಯಶಾಸ್ತ್ರ ಜ್ಞಾನ ಮತ್ತು ತಕ್ಕ ದ್ವಿಜ ಸಂಸ್ಕಾರ ಅನುಭವಗಳ ಜತೆಗೆ ವೃಷಲನಲ್ಲದಿರುವ ಅರ್ಹತೆಯನ್ನು ಪರೀಕ್ಷಿಸಿ ವ್ಯಕ್ತಿಗಳನ್ನು ನಿಯೋಜಿಸಬೇಕು.

ವ್ಯಾಸ ಮಹರ್ಷಿಗಳು ಹೇಳುವಂತೆ, ದ್ವಿಜ ಸಂಸ್ಕಾರವನ್ನು ಹೊಂದದೆ ಇರುವವರನ್ನು ಕಡೆಗಾಣಿಸಿ ಕೇವಲ ಕಾಮಚಾರಿಗಳಾದ ಅಥವಾ ಕೇವಲ ಅನುಭವದಲ್ಲಿ ಕಾಲ ಕಳೆದು ಔದಾಸೀನ್ಯ ಅಥವಾ ತಾಟಸ್ಥ್ಯದಿಂದ ಜೀವನವನ್ನು ನಡೆಸುವವರಾದ ವೃಷಲ ಸಂಕೇತವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಡೆದವರಿಂದ ರಾಷ್ಟ್ರ ಕಾರ್ಯ ನ್ಯಾಯ ನಿರ್ಣಯಾದಿಗಳ ರಾಜಕಾರ್ಯವನ್ನು ನೆರವೇರಿಸುವ ಯತ್ನ ಮಾಡಿದರೆ ಸಂಸ್ಕಾರ, ಅನುಭವಗಳೂ ಇಲ್ಲದೆ ವಿಶೇಷ ಪ್ರವರ್ತನೆಯೂ ಇಲ್ಲದೆ ಕೇವಲ ಔದಾಸೀನ್ಯದಿಂದಲಾಗಲೀ ಇಷ್ಟಾರ್ಥ ಪ್ರಾಪ್ತಿಗೆ ಮನಸ್ಸು ಕೊಡುವಿಕೆಯಿಂದಾಗಲೀ ನ್ಯಾಯ ನಿರ್ಣಯ ಮಾಡುವ 1) ವಿಪ್ರವುಳ್ಳದ್ದೆಂದು ಹೇಳಿಕೊಳ್ಳುವವರೂ, 2) ಕ್ಷತ್ರಿಯನೆಂದು ಹೇಳಿಕೊಳ್ಳುವವರೂ 3) ವೈಶ್ಯ ಪ್ರವೃತ್ತಿವುಳ್ಳವರೆನಿಸಿಕೊಳ್ಳುವವರೂ 4) ಶೂದ್ರಸ್ಥಿತಿಯಲ್ಲಿರುವವರೆಂಬುವರೂ 5) ನಿಷಾದದಲ್ಲಿ ಆಸಕ್ತರೆನಿಸಿಕೊಂಡಿರುವವರೂ ಯಾರೇ ಆದರೂ ರಾಜ್ಯ, ಕೋಶ, ಬಲಗಳನ್ನು ಕುಂದಿಸಿ ಕುತಂತ್ರ ಕುಹಕಗಳಿಗೆ ಬಲಿಯಾಗಿಸುವ ಸ್ಥಿತಿಗೆ ಗುರಿಮಾಡುತ್ತಾರೆ.

ವಿಶ್ವವ್ಯಾಪಿಯಾದ ವಿಪ್ರಾದಿ ಗುಣ ಕೆಲಸಗಳನ್ನು ಕೇವಲ ಶುಷ್ಕವಾದ ಜನ್ಮಕ್ಕೆ— ದೇಹಕ್ಕೆ— ಕುಟುಂಬಕ್ಕೆ ಸಂಬಂಧಿಸಿದಂತೆ ಭಾವಿಸಿ ವ್ಯವಹರಿಸುವುದರಿಂದ ಯಾರಿಗೂ ಎಂದಿಗೂ ಕ್ಷೇಮವಿಲ್ಲ. ಕ್ಲೇಶಗಳು ತಪ್ಪುವುದೂ ಇಲ್ಲ.

ರಾವಣನು ತನ್ನ ಮಿತಿಗೆ ಒಳಪಟ್ಟ ವಿಪ್ರಕ್ಕಿಂತ ಮೀರಿ - ಕೆಳಕ್ಕೆ ಜಾರಿ - ಕ್ಷತ್ರಿಯ ಲೋಲುಪನಾದುದು ಸಹ ಋತಕ್ಕೆ ವಿರೋಧವನ್ನು ಸೂಚಿಸುವುದು.

ಚಾಣಕ್ಯ, ವಿದ್ಯಾರಣ್ಯರು ರಾಜನೀತಿ ಶಾಸ್ತ್ರ ಪರಿಶ್ರಮದಿಂದ ಕ್ಷತ್ರಿಯ ಹೊಣೆಗಾರಿಕೆಯನ್ನು ಗೌಣವಾಗಿ ಆಚರಿಸುತ್ತಾ ಸ್ವವರ್ಣ ವೃತ್ತಿಯನ್ನು ಬಿಟ್ಟಿರಲಿಲ್ಲ.

ಶ್ರೋತ್ರಿಯಾದಿ ವಿಶೇಷ ಹೊಣೆಗಾರಿಕೆಗಳನ್ನು ಹೊಂದಿದವರೂ ಸಹ ಋಣ ಶೋಧನದ ಸುಖವನ್ನು ಮಾತ್ರ ಬಯಸಿ ವರ್ತನೆಯಲ್ಲಿ ಶೂದ್ರವನ್ನೇ ಅವಲಂಬಿಸಿರಬಹುದು.

ವ್ಯಕ್ತಿಗಾಗಲೀ ಜನ್ಮಕ್ಕಾಗಲೀ ವರ್ತನೆಗಾಗಲೀ ರಾಜನೀತಿ ಶಾಸನಗಳ ಉಕ್ತಿಗಳನ್ನು ಅನ್ವಯಿಸುವಾಗ ಜಾಗರೂಕತೆಯಿಂದಿರಬೇಕು. ಹಿಂದೆ ಹೇಳಿರುವಂತೆ (ಪು. 85 ಸಾಲು 1–4) ಶೂದ್ರವನ್ನೇ ಅಂದರೆ ಋಣಶೋಧನವನ್ನೇ ವಿಶೇಷ ಹೊಣೆಗಾರಿಕೆಯನ್ನಾಗಿ ಆರಿಸಿದ ಪಂಚ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣಗಳಿಗೆ ಸೇರಿದ ಯಾವ ವ್ಯಕ್ತಿಯಾದರೂ ಧರ್ಮ ನಿರ್ಣಯಕ್ಕೆ ಅರ್ಹತೆಯನ್ನು ಹೊಂದಲಾರರು.

ಸೃಷ್ಟಿಯಲ್ಲಿ ಅಭಿವ್ಯಕ್ತವಾಗಿ ಚರಾಚರ ವಸ್ತುಗಳಿಗೆಲ್ಲಾ ಸಾಮಾನ್ಯವಾಗಿರುವ ಶೂದ್ರವು ಪುಟಕ್ಕೆ ಹಾಕಿ ಸಂಸ್ಕರಿಸಿದ ಅಪರಂಜಿಯಂತೆ ಉನ್ನತ ಮಟ್ಟಕ್ಕೆ ಏರುವುದು. ನಿಕೃಷ್ಟ ಪದಾರ್ಥಗಳ ಸಂಸರ್ಗದಿಂದ ಅವನತಿಯ ಅವಸ್ಥೆಗಳೂ ಪ್ರಾಪ್ತವಾಗುವುವು. ಸಂಕಲ್ಪಿತ ಕಾಮನಾ ಸಿದ್ಧಿಗಳಿಗೆ ತಕ್ಕಂತೆ ದ್ವಿಜ ಸಂಸ್ಕಾರವನ್ನು ಪಡೆವಂತೆಲ್ಲಾ ವಿವಿಧ ವರ್ತನೆಗಳನ್ನು ಅವಲಂಬಿಸಬಹುದು.

ಶೂದ್ರವು ಶುದ್ಧವಾದ ಸ್ಥಾಯಿಭಾವದಲ್ಲಿದ್ದು ಉನ್ನತ ಮಟ್ಟಕ್ಕೆ ಏರಿಸುವ ಸಂಸ್ಕಾರಗಳನ್ನು ಪಡೆಯುವುದಕ್ಕೂ ಅಧೋಗತಿಗಿಳಿದು ಮೂಗು ಪ್ರಾಣಿಗಳ ದುರವಸ್ಥೆಯನ್ನು ಹೊಂದುವುದಕ್ಕೂ ಅವಕಾಶ ಕೊಡುವುದು.

ಶೂದ್ರನಿಷ್ಠವಾದ ವ್ಯಕ್ತಿಗೆ ತಾನು ಅರಿಸಿದ ವಿಶೇಷ ಹೊಣೆಗಾರಿಕೆಯ ವರ್ತನೆಯು ಕ್ಲೇಶ ಭೂಯಿಷ್ಠವಾದ ತಪಸ್ಸು, ವಿದ್ವತ್, ಸ್ವಾತಂತ್ರ್ಯ ದ್ವಿಜ ಸಂಸ್ಕಾರ ಪ್ರಯೋಗ ಮೊದಲಾದ ಕಾರ್ಯ ನಿರ್ವಾಹಗಳನ್ನು ದೂರೀಕರಿಸುವುದೇ ಸ್ವಭಾವ. ಇದರಿಂದ ನ್ಯಾಯ ನಿರ್ಣಯಾದಿಗಳ ಹೊಣೆಗಾರತನದ ಅರ್ಹತೆಯನ್ನು ತ್ಯಾಗ ಮಾಡುವಂತಾಗುವುದು ಆದರಂತೆ ಶೂದ್ರ – ಋಣ ಶೋಧನದ ವಿಶೇಷ ಹೊಣೆಗಾರಿಕೆಯನ್ನು ಹೊತ್ತ ವ್ಯಕ್ತಿಗಳೂ ಸಂಸ್ಕಾರ ಋಣ ಕರ್ಮಗಳ ಪ್ರಭಾವದಿಂದ ವಿಪ್ರ ನಿಷ್ಠ. ಕ್ಷತ್ರಿಯ ನಿಷ್ಠ, ವೈಶ್ಯ ನಿಷ್ಠ ಗುಣಕರ್ಮಗಳನ್ನು ಆಯಾ ಮಿತಿ ಯಲ್ಲಿ ಆಚರಿಸುವ ಧರ್ಮಾಧಿಕಾರವೇ ಮೊದಲಾದುವುಗಳಿಗೆ ಆಯಾ ಮಿತಿಯಲ್ಲಿ ಅರ್ಹತೆಯನ್ನು ಹೊಂದಿರುವರು

ಶಾಸ್ತ್ರ ಸಮ್ಮತವಾದ ಮತ್ತು ಋಷಿ, ಋತ, ಋಣ, ಸಂಸ್ಕೃತಿ ಮೊದಲಾದುವುಗಳ ಮಿತಿಯಲ್ಲಿರುವ ಈ ವಿಷಯವು ಪ್ರತ್ಯಕ್ಷವಾಗಿ ಅನುಭವದಲ್ಲಿರುವುದು ; ಮಾನವತೆಯಲ್ಲಿ ಅಡಗಿರುವ ತತ್ವವನ್ನು ಪ್ರಕಾಶಿಸುವುದು. ವಿಶ್ವದ ನಾನಾ ಮೂಲೆಗಳಲ್ಲಿ ಜೀವನದ ರಥವನ್ನು ಅವರವರ ಮಿತಿಯಲ್ಲಿ ನಡೆಸುತ್ತಿರುವ ಜನಗಳ ವರ್ತನೆಯಿಂದ ಪರಿ ಪೋಷಿತವಾಗಿರುವುದು ಮತ್ತು ಪರಮ ಪುರುಷಾರ್ಥ ತತ್ವ ಪ್ರಕಾಶಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನೇಕ ಜನಾಂಗಗಳಿಗೆ ಅವಕಾಶವಿಲ್ಲದೇ ಇರುವ ವಿಚಾರವೂ ಇದರಿಂದ ಸಮರ್ಥಿಸಲ್ಪಡುವುದು.

ಆಧುನಿಕ ವಿಶ್ವ ರಾಜ್ಯ ಭಾರವಲ್ಲಿ ನ್ಯಾಯ ಶಾಸ್ತ್ರಾಭ್ಯಾಸದಲ್ಲಿ ಪದವಿಯನ್ನು ಸಂಪಾದಿಸಿದ ವ್ಯಕ್ತಿಯು ವೇದಾಧ್ಯಯನದ ದ್ವಿಜಸಂಸ್ಕಾರವನ್ನೂ ಹೊಂದಿರಬಹುದು; ವಿಪ್ರನೆನಿಸಿಕೊಳ್ಳಬಹುದು; ವಯೋವೃದ್ಧನೂ ಆಗಿರಬಹುದು. ಇಂತಹ ವ್ಯಕ್ತಿಯು ನ್ಯಾಯಶಾಸ್ತ್ರಪ್ರಯೋಗಕ್ಕೆ ಬೇರೆಯಾದ ವೃತ್ತಿಯಲ್ಲಿ ಪರಚ್ಛಂದಾನುವರ್ತನೆಯ ಕಾರ್ಯದಲ್ಲಿ ತೊಡಗಿದ್ದರೆ ಆತನಲ್ಲಿ ಮುಖ್ಯವಾದ ವಿಶೇಷ ಹೊಣೆಗಾರಿಕೆಯ ಶೂದ್ರವು ಪರಾಕಾಷ್ಠ ದೆಸೆಗೆ ಏರುವುದು; ನ್ಯಾಯಶಾಸ್ತ್ರಜ್ಞಾನವೆಂಬ ವಿಪ್ರವು ಮಲಿನವಾಗುವುದು; ಅಭ್ಯಸ್ತವಾದ ಶೂದ್ರವು ಸ್ವಾತಂತ್ರ್ಯ ಪ್ರಯೋಗ, ನಿರ್ಣಯ ಕ್ಲೇಶ ಸಂವಿಧಾನ, ನಿರ್ಣಯಶಕ್ತಿ ಮೊದಲಾದುವುಗಳನ್ನು ಆ ವ್ಯಕ್ತಿಯಿಂದ ಬೇರೆ ಮಾಡಿರುತ್ತದೆ. ಆದುದರಿಂದ ಧರ್ಮ ನಿರ್ಣಯದ ಅಧಿಕಾರವನ್ನು ಆ ವ್ಯಕ್ತಿಯೇ ವಹಿಸಿಕೊಳ್ಳಲಾಗದು. ಅಂತಹ ಮುಖ್ಯ ಶೂದ್ರ ಗುಣ ಕರ್ಮ ಪ್ರಧಾನವಾದ ವ್ಯಕ್ತಿಯು ತ್ಯಾಜ್ಯವೆಂದು ಸುಸ್ಪಷ್ಟವಾಗಿ ಆಧುನಿಕ ನಿಯಮಗಳಿಂದ ಸ್ವತಸ್ಸಿದ್ಧವಾಗುತ್ತದೆ. ನ್ಯಾಯ ಶಾಸ್ತ್ರ ಪದವೀಧರರಾಗಿರುವ ದ್ವಿಜಸಂಸ್ಕಾರವುಳ್ಳವರೂ ನ್ಯಾಯ ಶಾಸ್ತ್ರ ಕಲಾ ಪ್ರಧಾನವಾದ ವೃತ್ತಿಯಲ್ಲಿ ಅನುಭವವನ್ನು ಹೊಂದದೆ ಇದ್ದರೆ ನ್ಯಾಯಾಸ್ಥಾನದ ಕೆಲಸಗಳ ನಿರ್ವಾಹಕ್ಕೆ ಆರಿಸಲ್ಪಡುವುದಿಲ್ಲ; ಅಂತಹವರು ಸ್ವತಃ ಆ ಕೆಲಸಕ್ಕೆ ಒಪ್ಪಲೂ ಆರರು.

ಧರ್ಮಾಧಿಕಾರಕ್ಕಾಗಿಯೇ ಗೊತ್ತಾಗಿ ನಿಯಮಿತರಾದವರೂ ಸಹ 'ಸೇವಾ ಶೂದ್ರ' ಸಂಪರ್ಕದಿಂದ ನ್ಯಾಯಾದಿಗಳ ನಿರ್ಣಯಕ್ಕೆ ಅನರ್ಹರಾಗುವರು ಎಂಬದಾಗಿ ಸಾಮಾನ್ಯ ತರ್ಕವೇ ಸಾರಿ ಹೇಳುತ್ತದೆ.

ಯಜ್ಞೀಯ ಕಾರ್ಯಕ್ಕೆ ಅವಶ್ಯವಾಗಿ ಬೇಕಾಗಿರುವ ಹಾಲನ್ನು ವಿಶೇಷ ಹೊಣೆಗಾರಿಕೆಯ ಶೂದ್ರದಿಂದ ದೋಹನ ಮಾಡಿಸಬಾರದು. ಎಂದು ಗೊತ್ತಾದ ಒಂದು ಶ್ರೌತ ಕಲ್ಪದಲ್ಲಿ ಹೇಳಿದೆ. ವಿಪ್ರರಿಂದ ಸಾಧಿಸಲ್ಪಡಬೇಕಾದ ಯಜ್ಞಕಾರ್ಯಕ್ಕೆ ಅನುಸಂಧಾನ ಪೂರ್ವಕ ವಿಪ್ರಾಧೀನವಾಗಿ ವಿಪ್ರಕ್ಕೆ ಸಹಕಾರಿಯಾದ ಶೂದ್ರದಿಂದ ಕೂಡಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಪ್ರವೇ ಹಾಲನ್ನು ಒದಗಿಸಿಕೊಳ್ಳಬೇಕಾದ ಶ್ರೌತತಮ ಕರ್ಮದ ರಹಸ್ಯವನ್ನು ತಿಳಿದು ಆನಂದಿಸಬೇಕು. ಈ ಅನುಷ್ಠಾನವು ಪೂರ್ಣವಾಗುವುದಕ್ಕೆ ಸರ್ವರೂ ಸಹಕರಿಸಬೇಕು.

ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ, ರಾಷ್ಟ್ರ ರಾಜ್ಯಭಾರಗಳಲ್ಲಿಯೂ ಕೆಲವು ವಿಶೇಷ ಸಂದರ್ಭಗಳಲ್ಲಿ ಪ್ರತಿಯೊಬ್ಬರೂ ಅವರವರ ಆಯಾ ಹೆಚ್ಚಿನ ಹೊರಗಿನ ಹೊಣೆಗಾರಿಕೆಯಿಂದ ಮುಕ್ತರಾಗಿ ಮಿತಿಯಿಂದ ಸಂಪದಭ್ಯುದಯಕ್ಕೆ ನೆರವಾಗುತ್ತಾರೆ. ಇದು ಎಲ್ಲರ ಅನುಭವದಲ್ಲಿಯೂ ಇದೆ.

ಯಜ್ಞಕ್ಕೆ ಹವಿಸ್ಸನ್ನು ಸಿದ್ಧಪಡಿಸುವುದು ವಿಶೇಷ ಹೊಣೆಗಾರಿಕೆಯು ಶೂದ್ರವು "ಆರ್ಯಾಃ ಪ್ರಯತಾಃ ಆರ್ಯಾಧಿಷ್ಠಿತಾಃ ಶೂದ್ರಾಃ ಚ ವೈಶ್ವದೇವೇ ಅನ್ನಸಂಸ್ಕರ್ತಾರಃ ಸ್ಯುಃ" (ಆ. ಧ. ಸೂ. ಮಂಜರೀ 13) "ಸಾ ನಿಷ್ಠಾ ಯಾ ವಿದ್ಯಾ ಸ್ತ್ರೀಷು ಶೂದ್ರೇಷು ಚ; ಅಥರ್ವಣಸ್ಯ ಶೇಷ ಇತ್ಯುದಾಹರಂತಿ" ಎಂಬ ಆಪಸ್ತಂಬ ವಚನವಿರುವುದು.

ಆದರೆ, ಯಜ್ಞಕಾಲದಲ್ಲಿ ಪಾಕವನ್ನು ಅಗ್ನಿಯಲ್ಲಿಯೇ ಸಿದ್ಧಪಡಿಸಿಕೊಳ್ಳುವ ಸಂದರ್ಭದಲ್ಲಿ (ಸ್ಥಾಲೀ ಪಾಕಾದಿಗಳಲ್ಲಿ) ಅದು ಪ್ರತ್ಯೇಕವಾದ ವಿಶೇಷ ಹೊಣೆಗಾರಿಕೆಯನ್ನು ಹೊತ್ತ ಶೂದ್ರವನ್ನು ಅಪೇಕ್ಷಿಸುವುದಿಲ್ಲ. ಯಜ್ಞಕರ್ತೃವಾದ ಯಜಮಾನನಲ್ಲಿ ಆರೋಪಿತವಾದ ಸಾಮಾನ್ಯವಾದ ಶೂದ್ರದಿಂದಲೇ ಈ ಪಾಕ ಕೆಲಸವು ನಿರ್ವಾಹವಾಗುವುದು.

ಹವಿಸ್ಸನ್ನು ಅರ್ಪಿಸುವ ವಿಶೇಷ ಸಂದರ್ಭಗಳಲ್ಲಿ ಯಜ್ಞಕರ್ತೃವೇ ಹಾಲನ್ನು ತಂದು ಅರ್ಪಿಸಬೇಕೆಂಬುದನ್ನು ಒತ್ತಿಹೇಳುವಾಗ ದ್ವಿತೀಯವೂ ವಿಶೇಷ ಹೊಣೆಗಾರಿಕೆಗೆ ಸೇರಿದುದೂ ಆದ ಶೂದ್ರದ ಸಹಾಯವನ್ನು ಹೊಂದಬಾರದೆಂದೂ, ದೋಹನ ಕರ್ಮವೂ ಶ್ರೌತತಮ ಕರ್ಮದ ಅಂಗವಾಗಿ ಯಜ್ಞವೇ ಆಗಿರುವುದೆಂದೂ ಶ್ರೋತ್ರಿಯ ಸಹಾಯಕಾಂಗವಾದ ಶೂದ್ರದಿಂದ ಅನುಸಂಧಾನ ಪೂರ್ವಕ ಯಜ್ಞ ಕರ್ತೃವೇ ಅದನ್ನು ನಿರ್ವಹಿಸುವುದರಿಂದ ಮೂಲಭೂತವಾದ ಯಜ್ಞ ಕರ್ಮ ನಿರ್ವಾಹವು ಚಂತಾರ್ಥವಾಗಿ ದೇವತಾ (ಯಜ್ಞ) ಪ್ರೀತಿಯಾಗುವುದೆಂದು ತಿಳಿಸಲು ವಿಧಿಯನ್ನು ಸೂಚಿಸಿರುತ್ತಾರೆ. ವ್ಯಕ್ತಿಯನ್ನಾಗಲೀ ವರ್ಣವನ್ನಾಗಲೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂಷಿಸಿ ತಳ್ಳಿ, ಹಾಕುವ ಪಕ್ಷಪಾತ, ಭೇದ, ಉಚ್ಚನೀಚ ಭಾವ— ಮೊದಲಾದ ಕುಹಕಗಳನ್ನು ಸೂಚಿಸುವುದಿಲ್ಲವಾದುದರಿಂದ ಶಬ್ದಸಂಕೇತ, ಸಮಯ, ರಸಾಭಿನಿವಿಷ್ಟ ವಿಮರ್ಶೆಗಳಿಂದ ಅರ್ಥಗ್ರಹಣ ಮಾಡಬೇಕಾಗಿರುತ್ತದೆ.

ವೇದಾಧ್ಯಯನ ಶ್ರವಣ ಮಾಡುವ ಶೂದ್ರಕ್ಕೆ ದಂಡವನ್ನು ವಿಧಿಸಿರುವ ವಾಕ್ಯವು ಶ್ರವಣ ಕಾರ್ಯದ ಮಹಿಮೆ ಗೌರವಗಳನ್ನೂ ಮಿತಿಯನ್ನೂ ಸೂಚಿಸುವುದು. ಸೂಚನೆಯನ್ನು ವಿರೋಧಿಸಿ ನಡೆಸುವ-ನಡೆಯುವ ಕೆಲಸಕ್ಕೆ ತಕ್ಕ ಫಲವು ಕರ್ಮ-ಕರ್ಮಫಲ ನ್ಯಾಯಾನುಗುಣ ವಾಗಿಯೇ ಸ್ವಯಂ ಪ್ರಕಟವಾಗುವುದು, ಅನುಭವಿಸಲ್ಪಡಬೇಕಾಗುವುದು. ಇದು ಸ್ವತಸ್ಸಿದ್ಧವಾದ ವಿಷಯವೇ. ಎಷ್ಟರಮಟ್ಟಿಗೆ ಫಲವಾಗುವು ದೆಂಬುದನ್ನು ವಿಧಿಸಲ್ಪಟ್ಟ ದಂಡ-ಅಥವಾ-ಶಿಕ್ಷೆಯ ಸ್ವರೂಪವು ತೋರಿ ಸುವುದು. ದಂಡನೆಯೇ ಪ್ರಧಾನವೆಂದೂ ದಂಡವನ್ನು ವಿಧಿಸಿರುವ ವಾಕ್ಯದ ಪ್ರಯೋಜನಕ್ಕಾಗಿ ಅಪರಾಧಾನ್ವೇಷಣದಲ್ಲಿ ಗಮನವಿಡ ಬೇಕೆಂದೂ ಎಂದಿಗೂ ತಿಳಿಯಬಾರದು. ಅಂತಹ ಶ್ರವಣದಿಂದ ಆಗ ಬಹುದಾದ ಆಗುಹೋಗುಗಳ ವೈಪರೀತ್ಯವನ್ನು ಗೋಚರಪಡಿಸುವುದ ಕ್ಕಾಗಿ ವ್ಯತಿರೇಕವಾಗಿ ದಂಡೋಕ್ತಿಯನ್ನು ಹೇಳಿದುದಾಗಿರುತ್ತದೆ.

ಋಷಿಗಳ ಋತಾನುರೋಧ ಮನೋವಾಕ್ಕಾಯ ಕರ್ಮಗಳಲ್ಲಿ ಕುಹಕವಾದ ಭೇದಭಾವಗಳೂ ದ್ವೇಷಾಸೂಯಾದಿಗಳೂ ಲೇಶವೂ ಇರುವುದಿಲ್ಲ ಅವುಗಳ ಸೋಂಕು ಸಹ ಇರುವುದಿಲ್ಲ. ಗ್ರಂಥವ್ಯಾಖ್ಯಾ ತೃಗಳ ಕುಹಕವೇನಾದರೂ ಇದ್ದಲ್ಲಿ ಅದನ್ನು ಆಯಾ ಮೂಲಗ್ರಂಥ ಕರ್ತೃಗಳ ಮೇಲೆ ಆರೋಪಮಾಡುವುದು ದೋಷಕ್ಕೆ ಕಾರಣ

ರಾಜನೀತಿಯ ಜ್ಞಾನವು ಮರೆಯಾಗುವುದರಿಂದ ಉಂಟಾಗುವ ಮೇಲ್ಕಂಡಂತಹ ಕುತ್ಸಿತ ಮನೋಭಿಪ್ರಾಯಗಳು ಹೊರಬೀಳುವುವು; ರಾಜನೀತಿಯ ಜ್ಞಾನದ ಆಧಾರದಿಂದ ವಿಮರ್ಶಿಸಿ ಅರ್ಥಗ್ರಹಣ ಮಾಡುವದವಶ್ಯಕವಾಗಿದೆ. ಮತ್ತು ಸರ್ವಧರ್ಮಾಂತರ್ಗತವಾಗಿ, ಧರ್ಮ ಗಳಿಗೆಲ್ಲಾ ಮಹತ್ತಮ ಸಾಮಾನ್ಯ ಅಪವರ್ತನದಂತಿರುವ ರಾಜನೀತಿಯ ಜ್ಞಾನದಿಂದ ಪ್ರಪಂಚದ ಜನತೆಯ ಸ್ಥಿತಿಗತಿಗಳನ್ನು ಅನುಭವಕ್ಕೆ ತಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಂಡು ಸಾಮರಸ್ಯವಾಗುವಂತೆ ಸಾರ್ವಜನಿಕ ಗ್ರಂಥಗಳ ವ್ಯಾಖ್ಯಾನಕ್ಕೂ ಅರ್ಥ ಗ್ರಹಣಕ್ಕೂ ಯತ್ನಿಸಬೇಕು.

ಪುರಾಣ ಪ್ರವಚನಗಳಿಗೂ ಧರ್ಮಶಾಸ್ತ್ರ ವ್ಯಾಖ್ಯಾನಗಳಿಗೂ ರಾಜನೀತಿ ಶಾಸ್ತ್ರಜ್ಞಾನವೇ ಪೂರ್ವರೂಪ, ಪೂರ್ವ ಸಿದ್ಧತೆ ಮತ್ತು ಅರ್ಹತಾ ಸೂಚಿಯಾಗಿರುವುದು. ರಾಜನೀತಿ ಶಾಸ್ತ್ರಜ್ಞಾನ ಶೂನ್ಯರು ಸಾರ್ವಜನಿಕವಾದ ಯಾವ ಕೆಲಸಗಳಿಗೂ ಅರ್ಹರಲ್ಲ.

ದ್ವಿಜತಃ, ಜನ್ಮತಃ ವಿಪ್ರಾದಿಗಳ ಗುಂಪಿಗೆ ಸೇರಿದ್ದರೂ ಶೂದ್ರ ವೆಂಬ ಪರಚ್ಛಂದಾನುವರ್ತನೆ-ಸೇವೆಯಲ್ಲಿ ಮುಳುಗಿರುವಾಗ ವೇದಾಧ್ಯಯನ ಶ್ರವಣಕ್ಕೆ ಮನಸ್ಸು ಕೊಟ್ಟರೆ ಸೇವಾ ಕಾರ್ಯಕ್ಕೆ ಕುಂದಕವಾಗಿ ಶ್ರವಣಕ್ಕಿಂತ ಅತಿಶಯವಾದ ಪ್ರಸಕ್ತ ಸೇವಾಕಾರ್ಯವು ಕೆಡುವುದು ಮತ್ತು ಸಾಮಾನ್ಯ ಶೂದ್ರವಾದರೂ ವೇದಾದಿ ಶ್ರವಣಗಳಿಂದ ಮನಸ್ಸು ವಿಕಾರವಾಗಿ ಸಂರಕ್ಷಣೆ, ಶ್ರೇಯಸ್ಸು ಸಂಪತ್ತುಗಳ ಮೇಲೆ ಗೀಳುಂಟಾಗಿ ಕರ್ಮ-ಋಣ-ಪ್ರವರ್ತನೆಯಲ್ಲಿ ತೊಡಗುವಂತಾಗಿ ಬಂಧನ ಪ್ರಾಪ್ತಿಯಾಗುವುದರಿಂದ ಸಾಮಾನ್ಯ ಶೂದ್ರಕ್ಕಿಂತ ಕೀಳಾದ ಅವಸ್ಥೆಯು ಪ್ರಾಪ್ತವಾಗುವುದು.

ವೇದ ಶ್ರವಣಾದಿಗಳಲ್ಲಿ ಮತ್ತು ಲಕ್ಷಣಾತ್ ಸಂಗೀತಾದಿ ಶ್ರವಣಗಳಲ್ಲಿ ದತ್ತಾದರವಾಗಿ ಪರವಶತೆಯಿಂದ ಶೂದ್ರವು ಅನವಧಾನಿಯಾಗಿ, ಅನನುಸಂಧಾನವಾಗಿ, ಇರಬಾರದೆಂಬ ಅರ್ಥವು ಶಾಸ್ತ್ರ ಮತ್ತು ಅನುಭವಗಳಿಗೆ ಹೊಂದಿಕೊಳ್ಳುವುದು. ವೇದ ಶ್ರವಣ ಫಲಕ್ಕಿಂತ ಹೆಚ್ಚಿಲ್ಲದಿದ್ದರೂ ತತ್ಕಾಲದಲ್ಲಿ ಪ್ರಾಪ್ತವಾದ ವೇದ ಶ್ರವಣದಷ್ಟೇ ಫಲವನ್ನು ಶೂದ್ರವು ಆ ಮಿತಿಯಲ್ಲಿರುವವರಿಗೆ ದೊರಕಿಸುವುದೆಂಬ ಅರ್ಥವು ದ್ಯೋತಕವಾಗುವುದು ಮತ್ತು ಇತರ ಕಡೆ ಹೇಳಿರುವುದನ್ನು ಸಮರ್ಥಿಸುವುದು. ಈ ಬಗೆಯು ರಸಾಭಿಜ್ಞ ವಿಮರ್ಶೆಯು ರಾಜನೀತಿ ಜ್ಞಾನದ ಪ್ರಭಾವ. ಇದೇ ಮನಶ್ಶಾಸ್ತ್ರದ ಪ್ರಥಮ ಪಾಠವಾಗಿರುವುದು ಮತ್ತು ಜನ ಸಾಮಾನ್ಯವಿವೇಕಕ್ಕೆ ಗೋಚರವಾಗುವುದು.

ಜೀವನ ಯಜ್ಞದ ಪರಮ ಪವಿತ್ರವಾದ ಋಣಾನುಭವ ಕರ್ತವ್ಯ ಪರತೆಯನ್ನು, ರಾಜನೀತಿಜ್ಞಾನದ ಮಟ್ಟದಿಂದ, ಅಳೆದು ನೋಡಿರುವವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಕಾರ್ಯ - ರಾಜಸೇವೆಗೆ (ಸರ್ಕಾರಿ ಕೆಲಸ - ಹತ್ತು ಜನಗಳ - ಸಾರ್ವಜನಿಕವಾದ ರಾಷ್ಟ್ರದ ಕೆಲಸ) ಬದ್ಧರಾಗಿ ತಾವು ಹೊಣೆಗಾರಿಕೆ. ಯಿಂದ ನಿರ್ವಾಹ ಮಾಡುತ್ತಿರುವ ರಾಜಕಾರ್ಯಕ್ಕಾಗಿ ತಮ್ಮ ತಮ್ಮ ಶ್ರೋತ್ರಿಯಾದಿ ವರ್ಣಗಳ ವಿಶೇಷ ಹೊಣೆಗಾರಿಕೆ ಕೆಲಸಗಳನ್ನು ಸಹ ಗೌಣವಾಗಿ ಭಾವಿಸಿ ವೈಶ್ವದೇವಾದಿ ಪಂಚಮಹಾಯಜ್ಞಗಳನ್ನೂ ಇತರ ಕಾರ್ಯಗಳನ್ನೂ ಕಡೆಗಣ್ಣಿಂದ ನೋಡುತ್ತಿರುವವರು, ಶೂದ್ರರ ಮಿತಿ, ಪರಮಾರ್ಥಗಳನ್ನು ತಿಳಿಯದೆಯೇ ಸನ್ನಿವೇಶ ಸಮಯ ಸಂದರ್ಭ ಗಳಿಗೆ ಪ್ರೇರಿತರಾಗಿ ಪ್ರಕೃತಿ - ಸ್ವಭಾವವನ್ನು ಅನುಸರಿಸುತ್ತಿರುವುದನ್ನು ಗೌರವಿಸುವುದರ ರಹಸ್ಯವೇ ಇದು.

ಧನ ಮತ್ತು ವಿದ್ಯಾ ಪ್ರಭಾವಯುತರು ಪ್ರಯೋಗಿಸುವ ತಂತ್ರ ಗಳಿಗೆ ಮರುಳಾಗಿ ಮೋಹಾವೇಶಗಳಿಂದ ವಿಷಾದವನ್ನು ಹೊಂದಿ ವಿಷಾದ ದಲ್ಲಿಯೇ ಮುಳುಗುವ ಸಾಮಾನ್ಯರು ತಮ್ಮ ತಮ್ಮ ಲೋಪ ದೋಷಗಳಿಗೆ ಅಪರಾಧಗಳಿಗೆ ದಂಡಿಸಲ್ಪಡುವವರಾಗುತ್ತಾರೆ. ಆದರೆ ತಂತ್ರ ಪ್ರಯೋಗ ಮಾಡುವವರ ದೋಷವನ್ನು ಸಾಮಾನ್ಯವಾಗಿ ವ್ಯವಹಾರದಲ್ಲಿ ಗಣನೆಗೆ ತಂದುಕೊಳ್ಳುವುದಿಲ್ಲ.

ಸಸ್ಯ ಕೀಟ ಮೃಗಗಳಿಗೆಲ್ಲಾ ಸಾಮಾನ್ಯವಾಗಿದ್ದು ಕೇವಲ ಕರ್ಮ ಫಲಾನುಭವ (ಶೋಧನ) ವೆಂಬ ಶೂದ್ರತ್ವವನ್ನೇ ಪ್ರಧಾನವಾಗಿ ಇಟ್ಟು ಕೊಂಡಿರುವ ದೇಹಿಗಳು ಪತಂಗ - ಕ್ರಿಮಿ ಜನ್ಮದ ಮೂರನೇದಾದ ತಟಸ್ಥಾವಸ್ಥೆಯಲ್ಲಿರುತ್ತಾರೆ. ವೇದವಾಗಲೀ, ಸಂಗೀತಾದಿಗಳಾಗಲೀ ಅವರವರ ಶ್ರವಣ ಪಥಕ್ಕೆ ಬರುವುದಿಲ್ಲ. ಅಂತಹ ಶೂದ್ರವು ಔದಾಸೀನ್ಯ ವನ್ನು ಧರಿಸಿರುವುದರಿಂದ ವ್ಯುತ್ಪತ್ತಿ - ಅರ್ಥವಿವೇಚನೆ ರಸಗ್ರಹಣಗಳ ಮಟ್ಟವು ಕಡಿಮೆಯಾಗಿರುವುದು ಶಬ್ದ ಗ್ರಹಣ - ವಾ - ಶಬ್ದಾರ್ಥ ಗ್ರಹಣಕ್ಕೆ ಅವಕಾಶವೇ ಇಲ್ಲದಿರುವುದರಿಂದ ಕೋಣನ ಮುಂದೆ ಬಾರಿಸಿದ ವಾದ್ಯಧ್ವನಿಯ ರಸವನ್ನು ಕೋಣನು ಗ್ರಹಿಸುವಷ್ಟು ಪ್ರಮಾಣವಲ್ಲಿಯೂ ಸಹ ಅರ್ಥ ವಿವೇಚನೆಗೆ ಸಿಲುಕದ ವೇದಶ್ರವಣದಿಂದ ಆಗುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ಹೇಳಿದ ವಿಧಿವಾಕ್ಯವು ಅನ್ವಯವಾಗುವ ಸಂದರ್ಭಗಳನ್ನು ಜಾಗರೂಕತೆಯಿಂದ ವಿಮರ್ಶಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದಾಧ್ಯಯನಕ್ಕಾಗಿ ದ್ವಿಜ ಕರ್ಮ ಸಂಸ್ಕಾರಗಳ ಪೂರ್ವಕ ಅಧ್ಯಯನವನ್ನು ಮುಗಿಸಿ ಕರ್ಮಫಲಶೋಧನ ಅಥವಾ ಅನುಭವವೆಂಬ ಶುಶ್ರೂಷಾ ಪ್ರಧಾನವಾದ ಶೂದ್ರದಲ್ಲಿ ವ್ಯಾಪೃತರಾದ, ಆದರೆ ವಿಶೇಷ ಹೊಣೆಗಾರಿಕೆಯನ್ನು ಹೊತ್ತಿರುವ ಶ್ರೋತ್ರಿಯ, ಕ್ಷತ್ರಿಯ, ವೈಶ್ಯಗಳು (ವ್ಯಕ್ತಿಗಳು !) ಅಕಸ್ಮಾತ್ ಶ್ರವಣ ಗೋಚರವಾದ ವೇದಾದಿಗಳ ಅರ್ಥಗ್ರಹಣ ರಸಾನುಭವಕ್ಕೆ ಒಳಗಾಗಿ ಶುಶ್ರೂಷಾ ಚಿತ್ತೈಕಾಗ್ರತೆಗೆ ಭಂಗವನ್ನು ತಂದುಕೊಂಡರೆ ಶುಶ್ರೂಷಾ ಕಾರ್ಯವು ಹದಗೆಟ್ಟು ಹೊಸಬಂಧನವಾಗಿ ಪರಿಣಮಿಸಿ ವಿನಾಶಹೇತುವಾಗುವುದು. ಅಂತಹ ವಿನಾಶಕರವಾದ ಘಟನೆಗಳು ಉಂಟಾಗದಿರಲಿ ಎಂದು ಎಚ್ಚರಿಸಿ ಚಿತ್ತೈಕಾಗ್ರತೆಯನ್ನೂ ಅನ್ಯತ್ರ ಗಮನವೀಯಬಾರದೆಂಬ ಮನಶ್ಶಾಸ್ತ್ರ - ಯೋಗದ ಮಹಿಮೆಯನ್ನೂ ತಿಳಿಸುವುದಕ್ಕಾಗಿ ದೋಷಫಲ ಸೂಚನೆಗೆ ದಂಡವನ್ನು ಉದಾಹರಿಸಿದೆ ಎಂದು ತಿಳಿದುಕೊಳ್ಳಬೇಕು. ಒಂದುವೇಳೆ ದೋಷಕ್ಕೆ ಒಳಗಾಗಿ ಆ ದೋಷದ ಫಲವು ಕೊಡುವ ಅನುಭವನ ತೀಕ್ಷ್ಣತೆಯನ್ನು ತಪ್ಪಿಸಿಕೊಳ್ಳಲು ಮೊದಲೇ ದಂಡವನ್ನು ಆಹ್ವಾನಿಸಿ ದೋಷಬಾಧೆಯಿಂದ ಬಿಡುಗಡೆಯನ್ನು ಹೊಂದುವುದೂ ಸಮಂಜಸವೇ ಆಗಿರುತ್ತದೆ.

ಮೂತ್ರ ವಿಸರ್ಜನೆ ಎಂಬ ಶಾರೀರಕ ವ್ಯಾಪಾರದಲ್ಲಿ ಉಕ್ತವಾದ ಶೌಚ ಸಂಸ್ಕೃತಿಯಿಂದ ಅಪವಿತ್ರವಾದ ಮೇಹಾದಿ ರೋಗಗಳು ಬರದಂತಾಗುವುದು ಮತ್ತು ಶೌಚವು ಚಿಕಿತ್ಸೆಯಾಗಿಯೂ ಪರಿಣಮಿಸುವುದು. ವರ್ಣ ನಿಯಮ ಬಂಧನಕ್ಕೆ ಒಳಗಾದ ಇದು ಶ್ರೋತ್ರಿಯ, ಕ್ಷತ್ರಿಯ ವೈಶ್ಯ ಶೂದ್ರಗಳನ್ನು ಒಳಗೊಂಡ ಕ್ಷತ್ರಕ್ಕೆ ಸೇರಿದುದಾಗಿದೆ. ಕೇವಲ ಶೂದ್ರಕ್ಕೆ ಮೇಲ್ಕಂಡ ಆರೋಗ್ಯರಕ್ಷಣಾದಿಗಳ ನಿಯಮವೂ ಹೊಣೆಗಾರಿಕೆಯೂ ಅಪ್ರಕೃತ ಮತ್ತು ಅನವಶ್ಯಕ. ನಿಯಮಾನುಷ್ಠಾನಕ್ಕೆ ಅವಕಾಶವಿಲ್ಲದ ಪ್ರಸಂಗದಲ್ಲಿ ಶ್ರೋತ್ರಿಯ, ಕ್ಷತ್ರಿಯ ವೈಶ್ಯಗಳೆಂಬ ನಿತ್ಯ ನಿಯಮಗಳನ್ನು ಬಂಧನವಿಲ್ಲದ ಮತ್ತು ಶೋಧನದ ಶೂದ್ರಕ್ಕೆ ಹೊಂದಿಸಿಕೊಂಡು ತಾತ್ಕಾಲಿಕವಾಗಿ ನಿರ್ದೋಷವೆಂದು ಭಾವಿಸುವುದು ರಾಜನೀತಿಯ ಮಿತಿಯಲ್ಲಿ ಬರುವುದು. ಮೂಕ ಪ್ರಾಣಿಗಳ ಪರಿಸ್ಥಿತಿಯಲ್ಲಿಯೂ ಅತಿ ವರ್ಣಾಶ್ರಮಿಗಳಾದ ಪರಮಹಂಸಾವಧೂತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಿತಿಯಲ್ಲಿಯೂ ಇದ್ದು ಕೇವಲ ಋಣಕರ್ಮ ಫಲಾನುಭವದಿಂದ ಸ್ವಸ್ವರೂಪಾವಸ್ಥಾನದಲ್ಲಿ ನಟ್ಟ ಮನಸ್ಸುಳ್ಳ ಶೂದ್ರಕ್ಕೆ ವೇದಶ್ರವಣ ಮತ್ತು ಶೌಚ ನಿಯಮಗಳು ಲಕ್ಷ್ಯವಾಗಿಲ್ಲ.

'ನ ಶೂದ್ರಾಯ ಮತಿಂ ದದ್ಯಾತ್' ಎಂಬುದರ ರಹಸ್ಯವು ಅಮೋಘವಾದ ಉಪದೇಶವನ್ನೂ ಜೀವನಸಂದೇಶವನ್ನೂ ನೀಡುವುದು. ಸ್ಥಾಯಿಭಾವನಂತಿದ್ದು ಋಣವನ್ನು ಹರಿಸಿ ಮುಕ್ತನಾಗುವ ಸ್ಥಿತಿಯಲ್ಲಿರುವ ಶೂದ್ರಕ್ಕೆ ಯಾವ ಹೊಸದಾದ, ವೈಶಿಷ್ಟ್ಯವುಳ್ಳ ಋಣಕಾರಕವಾದ ಮತಿಯನ್ನು ಹೇಳಬಾರದು ಎಂದು ಆ ವಾಕ್ಯದ ಅರ್ಥವು. 'ಶೂದ್ರ'ವು ಬಂಧನಕಾರಕವಾದ ಯಾವ ಮತಿಯನ್ನು ಹತ್ತಿರಕ್ಕೆ ಸೇರಿಸುವುದಿಲ್ಲ. ಸಾಮ್ಯಾವಸ್ಥೆಯ ಶೂದ್ರವು ಬಂಧನ ಪ್ರದವಾದ ಮತಿ ಸಂಕಲ್ಪ ಕರ್ಮಗಳನ್ನು ದೂರ ತಳ್ಳುವುದು. 'ಶೂದ್ರ' ವರ್ಣದ ಮತಿಯಲ್ಲಿರುವ ಶಾಂತಿ ಸುಖಗಳಿಗೆ ಸಾಧನ ಪರವಾದ ಮತಿಯನ್ನು ನೋಂಕಿಸಿದರೆ ಶೂದ್ರವು ಅದರ ಸ್ವಭಾವವನ್ನು ಬಿಟ್ಟು ಬೇರೆ ವರ್ಣವನ್ನು ಹೊಂದುವುದು. ಅದನ್ನು ತಿಳಿದು ಬಂಧನವಾದ ಪ್ರಾಪಂಚಿಕದಲ್ಲಿಯಾಗಲೀ ಪಾರಮಾರ್ಥಿಕದಲ್ಲಿಯಾಗಲೀ ಮುಳುಗಿರುವವರು 'ಶೂದ್ರ' ಅವಸ್ಥೆಯಲ್ಲಿರುವವರನ್ನು ನಿಸ್ತ್ರೈಗುಣ್ಯಭಾವದಲ್ಲಿರುವವರೆಂದು ತಿಳಿದು ತಾವೇ ದೂರವಿರಬೇಕಾದುದು ಪರಸ್ಪರ ಸುಖ ಶ್ರೇಯಸ್ಸಿಗೆ ಸಾಧನವು ಆಗುವುದು.

ದಂಡನೀತಿ ಪ್ರಕರಣದಲ್ಲಿ ಶ್ರೋತ್ರಿಯಾದಿ ವರ್ಣಗಳಿಂದ ಅಪರಾಧವು ಏಕ ಪ್ರಕಾರವಾಗಿ ನಡೆದರೂ ಶಿಕ್ಷೆಯನ್ನು ವಿಧಿಸುವಾಗ ಶ್ರೋತ್ರಿಯಕ್ಕೆ ವಿಧಿಸುವ ಶಿಕ್ಷೆಯು ಅಲ್ಪವಾಗಿ ಉಳಿದುವುಗಳಿಗೆ ವಿಧಿಸುವ ಶಿಕ್ಷೆಯು ಹೆಚ್ಚು ಹೆಚ್ಚಾಗಿ ಇರುವಂತೆ ತೋರುತ್ತದೆ.

ಅಪರಾಧವನ್ನೂ ಅಪರಾಧ ಮಾಡಬಾರದೆಂಬುದನ್ನೂ ಅಪರಾಧಕ್ಕೆ ಶಿಕ್ಷೆಯನ್ನೂ ಶ್ರೋತ್ರಿಯವು ತಿಳಿದಿರುವಂತೆ ಉಳಿದ ವರ್ಣಗಳು ತಿಳಿಯಲು ಅವಕಾಶವಿಲ್ಲ. ಅಪರಾಧ ಮತ್ತು ದಂಡಗಳ ವಿವೇಚನೆಯಿರುವವರು ಅಪರಾಧವನ್ನು ಮಾಡಲಾರರು. ನ್ಯಾಯಪರರು ಹೆಜ್ಜೆ ಹೆಜ್ಜೆಗೂ ತಮ್ಮ ವರ್ತನೆಯಲ್ಲಿ ಅಪರಾಧವು ದೂರವಾಗಿರುವಂತೆ ಭಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೀತಿಗಳುಳ್ಳವರಾಗಿ ನಡೆಯುತ್ತಾರೆ. ದೊಡ್ಡ ದೊಡ್ಡ ರಾಜಕಾರ್ಯದಲ್ಲಿ ನಿಯಮಿತರಾದವರೂ ಅಪರಾಧಕ್ಕೆ ಅಂಜಿ ನಡೆದುಕೊಳ್ಳಬಹುದು. ಇಂತಹವರು ಸನ್ನಿವೇಶ ಪ್ರಾಬಲ್ಯದಿಂದ ಆಕಸ್ಮಿಕವಾಗಿ ಅಪರಾಧವನ್ನು ಎಸಗುವಂತಾದಾಗ ಶಿಕ್ಷೆಯು ಅಪರಾಧಿ ಶ್ರೋತ್ರಿಯತ್ವದ ಹೃದಯಸ್ಥಿತಿಗಳನ್ನು ಅನುಸರಿಸಿ ಕಡಿಮೆಯಾಗಿ ಕಾಣುವುದು. ಆದರೂ ಶ್ರೀಮಂತರಿಗೆ ವಿಧಿಸಿದ ಒಂದು ಪೈ ಜುಲ್ಮಾನೆಯಿಂದ ಅತ್ಯಂತ ಉನ್ನತಶಿಕ್ಷೆಯಿಂದ ಆಗುವ ಪರಿಣಾಮವು ತಲೆದೋರುವಂತೆ ಶ್ರೋತ್ರಿಯಕ್ಕೆ ವಿಧಿಸಿದ ಅಲ್ಪ ಶಿಕ್ಷೆಯು ಅನಂತವಾಗುವುದು. ಶ್ರೋತ್ರಿಯವು ತನ್ನ ಅಪರಾಧವನ್ನು ಅರಿತು ತಾನೇ ಶಿಕ್ಷೆ ಪ್ರಾಯಶ್ಚಿತ್ತಗಳನ್ನು ಸ್ವಾಗತಿಸುವ ವಿಚಾರವು ಸ್ತುತ್ಯವಾದುದು.

ಅಪರಾಧದ ವಿವರಣೆಯಿಲ್ಲದೆ ಅಪರಾಧವನ್ನು ಎಸಗುವ ನಿಷಾದ ಶೂದ್ರಾದಿಗಳಿಗೆ ವಿಧಿಸುವ ಶಿಕ್ಷೆಯು ಅಪರಿಮಿತವೆಂದು ಕಂಡರೂ ಅದರ ಪರಿಣಾಮವು ಅಪರಾಧಿಗಳಾದ ನಿಷಾದ ಶೂದ್ರಾದಿಗಳಿಗೆ ಮನಸ್ಸಿಗೆ ಬರದೆ ಅಲ್ಪವಾಗಿಯೇ ಇರುತ್ತದೆ.

ಕೇವಲ ಶಬ್ದ ಸ್ಥಿತಿಗಳಿಂದ " ಅನ್ಯಾಯ, ಪಕ್ಷಪಾತಗಳು ನಡೆಯುತ್ತವೆ, ನಡೆದಿವೆ." ಎಂದು ಹೇಳುವುದು ವಿವೇಚನೆಗೆ ದೂರವಾಗಿ ಅಸೂಯಾವಿಷ್ಟವಾಗುವುದೇ ವಿನಾ ಸಮರ್ಥನೀಯವಾಗುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೮. ರಸಾತ್ಮಕ ವಿಮರ್ಶೆ

ಶೂದ್ರವನ್ನು ಪ್ರಧಾನವಾಗಿಟ್ಟುಕೊಂಡ ಶಂಬೂಕನು ಶೂದ್ರದಿಂದ ಒಂದು ಹಂತ ಮೇಲಕ್ಕೇರಲು ಅಥವಾ ಆಭಿಚಾರಿಕಕ್ಕೆ ಪ್ರಯತ್ನಿಸಿದನು. ಇಂತಹ ಪ್ರಯತ್ನವು ಋತಾನುರೋಧವಾಗಿದ್ದಲ್ಲಿ ಶ್ರೇಯಸ್ಸಿಗೆ ಒಯ್ಯುವುದು. ಋತ ವಿರೋಧವಾಗಿರುವ ತಪಸ್ಸು ಸುತ್ತಮುತ್ತಲಿನ ಸನ್ನಿವೇಶವೇ ಶತ್ರುವಾಗುವಂತೆ ಮಾಡಿ ದುಷ್ಟಫಲವನ್ನೇ ಸ್ವಾಗತಿಸುವುದು. ಅಥರ್ವ ಪ್ರಯೋಗ ಕಾರ್ಯಗಳಲ್ಲಿ ನಿಷ್ಠೆಯು - (ದೇಶಿಕರು ಇಲ್ಲದಿರುವಾಗಲೂ, ರಹಸ್ಯಗಳನ್ನು ತಿಳಿದು ಋತಾನುರೋಧವಾಗಿ ಪ್ರಯೋಗಗಳಲ್ಲಿ ತೈನಾಕ ಬೇಕೆಂಬ ಶೂದ್ರವು ಅಭಾವವಾಗಿರುವಾಗಲೂ) ಸ್ವತಂತ್ರನ ಸ್ವಚ್ಛಂದವಾಗಿ ನಡೆಯುವುದಾದರೆ ಪ್ರಯೋಗವು ಕೆಟ್ಟುಹೋಗುವುದು.

ಮಂತ್ರೋಚ್ಚಾರಣೆಯಲ್ಲಿ ಉಂಟಾಗುವ ಹಿಂದು ಮುಂದಾದ ಸ್ವರ-ಅಕ್ಷರವಿನ್ಯಾಸ ಮತ್ತು ಸ್ಖಾಲಿತ್ಯಗಳಿಂದ ಸಿಡಿಮದ್ದಿಗಿಂತಲೂ ಹೆಚ್ಚು ಪ್ರಭಾವವುಳ್ಳ ಶಾಸ್ತ್ರೋಕ್ತ ಮಂತ್ರ ಪ್ರಯೋಗಗಳು ವಿಸ್ಫೋಟ್ಕಾರಕಗಳೇ ಆಗುವುವು. ಅಕ್ರಮವಾಗಿ ಉಚ್ಚರಿಸಲ್ಪಟ್ಟ ಮಂತ್ರಗಳ ಅಪಶಬ್ದ ನಾದಗಳಿಂದ ಪ್ರಕೃತಿ ಶಕ್ತಿ ಸಂಯೋಜನ ವಿಭಜನ ಕಾರ್ಯದಲ್ಲಿ ಘರ್ಷಣೆಯೊದಗಿ ವಿಪ್ರತಿಕ್ರಿಯಾಫಲ ಸಮೇತ ಕರ್ತೃಗಳಿಗೂ ಸುತ್ತುಮುತ್ತಲಿನ ಆವರಣದಲ್ಲಿರುವವರಿಗೂ ಕರ್ಮ ವಿಪಾಕ ಕ್ರಮದಲ್ಲಿ ವ್ಯಷ್ಟಿ ಸಮಷ್ಟಿ ಸಮಯವನ್ನನುಸರಿಸಿ ಕಾಲಕ್ರಮದಲ್ಲಿ ನೋವಾಗದೇ ಇರುವುದಿಲ್ಲ. ಈಗಲೂ ಪ್ರತಿಕ್ಷಣದಲ್ಲಿಯೂ ಈ ಬಗೆಯ ಅಥರ್ವ ಪ್ರಯೋಗಗಳು ಸತ್ಫಲ ಪ್ರಾಪ್ತಿಗೂ ದುಷ್ಟ ಉದ್ದೇಶಸಾಧನೆಗೂ ನಡೆಯುತ್ತಿರುತ್ತವೆ.

ಋಣಾದಿ ಸಂಬಂಧವಿಲ್ಲದ ನೋವಿಗೆ ತುತ್ತಾದ ದೇಹಿಗಳ ಸಂಕಟವೇ ವಾತಾವರಣದಲ್ಲಿ ಪ್ರವಹಿಸಿ ಮದ್ದಿನಂತೆ ಸಿಡಿದು ನೋವಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರಣರಾದವರನ್ನೂ ಸಹ ಸುಡುವುದು ಅಥವಾ ಸುಡಿಸುವುದು. ಇದೇ ಶಾಪವೆನಿಸುವುದು. ಪ್ರತ್ಯೇಕವಾಗಿ ತಪೋ ಮಹಿಮೆಯಿಂದಲೇ ಶಾಪ ಕೊಡುವುದಕ್ಕೆ ಸಾಧ್ಯವು ಎಂದು ತಿಳಿಯುವುದರಲ್ಲಿ ಔಚಿತ್ಯವಿವೇಕವಾಗಲೀ ಇರುವುದಿಲ್ಲ; ನೋವನ್ನು ಅನುಭವಿಸುವ ಪ್ರತಿ ದೇಹಿಯ ಬಾಧೆಯೇ ಶಾಪವಾಗಿ ಶಾಪಕ್ಕೆ ಅಧಿಕಾರವನ್ನುಂಟುಮಾಡುವುದು. ಬಾಯಿಬಿಟ್ಟು ನೋವನ್ನು ವರ್ಣಿಸಿ, ಅದಕ್ಕೆ ಪ್ರತಿಯಾಗಿ ದುಷ್ಟ ಫಲವನ್ನು ಕೋರುವುದೇ ಶಾಪವೆನಿಸುವುದು. ಎಂಬುದು ಪೂರ್ಣವಾದ ಅನುಭವದ ಮಾತಲ್ಲ. ಉಕ್ತವಾಗಲೀ ಅನುಕ್ತವಾಗಲೀ ಶಾಪವು ಅಂದರೆ ಸಂಕಟದ -ಪ್ರತಿಕ್ರಿಯೆ-ಫಲವು ಸಿಡಿಮದ್ದಾಗಿ ಕ್ಲೇಶಕಾರಿಗಳಾದ ದೇಹಿಗಳನ್ನು ತಾಗುವುದು. ನೋವಿನ ಅನುಭವವೇ ಶಾಪ ಕೊಡುವುದಕ್ಕೆ ಅಧಿಕಾರವುಳ್ಳದ್ದಾಗಿ ವಿಶ್ವದ ಪ್ರಜೆಗಳಿಗೂ ದೇಹಿಗಳಿಗೂ ಅಸ್ತ್ರದಂತಿರುವುದು. (ಋಣ ಕರ್ಮದ ಫಲವಾಗಿ ಅನುಭವಿಸುವ ನೋವೂ ಆಯಾ ಮಿತಿಯಲ್ಲಿ ಇರುತ್ತದೆಂದು ತಿಳಿಯಬೇಕು.)

ಉದ್ದೇಶಪೂರ್ವಕವಾಗಿ, ವ್ಯಕ್ತಿಯನ್ನು ಉದ್ದೇಶಿಸಿ ಮಾರಣಾದಿಗಳು ನಡೆಯುವುವು. ಬ್ರಾಹ್ಮೀ ಸಂಸ್ಕೃತಿಯಲ್ಲಿ ಮತ್ತು ಬ್ರಾಹ್ಮಣಾಚಾರದ ಮಿತಿಯಲ್ಲಿ ಸರ್ಪರಂತೆ ಸರ್ಪರ ಮಧ್ಯೆ ಬೆಳೆದು ಶಿಷ್ಟ ಮತ್ತು ದುಷ್ಟ ದೃಷ್ಟಾಂತಗಳಿಂದ ಹಿಂದಿನ ಕಾಲದ ರಾವಣ ಮತ್ತು ಅಸೂಯಾಯಿಗಳೂ ಈಗಿನ ತಾಂತ್ರಿಕರೂ ಪ್ರಜೆಗಳನ್ನೆಲ್ಲಾ ಎಚ್ಚರಿಸುತ್ತಿರುವರು. ಇವರು ಅಥರ್ವ ಪ್ರಯೋಗಗಳನ್ನು ದೌಷ್ಟ್ಯಕ್ಕೂ ವಿನಿಯೋಗಿಸುವ ರಹಸ್ಯವನ್ನು ತಿಳಿದವರಾಗಿರುತ್ತಾರೆ.

ಶಂಬೂಕನೂ ಸಹ ವ್ಯತಿರೇಕವಾಗಿ ಆದರ್ಶ ವ್ಯಕ್ತಿಗಳಾಗಿರುವವರಲ್ಲಿ ಒಬ್ಬನಾಗಿದಾನೆ. ಆಕಸ್ಮಿಕವಾಗಿ ಕಾಮಕ್ರೋಧಾದಿಗಳಿಂದ ತಪಸ್ಸನ್ನಾಚರಿಸಬಹುದೆಂದು ತಿಳಿದಿದ್ದನು ಎಂಬುದು ಆತನ ತಪೋವಿಧಾನ ವಿವರಣೆಯಿಂದ ತಿಳಿಯುತ್ತದೆ.

ಶಂಬೂಕನು ನಮ್ಮಂತೆ ನಮ್ಮ ಮಧ್ಯೆ ಇರುವ ನಮ್ಮ ಮಿತ್ರರಂತೆ ಬ್ರಾಹ್ಮಣ ಧರ್ಮಾನುಯಾಯಿಯಾದ ಮಾನವನು. ಶಂಬೂಕ ಎಂಬ ಮಾತ್ರಕ್ಕೆ ಯಾರಿಗೂ ಉದ್ವೇಗವಾಗುವ ಕಾರಣವಿಲ್ಲ. ರಾವಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಮೋಚ್ಚಾರಣೆ ಪರಿಚಯಗಳು ಮನೋವಿಕಾರವನ್ನುಂಟುಮಾಡಿದರೂ ನಮ್ಮವನಾಗಿ ವ್ಯತಿರೇಕ ದೃಷ್ಟಾಂತದಿಂದ ಕರ್ತವ್ಯಾಕರ್ತವ್ಯಗಳಲ್ಲಿ ಮಾರ್ಗದರ್ಶಕನಾಗಿರುವ ಮಹಾತ್ಮನೇ ಆಗಿರುತ್ತಾನೆ. ಹೀಗೆಯೇ ನಮ್ಮಂತೆ ಶಂಬೂಕನೂ ಮಹಾತ್ಮನಾಗಿರುತ್ತಾನೆ. ಎಲ್ಲಾ ಗುಂಪುಗಳಲ್ಲಿಯೂ ಶಂಬೂಕರು ಅಸಂಖ್ಯಾತವಾಗಿ ಇರುತ್ತಾರೆ. ಶಂಬೂಕತ್ವವು ಸರ್ವವ್ಯಾಪಿಯಾಗಿರುವ ಗುಣವೇ ಆದುದರಿಂದ ಶಂಬೂಕ ಮಾನವನ ವಿಚಾರವಾಗಿ ರಾಗದ್ವೇಷಾದಿಗಳಿಗೂ ವೃತ್ತಿದ್ವೇಷಾದಿಗಳಿಗೂ ಕಾರಣವಿರುವುದಿಲ್ಲ.

ಶಂಬೂಕನು ಧ್ಯೇಯಕ್ಕೆ ಉಚಿತವಾದ ದ್ವಿಜಸಂಸ್ಕಾರವಿಲ್ಲದೆ ಆಚರಿಸಿದ ಶ್ರೋತ್ರಿಯತ್ವ ಸಾಹಸದಲ್ಲಿ ಕಂಡುಬಂದ ಲೋಪಗಳಿಂದ ಅನಿಷ್ಟಪ್ರಾಪ್ತಿಯಾಯಿತೆಂದು ತಿಳಿಯಬೇಕು. ಇಂತಹ ಕ್ರಮಬದ್ಧತೆಯಿಲ್ಲದಿರಬಹುದಾದ ಸಾಹಸ ಕಾರ್ಯಗಳ ಮಿತಿಯನ್ನು ವ್ಯವಸ್ಥೆಗೊಳಿಸುವುದು ವಿಶೇಷ ಹೊಣೆಗಾರಿಕೆಯನ್ನು ಹೊತ್ತ ಕ್ಷತ್ರಿಯದ, ಶಾಸಕತ್ವದ ಕೆಲಸ ಮತ್ತು ರಾಜನೀತಿಯ ಮರ್ಯಾದೆ. ಆದುದರಿಂದಲೇ ರಾಜಶಾಸನವು ಸ್ವಕರ್ಮವನ್ನು ಆ ಕಥಾ ಸಂದರ್ಭದಲ್ಲಿ ತಿಳಿಸಿರುವಂತೆ ನಿರ್ವಾಹ ಮಾಡಿದೆ; ಶಾಂತಿ ಭಂಗಕ್ಕೆ ಸ್ವತಂತ್ರಿಸಿ ಆಚರಿಸುವ ಶ್ರೋತ್ರಿಯತ್ವವನ್ನು ತಡೆಗಟ್ಟಿರುತ್ತದೆ. ಈ ಸಂದರ್ಭದಲ್ಲಿ ಶಂಬೂಕ ಶೂದ್ರ, ಶ್ರೋತ್ರಿಯಾದಿಗಳ ಮಿತಿಯನ್ನೂ ಸಂಸ್ಕೃತಿ ಋಣ ಕರ್ಮ ಆಚಾರಗಳನ್ನೂ ವ್ಯಕ್ತ್ಯಾದಿ ಪಂಚ-ರಾಜ್ಯ ವಲಯಗಳ ರಹಸ್ಯವನ್ನೂ ತಿಳಿಯುವುದಕ್ಕೆ ಆವಶ್ಯಕವಾದ ಆವರಣಗಳನ್ನು ಹೊಂದಿರುವವರು ಶಂಬೂಕನನ್ನು ಪ್ರಿಯಾಪ್ರಿಯ ಮನೋವಿಕಾರಗಳಿಂದ ಭಾವಿಸುವುದಿಲ್ಲ.

ಶಂಬೂಕತ್ವವು ಸಮಾಜ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಲೋಕಕಲ್ಯಾಣಕ್ಕೆಂದು ದೇವತಾ ಶಕ್ತಿಗಳ ಸಾಮ್ಯವನ್ನು ಕ್ರಮಪಡಿಸುವುದಕ್ಕಾಗಿ ತತ್ತದ್ದೇವತಾ ಗುಣಶಕ್ತಿಕರ್ಮಗಳನ್ನುದ್ದೇಶಿಸಿ ಯಜ್ಞ ಮಂಟಪನೆಂಬ ಪ್ರಯೋಗಶಾಲೆಯಲ್ಲಿ ನಾನಾಬಗೆಯ ಮನೋಭಾವಾದಿಗಳನ್ನೂ ಶಾರೀರಕ-ಅಭ್ಯಾಸವನ್ನೂ ಹೊಂದಿರುವವರು ಕಾರ್ಯಾರಂಭ ಮಾಡಲು ವ್ಯವಸ್ಥೆಯಾಗುವುದು. ಆದರೂ ಅನುಸಂಧಾನಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದೇ ವಿಷಯವನ್ನು ಲಕ್ಷ್ಯವಾಗಿ ಉಳ್ಳ ಹಲವು ಜನರ ಶಾರೀರಕ ವರ್ತನೆ ಮನೋವರ್ತನೆಗಳು ಬೇರೆ ಬೇರೆಯಾಗಿರುವುದರಿಂದ ಲಕ್ಷ್ಯವು ಡೋಲಾಯಮಾನವಾಗಿ ಕುಸಿಯುವ ಸಂಭವವುಂಟು. ಹಲವು ಜನ ಅಡಿಗೆಯವರು ಸೇರಿ ಮಾಡುವ ಒಂದು ಪಾಕ-ಅಡಿಗೆಯು ಕೆಟ್ಟು ಹೋಗುವುದಿಲ್ಲವೆ! ಆದುದರಿಂದ ಅನಧಿಕಾರಸ್ಪರ್ಶ ದೋಷವು ಪ್ರಕಟವಾಗಿ ಶಂಬೂಕಸ್ವವೇ ಎದ್ದು ಕಾಣುವುದು. ಹಿತವು ಅಹಿತವಾಗಿ ಪರಿಣಮಿಸುವುದು.

ಫ್ರಾಂಕೆನ್‌ಸ್ಟೈನ್‌ನು ಶಾಸ್ತ್ರ ತತ್ವಾನ್ವೇಷಣದಲ್ಲಿ ಮುಳುಗಿ ಸೃಷ್ಟಿಸಿದ ಘೋರವ್ಯಕ್ತಿಯು ಮೃತ್ಯುವಾಯಿತು. ಹೀಗೆ ಋಗಾದಿಗಳಾದ ಪುರಾಣ ಕಲ್ಪೋಕ್ತಿಗಳಾದ ಪ್ರಯೋಗಗಳೆಲ್ಲವೂ ಅಥರ್ವಗಳಾಗಿ ಮೂರ್ತದ್ರವ್ಯಗಳಿಗೆ ಸಂಬಂಧಪಟ್ಟ ಸೈನ್ಸ್ ಲ್ಯಾಬೋರೇಟರಿಗಿಂತಲೂ ಅತ್ಯಂತ ಅತಿಶಯ ಫಲಕಾರಿಯಾದ ಅಮೂರ್ತ ದ್ರವ್ಯಗಳೊಡನೆ ಅನುಸಂಧಾನ ಮಾಡುವ ಯಾಗ ಪ್ರಯೋಗಶಾಲೆಯಲ್ಲಿ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ ಸಂಧಾನಗಳು ನಡೆಯಬಹುದು. ಚಕ್ರನೇಮಿ ಕ್ರಮದಂತೆ ನಿಯಮಪರಿಪಾಲನೆ ಮಾಡುವ ಶೂದ್ರವನ್ನು ವಿವಿಧವಾಗಿ ಪ್ರಯೋಗ ಕಾರ್ಯಗಳಲ್ಲಿ ಅನುಷ್ಠಾನಮಾಡುವುದರಿಂದ ಆಗುವ ಕ್ರಿಯೆ, ಪ್ರತಿಕ್ರಿಯೆ, ವಿಪ್ರತಿಕ್ರಿಯೆಗಳು ತಕ್ಕ ತಕ್ಕ ಫಲಗಳನ್ನು ತಾಳಿ ಫಲಶೂನ್ಯತೆಯಲ್ಲಾಗಲೀ, ವಿಫಲವಾಗಿಯಾಗಲೀ, ವಿರೋಧವಾಗಿಯಾಗಲೀ ಪರಿಣಮಿಸಬಹುದು. ಯಜ್ಞ ಪ್ರಯೋಗಗಳನ್ನು ನಡೆಸುವ ಶ್ರೋತ್ರಿಯ ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳಲ್ಲಿ ಉಚಿತವಾದ ದ್ವಿಜಸಂಸ್ಕಾರ (ಶಿಕ್ಷಣ) ಗಳನ್ನು ಹೊಂದಿ ಅಸಿಧಾರಾ ವ್ರತದಲ್ಲಿದ್ದುಕೊಂಡು ಇಂದ್ರಿಯಾತೀತ ದೇವತಾನುಸಂಧಾನಗಳಿಂದ ಶಾಂತಿದಾಯಕಗಳಾದ ದೇವಶಕ್ತಿಗಳ ಆಧಿಕ್ಯ ಸಾಮ್ಯಗಳಿಗೆ ಪ್ರಯತ್ನಪಡುವುದಕ್ಕೆ ತಿಳಿಯದೆ, ಪ್ರವೃತ್ತಿಯಿಲ್ಲದೆ ಇರುವಾಗ ಬಂಧನಾತಿಶಯಗಳಿಂದ ಬದ್ಧಮಾಡುವ ಉದ್ಯಮಗಳನ್ನು ಮೋಹಾವೇಶಕ್ಕೆ ಒಳಗಾಗಿ ಮಾಡುವುದಕ್ಕಿಂತಲೂ ವೈಯಕ್ತಿಕವಾಗಿ ಉಕ್ತ ಸಂಸ್ಕಾರಗಳನ್ನು ಅನುಸರಿಸಿ ಪ್ರಯೋಗಗಳನ್ನು ಸಾವಧಾನವಾಗಿ ಸೌಮ್ಯರೂಪದಲ್ಲಿ ನಡೆಸುವುದೇ ಮೇಲಾಗಿರುತ್ತದೆಂದು ಶಂಬೂಕ ಕಥಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂದರ್ಭದಿಂದ ತಿಳಿಯಬಹುದಾಗಿದೆ.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಃ ತಥಾ ಶೂದ್ರಾಃ ತೇಽಪಿ ಯಾಂತಿ ಪರಾಂ ಗತಿಂ ॥
ಕಿಂ ಪುನಃ ಬ್ರಾಹ್ಮಣಾಃ ಪುಣ್ಯಾಃ ಭಕ್ತಾಃ ರಾಜರ್ಷಯಸ್ತಥಾ ॥

ಗೀತಾ 9-32-33.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನ ಉಪದೇಶವಾಕ್ಯಗಳ ಸರಣಿಯಲ್ಲಿ ಮೇಲ್ಕಂಡ ಶ್ಲೋಕಗಳ ಮೂರು ಸಾಲುಗಳಲ್ಲಿ ಹೇಳಿರುವ ಪದಸಮೂಹ ಗಳನ್ನು ಹೊಂದಿಸಿಕೊಂಡು ಸರ್ವಹಿತವಾಗಿ ಸರ್ವಸಮನ್ವಯವಾಗು ವಂತೆ ವಿವರಿಸಬೇಕಾದುದು ವಿಶಾಲ ಪ್ರಪಂಚದ ಪ್ರಜೆಗಳ ಕರ್ತವ್ಯ.

ಪಾಪಯೋನಯಃ ಎಂಬ ಶಬ್ದವು ಯಾವುದೊಂದು ಬಗೆಯ ಗುಣಕರ್ಮದವರನ್ನು (ವರ್ಣದವರನ್ನು) ವಿಶೇಷಿಸಿ ಹೇಳುವುದು ಎಂದು ತಿಳಿಯಬಾರದು. ಅಥವಾ ಪಾಪಯೋನಯಃ ಎಂಬುದು ಒಂದು ಬಗೆಯ ಗುಣಕರ್ಮದವರನ್ನು ಪ್ರತ್ಯೇಕಿಸಿ ಹೇಳುವುದೆಂದರೆ ಬ್ರಾಹ್ಮಣಧರ್ಮದ ತತ್ವಕ್ಕೆ ವಿರೋಧವಾಗುವುದರಿಂದ ಅದನ್ನು ಆದರಿಸಲಾಗುವುದಿಲ್ಲ. ಪಾಪಯೋನಯಃ ಎಂದರೆ ಪಾಪಕ್ಕೆ ಕಾರಣರು ; ಪಾಪ ಕೆಲಸ ಮಾಡು ವವರು ಎಂದು ಸಾಮಾನ್ಯವಾದ ಅರ್ಥ. ಪಾಪ ವಿಶಿಷ್ಟವಾದ ಜನ್ಮವುಳ್ಳ ವರು ಪಾಪಯೋನಯಃ ಎಂದು ವಾದಿಸುವುದು ಔದ್ಧತ್ಯವೆನಿಸುವುದು. ಬ್ರಾಹ್ಮಣಾಚಾರದ ಕಟ್ಟಡದ ಅಸ್ತಿಭಾರವೇ ಸಡಿಲವಾಗುವುದು.

ಪಾಪಯೋನಯಃ ವೈಶ್ಯಾಃ ಸ್ತ್ರಿಯಃ ಶೂದ್ರಾಃ ಎಂದು ಒಂದು ಶ್ಲೋಕದಲ್ಲಿ ಪ್ರತ್ಯೇಕವಾಗಿ ಉಡಕ ಮಾಡಿರುತ್ತಾರೆಂಬುವರಿಗೆ ಪುಣ್ಯಾಃ ಭಕ್ತಾಃ ಎಂಬ ಶ್ಲೋಕ ಭಾಗದ ಸಂಬಂಧವೇ ಇಲ್ಲವೆಂಬುದೂ ಅನುಭವ ಕ್ಕೆ ವಿರೋಧವಾಗುವುದರಿಂದ ಆಚಾರ – ವ್ಯವಹಾರ ಪ್ರಪಂಚಗಳು ಒಪ್ಪಲಾರವು.

'ಪುಣ್ಯಾಃ ಭಕ್ತಾಃ' ಎಂಬ ಶಬ್ದಗಳನ್ನು 'ಬ್ರಾಹ್ಮಣಾಃ ರಾಜರ್ಷಯಃ' ಎಂಬ ಶಬ್ದಗಳಿಗೆ ಮಾತ್ರ ಪ್ರತ್ಯೇಕವಾದ ವಿಶೇಷಣ ಗಳೆಂದು ಭಾವಿಸುವುದು ಅಪ್ರಕೃತ ಮತ್ತು ಅಸಮಂಜಸ. ರಾಜರ್ಷಿ ಶಬ್ದದ ಅರ್ಥಕ್ಕಿಂತ ಹೆಚ್ಚಿನ ಅರ್ಥವನ್ನು ಭಕ್ತಾಃ ಪುಣ್ಯಾಃ ಎಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷಣ ಶಬ್ದಗಳ ಅರ್ಥ ವಿವೇಚನೆಯಲ್ಲಿರುವ ಈ ವಿಧವಾದ ಕೊರತೆಗಳಿಗೆ ಅವಕಾಶವಾಗುವಂತೆ ತಿಳಿಯುವುದನ್ನು ಈ ಪ್ರಕರಣವು ಅನುಮೋದಿಸುವುದಿಲ್ಲ, ಸೂಚಿಸುವುದೂ ಇಲ್ಲ.

ಕೈಮುತಿಕ ನ್ಯಾಯವನ್ನು ಸೂಚಿಸುವ "ಕಿಂ ಪುನಃ" ಶಬ್ದಗಳು ಈ ಸಂದರ್ಭದಲ್ಲಿ ಉದಾಹರಿಸಿದ ಸರ್ವರನ್ನೂ ಗಣನೆಗೆ ತೆಗೆದುಕೊಂಡು ಹೋಲಿಕೆ ವ್ಯತ್ಯಾಸಗಳನ್ನು ತಿಳಿಸುವುವು.

ರಾಜರ್ಷಿಗಳಾದರೂ ಬ್ರಾಹ್ಮಣ (ಶ್ರೋತ್ರಿಯ)ರಾದರೂ ಪಾಪಕ್ಕೆ ಕಾರಣರಾಗದೆ ಜೀವಾವಧಿ ಜೀವನಯಜ್ಞವನ್ನು ಸಾಗಿಸುತ್ತಾರೆಂದು ಯಾರೂ ಪ್ರಮಾಣೀಕರಿಸಿ ಪ್ರಶಸ್ತಿ ವಚನವನ್ನು ಕೊಡಲಾರರು. ಅಥವಾ ರಾಜರ್ಷಿಗಳಾದರೂ ಶ್ರೋತ್ರಿಯರು ಪಾಪಕರ್ಮ ಮಾಡಿದರೂ ಪಾಪಕರ್ಮ ಮಾಡಿದವರಂತೆ ಪರಿಗಣಿಸಲ್ಪಡಲಾರರು ಎಂದು ಒಪ್ಪಿಗೆ ವಚನ (ಲೈಸೆನ್ಸ್) ಕೊಡುವುದಕ್ಕೆ ಯಾರೂ ಸಮರ್ಥರಲ್ಲ.

ವೈಶ್ಯ ಮತ್ತು ಶೂದ್ರವನ್ನು ಆಚರಿಸುವವರೂ ಸ್ತ್ರೀಯರೂ ಸಹ ಪುಣ್ಯಾಃ ಭಕ್ತಾಃ ಎಂಬ ಶಬ್ದಗಳು ಸೂಚಿಸುವ ಅರ್ಥದ ಪರಿಮಿತಿಯಲ್ಲಿ ಬರತಕ್ಕವರೇ ಅಲ್ಲ.— ಎಂದು ಹೇಳುವ ಸಾಹಸವೂ ಧಾರ್ಷ್ಟ್ಯವೂ ಮಾನವತೆಗಿಂತ ಕೀಳು ಮಟ್ಟದ್ದಾಗುವುವು.

ಸ್ತ್ರೀಯರು ಎಂದು ಪ್ರತ್ಯೇಕವಾಗಿ ಹೇಳಿರುವುದರಿಂದ ಪಂಚವರ್ಣಗಳನ್ನಾಚರಿಸುವ ಪ್ರಜೆಗಳಲ್ಲಿ ಸ್ತ್ರೀ ವರ್ಗದವರು ಎಂದು ಅರ್ಥವಾಗಬೇಕು. ಸಾಮಾನ್ಯವಾಗಿ ಧರ್ಮ ಶಾಸ್ತ್ರಗಳಲ್ಲಿ ಶಬ್ದ ಪ್ರಯೋಗಗಳ ಸೂಚನೆಗಳೂ ಶಾಸ್ತ್ರವಚನಗಳೂ, ವಿಧಿವಚನಗಳೂ ಪುರುಷರಿಗೆ ಮಾತ್ರ ಅಥವಾ ಸ್ತ್ರೀಯರಿಗೆ ಮಾತ್ರ ಅನ್ವಯಿಸುವಂತೆ ತೋರಿಬರುವ ದೋಷದ ಛಾಯೆಯಿಂದ ಕೂಡಿರುತ್ತವೆ. ಅಂತಹ ಸಂದೇಹಕ್ಕೆ ಅವಕಾಶವಾಗದೆ ಸ್ತ್ರೀಯರನ್ನೂ ಉದ್ದೇಶಿಸಿ ಹೇಳುವುದಕ್ಕಾಗಿ 'ಸ್ತ್ರಿಯಃ' ಎಂಬ ಶಬ್ದವನ್ನು ಪ್ರತ್ಯೇಕವಾಗಿ ಸೇರಿಸಲಾಗಿದೆ.

ಸ್ತ್ರೀಯರು ಸಾಮಾನ್ಯವಾಗಿ ಪತಿಯ ಅನುವರ್ತನೆಯಲ್ಲಿರುವುದರಿಂದ ಅವರಿಗೆ ಸ್ವಂತವಾದ ಸ್ವತಂತ್ರ ಹೊಣೆಗಾರಿಕೆಯು ಇರುವುದಿಲ್ಲವೆಂದು ತೋರಿ ಯೋಚಿಸಿ ಅಂತಹವರು ಸಾಕ್ಷಾತ್ತಾಗಿ 'ಮಾಂ ಹಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾರ್ಥ ವ್ಯಪಾಶ್ರಿತ್ಯ' ಎಂಬಂತೆ ಆಶ್ರಯಕ್ಕೆ ಯತ್ನಿಸಲಾಗದು. ಎಂಬ ಸಂಕುಚಿತ ಭಾವನೆಗಳು ಇರಕೂಡದು. ಪತಿ ಸಮೇತ ಇರುವ ಸ್ತ್ರೀಯರಾಗಲೀ ಪತಿ ವಿಯೋಗವನ್ನು ಹೊಂದಿದವರಾಗಲೀ ಸರ್ವಾಂತರ್ಯಾಮಿಯಾಗಿ ಪತಿಯಲ್ಲಿಯೂ ನೆಲಸಿದವನಾಗಿರುವ ಭಗವಂತನನ್ನೇ (ಪರತತ್ವವನ್ನೇ) ಆಶ್ರಯ ಮಾಡುವವರಾಗಿರುತ್ತಾರೆ.

'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ಎಂಬಂತೆ ಆತ್ಮಭಾವನೆಯಿಂದ ಬಿಡಲ್ಪಟ್ಟ ವಸ್ತುವಾ ಆಲೋಚನೆ ಉಪಾದೇಯವಲ್ಲವಾಗಿರುತ್ತದೆ. ಆದುದರಿಂದ ಪತಿ ಸೇವಾ ನಿರತರಾಗಲೀ ಸ್ವಾಮಿಸೇವಾನಿರತರಾಗಲೀ ಭೃತ್ಯರಾಗಲೀ ಪರೋಕ್ಷವಾಗಿ ಅಥವಾ ಸಾಕ್ಷಾತ್ತಾಗಿ ಪರಮಾತ್ಮನನ್ನು ಭಜಿಸುವವರೇ ಆಗಿರುತ್ತಾರೆ.

ಹೀಗೆ ಪರಮಾತ್ಮ ಭಜಕರೂ ಪುಣ್ಯಶಾಲಿಗಳೂ ಭಕ್ತರೂ ಆದ ಸ್ತ್ರೀಯರೂ, ವೈಶ್ಯರೂ, ಶೂದ್ರರೂ, ಬ್ರಾಹ್ಮಣ (ಶ್ರೋತ್ರಿಯ) ರೂ ರಾಜರ್ಷಿಗಳೂ ಆಕಸ್ಮಿಕವಾಗಿ ಋತ ವಿರೋಧವಾದ ಪಾಪಕಾರ್ಯವನ್ನೆಸಗಿ ಪಾಪ ಬಂಧನಕ್ಕೆ ಕಾರಣರಾಗುವ ಸಂದರ್ಭವುಂಟಾದಾಗ ಪರಮಾತ್ಮನನ್ನು ಆಶ್ರಯಿಸಿ ಕ್ಷಮೆಯನ್ನು ಬೇಡುವುದರ ಮೂಲಕ ದುಷ್ಕರ್ಮಫಲವನ್ನು ತಪ್ಪಿಸಿಕೊಂಡು ಉತ್ತಮಗತಿಯನ್ನು ಪಡೆಯುತ್ತಾರೆ.

ಪರಮಾತ್ಮ ಭಜನೆಯೇ ಸರ್ವರಿಗೂ ಆಶ್ವಾಸನವನ್ನೂ ಅಭಯವನ್ನೂ ಕೊಡುವ ಈ ವಿಚಾರವನ್ನು ಗೀತಾ 9 ನೇ ಅಧ್ಯಾಯದ 32-33 ನೇ ಶ್ಲೋಕಗಳ 3 ಸಾಲುಗಳಲ್ಲಿ ಹೇಳಿರುವ ಪದ ಸಮೂಹಗಳು ಸ್ಪಷ್ಟವಾಗಿಯೂ ನಿರ್ದಿಷ್ಟವಾಗಿಯೂ ಸಂದೇಹಕ್ಕೆ ಅವಕಾಶವು ಲೇಶವೂ ಇಲ್ಲದಂತೆಯೂ ತಿಳಿಸಿರುವುವು.*

---

* ಈ ವಿಷಯವು ಸಂಪುಟೀಕೃತ ಭಗವದ್ಗೀತಾ ಗ್ರಂಥದ 65 ನೇ ಪುಟದಲ್ಲಿ ಸೇರಿಸಿರುವ ಶ್ಲೋಕಗಳಲ್ಲಿಯೂ ಅವುಗಳ ಅನುವಾದ ಸರಣಿಯಲ್ಲಿ ಮತ್ತು ಟಿಪ್ಪಣಿಯಲ್ಲಿ (ಪು 189-190) ವಿವರಿಸಲ್ಪಟ್ಟಿದೆ. ಸಂಪುಟೀಕರಣ ಕ್ರಮದಲ್ಲಿ ಬರೆದಿರುವ ಈ ಗ್ರಂಥವು ಅನೇಕ ಗೀತಾರ್ಥ ಸಮಸ್ಯೆಗಳನ್ನು ಪರಿಹರಿಸಿ ತತ್ವವು ಸ್ಪಷ್ಟವಾಗಿ ತಾನಾಗಿಯೇ ಬೋಧೆಯಾಗುವಂತೆ ಮಾಡುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಸ್ಯುಃ' ಎಂಬ ಕ್ರಿಯಾಪದವು "ಆಗಬಹುದು" ಎಂಬ ಸಂಭವ ವಿಚಾರವನ್ನು ಸೂಚಿಸುವುದರಿಂದ ಆಕಸ್ಮಿಕವಾಗಿ ಪಾಪ ಕಾರಣವಾಗುವ ಸಂದರ್ಭವುಂಟಾದಾಗ ಎಂದು ಹೇಳುವುದೇ ಹೊರತು ವರ್ತಮಾನಕಾಲ ಕ್ರಿಯಾಪದದಂತೆ ನಿರ್ದಿಷ್ಟವಾಗಿ ಕ್ರಿಯೆ ನಡೆದ ವಿಚಾರವನ್ನು ಒತ್ತಿ ಹೇಳತಕ್ಕುದಾಗಿಲ್ಲ.

ರಾಜನೀತಿ ಜ್ಞಾನದಿಂದ ಪರಿಪಾಕವನ್ನು ಹೊಂದಿದ ಪ್ರಪಂಚಾನುಭವವುಳ್ಳ ಮಾನವರೆನಿಸಿಕೊಳ್ಳುವವರು ಮಾನವೀಯತೆಯ ಮಹಿಮೆಯನ್ನು ಮನಸ್ಸಿಗೆ ತಂದು ಕೊಳ್ಳಬೇಕು. ಈ ಬಗೆಯ ಉದಾರಭಾವದಿಂದ ವಸ್ತುಗಳ ಮತ್ತು ಪಾತ್ರಗಳ ಗುಣಗ್ರಹಣಮಾಡಲು ಸಾಮರ್ಥ್ಯವುಂಟಾಗುವುದು. ಸಂಕುಚಿತ ಭಾವನೆಗಳಿಂದ ವಸ್ತುಗಳ ಮತ್ತು ಪಾತ್ರಗಳ ಮೇಲೆ ಆಧಾರ ರಹಿತವಾದ ದೋಷಾರೋಪಣೆಗಳನ್ನು ವೃಥಾ ಮಾಡುವುದರಿಂದ ಅಂತಹ ವಿಮರ್ಶಕರ ಕುಹಕ ಕುತಂತ್ರ ಮನೋಭಾವನೆಗಳೇ ಹೊರಪಟ್ಟಂತಾಗುವುವು. ಆದುದರಿಂದ ವಿಶ್ವದ ನಾನಾ ಮೂಲೆಗಳಲ್ಲಿ ಭಗವದ್ವಿಲಾಸ ಸೃಷ್ಟಿ ವೈಚಿತ್ರ್ಯ ಮೊದಲಾದುವುಗಳನ್ನು ಮನಶ್ಶಾಸ್ತ್ರ ಸಂಸ್ಕೃತಿ ಮೊದಲಾದ ವಿವಿಧ ಸೋಪಾನಗಳ ಮಿತಿಯಲ್ಲಿ ಜನತೆಯು ಋಣಾನುಭವಕ್ಕೆ ವಶವಾಗುವ ವಿಚಾರವನ್ನು ತಿಳಿದು ವಿಮರ್ಶಕರು ಸಮದರ್ಶಿಗಳಾಗಿ ಸಮಂಜಸವಾದ ಅರ್ಥ ವಿವರಣೆಗೆ ಯತ್ನಿಸಬೇಕಾಗಿದೆ.

ವೇದವಾಙ್ಮಯದಲ್ಲಿ ಕಂಡ ದಾಸ, ದಸ್ಯು ಶಬ್ದಗಳನ್ನು ನಿಕೃಷ್ಟವಾಗಿ ಭಾವಿಸಿ ಜನತೆಯಲ್ಲಿ ದುರ್ಭಾವನೆಯುಂಟಾಗುವಂತೆ ಚರಿತ್ರಕಾರರು ವರ್ಣಿಸಿದಾರೆ. ದಾಸ ಶಬ್ದದ ಪವಿತ್ರತೆಯೂ ಗೌರವವೂ ಪೂಜ್ಯತೆಯೂ ಸಹ ತುಲಸೀದಾಸ, ರಾಮದಾಸ, ಕಬೀರದಾಸ, ವಿಷ್ಣುದಾಸ, ಪುರಂದರದಾಸ, ಕನಕದಾಸ ಮೊದಲಾದ ವಿಭೂತಿ ಪುರುಷರ ಅಂಕಿತನಾಮಗಳಿಂದ ರಾಷ್ಟ್ರೀಯ ಜನಕ್ಕೆಗೆ ವ್ಯಕ್ತವಾಗುವುವು.

ಅಸುರಕ್ಕೆ ಸಂಬಂಧಪಟ್ಟ ಗುಣಕರ್ಮ ಮತ್ತು ಶಕ್ತಿಗಳೇ 'ದಸ್ಯು' ಶಬ್ದಾರ್ಥಕ್ಕೆ ಹೊಂದಿಕೊಂಡಿವೆ. ಕರ್ತವ್ಯ ಕರ್ಮವನ್ನು ನೆರವೇರಿಸದವರೂ ಸ್ತೇನಾದಿಗಳೂ, ದಸ್ಯುಗಳೆಂದು ಹೇಳಲ್ಪಡುತ್ತಾರೆ. ಅವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಾನ ಮಾನಗಳೂ ಸ್ಪಷ್ಟವಾಗಿರುತ್ತವೆ. (ಸ್ವ.ವಿ. ಪುಟ 82 ನೋಡಿ)

ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳ ರಾಜ್ಯವಲಯಗಳಲ್ಲಿ ಶ್ರೋತ್ರಿಯತ್ವ ವಿಶೇಷ ಹೊಣೆಗಾರಿಕೆಯ ಸ್ತ್ರೀಯರೂ ಶೂದ್ರತ್ವ ವಿಶೇಷ ಹೊಣೆಗಾರಿಕೆಯ ಪುರುಷರೂ ಪ್ರಕೃತಿ ಸನ್ನಿವೇಶಗಳಿಗೆ ಮನಸೋತು ಇಚ್ಛೆಯಿಂದಲೋ ಅಥವಾ ಬಲಾತ್ಕಾರವಾಗಿಯೋ ಅವರಾಗಿ ಋಣವನ್ನು ಕಲ್ಪಿಸಿಕೊಂಡು ಅಥವಾ ಋಣಾನುಬಂಧಾನುಸಾರವಾಗಿ ಪರಸ್ಪರ ಸಮಾಗಮವನ್ನು ಹೊಂದಿದಾಗ ಉಂಟಾಗುವ ಜನ್ಮ ಮತ್ತು ಸಂಪರ್ಕಗಳು ಸನ್ಮಾರ್ಗಚ್ಯುತಿಯನ್ನು ಸೂಚಿಸುವುದರಿಂದ ಸಾಮಾನ್ಯರ ದೃಷ್ಟಿಯಿಂದ ದಾರುಣವಾಗಿಯೂ ಜುಗುಪ್ಸೆಯನ್ನುಂಟುಮಾಡುವುದಾಗಿಯೂ ಸಾಹಸವನ್ನು ಪ್ರಕಾಶಪಡಿಸುವುದಾಗಿಯೂ ಇರುತ್ತವೆ. ಇವು ಚಂಡಾಲ ಶಬ್ದಾರ್ಥಕ್ಕೆ ಹೊಂದಿಕೊಂಡಂತಿರುವುದರಿಂದ ಚಂಡಾಲ ಶಬ್ದದಿಂದ ಈ ಸನ್ನಿವೇಶ ಸ್ಥಿತಿಯನ್ನು ವ್ಯಕ್ತಪಡಿಸಿರುತ್ತಾರೆ.

ಜೀವರ ವಾಸನಾನುಗುಣವಾಗಿ ಬಂದ ಚಂಡಾಲ ಗುಣ ಕರ್ಮ ಶಕ್ತಿಗಳು ಮಹತ್ವಪೂರಿತವಾದವುಗಳಾಗಿರುತ್ತವೆ. ಅಲ್ಲದೆ ಚಂಡಾಲ ಪದ ಸೂಚಕವಾದ ಕಾರ್ಯವು ಸಂಸ್ಕೃತಿ, ಸಮಾಜ, ರಾಷ್ಟ್ರಗಳ ಉನ್ನತ ನಿರ್ವಾಹಕ್ಕೆ ಅತ್ಯವಶ್ಯಕವಾದ ಅವಕಾಶವನ್ನು ಹೊಂದಿ ವರ್ಣ ನಿಯಮಗಳ ಕಟ್ಟಿಗೆ ಒಳಪಡದಂತಿರುತ್ತದೆ ಇದು ವೈಯಕ್ತಿಕವಾದುದು.

ಚಂಡಾಲ ಶಬ್ದಾರ್ಥವು ಅತ್ಯವಶ್ಯಕತಾಪೂರ್ತಿಕೆಯ ಸಾಹಸವನ್ನು ಸೂಚಿಸಿ ಸ್ವಾಗತಿಸಲ್ಪಡುವುದಾದರೂ ಭಯಂಕರವೂ ಅದ್ಭುತವೂ ಆದ ಭಾವನೆಗಳನ್ನು ಉಂಟುಮಾಡಬಹುದು. ನಿರ್ಮೂಲೀಕರಣ, ಶತ್ರು ಧ್ವಂಸನ ಅಥವಾ ಹನನ ಮೊದಲಾದ ಭಯಂಕರವೂ ಅಸಹ್ಯವೂ ಆಗಿರುವ ಕಾರ್ಯಗಳ ನಿರ್ವಾಹಕ್ಕೆ ಮನಸ್ಸನ್ನು ದೃಢಪಡಿಸಿ ಬಲಿಗೊಡುವುದೇ ಪವಿತ್ರವಾದ ಚಂಡಾಲತ್ವವು. ಇದು ನಿಷಾದತ್ವದಲ್ಲಿ ಅಡಕವಾಗಿ ಆಕಸ್ಮಿಕಗಳ ನಿವಾರಣೆ-ವಾ-ಪರಿಹಾರಕ್ಕೆ ಸಹಾಯ ಮಾಡಲು ಕಾದು ಸಿದ್ಧವಾಗಿರುವ ಕರ್ತವ್ಯವನ್ನು ನಿರ್ವಹಿಸುವುದಾಗಿದೆ ಮತ್ತು ಸರ್ವ ಪ್ರಜೆಗಳಿಗೂ ಸಂಬಂಧಪಟ್ಟುದಾಗಿದೆ. ಇಂತಹ ಪ್ರಜೆಗಳು ಅನೇಕ ಸಂಖ್ಯೆಯಲ್ಲಿ ವಿಶ್ವವನ್ನೆಲ್ಲಾ ವ್ಯಾಪಿಸಿರುವರು. ವಿಶ್ವದಲ್ಲಿ ಸೃಷ್ಟಿಸ್ಥಿತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಯಗಳಿಗೆ ಇಂತಹವರ ಸಾನ್ನಿಧ್ಯಸೇವೆಗಳು ಸಮಯೋಚಿತವೂ ಅತ್ಯವಶ್ಯಕವೂ ಆದ ಸಹಾಯಕಗಳಾಗಿವೆ. ಆತ್ಮಹತ್ಯೆ, ಮುಷ್ಕರ ಮೊದಲಾದ ಆತತಾಯಿಗಳ ವಿನಾಶಕಾರ್ಯಗಳು ಪ್ರಕೃತಿ ವಿರೋಧ ಗಳಾಗಿ ದುಷ್ಟ ಫಲಕಾರಿಗಳಾಗುವುವು. ಆದುದರಿಂದ ಬಾಹ್ಯದಲ್ಲಿ ಚಂಡಾಲತ್ವದ ಹೋಲಿಕೆಯಿದ್ದರೂ ಚಂಡಾಲತ್ವದ ಗುಣಗಳಿಲ್ಲದಿರುವು ದರಿಂದ ಆ ಹೀನಕೃತ್ಯಗಳು ಹೇಯವಾದುವುಗಳಾಗಿವೆ.

ಚಂಡಾಲತ್ವವು ಪವಿತ್ರತೆ, ಉಪಕಾರ, ಉನ್ನತಿ ಮೊದಲಾದ ದೇವಗುಣಕರ್ಮಶಕ್ತಿಗಳಿಗೆ ಸಂಬಂಧಿಸಿರುವುದೆಂದು ಶ್ರೀ ದತ್ತಾತ್ರೇಯ ಗುರುಭಗವಂತನ ಲೀಲೆಯಿಂದ ತಿಳಿಯಬರುವುದು. ಇಂದ್ರಾದಿ ತ್ರಯ ಸ್ತ್ರಿಂಶತ್ಕೋಟಿ ದೇವಗುಣಕರ್ಮಶಕ್ತಿಗಳಲ್ಲಿ ಪರಿಗಣಿಸಲ್ಪಡುವ ರಹಸ್ಯವು ವೀರಬಾಹು ನಾಮರೂಪಕ್ಕೆ ಮೂಲವಾದ ಯಮತತ್ವದಿಂದ ಸ್ಪಷ್ಟವಾಗುವುದು.

ದೇಹಿಯಾದ ಆತ್ಮನ ಅವಸ್ಥಾವಿಶೇಷವಾದ ಚಂಡಾಲತ್ವವು ತಿರಸ್ಕಾರಕ್ಕೆ ಪಾತ್ರವಲ್ಲವೆಂಬ ಅರಿವು ಚಂಡಾಲ ವೇಷಧಾರಿಯಾದ ಪರಶಿವನಿಂದ ಶ್ರೀ ಶಂಕರ ಭಗವತ್ಪೂಜ್ಯಪಾದರಿಗೆ ಉಂಟಾಯಿತು. ಚಂಡಾಲವೇಷಕರ್ಮದವರೂ ಆತ್ಮಜ್ಞಾನಿಗಳಾದ ಗುರುಗಳಾಗಿ ಪೂಜ್ಯರೆಂಬುದು ಮನೀಷಾಪಂಚಕ ಸ್ತೋತ್ರದ ಮೂಲಕ ಜಗತ್ತಿಗೆಲ್ಲಾ ವೇದ್ಯವಾಗಿರುತ್ತದೆ. ('ಜಡ್ಜ್‌ಮೆಂಟ್' ಪುಟ 38 ; 48–52 ನೋಡಿ) ಚಂಡ, ಚಂಡೀಶ್ವರ, ಚಂಡಿಕಾ ಮೊದಲಾದ ಭಗವನ್ನಾಮಗಳಲ್ಲಿ ಆಸಕ್ತರಾಗಿದ್ದು ಚಂಡಾಲ ಶಬ್ದಶ್ರವಣ ಮಾತ್ರದಿಂದ ಮನಃ ಕಿಂಕೃತಿ ಗೊಳ್ಳುವವರು ಮನುವುಳ್ಳ ಮಾನವರ ಮಾನವೀಯತೆಗೆ ಕಳಂಕ ಪ್ರಾಯರೇ ಸರಿ. ಶರೀರದಲ್ಲಿ ತಲೆಯ ಮಿದುಳಿನ ಅತ್ಯುನ್ನತಸ್ಥಾನವೂ ದೊಡ್ಡ ಕರುಳಿನ ಅಂತ್ಯಭಾಗವೂ ಪರಸ್ಪರ ಸಮಾನಗಳಾಗಿ ಶ್ರೇಷ್ಠ ವಾಗಿದ್ದು ಪ್ರಾಣ ಸಂಚಾರಕ್ಕೆ ಅವಕಾಶ ಕೊಡುತ್ತವೆ. ನ್ಯೂನತಾಧಿಕ್ಯ ವಿಷಯಗಳನ್ನು ಎತ್ತಿ ಯಾವುದನ್ನು ತಿರಸ್ಕರಿಸಿದರೂ ಪ್ರಾಣಾಪಾಯವು ತಲೆದೋರುವುದನ್ನು ಗಮನಿಸಿ ಎಚ್ಚೆತ್ತುಕೊಳ್ಳಬೇಕಾಗಿದೆ.

ಯಾವ ಭೌತ, ರಸಾಯನಾದಿ ಶಾಸ್ತ್ರಜ್ಞನೂ ಉಪಿಸಾಡುತ್ತಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನ್ನ ಶರೀರದಲ್ಲಿ ನಡೆಯುವ 33 ಕೋಟಿ ಗುಣಕರ್ಮಶಕ್ತಿವ್ಯಾಪಾರ ಗಳನ್ನು ತಿಳಿಯಲಾರನು. ಇದರಿಂದಲೇ ವಿಜ್ಞಾನವು ಮುಖಕ್ಕೆ ಮುಸುಕುಹಾಕಿಕೊಂಡು ಸೋಲನ್ನು ಒಪ್ಪಿಕೊಳ್ಳಬೇಕು.

ಈ ವ್ಯಾಪಾರಗಳನ್ನು ಜೀವಂತವಾಗಿರುವಾಗ ಅಂತಃ ಮತ್ತು ಬ್ರಹ್ಮಾಂಡಗಳಲ್ಲಿ ಸಾಕ್ಷಾತ್ಕರಿಸಿ ವಿವರಿಸಿ ಹೇಳುವ ದಿವ್ಯಚಿತ್ತ ದಿವ್ಯ ದೃಷ್ಟಿ- ಇತ್ಯಾದಿ ಶಕ್ತಿಗಳು ಬ್ರಾಹ್ಮಣ ದೇಹದ ಬ್ರಾಹ್ಮಣಧರ್ಮಾನು ಯಾಯಿಯಾದ ಯೋಗೀಶ್ವರನಿಗೆ ಮಾತ್ರ ಸರ್ವಸಾಧಾರಣವಾಗಿರುವುವು

ಸೌರವ್ಯೂಹದಲ್ಲಿ ಚಂಡಾಲರೆಂದು ವರ್ಣಿಸಲ್ಪಡುವ ರಾಹು ಕೇತುಗಳೆಂಬ ಛಾಯಾ ಗ್ರಹಗಳು ನಕ್ಷತ್ರ ಮಂಡಲ ಮತ್ತು ಗ್ರಹ ಮಂಡಲಗಳನ್ನು ಧರಿಸಿರುವುವು.

ಶ್ರೋತ್ರಿಯತ್ವವೇ ಮೊದಲಾದ ಅದ್ಭುತ ವ್ಯಾಪಾರಗಳಿಂದ ನಿಬಿಡವಾದ ಪಿಂಡಾಂಡದಲ್ಲಿ ಮಲಕ್ಕೆ ಸಂಬಂಧಪಟ್ಟ ಭಾಗವು ಚಂಡಾಲ ಕರ್ಮದ ಆಧಿಪತ್ಯಕ್ಕೆ ಸೇರಿರುವುದರಿಂದ ದೇಹಿಗಳೆಲ್ಲರೂ ಈ ಬಗೆಯ ಸಂಪರ್ಕವನ್ನು ನಿತ್ಯವಾಗಿ ಹೊಂದಿರುತ್ತಾರೆ. ತರುಸಸ್ಯ ಕ್ರಿಮಿಕೀಟಗಳಿಗೂ ಇದು ಅನ್ವಯವಾಗುವುದು.

ಅಶುಚಿ ಅಸಹ್ಯಗಳಾದ ಮಲವನ್ನೂ ಕೊಳೆತು ನಾರುವ ಕಲ್ಮಷ ಗಳನ್ನೂ ವ್ರಣರೋಗಗಳನ್ನೂ ವಿನಾಶಕ ಶತ್ರುಗಳನ್ನೂ ಪರಿಹರಿಸಲು ಅಥವಾ ನಿವಾರಿಸಲು ಶ್ರೇಷ್ಠವಾದ ಚಂಡಾಲ ಕರ್ಮವನ್ನು ಕೈಗೊಳ್ಳ ಬೇಕು. ಅನಾರೋಗ್ಯ ಮೊದಲಾದ ಶಾರೀರಕ ಮಾನಸಿಕ ಬಾಧೆಗಳು ಉಂಟಾಗದಂತೆ ಜನನೇಂದ್ರಿಯದ ಶುದ್ಧಿಗಾಗಿ ರಜಸ್ವಲೆಯರು ಚಂಡಾ ಲತ್ವವನ್ನು ಆರೋಪಿಸಿಕೊಳ್ಳುತ್ತಾರೆ. (ವೇ|| ಬ್ರ|| ಶ್ರೀ ಕೋಡೂರು ಶಾಮಭಟ್ಟರ ನುಡಿ. ಬ್ರಾ. ಧ. ಪುಟ 15 ಟಿಪ್ಪಣಿ ನೋಡಿ) ಮತ್ತು (ಶುಚಿ) ಮಡಿ, ಮೈಲಿಗೆ, ಕೊಳೆ, ಅಶುಚಿ, ಕಲ್ಮಷ, ಸೂತಕ ಮೊದ ಲಾದ ಕಲ್ಪನೆಗಳು ದೇಹಿಗಳ ಶರೀರ, ಮನಸ್ಸು ಮತ್ತು ಇಂದ್ರಿಯಗಳ ಆರೋಗ್ಯಕ್ಕೂ ಜಗತ್ತಿನ ಯೋಗಕ್ಷೇಮಕ್ಕೂ ಸಂಬಂಧಪಟ್ಟಿರುತ್ತವೆ. ಅಶುಚಿಯ ಸೂಕ್ಷ್ಮಾಣುಗಳ ಸಂಪರ್ಕದಿಂದ ರೋಗಾಣುಗಳು ಉಂಟಾ ಗುವುವು. ಈ ತತ್ವಕ್ಕನುಗುಣವಾಗಿ ಶೌಚ ವಿಧಾನ, ಅಘ ನಿರ್ಣಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಶೌಚ ನಿರ್ಣಯ ಗ್ರಂಥಗಳು ರಚಿತವಾಗಿವೆ. ಆದರೆ ವಿಶ್ವದಲ್ಲಿ ಪವಿತ್ರ, ಅಪವಿತ್ರಗಳೆಂಬ ವಿಂಗಡಣೆ ಇರುವುದಿಲ್ಲವೆಂದು ಪರಮಾತ್ಮ ತತ್ವವಿದರು ಮನಗಂಡಿರುತ್ತಾರೆ. ಜನ ಸಮುದಾಯ, ವ್ಯಕ್ತಿವೈಶಿಷ್ಟ್ಯ ಮೊದಲಾದ 'ಅವಶ'ಗಳಾದ ಸನ್ನಿವೇಶಗಳಲ್ಲಿ ಮೈಲಿಗೆ ಪ್ರಶ್ನೆಯು ಉದ್ಭವಿಸುವುದಿಲ್ಲವೆಂದು ಘೋಷಿಸಿರುತ್ತಾರೆ. ಮನಸ್ಸಿನ ಅಳುಕು ಅಥವಾ ಭೀತಿಯನ್ನು ತೊಡೆದು ಹಾಕಲು "ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಶ್ಶುಚಿಃ" ಎಂಬ ಉಪಾಯವನ್ನು ತೋರಿಸಿರುತ್ತಾರೆ. ಶೌಚ ನಿಯಮಗಳನ್ನು ಪಾಲಿಸುವವರು ಸಹಜವಾಗಿದ್ದುಕೊಂಡು ಆರೋಗ್ಯಶಾಲಿಗಳಾಗಿರುತ್ತಾರೆ. ನಿಯಮಗಳ ಪಾಲನೆಯು ಇಲ್ಲದೆ ಕೇವಲ ಆಡಂಬರಕ್ಕಾಗಿ ಕಾಲ, ದೇಶ, ಪಾತ್ರ ವಿವೇಚನೆಯಿಲ್ಲದೆ ಬಲಾತ್ಕಾರವಾಗಿ (ಶುಚಿ) ಮಡಿ ಶಬ್ದವು ತಾಂಡವವಾಡುವಂತೆ ಮಾಡುವುದೇ ಹೊಲೆಯೆನಿಸುವುದು. ವಿವೇಚನೆಯಿಂದ ಗಣನೆಗೆ ತಂದುಕೊಳ್ಳದ ಮೈಲಿಗೆಯು ಪವಿತ್ರವಾಗಿ ಫಲಿಸಿಯುವುದು.

ಭೂಗುಣ ವಾಯುಗುಣಗಳ ನ್ಯೂನತಾಧಿಕ್ಯಗಳಿಗೆ ಹೊಂದಿಕೊಂಡೆಯೂ ಬಹುಜನ ಹಿತಕ್ಕೂ ಶರೀರಕ್ಕೂ ಮನಸ್ಸು ಮತ್ತು ಇಂದ್ರಿಯಗಳ ಆರೋಗ್ಯಕ್ಕೂ ನಿತ್ಯಕರ್ಮಾನುಷ್ಠಾನಕ್ಕೂ ಅಡ್ಡಿ, ಅಡಚಣೆ, ಮಾಲಿನ್ಯಗಳುಂಟಾಗದಂತೆಯೂ ಮಡಿ, ಮೈಲಿಗೆ ಸೂತಕಾದಿಗಳನ್ನೂ ನಿರಶನ ಮತ್ತು ಅಶನ ಕಾಲಾತಿಕ್ರಮಣ ನಿದ್ರಾಭಂಗ, ಶಾಂತಿಭಂಗ ಮೊದಲಾದ ಪ್ರಸಂಗಗಳನ್ನೂ ಸಮಯೋಚಿತವಾಗಿ ಮನೋದಾರ್ಢ್ಯ ವಿವೇಚನೆಗಳಿಂದ ದೂರೀಕರಿಸಬಹುದಾಗಿದೆ.

ಅವ್ರತಘ್ನಗಳಾದ ಆಪಃ, ಮೂಲಂ, ಘೃತಂ. ಪಯಃ, ಹವಿಃ, ಬ್ರಾಹ್ಮಣಕಾಮ್ಯಾಯ (ಕರ್ತವ್ಯಕರಣ), ಗುರೋರ್ವಚನಂ, ಔಷಧಂ ಎಂಬ ಎಂಟು ಪ್ರಕರಣಗಳನ್ನು ತಿರಸ್ಕರಿಸುವವರಿಗೆ ದುಷ್ಟಫಲ ಪ್ರಾಪ್ತಿಯು ಕಾದಿರುವುದೆಂಬುದನ್ನು ಗುರುದೀಕ್ಷೆಯಿಂದ ತಮಸ್ಸನ್ನು ಹೋಗಲಾಡಿಸಿಕೊಂಡ ವಿಭೂತಿ ಪುರುಷರು ಸ್ಪಷ್ಟಪಡಿಸಿರುತ್ತಾರೆ.

ವಿಶ್ವದಲ್ಲೆಲ್ಲಾ ಸಂತತವಾಗಿ ನಡೆಯುವ ಕರ್ಮದ ಪರಿಣಾಮವಾಗಿ ಅಶುದ್ಧ ಪದಾರ್ಥಗಳು ಹೊರ ಹೊಮ್ಮುವುವು. ಅಮೃತ ಮಂಥನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂಬ ಸತತ ಕರ್ಮ ನಿರ್ವಾಹಕ್ಕೆ ಸುರಗುಣಶಕ್ತಿಗಳೂ ಅಸುರಗುಣಶಕ್ತಿಗಳೂ ಸೇರಲೇ ಬೇಕು. ಹೀಗೆ ವಿಶ್ವದಲ್ಲಿರುವ ಸುಮಾರು 33 ಕೋಟಿ ಸಂಖ್ಯೆ ಮಾನವರಲ್ಲಿ ಪ್ರತಿಯೊಬ್ಬರ ದೇಹದಿಂದ ಚರ್ಮ ಮೊದಲಾಗಿ ನವದ್ವಾರಗಳ ಮಾರ್ಗವಾಗಿ ಅಶುದ್ಧ ಪದಾರ್ಥಗಳು, ಕೆಟ್ಟ ಉಸಿರು ಎಲ್ಲವೂ ಅವಿಚ್ಛಿನ್ನವಾಗಿ ಹೊರಕ್ಕೆ ಬರುತ್ತಲಿರುವುವು. ಪ್ರತಿಯೊಬ್ಬರೂ ಸಹ ಬೆರಳುಗಳಿಂದ ತಮ್ಮದೇ ಆದ ಶರೀರದ ಮೇಲುಭಾಗದಲ್ಲಿ ಸ್ಪರ್ಶ ಮಾಡಿದರೆ ಶುಚಿ ಕ್ರಮವನ್ನು ಕೈಗೊಳ್ಳಬೇಕು. ಇದರ ಜತೆಗೆ ಹಿಂದಿನ ಜನ್ಮಗಳಿಂದ ಅಂಟಿಕೊಂಡು ಬಂದಿರುವ ಇಂದ್ರಿಯಾತೀತ ಕಲ್ಮಷಗಳೂ, ಶಾರೀರಿಕ ಮಾನಸಿಕ ರೋಗಗಳೂ ವ್ರಣಗಳೂ ಅಂಟು ಜಾಡ್ಯಗಳೂ ಶರೀರವನ್ನು ದೂಷ್ಯವನ್ನಾಗಿ ಮಾಡುವುವು. ಇಂತಹ ವ್ಯಕ್ತಿಯು ತನ್ನ ಆರೋಗ್ಯಕ್ಕಾಗಿ ಶುಚಿವ್ರತವನ್ನು ಅವಿಚ್ಛಿನ್ನವಾಗಿ ನಡೆಸುತ್ತಿರಬೇಕು. ಮೈ ಮೇಲೆ ಧರಿಸಿರುವ ಬಟ್ಟೆ ಮೊದಲಾದುವೂ ಸಹ ಪ್ರಾಣಾಪಹಾರ ರೋಗಗಳನ್ನು ಹರಡುವುವು.

ಇಂತಹ ಸನ್ನಿವೇಶದಲ್ಲಿ 33 ಕೋಟಿ ಜನಗಳಲ್ಲಿ ಯಾವನೊಬ್ಬನೂ ಉಳಿದ 32 ಕೋಟಿ 99 ಲಕ್ಷದ 999 ಜನರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳಲಾರನು. ಆರೋಗ್ಯರಕ್ಷಣೆಯ ದೃಷ್ಟಿಯಿಂದ ಯಾರೊಬ್ಬರೂ ಉಳಿದ ಜನರೊಡನೆ ಮಾತಾಡುವುದನ್ನಾಗಲೀ, ಕೊಡುವ ತೆಗೆದುಕೊಳ್ಳುವ ವಿಚಾರವನ್ನಾಗಲೀ ನಡೆಸುವುದಕ್ಕೆ ಪೂರ್ವಭಾವಿಯಾಗಿ ಎದುರಿಗಿರುವವರು ರೋಗಿಷ್ಠರೇ ? ಅಶುಚಿಗಳೇ ? ಎಂಬುದನ್ನು ಪರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಎಲ್ಲರೂ ತಕ್ಕಷ್ಟು ದೂರ ನಿಂತು ಪರಸ್ಪರ ವ್ಯವಹಾರ (ವ್ಯಾಪಾರ) ನಡೆಸಬೇಕು. ಶ್ರೀಮಂತರ ಮತ್ತು ಉನ್ನತಾಧಿಕಾರಿಗಳ ಬಳಿ ನಿಂತು ವಸ್ತ್ರದಿಂದ ಬಾಯನ್ನು ಮರೆಮಾಡಿ ಮಾತಾಡುವುದನ್ನು ಎಲ್ಲರೂ ಬಲ್ಲರು. ಆದರೆ ಕೆಲವರ ಪದ್ಧತಿಯಂತೆ ವ್ಯವಹಾರಕ್ಕೆ ಸಾಧ್ಯವಾಗದೇ ಇರುವಷ್ಟು ವಿರುದ್ಧವಾಗಿ ನಡೆಯುವುದು ಹಾಸ್ಯಾಸ್ಪದವಾಗುವ ವಿಚಾರವನ್ನು ಗಮನಿಸಬಹುದು. ಹೆಚ್ಚು ಜನಗಳು ಸೇರಿ ದಟ್ಟವಾದ ಬೆವರು ಮತ್ತು ಬೆವರಿನಲ್ಲಿ ಅದ್ದಿದ ಬೆವರಿನ ಬಟ್ಟೆ ಉಟ್ಟವರು ದೇವರ ಅಥವಾ ಆರೋಗ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇವಕರೆಯು ಪ್ರೀತಿಗೆ ಮತ್ತೊಬ್ಬರಿಂದ ದೂರ ನಿಂತಿರಬೇಕು. ಶುಚಿಭೂರ್ತರು ಧೈರ್ಯವಾಗಿ ಶುಚಿಭೂರ್ತರೊಡನೆ ದೂರದಲ್ಲಿ ವ್ಯವಹರಿಸಬಹುದು. ಆದರೂ ಆಂತರಂಗಿಕ ಅಶುಚಿಗಳು ಬಾಧಕವಾಗುವುವು. ಆದುದರಿಂದ ಯಾರೂ ಯಾರೊಡನೆಯೂ ಪಕ್ಕದಲ್ಲಿ ಜತೆಯಲ್ಲಿ ಕುಳಿತುಕೊಳ್ಳುವುದು, ಜತೆಯಲ್ಲಿ ಊಟಮಾಡುವುದು ಮೊದಲಾದ ಆರೋಗ್ಯನಾಶಕ ವ್ಯಾಪಾರಗಳನ್ನು ನಿರ್ದಾಕ್ಷಿಣ್ಯವಾಗಿ ದೂರೀಕರಿಸಬೇಕು ವಿಶ್ವಾರೋಗ್ಯತತ್ವದ ಮತ್ತು ದೇಹಿಯ ಯೋಗಕ್ಷೇಮ ನಿಯಮವನ್ನು ಪುರಸ್ಕರಿಸಬೇಕು. ಸರ್ವೇಂದ್ರಿಯಗಳಿಗೂ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ಈ ವಿಚಾರಕ್ಕೆ ವೇದಗಳ ಪ್ರಮಾಣವಾಗಲೀ, ಸಂಪ್ರದಾಯವಾಗಲೀ, ಶಾಸ್ತ್ರಕಾರರ ಮಾತುಗಳಾಗಲೀ ಅವಶ್ಯಕವಿಲ್ಲ. ಸರ್ವರೂ ಸ್ವಂತವಾಗಿ ಆಲೋಚಿಸಿ ಆರೋಗ್ಯನಿಯಮಗಳನ್ನು ಸುಧಾರಿಸಬೇಕಾದ್ದು ಅವಶ್ಯಕ.

ವರ್ಣಗಳ ಮತ್ತು ವರ್ಣವ್ಯಾಖ್ಯಾನಗಳ ಔಚಿತ್ಯವನ್ನು ತಿಳಿದು ದೇಹಿಗಳು ತಮ್ಮ ತಮ್ಮ ಮಿತಿಯಲ್ಲಿ ನಿರಸ್ತಕುಹಕರಾಗಿ ಆನಂದಿಸಬೇಕು ಈಶಾವಾಸ್ಯವಾದ ಜಗತ್ತಿನಲ್ಲಿ ಸ್ಪೃಶ್ಯ ಅಸ್ಪೃಶ್ಯ ಎಂಬ ನಿರ್ದಿಷ್ಟವಾದ ವಿಭಾಗಕ್ಕೆ ಅವಕಾಶವಿಲ್ಲ. ಸರ್ವರೂ ಕಾಲ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಅಶುಚಿ ಸಂಪರ್ಕವನ್ನು ಹೊಂದುವುದಾಗಲೀ ಅದನ್ನು ಕೂಡಲೇ ಹೋಗಲಾಡಿಸಿ ಶುಚಿಭೂರ್ತರಾಗುವುದಾಗಲೀ ನಿತ್ಯಜೀವನದಲ್ಲಿ ಸಹಜವಾಗಿದೆ. ವ್ಯಕ್ತ್ಯಾದಿ ರಾಜ್ಯವಲಯಗಳಲ್ಲಿ ಅವರವರಸೇವಾಕರ್ಮಗಳ ಗೌರವವನ್ನೂ ಶುಚಿತ್ವವನ್ನೂ ಆಯಾ ವ್ಯಕ್ತಿಗಳೇ ನಿರ್ಧರಿಸಿಕೊಂಡು ನೀಚ ಭಾವನೆಗಳಿಗೆ ಅವಕಾಶ ಕೊಡದೆ ಸದಾ ಅವರವರ ಮಿತಿಯಲ್ಲಿ ಶುಚಿಭೂರ್ತರೂ ಸುಸಂಸ್ಕೃತರೂ ಆಗಿ ರಾಜ್ಯದ ಪಂಚವಲಯಗಳಲ್ಲಿ ರಾಜ್ಯಕಾರ್ಯವು ಸುಗಮವಾಗುವಂತೆ ರಾಜನೀತಿ ಪರಿಶ್ರಮದಿಂದ ಬಾಳುವುದು ಶ್ರೇಷ್ಠ. (ಬ್ರಾ. ಧ. ಪುಟ 10-19) ಚಂಡಾಲತ್ವದಲ್ಲಿ ಶ್ರೋತ್ರಿಯತ್ವಾದಿ ವರ್ಣಗಳು ದೇಹಿಗೆ ಉಂಟಾಗಿರುವ ಸಂಸ್ಕೃತಿಯ ಶತಾಂಶ ಪ್ರಮಾಣ ರೀತ್ಯಾ ಛಾಯಾ ರೂಪದಲ್ಲಿ ಸೇರಿಕೊಂಡಿರುತ್ತವೆ ಎಂಬುದನ್ನು ಮರೆಯಬಾರದು. ಆಯಾ ರಾಷ್ಟ್ರ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜನೀತಿಗಳ ಮಿತಿಯಲ್ಲಿ ಮಾನವರೆಲ್ಲರೂ ಕೇವಲ ಪ್ರಜೆಗಳೆಂಬ ಹೆಸರಿನಿಂದ ವ್ಯವಹರಿಸಲ್ಪಡಬೇಕು. ಗುಣ ಕರ್ಮ ಶಕ್ತಿ ವರ್ತನೆಗಳಿಗೆ ತಕ್ಕಂತೆ ಹೊಂದಿಕೊಂಡಿರುವ ಸಮಾಜ ವಾ ಸಾಮೂಹಿಕ ಹೆಸರುಗಳು ನಿತ್ಯ ಸಾಮಾನ್ಯ ನೈಮಿತ್ತಿಕ ವ್ಯವಹಾರಗಳಲ್ಲಿ ಗಮನೀಯವಲ್ಲವೆಂದು ಹಿಂದೆಯೇ ಹೇಳಿರುವುದನ್ನೂ ಗಮನಿಸಿ ಬ್ರಾಹ್ಮೀ ಸಂಸ್ಕೃತಿ ಬ್ರಾಹ್ಮಣ ಧರ್ಮಾನುಯಾಯಿಗಳೆಲ್ಲರೂ ಬ್ರಾಹ್ಮಣರು ಎಂದು ತಿಳಿಯುವುದು ಅತ್ಯವಶ್ಯಕ. ತಿಳಿವಳಿಕೆಗೂ ಅದರ ಮೇಲೆ ದೃಢ ವಿಶ್ವಾಸಕ್ಕೂ ಆಯಾ ವ್ಯಕ್ತಿಗಳೇ ಹೊಣೆಗಾರರಾಗಿರಬೇಕೇ ಹೊರತು ಮತ್ತೊಬ್ಬರಿಂದ ಅದು ಲಭ್ಯವಾಗಬೇಕೆಂಬುದು ಸಂಸ್ಕೃತಿಯ ಕ್ರಮದಲ್ಲಿ ಬರುವುದಿಲ್ಲ. ಪ್ರತಿಯೊಬ್ಬರೂ ಪರಮಾತ್ಮನ ಪ್ರಪಂಚದ ಸೃಷ್ಟ್ಯಾದಿ ಲೀಲೆಯಲ್ಲಿ ಭಾಗವಹಿಸುವುದರಿಂದ ಪ್ರಕೃತ್ಯಾ ದತ್ತವಾದ ಅವರವರ ಗೌರವವನ್ನು ಅವರವರೇ ಮೊದಲು ಕಾಪಾಡಿಕೊಳ್ಳಬೇಕು ಮತ್ತು, ಅದರಂತೆ ಪ್ರತಿಮತ್ತೊಬ್ಬರ ಗೌರವವನ್ನು ರಕ್ಷಿಸಲೇಬೇಕು. ಸಹಜವಾಗಿ ನಡೆಯುವ ಕೆಲಸಗಳಲ್ಲಿ ಒಂದು ಹೆಚ್ಚು ಮತ್ತೊಂದು ಕಡಿಮೆ ಎಂದಿರುವುದಿಲ್ಲ. ಎಲ್ಲವೂ ಶ್ರೇಷ್ಠವೇ; ಶ್ರೇಷ್ಠತಮವೇ ಆಗಿರುತ್ತವೆ. ದೇಹವನ್ನು ಧರಿಸಿ ದೇಹೀ ಎನಿಸಿಕೊಳ್ಳುವ ಆತ್ಮನ ಬಗ್ಗೆ ಅವಹೇಳನ ಮಾಡಿ "ತಾನು ಕೀಳಾದವನು" ಎಂಬ ಅಭಿಪ್ರಾಯವನ್ನು ಹೊಂದುವವರೂ 'ಸಮ'ವನ್ನು ನೋಡಲಶಕ್ತರಾಗಿ ಯಾರನ್ನೇ ಆದರೂ ಎಂತಹ ಸ್ಥಿತಿಯಲ್ಲಿರುವವರನ್ನಾದರೂ ಕೀಳಾದವರು ಎಂದು ಹೇಳುವವರೂ ಅಪರಾಧಿಗಳೂ ಆತ್ಮದ್ರೋಹಿಗಳೂ ಆಗುತ್ತಾರೆ. *

---

* ರಾಷ್ಟ್ರಮಾತೆಯ ಹೆಸರನ್ನು ವಿರೂಪಗೊಳಿಸಿದಂದಿನಿಂದ ಪರದೇಶೀಯರ ಬಲಾತ್ಕಾರಕ್ಕೆ ತಲೆಬಾಗಿ ತಮ್ಮನ್ನು ತಾವೇ ಅವಹೇಳನ ಮಾಡಿಕೊಂಡಿರುವ 33 ಕೋಟಿ ಜನವು ತಮ್ಮ ಕೀಳುತನವನ್ನು ಮರೆತು ಯಾವುದೋ ಒಂದು ಜನಾಂಗವು ಕೀಳೆಂತಲೂ ಪರದೇಶೀ ದೃಷ್ಟಿಕೋಣದಿಂದ ಹೇಳುತ್ತಿದಾರೆ. ತಾವೇ ಕೀಳಾಗಿರುವಾಗ ತಮ್ಮ ಪೈಕಿ ಒಂದು ಅಂಗವನ್ನು ಕೀಳೆಂದು ಹೇಳಿ ಎತ್ತುವುದು ಹೇಗೆ! ಪರದೇಶೀ ಆಡಳಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಮರ್ಶಾತ್ಮಕ ರಾಜನೀತಿಗೆ ಸಂಬಂಧಪಟ್ಟ ಪ್ರಜಾಸಾಮ್ರಾಜ್ಯಂ ಗ್ರಂಥಗಳ ವಿಷಯಗಳನ್ನು ಹೃದಯದಲ್ಲಿ ಬುದ್ಧಿಯಲ್ಲಿ ಧರಿಸುವುದರಿಂದ ಈ ಕಡಿಮೆ ತಿಳುವಳಿಕೆಯು ದೂರವಾಗುವುದರಲ್ಲಿ ಸಂದೇಹವಿಲ್ಲ.

ಕ್ಕೆ ಸೇರಿದ ಭೂಭಾಗವನ್ನು ಪೂರ್ಣ ರಾಷ್ಟ್ರ ವಿಘಾತ ವೆಂದು ವರ್ಣಿಸು ವುದಕ್ಕಿಂತ ಹೆಚ್ಚಿನ ತಿಳಿಗೇಡಿತನವು ಇರುವುದಿಲ್ಲ. ಇದರಿಂದ ರಾಷ್ಟ್ರ ಮಾತೆಯು ತನ್ನ ಅಂಗಗಳ ಒಕ್ಕೂಟಕ್ಕೆ ವ್ಯವಸಾಯ ಮಾಡಲಾರದೆ ಕುಂಠಿತಳಾಗಿರುತ್ತಾಳೆ. ಪರದೇಶೀ ಪುಸ್ತಕಗಳ ಪಠನದಲ್ಲಿ ಉದ್ದಾಮ ರಾದ ವೇದವೀಥರರೂ ಇದನ್ನು ತಿಳಿಯಲಿಲ್ಲ. ವೀರ ಸಾವರ ಕರ್ ಮಹಾಶಯರು ಜೀವಿತದ ಕೊನೆಯ ಕಾಲದ ವರೆಗೂ ರಹಸ್ಯವನ್ನು ತಿಳಿಯದೆ ಬ್ರಾ. ಧ. ಗ್ರಂಥಾವಲೋಕನದಿಂದ ವಿವೇಚನೆಗೆ ಅವಕಾಶ ತಂದುಕೊಂಡರು. ಈಗಲೂ ಲಕ್ಷೋಪಲಕ್ಷ ಪರದೇಶೀ ಭಾಷಾ ಪುಸ್ತಕ ಪಠನ ಕೋವಿದರು ಇನ್ನೂ ರಹಸ್ಯವನ್ನು ತಿಳಿಯದಿರುವುದು ಬ್ರಾಹ್ಮಣದೇಶದ ದೌರ್ಭಾಗ್ಯ. ಈ ಬಗ್ಗೆ ಪ್ರಜೆಗಳು ಪ್ರಜ್ಞಾಶೂನ್ಯ ರಾಗುತ್ತಿರುವುದೂ ಮಠಾಧಿಪತಿಗಳೂ ಸಂಸ್ಕೃತ ವಿದ್ಯಾವಂತರೂ ಈ ಕಡೆ ಗಮನ ಕೊಡದಿರುವುದೂ ಪುಸ್ತಕ ಭಂಡಾರಗಳಲ್ಲಿರುವ ಪ್ರತಿ ಪುಸ್ತಕದ ಪ್ರತಿ ಪುಟವೂ ಎಂಬಂತೆ ಹೇಯವಾದ ನಾಮಕರಣದಿಂದ ತುಂಬಿರುವುದೂ ಶೋಚನೀಯ. ಧರ್ಮ, ಶಾಸ್ತ್ರಗ್ರಂಥಗಳಿಗೆ ಸೇರಿಸಿ ಹೇಯವಾದ ಈ ಪರದೇಶೀ ಉಪಪದವನ್ನು ಉನ್ನತ ಪೀಠಾಧಿಪತಿಗಳು ಉಚ್ಚರಿಸುವುದು ವಿನಾಶಕರವೆಂದು ತಿಳಿಯುವುದು ಅತ್ಯವಶ್ಯಕವಾ ಗಿದೆ. ಪರದೇಶೀಯರನ್ನು ಎದುರಿಸಿ ಸ್ವಾತಂತ್ರ್ಯವನ್ನು ಹೊಂದಿದ ಮೇಲೂ ಪರದೇಶೀಯರ ದಾಸರೆಂದು ಹೇಳಿಕೊಳ್ಳುವಂತೆ ದೇಶಕ್ಕೂ ಧರ್ಮಕ್ಕೂ ಪರದೇಶೀ ನಾಮಕರಣವನ್ನು ಅಳವಡಿಸಿಕೊಂಡಿರುವುದರಿಂದ ಪರದೇಶೀಯರು ನಮ್ಮ ಅವಿಜ್ಞತೆಗೆ ಹಾಸ್ಯ ಮಾಡುವರಲ್ಲದೆ ತಾವೇ ಭಾರತಕ್ಕೆ ಒಡೆಯರು ಎಂಬ ಭಾವನೆಯನ್ನು ಹೊಂದಬಹುದಾ ಗಿರುವುದು ರಾಷ್ಟ್ರಕ್ಕೆ ಅಪಮಾನಕರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೯. ವರ್ಣ ಪರಿಪಾಲನೆ

ಪಾಶ್ಚಾತ್ಯ ಗ್ರಂಥಕಾರರು "ಭಾರತೀಯ ವಿಷಯಗಳ ಸಂಶೋಧನೆಯನ್ನು ನಡೆಸಿರುತ್ತೇವೆ"ಂಬ ಕುಂಟು ನೆಪದಿಂದ, ಅವರ ಪ್ರಭುತ್ವಕ್ಕೆ ಸೇರಿ ಅವರ ದೇಶದಿಂದ ದೂರದಲ್ಲಿರುವ ನಮ್ಮ ದೇಶದವರ ಮೇಲೆ ತಮ್ಮ ಡಾಂಭಿಕತನದ ಮೇಲ್ಮೆಯನ್ನು ಸ್ಥಾಪಿಸಿ ಹೊರಿಸಲು ಯತ್ನಿಸಿದರು. "ಅವರು ಹೂಡಿದ ತತ್ತ್ವಾನ್ವೇಷಣ ಮಾರ್ಗವೂ ಅಸಂಭವ, ಅಸತ್ಯ, ಅಪ್ರಾಮಾಣಿಕ" ವೆಂದು ಡಾ. ಅಂಬೇಡಕರರು ಬಹುಕಾಲದನಂತರ ಸಾಧಿಸಿ ಪ್ರಕಟಿಸಿದರು. ಆದರೂ ಅವರಾಗಲೀ ವಿದ್ವಾಂಸರಾಗಲೀ ಪರಕೀಯ ದಾಸ್ಯ ಮನೋಭಾವವೆಂಬ ಸಂಕೋಲೆಯಿಂದ ಬಿಡುಗಡೆಯನ್ನು ಹೊಂದುವ ಧೈರ್ಯಸಾಹಸಗಳನ್ನು ಮಾಡಲಿಲ್ಲ; ಸಾಹಸಮಾಡಿ ಬಿಡುಗಡೆ ಹೊಂದಿದವರೂ ಸಹ ನೆಲೆಯನ್ನೂ ತಿಳಿಯಲು ಇನ್ನೂ ಪ್ರಯತ್ನ ಮಾಡುತ್ತಿಲ್ಲ.

ಡಾ. ಅಂಬೇಡಕರರಂತಹ ತೀಕ್ಷ್ಣ ಮೇಧಾವಿಗಳೂ ಸಹ ಸಾಮಾನ್ಯರಂತೆಯೇ, "ಪುರಾಣ ಧರ್ಮ ಶಾಸ್ತ್ರಗಳ ಮೂಲಗ್ರಂಥಗಳಲ್ಲಿಯೂ ವ್ಯಾಖ್ಯಾನ ಗ್ರಂಥಗಳಲ್ಲಿಯೂ ಅಪಾರ್ಥಗಳೂ ಅನರ್ಥಗಳೂ ತುಂಬಿರುತ್ತವೆ" ಎಂದು ದೋಷೋದ್ಘಾಟನೆ ಮಾಡಿರುತ್ತಾರೆ. ಅಲೌಕಿಕವಾದ ಅನುಭವವಾಗಲೀ ಉಚಿತವಾದ ಪ್ರಕ್ರಿಯೆಗಳಾಗಲೀ ತಿಳಿಯದ ಪಂಡಿತರಿಗೂ ಸಹ ಗ್ರಂಥಗಳಲ್ಲಿ ಕಂಡ ವ್ಯಾಖ್ಯಾನಗಳು ಸ್ವತಃ ದೋಷ ಭೂಯಿಷ್ಠಗಳೆಂದೇ ಕಂಡುಬರಬಹುದು. ಕೇವಲ ಶಬ್ದಾಡಂಬರವನ್ನೇ ಪ್ರಧಾನವಾಗಿಟ್ಟುಕೊಂಡು ಅನುಭವವನ್ನೂ ಪ್ರಪಂಚದ ಸ್ಥಿತಿಯನ್ನೂ ದೂರೀಕರಿಸುವ ಮತ್ತು ರಾಜನೀತಿಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಕ್ಷಿಸದ ವಿದ್ವಾಂಸರು, ದೋಷಭೂಯಿಷ್ಠವೆಂದು ಹೇಳಲ್ಪಟ್ಟ ವ್ಯಾಖ್ಯಾನಗಳೇ ಸಾಧುವೆಂದು ಸಮರ್ಥಿಸಲೂಬಹುದು.

ಆದರೆ, ಮಾನವಾನುಭವವನ್ನೂ ಶಾಸ್ತ್ರವನ್ನೂ ಹೊಂದಿಸಿಕೊಂಡು ಯಥಾರ್ಥವಾಗಿ ತೋರಿಸಬೇಕಾದರೆ, ಅಲಂಕಾರಬಣ್ಣವನ್ನು ಬಿಟ್ಟ ವ್ಯಾಖ್ಯಾನಸರಣಿಗಳು ಹೇಗಿರಬೇಕಾಗಿದ್ದುವು ? ಮಾನವಾನುಭವಗಳು ಆಗ ಹೇಗಿದ್ದಿರಬಹುದಾಗಿದ್ದುವು ? ತ್ರಿಕಾಲಾಬಾಧಿತವಾಗಿ ಮಾನವಾನುಭವಗಳಿಗೆಲ್ಲಾ ಹೊಂದಿಕೊಳ್ಳುವಂತೆ ಅವು ಹೇಗೆ ಇರಬೇಕು ? ಇತ್ಯಾದಿ ವಿವರಗಳನ್ನು ಸೂಚಿಸುವಷ್ಟೂ ಪ್ರಯತ್ನ ಮಾಡದೆ ದೋಷೈಕದೃಕ್ – ಪರಿಸ್ಥಿತಿಯಿಂದ ತೃಪ್ತರಾಗಿರುವುದು ಮಾನವತೆಗೆ ದೂರವಾದುದು.

ಅಂತಹ ವಿಷಯಗಳೂ ಗ್ರಂಥಗಳೂ ಅಗ್ರಾಹ್ಯಗಳು ಅಥವಾ ತ್ಯಾಜ್ಯಗಳು ಎಂಬಂತೆ ಚಿತ್ರಿಸಿಯೂ ಬುದ್ಧಿ ಭೇದವುಂಟಾಗುವಂತೆಯೂ ತಮ್ಮ ಮನೋಭಿಪ್ರಾಯವನ್ನು ಅಸೂಯಾತ್ಮಕವಾಗಿ ಅನೇಕರು ಪ್ರಕಟಿಸಿದಾರೆ. ಇದರಿಂದ ಪ್ರಜಾಕೋಟಿಯು ಕೆಳಗಿನ ಹಂತದಿಂದ ಮೇಲಕ್ಕೆ ಏರದೆ ಮತ್ತೊಂದು ಹಂತ ಕೆಳಕ್ಕೆ ಜಾರಿಬೀಳುವಂತಾಗುವುದು ; ಜೀವನ ಸಮಸ್ಯೆಯು ಸಮಾಜ ಸುಧಾರಣಾ ನಾಟಕದಲ್ಲಿ ಜನಗಳನ್ನು ಕೂಪಕ್ಕೆ ತಳ್ಳುವ ಪ್ರಯತ್ನವಾದಂತಾಗುವುದು ; ತತ್ವಾನ್ವೇಷಣವು ಶಬ್ದದ ಸ್ಥಾನದಲ್ಲಿ ನಿಂತು ಕೇವಲ ಶಬ್ದವಾಗಿಯೇ ಉಳಿದು ಕಾರ್ಯತತ್ಪರವಾಗುವಂತೆ ಪ್ರಚೋದನೆ ಮಾಡುವುದಿಲ್ಲ.

ಶೂದ್ರ ಸಮೀಕ್ಷೆಗೆ ಧೈರ್ಯ ಸಾಹಸಗಳಿಂದ ಕೈಹಾಕಿದ ಡಾ. ಅಂಬೇಡಕರರು ನಮ್ಮ ಗೌರವಕ್ಕೆ ಪಾತ್ರರು. 'Who were Shudras ?' ಶೂದ್ರರು ಯಾರು ? ಯಾರಾದರು ? ಯಾರಾಗಿದ್ದರು ? ಎಂಬ ಗ್ರಂಥದ ಕರ್ತರು ಅವರು. ಪುರಾತನ ಗ್ರಂಥಗಳನ್ನು ವಿವರವಾಗಿ ಉದಾಹರಿಸಿ ತಾತ್ಕಾಲಿಕ ಕುರುಡು ನಡೆಗೆ ಹೊಂದಿಕೊಂಡಿರುವ ಪರದಾಸ್ಯ ವ್ಯಂಜಕ ಭಾಷೆಯಲ್ಲಿ ವ್ಯಾಖ್ಯಾನ ಸಮೇತ ಚಿತ್ರಿಸಿ ಬರೆದಿರುತ್ತಾರೆ (1946). ಆಪಸ್ತಂಬ, ಮನು ಮೊದಲಾದ ಧರ್ಮ ಗ್ರಂಥಗಳಲ್ಲಿ ಶೂದ್ರ ಪದಕ್ಕೆ ಸಂಬಂಧಿಸಿದ ವಿಚಾರಗಳನ್ನು ಪರಿವರ್ತಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಟಿಸಿರುತ್ತಾರೆ. ಆಪಸ್ತಂಬಾದಿಗಳ ಅಧಿಕಾರದ ಆವರಣದಲ್ಲಿ ಇದ್ದ ಈಗಲೂ ಇರುವ ಅನುಯಾಯಿಗಳಿಗೂ ಮಾನವ ಸಾಮಾನ್ಯಕ್ಕೂ ಈ ಸೂಕ್ತಿಗಳು ಅನ್ವಯವಾಗುವುವು. ಹಿಂದೆ ಆ ಸನ್ನಿವೇಶಗಳಿಗೊಳಗಾಗಿದ್ದ ಆಪಸ್ತಂಬಾದಿ ಅನುಯಾಯಿಗಳ ಮನೋಭಾವಕ್ಕೂ ತಾತ್ಕಾಲಿಕ ಸನ್ನಿವೇಶಗಳಲ್ಲಿರುವವರ ಮನೋಭಾವಕ್ಕೂ ತುಂಬಾ ಅಂತರವಿದೆ. ಆದರೆ ತತ್ವವು ಮಾತ್ರ ಹಿಂದಿನವರಿಗೂ ಈಗಿನವರಿಗೂ ಮುಂದಿನವರಿಗೂ ಸಹ ಏಕಪ್ರಕಾರವಾಗಿ ಅನ್ವಯವಾಗುವುದು. ಮಹತ್ತಮ ಸಾಮಾನ್ಯ ಅಪವರ್ತನ ಲಘುತಮ ಸಾಮಾನ್ಯ ಅಪವರ್ತ್ಯಗಳಂತಿರುವ ಈ ತತ್ವಗಳ ಸಾರ್ವಕಾಲೀನತೆಯನ್ನು ಸಾರ್ವತ್ರಿಕತೆಯನ್ನೂ ಸಾರ್ವಜನಿಕತ್ವವನ್ನೂ ಕಂಡುಹಿಡಿಯಲು ಯತ್ನಿಸುವುದು ಸಂಸ್ಕೃತ ಪ್ರೇಮಿಯ ಅವಶ್ಯ ಕರ್ತವ್ಯ. ವಸ್ತುತಃ ಡಾ. ಅಂಬೇಡಕರರ ಪುಸ್ತಕವು ನಮ್ಮ ಸಂಸ್ಕೃತಿಯ ಅವಹೇಳನೋನ್ಮುಖವಾಗಿದೆ. ನಿರ್ಣಯವು ಕಾದಿಡಲ್ಪಟ್ಟಿದೆ; ಪತನದಿಂದ ಜುಗುಪ್ಸೆಯಲ್ಲಿ ಪರ್ಯವಸಾನ ಹೊಂದುವಂತಿದೆ! ಕೇವಲ ಬುದ್ಧಿ ಚಮತ್ಕಾರದಿಂದಲೂ ಗೌರವ ಪೂಜ್ಯಭಾವನೆಯಿಂದಲೂ ಎಂಬಂತೆ ಡಾ. ಅಂಬೇಡಕರರು ತಮ್ಮ ಸ್ವಂತ ನಿರ್ಣಯವನ್ನು ಪ್ರಕಾಶಿಸದೆ ತಟಸ್ಥರಾಗಿರುವುದು ಆಶ್ಚರ್ಯಕರ ಅಥವಾ ತದುದ್ದೇಶಕ್ಕೆ ಸಾಕಾದಷ್ಟು ತಪಸ್ಸು ನಡೆಯಲು ಭಾಷಾ ಪರಿಚಯಾದಿಗಳಿಲ್ಲದಿರುವುದೂ ಕಾರಣವಾಗಿರಬಹುದು !!

ಈ ಕ್ರಮದಲ್ಲಿ ಆಪಸ್ತಂಬ ಸೂತ್ರಗಳ ಸಂಪುಟೀಕರಣವು "ಆಪಸ್ತಂಬಧರ್ಮಸೂತ್ರಮಂಜರೀ" ಎಂಬ, ಗ್ರಂಥದಲ್ಲಿ ನಡೆದಿದೆ. ಈಗಿನ ಜನತೆಯ ಮನೋಭಾವವು ಶಾಸ್ತ್ರೀಯವಾದುದಲ್ಲ; ಸ್ವಂತವಾದುದೂ ಅಲ್ಲ ; ಸಾಮರ್ಥ್ಯ ಪೌರುಷಯುತವೂ ಅಲ್ಲ ; ಸುಸಂಸ್ಕೃತವಾದುದಲ್ಲವೇ ಅಲ್ಲ. ಮನಸ್ಸಿನ, ವಚನದ, ಕಾಯದ ಅನುಭವಗಳು ಪರಸ್ಪರ ಬೇರೆಯಾಗಿರುವುದರಿಂದ ಶಾಸ್ತ್ರ ವಿಷಯಗಳಿಗೂ ಹೊಂದಿಕೊಳ್ಳುವುದಿಲ್ಲ ; ಅನುಕರಣೀಯ ವಾ ಅನುಷ್ಠಾನೀಯವಾದುದಲ್ಲವೇ ಅಲ್ಲ.

ಧರ್ಮಶಾಸ್ತ್ರಕಾರರ ಕಾಲದಲ್ಲಿಯೂ ಹೀಗೆಯೇ ಅತೃಪ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸಮಾಧಾನಗಳಿದ್ದುವು ಎಂಬುದು ಆ ಗ್ರಂಥಗಳಿಂದಲೇ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಗೊತ್ತಾಗುವುದು. ಆಚಾರ ಶ್ರೇಷ್ಠರಾದ ಹರದತ್ತ ಸುದರ್ಶನರುಗಳಿಗೇನೇ ಆಪಸ್ತಂಬ ಸೂಕ್ತಿಗಳು ಬೇರೆ ಬೇರೆ ಅರ್ಥದಲ್ಲಿ ಗೋಚರವಾದುವು. ಅವರ ವ್ಯಾಖ್ಯಾನಗಳೆರಡೂ ಪರಸ್ಪರ ಪೂರಕವೆಂದೇ ಭಾಸವಾಗುವುದು.

ಈ ಸೂತ್ರಗಳನ್ನು ವಿಂಗಡಿಸಿ ಕ್ರಮವರಿತು ವಿಷಯಾನುಗುಣವಾಗಿ ಜೋಡಿಸಬೇಕು. ಈ ವಿಧವಾದ ಸಂಪುಟೀಕರಣದಿಂದ ಅರ್ಥಗೌರವವೂ ಅರ್ಥಗಾಂಭೀರ್ಯವೂ ಅರ್ಥಪುಷ್ಟಿಯೂ ಸ್ವತಃ ಉಂಟಾಗಿ ಸೂತ್ರ-ಸೂಕ್ತಿಗಳು ನಿಸ್ಸಂದೇಹವಾಗಿ ಪ್ರಚೋದನೆಗಳೂ ಜ್ಞಾನಕಾರಕಗಳೂ ಆಗುವುವು. ಧರ್ಮಶಾಸ್ತ್ರಕಾರರ ಎಲ್ಲಾ ಗ್ರಂಥಗಳೂ ಸೇರಿ ಪರಸ್ಪರ ಪೂರಕವಾಗಿರುವಂತೆ ವಿಶಾಲ ಪ್ರಪಂಚದ ದೃಷ್ಟಿಯಿಂದ ಕಾಣಬರುವುದು.

ಅನುಭವಕ್ಕೂ ಋಷಿ ಮನೋಧರ್ಮದ ಉನ್ನತ ಮಟ್ಟಕ್ಕೂ ಕಳಂಕವುಂಟಾಗುವಂತೆ ಕಾಣುವ ಕೆಲವು ವಿಷಯಗಳ ತತ್ತ್ವಾರ್ಥವು ಅಭೇದ್ಯವಾಗಿರುವುದು. ಇಷ್ಟಾದರೂ, ಋಷಿವಾಕ್ಯಗಳ ಗಹನಾರ್ಥವು ಪರೋಕ್ಷವಾಗಿದ್ದುಕೊಂಡೇ ಮಾನವತೆಯನ್ನು ಇಲ್ಲಿಯವರೆಗೂ ಹಿಡಿತದಲ್ಲಿಟ್ಟುಕೊಂಡಿರುವುದು ಆಶ್ಚರ್ಯ, ಸಂತೋಷ ಮತ್ತು ಆಹ್ಲಾದಾಯಕವಾದ ಸಂಗತಿಯಾಗಿದೆ.

ಕೋಟಿಗಟ್ಟಲೆ ಅನುಯಾಯಿಗಳು ಕೋಟಿಗಟ್ಟಲೆ ಭಿನ್ನತೆಯನ್ನು ಅನುಷ್ಠಾನದಲ್ಲಿ ಪ್ರದರ್ಶಿಸಿ 'ಸರ್ವಂ ಸಮಂಜಸಂ' ಎಂದು ಸಹನೆಯಿಂದ ಹೇಳುತ್ತಾ ನಡೆದುಕೊಂಡು ಬಂದಂತಾಗಿದೆ.

ವೈಯಕ್ತಿಕ ಸಾಹಸ ತಪಸ್ಸುಗಳಿಗೆ ಆಕರರಾದ ಆಪಸ್ತಂಬಾದಿಗಳ ಹೃದಯವನ್ನೂ ನಾಡಿಯನ್ನೂ ಗೊತ್ತುಮಾಡುವುದಕ್ಕೆ ಸಾಧ್ಯವಾಗಿಲ್ಲ. ಪ್ರಯತ್ನವೂ ಆ ಋಷಿಗಳ ಮಟ್ಟದಲ್ಲಿ ನಡೆದಿಲ್ಲ. ವಿಭೂತಿ ಪುರುಷರ ಸೂಕ್ತಿಗಳು ಸರ್ವರಿಗೂ ಹಿತವಾಗಿ ಸರ್ವರಿಗೂ ಬೇಕಾಗಿರುವಂತೆ ಮಿತ್ರ, ಪಿತೃ, ರಾಜ, ಋಷಿ, ಕಾಂತಾ ಸಂದೇಶಗಳಿಂದ ಗರ್ಭಿತವಾಗಿವೆ ಅವುಗಳ ಆಳಕ್ಕೆ ಪ್ರವೇಶಿಸಿಯೂ ಅತಿ ವಿಶಾಲವಾಗಿಯೂ ರಾಜನೀತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಗದಿಂದ ಅವುಗಳನ್ನು ನಿರ್ಧರಿಸುವುದು ಕಷ್ಟವಾಗಿಲ್ಲ. ರಾಜನೀತಿ ಯೋಗವು ವೈಯಕ್ತಿಕ ತಪಸ್ಸು, ಋಣ ಕರ್ಮಾನುಭವಗಳಿಗೆ ಮನ್ನಣೆ ಯನ್ನೀಯುವುದು.

ವಿವಿಧ ಮನೋಭಾವವುಳ್ಳವರಿಗೆಲ್ಲಾ ಸಾಮಾನ್ಯವಾಗಿರುವಂತೆ ಯೂ, ತತ್ತತ್ಕಾಲೋಚಿತವಾಗಿದ್ದು ಪುರಾತನ ದಿವ್ಯತೆಗೆ ಬಾಧಕವಾಗ ದಂತೆಯೂ, ರೂಢಿಗೆ ಬಂದಿರುವ ಸಾಮಯಾಚಾರಿಕ ರಾಜನೀತಿ ವಿಚಾರಗಳನ್ನೂ (ಪರಭಾಷೆಯ ಪರಿವರ್ತನೆಯಿಂದಾಗಲೀ, ಕೇವಲ ತಿರಸ್ಕಾರಭಾವನೆಯ ಸ್ವಕಪೋಲಕಲ್ಪಿತ ವ್ಯಾಖ್ಯಾನಕಾರರ ವ್ಯಾಖ್ಯಾನ ಗಳಿಂದಾಗಲೀ) ದೋಷರಹಿತವಾಗುವಂತೆಯೂ ಮಾಡಲು ಈಗ ಪ್ರಯತ್ನವು ನಡೆಯಬೇಕಾಗಿದೆ.

ವಿದ್ವತ್ತನ್ನೂ ಅನುಭವಗಳನ್ನೂ ತಪೋ ಮಹಿಮೆಯನ್ನೂ ಅತ್ಯುನ್ನತ ಮಟ್ಟಕ್ಕೆ ಏರಿಸಿ ಬೆಳಗುವ ವಿಷಯಗಳು ಸಂದಿಗ್ಧವಾಗಿಯೂ ಕ್ಲಿಷ್ಟವಾಗಿಯೂ ವಿವಾದಾತ್ಮಕ (controversial) ಗಳೂ ಆಗಿರು ವುವು. ಜಕಣಾಚಾರಿಯು ಕಲ್ಲಿನಲ್ಲಿ ವಿಗ್ರಹದ ಸೂಕ್ಷ್ಮಭಾಗಗಳನ್ನು ಬಿಡಿಸಿರುವ ಜಾಣ್ಮೆಯಂತೆ ಮತ್ತು ಹತ್ತಿಯನ್ನು ಬಿಡಿಸುವ ಹಾಗೆ ಈ ವಿಷಯಗಳನ್ನು ವಿಭಜಿಸಿ ವಿವರಿಸಲು ಕಲಾ ಕೌಶಲಸೌಲಭ್ಯಗಳು ಸದಾ ಸಿದ್ಧವಾಗಿವೆ.

ಜೀವನವು ವ್ಯವಹಾರ ಸೌಕರ್ಯಗಳಿಂದ ಪರಿಪೂರ್ಣವಾಗಿರು ವಂತೆ ಮಾಡುವುದಕ್ಕೂ ಇಡೀ ಪ್ರಪಂಚವನ್ನೇ ಅಂಗೈಯಲ್ಲಿಟ್ಟು ಕೊಂಡು ಸಾಕ್ಷಾತ್ಕರಿಸುವುದಕ್ಕೂ ಅವಕಾಶವಿದೆ. ಹೀಗಿರುವಾಗ ಜನ ಗಳೂ ಸಹ ಪುರಾಣಾದಿ ಗ್ರಂಥಗಳನ್ನು ಮೇಲ್ಮಟ್ಟದ, ವಿದ್ವತ್ತಿನ ಮಟ್ಟದ ವಿಮರ್ಶೆಯಿಂದಲೂ ಅನುಭವದಿಂದಲೂ ನೋಡಿ ತತ್ತ್ವಗಳ ನ್ನು ಮಾತ್ರ ಗ್ರಹಿಸಬೇಕು.

ಮುಳ್ಳು ಸಿಪ್ಪೆಯು ಮಧುರವಾದ ಹಲಸಿನಂತಹ ಫಲಗಳನ್ನು ರಕ್ಷಿಸುವ ಕವಚದ ಹಾಗಿರುವಂತೆ ಪುರಾಣಕಥಾಂಶಗಳು ಅಂತಃ ತತ್ವಾ ರ್ಥಗಳನ್ನು ಅಡಗಿಸಿಕೊಂಡು ಹೊರಗೆ ಕುತ್ಸಿತವಾಗಿಯೂ, ಸಂಕುಚಿತ ವಾಗಿಯೂ, ಜೀವನದ ತತ್ವಗಳಿಗೂ, ದರ್ಶನ ತತ್ವಗಳಿಗೂ ವಿರೋಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿರುವಂತೆಯೂ ಕಾಣಬಹುದು. ಈ ಗುಟ್ಟನ್ನು ವಿವೇಕಿಗಳು ತಿಳಿದಿರುತ್ತಾರೆ. ಮಂದಮತಿಗಳಿಗಾಗಿ ವಿಚಿತ್ರವಾದ ಅಲಂಕಾರದ ಕಥಾ ಶೈಲಿಯಲ್ಲಿ ಬರೆದಿರುವ ವಾಕ್ಯಗಳ ನಡುವೆ ಪ್ರತಿಪಾದಿತವಾಗಿ ರುವ ಅನುಭವಾಂಶವೇ ಬೇರೆ ಎಂದೂ ಹೇಳುತ್ತಾರೆ. ವ್ಯವಹಾರ ಸೌಕರ್ಯಗಳ ಪರಿಚಯ ಜ್ಞಾನಾದಿಗಳಿಂದ ತುಲನಾತ್ಮಕ ಬುದ್ಧಿಯು ವಿಕಾಸವಾಗುವುದು. ಇಂತಹ ಬುದ್ಧಿಶಾಲಿಗಳಿಗೆ ಪುರಾಣ ವಿಷಯ ಗಳು ಅಲ್ಪವಾಗಿ ಕಂಡುಬಂದು ಔದಾಸೀನ್ಯಕ್ಕೂ ಪ್ರಮಾದಕ್ಕೂ ಕಾರಣವಾಗಬಹುದು. ಆದರೆ ರಸಾತ್ಮಕ ವಿಮರ್ಶೆಯಿಂದ ಮಥಿಸಿ ಆಳಕ್ಕೆ ಪ್ರವೇಶಿಸಿ ಪುರಾಣಗಳಲ್ಲಿ ಅಡಗಿರುವ ಮಹತ್ತತ್ತ್ವಗಳನ್ನು ಗ್ರಹಿಸಿ ಸಮಾಧಾನ ಸಂತೋಷಗಳಿಗೆ ಅವಕಾಶ ತಂದುಕೊಳ್ಳಬೇಕಾದು ದು ವಿವೇಕಿಗಳ ಕರ್ತವ್ಯ.

ವಿದೇಶೀಯ ಜೀವಮಾನ ಸ್ಥಿತಿಗಳನ್ನು ವರ್ಣಿಸಿರುವ ಗ್ರಂಥಗಳ ಪಠನದಿಂದ ಆಗುವ ಮನಸ್ಸಂಸ್ಕಾರವು ಭಾರತ ದೇಶದ ಸ್ಥಿತಿಗಳನ್ನು ಯಥಾರ್ಥವಾಗಿ ಪರಿಗ್ರಹಿಸಲು ಅವಕಾಶ ಕೊಡುವುದಿಲ್ಲ. ಭಾರತ ಸಂಸ್ಕೃತಿ ಗ್ರಂಥ ಪರಿಣತರೂ ಸಹ ಪರಕೀಯವಾದ ರಾಜಕೀಯ ವಿಪ್ಲವಗಳ ಮಧ್ಯೆ ಸಿಕ್ಕಿಕೊಂಡು ತುಲನಾತ್ಮಕ ವಿಮರ್ಶೆಗೆ ಅವಕಾಶ ವನ್ನು ತಂದುಕೊಂಡಿಲ್ಲ. ಸಮುದ್ರ ಮತ್ತು ಪಿಶಾಚಿಗಳ ನಡುವೆ ಸಿಕ್ಕಿಕೊಂಡಾಗ ಉಂಟಾಗುವ ಇಂತಹ ಕ್ಲಿಷ್ಟ (dilemma) ಪರಿ ಸ್ಥಿತಿಗಳಲ್ಲಿ ಜೀವನ ಸಂಸ್ಕೃತಿಗಳಿಗೆ ಆಧಾರವಾದ ಗ್ರಂಥಗಳನ್ನು ಮೂದಲಿಸುವುದು ಹೇಯವಾದ ಅಂಜುಬುರುಕತನವೆನಿಸುವುದು.

ಧರ್ಮಶಾಸ್ತ್ರ ಪುರಾಣಾದಿ ಗ್ರಂಥಗಳನ್ನು ಬರೆದವರು ನಮ್ಮ ಪೂರ್ವಿಕರೇ ಆಗಿದ್ದಾರೆ ; ನಮಗಾಗಿಯೇ ಬರೆದಿರುತ್ತಾರೆ ; ನಮ್ಮ ವರೇ ಆಗಿರುತ್ತಾರೆ ; ನಾವೇ ನಮ್ಮ ನಮ್ಮ ಹಿಂದು ಹಿಂದಿನ ಜನ್ಮ ಗಳಲ್ಲಿ ಅವುಗಳನ್ನು ಬರೆದು ಈಗ ನಮ್ಮ ಮುಂದೆ ನಮಗಾಗಿ ನಮ್ಮ ವಿಮರ್ಶೆಗಾಗಿ, ನಮ್ಮ ತಿಳಿವಳಿಕೆಗಾಗಿ ಪುನರಾವರ್ತನೆ ಪರಿಶೀಲನೆಗಾಗಿ ಇಟ್ಟುಕೊಂಡಿದೇವೆ.— ಎಂದರೂ ತಪ್ಪಾಗಲಾರದು. ಆದುದರಿಂದ ನಮ್ಮ ಕಣ್ಣಿನಿಂದ ಭಾರತ ಸಂಸ್ಕೃತಿ ಮಟ್ಟದಿಂದ ಅವುಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಮರ್ಶಿಸಬೇಕು. ಪರಕೀಯ ಬುದ್ಧಿ ಪರ ಪ್ರತ್ಯಯಗಳ ಸುಲೋಚನದಿಂದ ನೋಡುವುದು ನ್ಯಾಯಕ್ಕೆ ವಿರೋಧ. ಪರದೃಷ್ಟಿಕೋಣದ ವಿಮರ್ಶೆಗೆ ಗುರಿಪಡಿಸಿ ತಿಳಿದ ವಿಷಯಗಳು ತಾವಾಗಿಯೇ ಕಳಚಿಕೊಂಡು ಬಿದ್ದು ಹೋಗುವುವು ; ಸ್ವಂತ ದೃಷ್ಟಿಯು ಅಡಗಿಹೋಗಿ ನಶಿಸುವುದು.

ವಾಣಿಜ್ಯ ಸಂಚಾರ ಸೌಕರ್ಯಗಳು ಮಿತಿಮೀರಿ ಪ್ರಪಂಚದ ಒಂದು ಮೂಲೆಗೆ ಮತ್ತೊಂದು ಮೂಲೆಯೊಡನೆ ನಿಕಟ ಸಂಬಂಧವು ಏರ್ಪಟ್ಟಿರುವ 'ಕಲನ'ವುಳ್ಳ ವಿಶ್ವಸಂಸಾರದಲ್ಲಿ ತುಲನಾತ್ಮಕ ರಸಾಭಿನಿವಿಷ್ಟ ವಿಮರ್ಶಾತ್ಮಕ ವಿವೇಕವು ಕುದುರುವುದಕ್ಕೆ ಅವಕಾಶವಿದೆ. ಪುರಾತನ, ಆಧುನಿಕ, ಅತ್ಯಂತಾಧುನಿಕ ಘಟ್ಟಗಳೆಂಬ ಭಾವನೆಯಿಂದ ಪರಸ್ಪರವಾಗಿ ಅಂತರವನ್ನು ಕಲ್ಪಿಸುವುದು ಸಾಧುವಲ್ಲ. ಪುರಾತನ ಕಾಲದಲ್ಲಿಯೂ ಆಧುನಿಕ ಘಟ್ಟಗಳ ಅನುಭವಗಳು ಇದ್ದುವು. ಆಧುನಿಕ ಘಟ್ಟಗಳಲ್ಲಿಯೂ ಪುರಾತನ ಘಟ್ಟದ ಅನುಭವಗಳು ಪ್ರತ್ಯಕ್ಷವಾಗಿವೆ.

ದರ್ಪಣವು ತನ್ನ ಬಳಿಯಲ್ಲಿರುವ ಬಣ್ಣದ ವಸ್ತುಗಳನ್ನು ಪ್ರತಿಬಿಂಬಿಸಿ ಅವುಗಳ ಬಣ್ಣವನ್ನು ತಾತ್ಕಾಲಿಕವಾಗಿ ಹೊಂದಿದಂತೆ ಕಾಣುವುದು ; ಆ ವಸ್ತುಗಳು ದೂರಸರಿದಾಗ ದರ್ಪಣವು ಶುದ್ಧವಾಗಿ ದರ್ಪಣದಂತೆಯೇ ಉಳಿಯುವುದು. ಅದರಂತೆ ಪ್ರಪಂಚದಲ್ಲಿ ಬದಲಾವಣೆಯಾದಂತೆ ನಡೆಯುವ ವ್ಯಾಪಾರಗಳ ಮೂಲವು ಏಕಪ್ರಕಾರವಾಗಿರುವುದು. ಬದಲಾವಣೆಗಳು ಕ್ಷಣಿಕಗಳಾಗಿ ಮರೆಯಾಗುವುವು. ಕ್ಷಣಿಕವಾದ ಬದಲಾವಣೆಗಳನ್ನು ಗಣನೆಗೆ ತರುವುದು ಶ್ರೇಯೋನ್ಮುಖವಾದ ಸಂಸ್ಕೃತಿಯ ಮಿತಿಗೆ ಸೇರಿದುದಲ್ಲ. ಪ್ರಧಾನವಾದ ಜೀವನದ ಲಕ್ಷಣಗಳು ಸ್ಥಾಯಿಯಾಗಿ ಒಂದೇ ಸಮನಾಗಿರುವುವೇ ಹೊರತು ಆಧುನಿಕ ಘಟ್ಟಕ್ಕೆ ಸೇರಿದ್ದೆಂಬ ವ್ಯಾಜದಿಂದ ತಲೆಕೆಳಕಾಗುವುದಿಲ್ಲ. ಶೂದ್ರ ನಿಷಾದಾದಿ ಗುಣಕರ್ಮ ಅವಸ್ಥೆಗಳು ತ್ರಿಕಾಲಾಬಾಧಿತವಾಗಿ ಭೂತ ಭವಿಷ್ಯದ್ವರ್ತಮಾನ ಸ್ಥಿತಿಗತಿಗಳಿಗೆಲ್ಲಾ ಮಹತ್ತಮ ಸಾಮಾನ್ಯ ಅಪವರ್ತನದಂತೆ ಸ್ಥಿರವಾಗಿರುವುವು.

ಗ್ರಂಥಗಳಲ್ಲಿ ವಿವರಣೆಗಳು ಗುಪ್ತವಾಗಿರುವ (latent) ಅಡಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿರುವ ಅರ್ಥಗಳಿಂದ ಗರ್ಭಿತವಾಗಿವೆ. ಅರ್ಥ ಗೌರವವುಳ್ಳ ಮತ್ತು ಸೂತ್ರರೂಪವಾಗಿರುವ ಗ್ರಂಥವಿಷಯಗಳನ್ನು ಸಮಯೋಚಿತವಾಗಿ ಅವಶ್ಯಕವಾದಂತೆಲ್ಲಾ ವಿವರಿಸಿ ತೋರಿಸಬಹುದು. ಕೋಶ (ಧನ) ವ್ಯವಹಾರದಲ್ಲಿ ಕಂಡಂತೆ ಅನೇಕ ಕೋಟಿ ನಾಣ್ಯಗಳ ಬೆಲೆಯನ್ನು ಒಂದು ಸಣ್ಣ ಕಾಗದದಲ್ಲಿ ಅಡಗಿಸಿ ತಕ್ಕ ವರ್ಣವನ್ನು ಕೊಟ್ಟು ಸಮಯ ಆವಶ್ಯಕತೆಗೆ ತಕ್ಕಂತೆ ಯಾವ ಬಗೆಯ ಚಿಕ್ಕ ಚಿಕ್ಕ ನಾಣ್ಯಗಳಾಗಾದರೂ ಬದಲಾಯಿಸಿಕೊಳ್ಳಬಹುದಾಗಿರುವಂತೆ ಮೂಲ ತತ್ತ್ವವನ್ನು ಸನ್ನಿವೇಶ, ಸಮಯ, ಆವಶ್ಯಕತೆ, ಪ್ರೋತ್ಸಾಹಗಳಿಗೆ ತಕ್ಕಂತೆ ಅನ್ವಯಿಸಿಕೊಳ್ಳಬಹುದು.

ಪ್ರಕೃತಿಯಲ್ಲಿರುವ ಅಮೂಲ್ಯ ವಸ್ತುಗಳೂ[1] ಸಹ ತಮ್ಮ ತಮ್ಮ ಉಪಾಸಕರನ್ನು[2] ವರಿಸಿ ತಮ್ಮ ಮಹಿಮೆಯನ್ನು ಬೆಳಕಿಗೆ ತರುವಂತೆ ಹುರಿದುಂಬಿಸುವುವು.

ಮಾನವ ಸಾಧಾರಣವಾದ ವಸ್ತು ಮತ್ತು ತತ್ವಗಳ ಸಮನ್ವಯ ಜ್ಞಾನವು ಮಾನವೀಯತೆಯನ್ನು ಅಳೆಯುವ ಮತ್ತು ಪ್ರಕಾಶಪಡಿಸುವ ಸಾಧನವಾಗಿರುವುದು. ವಸ್ತುತತ್ತ್ವವನ್ನೂ ಗ್ರಂಥೋಕ್ತ ವಿಷಯಗಳನ್ನೂ ಅನುಭವವನ್ನೂ ಹೊಂದಿಸಿಕೊಂಡು ತ್ರಿಕಾಲಾಬಾಧಿತವಾಗಿರುವಂತೆ ಗೊತ್ತುಮಾಡಿದ ನಿರ್ಣಯಗಳನ್ನು ಅನುಷ್ಠಾನದಲ್ಲಿ ಅಳವಡಿಸಿಕೊಳ್ಳುವುದು ಸಹಜವಾಗಿದೆ. ಈ ಬಗೆಯ ವಿಮರ್ಶ ಪರಿಜ್ಞಾನಕ್ಕೆ ಅವಕಾಶವಿಲ್ಲದಿರುವ ಭೂ ಭಾಗಗಳಲ್ಲಿ ಸೃಷ್ಟಿಸ್ಥಿತಲಯ ವೈಚಿತ್ರ್ಯದ ಒಂದೊಂದು ಅಂಶವನ್ನು ಭೂ ವಾಯು ಗುಣಗಳಿಗೆ ತಕ್ಕಂತೆ ಸ್ವಾಧೀನಪಡಿಸಿಕೊಳ್ಳಬಹುದಾದ ಮತ್ತು ಪ್ರಕಾಶಪಡಿಸಬಹುದಾದ ಮನೋವ್ಯಾಪಾರ ಕಲಾ ಕೌಶಲಗಳು ಆಯಾ ಭಾಗದ ಜನತೆಯ ಮಿತಿಯಲ್ಲಿ ಉಂಟಾಗುವಂತೆ ಪ್ರಕೃತಿಯು ವ್ಯವಸ್ಥೆ ಮಾಡಿರುತ್ತದೆ. (ಸ್ವಧರ್ಮ ವಿವೇಕ 285)

---

1 Elements, minerals, substances like Gold Uranium etc.

2 So called scientists, Physicists.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ವದಲ್ಲಿ ಅವರವರ ಸಂಕಲ್ಪಾದಿಗಳನ್ನು ಅವರವರ ಮಿತಿಯಲ್ಲಿ ಸಾಧಿಸಿ ಜೀವನವನ್ನು ನಡೆಸುವ ಜನಾಂಗಗಳ ವರ್ತನೆಗೆ ಸಹಕರಿಸಿ ಪ್ರಕೃತಿಯೂ ಪ್ರಸನ್ನವಾಗಿ ಪ್ರೋತ್ಸಾಹಿಸುವುದು ; ವರ್ತನೆಯ ನ್ಯೂನತಾಧಿಕ್ಯಗಳು ಪ್ರಕೃತಿಯ ಉದ್ರೇಕ ಮತ್ತು ವಿರೋಧಗಳಿಗೆ ಕಾರಣವಾಗುವುವು. ಇಂತಹ ದುಷ್ಟ ಪರಿಸ್ಥಿತಿಯಲ್ಲಿ ಜನತೆಯ ಗುಣ ಕರ್ಮಶಕ್ತಿಗಳು ವಿವೇಕವನ್ನು ಕುಗ್ಗಿಸಿ ಸ್ವೋನ್ನತಿ ಪರಾವನತಿಗಳಿಗೆ ಯತ್ನಿಸುವಂತೆ ಮಾಡುವುವು. ಇದರಿಂದ ಆಗುವ ವಿಷಮಸ್ಥಿತಿಯ ಪರಿಹಾರಕ್ಕಾಗಿ, ವಸುಂಧರೆಯ ಮೇಲೆ, ಒಳಗೆ ದೊರೆಯಬಹುದಾದ ಮತ್ತು ಸಮಯೋಚಿತವಾಗಿ ಪ್ರಕೃತಿ ಪ್ರೇರಣೆಯಂತೆ ಆವಶ್ಯಕವಾದ ಉಪಯೋಗಕ್ಕೆ ಗೋಪ್ಯವಾಗಿ ರಕ್ಷಿಸಲ್ಪಟ್ಟ ಲೋಹಾದಿಗಳಿಂದ ಅಯೋ ಯಂತ್ರಾದಿಗಳನ್ನೂ ಅಸ್ತ್ರಾದಿಗಳನ್ನೂ ನಿರ್ಮಾಣಮಾಡುವ ಸಂಭವವು ಉಂಟಾಗುವುದು.§ ನ್ಯೂನಾಧಿಕ ವರ್ತನೆಯಿಂದ ಮಾನವ ಗುಣಕರ್ಮಶಕ್ತಿಗಳು ಕುಂಠಿತವಾಗುವುದರಿಂದ ಮಾನವ ಶರೀರಗಳಿಂದ ಆಗಬೇಕಾದ ಕಾರ್ಯಗಳನ್ನು ಮಾನವ ಪ್ರತಿನಿಧಿಯಾಗಿ ಅಯೋ ಯಂತ್ರಾದಿಗಳು ನಿರ್ವಹಿಸುವುವು. ಹೀಗೆ ಮಾನವರು ಕ್ರಮೇಣ ಶಕ್ತಿಯನ್ನು ಕಳೆದುಕೊಂಡು ಅಂಗ ವಿಕಲರಂತೆ ಮಾನವ ಜೀವನ ರಸಾಸ್ವಾದನ ಪಟುತ್ವ ಹೀನರಾಗಿ ವೃಥಾ ಜಾತರಾಗುವರು. ಈ ಸನ್ನಿವೇಶದಲ್ಲಿ ಪರವಸ್ತು ಮತ್ತು ತತ್ವಸಮನ್ವಯ ಜ್ಞಾನಕ್ಕೆ ಲೇಶವೂ ಅವಕಾಶವಿಲ್ಲವೆ ಮಾನವ ಜನ್ಮವೇ ಸ್ವವಿನಾಶ ಪರವಿನಾಶಕರವಾಗುವುದು ಸ್ವತಸ್ಸಿದ್ಧವಾಗುವುದು.

"ಯಂತ್ರಗಾರಿಕೆ"ಯ ಕೃತಕಜೀವನದಿಂದ "ಕೈಗಾರಿಕೆ" ಮತ್ತು

---

§ ಭೂಮಿಯು ಗರ್ಭದಲ್ಲಿ ಧರಿಸಿರುವ ಧಾತುಗಳೂ ಲೋಹಗಳೂ ತೈಲಾದಿಗಳೂ ಪ್ರಾಣಿಗಳ ಸುಖ ಜೀವನಕ್ಕೆ ಆವಶ್ಯಕವಾದಾಗ ವಿವಿಧ ರೂಪಗಳಿಂದ ಪ್ರಕೃತಿಯು ಪ್ರಚೋದಿಸಿದಂತೆ ವಿವರಣೆ ಮಾಡುವ ಸೂಕ್ಷ್ಮ ವಿಚಾರವನ್ನು ತಿಳಿಯಲಾರದಷ್ಟು ಮೋಹವು ಆವರಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಕೃಷಿಗಾರಿಕೆ" ಯಿಂದ ನಡೆಯಬೇಕಾದ ಸಹಜ ಮತ್ತು ಸರಳ ಜೀವನ ಪದ್ಧತಿಯೂ ಸಹಬಾಳ್ವೆಯೂ ಅಸ್ತವಾಗಿ ಬಹಿಶ್ಚರ ಪ್ರಾಣಗಳಾದ ಅರ್ಥ–ಧನ ಸೌಕರ್ಯರ್ಕ್ಕಾಗಿ ಏರ್ಪಡಿಸಿದ ರಾಜ್ಯಮುದ್ರಾಧನದ ಕಾಗದವನ್ನು ಮಾನವ ವಿಜ್ಞಾನಾಧಿಕ್ಯದ ದುರುಪಯೋಗದಿಂದ ಅನುಕರಿಸಿ ಅಂತಹ ಕಾಗದಗಳನ್ನು ಕೃತಕವಾಗಿ ಸೃಷ್ಟಿಮಾಡಿ ವೈಯಕ್ತಿಕ ದಿವಾಳಿತನಕ್ಕೂ ರಾಷ್ಟ್ರದ ದಿವಾಳಿತನಕ್ಕೂ ಅಯೋ ಯಂತ್ರಾದಿಗಳೂ ತತ್ಸ್ವಾಮ್ಯವನ್ನು ಪೂರ್ಣವಾಗಿ ಹೊಂದಿರುವ ವಿದೇಶೀಯರ ತಂತ್ರಗಳೂ ಕಾರಣವಾಗಿರುತ್ತವೆ. ರಾಷ್ಟ್ರದಲ್ಲಿ ಮತ್ತು ಪ್ರಜೆಗಳಲ್ಲಿ ಪ್ರಕ್ಷುಬ್ಧತೆಯು ತಾಂಡವವಾಡುವಂತೆ ಮಾಡಿ ಸ್ವಾರ್ಥವನ್ನು ಸಾಧಿಸುವ ವಿದೇಶೀಯರು ಯಂತ್ರಾದಿಗಳ ಪ್ರಲೋಭ ಮೋಹಗಳಿಂದ ಜನತೆಯನ್ನು ವಶೀಕರಿಸುವುದಕ್ಕೆ ಯಂತ್ರಗಳು ಉದ್ದೀಪಕಗಳಾಗಿರುವುವು. ಇಂತಹ ಯಂತ್ರಜೀವನ ಕೃತಕಜೀವನವ್ಯಾಪಾರಗಳೂ ಬಹಿಶ್ಚರ ಪ್ರಾಣಗಳಾದ ಅರ್ಥವನ್ನು ಯಂತ್ರದಿಂದ ಕೃತಕವಾಗಿ ನಡೆಸುವ ವಿಧಾನಗಳೂ ಮತ್ತು ತದನುಕರಣಯಂತ್ರಜೀವನದ ವ್ಯಾಪಾರಗಳೂ ಹೆಚ್ಚಿದಾಗ ಪ್ರಕೃತಿಯ ವ್ಯಾಪಾರಗಳೂ ಅಲ್ಲೋಲಕಲ್ಲೋಲವಾಗಿ ಮಾನವ ವಿನಾಶಕ್ಕೆ ಕಾರಣವಾಗುವುವು. (ಪಾರಮಾರ್ಥಿಕ ವಿಷಯ ಪರಿಗಣನೆಯೂ ಅದೃಶ್ಯವಾಗುವುದು ;) ಇಷ್ಟೇ ಅಲ್ಲದೆ ಮಾನವ ವಿಜ್ಞಾನಾಧಿಕ್ಯದ ದುರುಪಯೋಗದಿಂದ ಬ್ರಾಹ್ಮೀ ರಾಜನೀತಿಗೆ ವಿರೋಧ.

ಯಂತ್ರ ಸಾಧನದಿಂದ ಸಾಧ್ಯವಾಗಬೇಕಾದ ಗಗನಯಾತ್ರೆ ಭೂಸಮುದ್ರಾಂತಃಪ್ರವೇಶಾದಿಗಳು ಮಾನವ ಜೀವನದ ಮೇಲೆ ಉಂಟು ಮಾಡುವ ನಾನಾವಿಧ ಪರಿಣಾಮಗಳ ದೃಷ್ಟಿಯಿಂದ ಹೇಯ ಮತ್ತು ತ್ಯಾಜ್ಯಗಳಾಗಿವೆ ಎಂಬ ಸಂದೇಶವನ್ನು 700–800 ವರ್ಷಗಳ ಹಿಂದೆ, ಪಾತಾಳಮಾವಿಶಸಿ, ಯಾಸಿ ನಭೋ ವಿಲಂಘ್ಯ, ದಿಙ್ಮಂಡಲಂ ಭ್ರಮಸಿ ಮಾನಸ ಚಾಪಲೇನ— ಎಂಬ ಮಾರ್ಮಿಕೋಕ್ತಿಗಳಿಂದ ಭಾರತರಾಷ್ಟ್ರ ವೈರಾಗ್ಯ ಚಕ್ರವರ್ತಿ ಶ್ರೀ ಭರ್ತೃಹರಿ ಮಹಾಶಯರು ಸ್ಪಷ್ಟಪಡಿಸಿ ಎಚ್ಚರಿಸಿರುತ್ತಾರೆ. ಪವಿತ್ರವಾದ ಮಾನವ ಶರೀರವನ್ನು ಧರಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಳ ಸಂತೃಪ್ತ ಜೀವನಕ್ಕೆ ಬೇಕಾಗುವ ಮತ್ತು ಸಾಕಾಗುವ ಮಿತ ಪ್ರಮಾಣದ ಅನ್ನ, ಬಟ್ಟೆ, ವಸತಿಗಳಿಗಾಗಿ ಅಪಾರ ಧನವನ್ನು ಗಳಿಸಿ ವಿದೇಶಗಳಿಗೆ ಹೋಗಿ ಶರೀರ ಮನೋ ವ್ಯಾಪಾರಗಳನ್ನು ವಿಕ್ರಯಿಸುವುದಾಗಲೀ ಮೃಗಶಾಲೆಗಳಲ್ಲಿ ನಿರ್ಬಂಧದಲ್ಲಿರುವ ಪ್ರಚಂಡ ಮೃಗಗಳಂತಿರುವ ಸ್ಥಿತಿಯಾಗಲೀ ಪರಾಕ್ರಮಣ ಪರದೇಶಗಳ ಮೇಲಿನ ಆಡಳಿತಗಳಾಗಲೀ ಹಿತಕರವಲ್ಲವೆಂದು ವಿಶ್ವಾದ್ಯಂತ ಆಯಾ ಸನ್ನಿವೇಶದಲ್ಲಿರುವವರಿಗೆ ಪ್ರತ್ಯೇಕವಾಗಿ ಸ್ವತಃ ಅನುಭವಕ್ಕೆ ಬರುತ್ತದೆ. ಇಂತಹ ವಿಷಮ ವರ್ತನೆಯಿಂದ ಸ್ವಜನ್ಮ ಸಮಾಜ ಸಂಸ್ಕೃತಿಗಳಿಂದ ಸಹಜವಾಗಿ ಲಭ್ಯವಾಗುವ ಸುಖಸಾಧನಸಂಪತ್ತುಗಳು ದೊರೆಯದೆ ಮತ್ತು ಅವುಗಳನ್ನು ದೊರಕಿಸಿಕೊಳ್ಳಲಾಗದೆ ಜೀವಾವಧಿ ದಾರುಣವಾದ ಶಾರೀರಕ, ಮಾನಸಿಕ ಬಾಧೆಗಳಿಗೆ ಬಲಿಯಾಗಬೇಕಾಗುತ್ತದೆ. ವಿಜ್ಞಾನದ ಹೆಸರಿನಲ್ಲಿ ಅಯೋ ಯಂತ್ರಾದಿಗಳನ್ನು ಮಿತಿಮೀರಿ ದುರುಪಯೋಗ ಪಡಿಸುವುದರಿಂದ ಪ್ರಕೃತಿ ಶಕ್ತಿಗಳೆಲ್ಲಾ ಕೆಟ್ಟು ಪರೋಕ್ಷವಾಗಿ ಮಾನವ ಗುಣಕರ್ಮಶಕ್ತಿಗಳನ್ನು ಕುಂದಿಸಿ ಕಾಯಿಲೆಯಂತೆ ಜೀವನವನ್ನು ಬಳಸಿ ಜನತೆಯನ್ನು ಸಾಮೂಹಿಕವಾಗಿ ಕೊಲ್ಲುವುದೆಂಬುದು ಸ್ಪಷ್ಟವಾಗಿದೆ.

ಪ್ರಕೃತಿಮಾತೆಯು ಸಿದ್ಧಪಡಿಸಿ ನೀಡುತ್ತಿರುವ ಮತ್ತು ಜೀವನಕ್ಕೆ ಅತ್ಯವಶ್ಯಕವಾದ ಆಹಾರದೊಡನೆ ಪ್ರತಿಗೃಹದಲ್ಲಿಯೂ ಬಳಸಲ್ಪಡಬೇಕಾದ ಮೆಣಸು, ಲವಂಗ, ಸಾಸಿವೆ, ಹರಳುಬೀಜ, ಎಣ್ಣೆಬೀಜ, ಅಕ್ಕಿ ಮೊದಲಾದ ಸ್ವಾಭಾವಿಕ ಸಂಜೀವನಗಳ ಸಾರವನ್ನು ಯಂತ್ರದಿಂದ ಬೇರ್ಪಡಿಸಿ ರಸ ವಿಹೀನವೂ, ವಿನಾಶಕರವೂ, ವಿಷಸದೃಶವೂ ಆದ ಕೃತಕ ಪದಾರ್ಥಗಳು ಜನ ಸಾಮಾನ್ಯಕ್ಕೆ ದೊರೆಯುವಂತೆ ಮೋಹಪಡಿಸಿ ಲೋಭಗೊಳಿಸುವ ಅಯೋ ಯಂತ್ರಾದಿಗಳೂ ಅವುಗಳ ಪೋಷಕರೂ ಸಂವರ್ಧಕರೂ ಸ್ವಾಮ್ಯವನ್ನು ಹೊಂದಿದವರೂ ಸಹಜ ಜೀವನವನ್ನು ಧಿಕ್ಕರಿಸಿದಂತಾಗುವುದಿಲ್ಲವೇ ! ಹೆಮ್ಮೆಯಿಂದ ಕೌಶಲವನ್ನು ಮಿತಿ ಮೀರಿ ಬೆಳಗುವ ವೃತ್ತಿಯುಳ್ಳ ಅಯೋಯಂತ್ರ ನಿರ್ಮಾತೃ ನಿಪುಣರು ಅಸಂಖ್ಯಾತಗಳಾದ ಯಂತ್ರ ಸಹಾಯದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವಿಧ ಪದಾರ್ಥಗಳ ಸಾರ ಸಂಯೋಜನ ವಿಭಜನಗಳಿಂದ ಪ್ರಕೃತಿಗೆ ವಿರೋಧವಾಗಿ ಪ್ರಕೃತಿಯನ್ನು ಎದುರಿಸಿ ಪ್ರಕೃತಿಯನ್ನು ಕೊಲೆಮಾಡಿ ಆರೋಗ್ಯಹಾನಿಯನ್ನೂ ರೋಗವನ್ನೂ ಸಾರ್ವಕಾಲಿಕ ಮೃತ್ಯುಬಾಧೆಯನ್ನೂ ಉಂಟುಮಾಡುವ ಕೃತಕವಾದ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಿ ಸರಳ ಮತ್ತು ಸಹಜಾನಂದ ಜೀವನವನ್ನು ನಾಶಪಡಿಸುವವರಾಗುವರೆಂಬುದನ್ನು ತಿಳಿಯಲಾರದಷ್ಟು ವಿವೇಕ ಹೀನರಾಗುವುದರಿಂದ ನೋಡಿದವರಿಗೆ ಖೇದವುಂಟಾಗದಿರದು. (ಸ್ವ. ವಿ. 152)

ಪರಾಶಕ್ತಿ ಎನಿಸುವ ವಿಶ್ವಶಕ್ತಿಯು ಸ್ಥಾವರಜಂಗಮಾದಿಗಳ ಯೋಗಕ್ಷೇಮಕ್ಕೆ 33 ಕೋಟಿ ಗುಣಕರ್ಮಶಕ್ತಿಗಳ ವಿನ್ಯಾಸ, ವಿಭಜನ ಸಂಯೋಜನಗಳಿಂದ ಸಕಲ ವ್ಯವಸ್ಥೆಗಳನ್ನು ಮಾಡಿರುವಾಗ ಕಪಿಯಂತೆ ಅನುಕರಣ ಶಕ್ತಿ ಧುರೀಣವಾದ ವಿಜ್ಞಾನವು; ಬಲಿಯದಿರುವುದನ್ನು ಅಕಾಲದಲ್ಲಿ ಬಲಿಯುವಂತೆಯೂ ಬಲಿತವಸ್ತುವು ಕಾಲಾತೀತವಾಗಿ ನಿಂತು ಉಪಯೋಗಕ್ಕೆ ಬರುವಂತೆಯೂ, ಬೇರೆ ಬೇರೆ ವರ್ಗದ ಪ್ರಾಣಿಗಳನ್ನೂ ಗಿಡಗಳನ್ನೂ ಪರಸ್ಪರ ಸಮಾಗಮಗೊಳಿಸಿಯೂ ಪೋಷಗೊಳಿಸುವುದು. ಈ ಬಗೆಯ ಪವಾಡದಂತಿರುವ ಕೃತಕ ವ್ಯಾಪಾರಗಳಿಂದ ವಿವೇಕಹೀನರು ವೃಥಾ ಅಪಮೃತ್ಯು ಅನಾರೋಗ್ಯಗಳಿಗೆ ಗುರಿಯಾಗುವರು. ಇದಕ್ಕೆಲ್ಲಾ ಮೂಲಕಾರಣವಾದ ಯಂತ್ರಗಾರಿಕೆಯಿಂದ ಪ್ರಪಂಚವು ಹೀನಸ್ಥಿತಿಗೆ ಬರುತ್ತಿರುವುದನ್ನು ಪ್ರಕೃತಿಶರಣರೂ ಪ್ರಕೃತಿ ಶಾಸ್ತ್ರಜ್ಞರೂ ತಡೆಗಟ್ಟಬೇಕಾದುದು ಅತ್ಯವಶ್ಯಕವಾಗಿದೆ.

ಆಯಾ ದೇಶದ ಭೂ ವಾಯುಗುಣ ಮೊದಲಾದ ಪರಿಸ್ಥಿತಿಗಳಿಗೆ ಹೊಂದಿಕೊಂಡಂತೆ ನಡೆಯಬೇಕಾದ ರೋಗ ಪರಿಹಾರಕ, ರೋಗ ನಿವಾರಕ, ಆರೋಗ್ಯ ಪ್ರದಾಯಕ ಔಷಧಿ ಆಹಾರವಸ್ತು ಪ್ರಪಂಚದಲ್ಲಿ, ತದ್ವಿರುದ್ಧವಾಗಿ ತಾತ್ಕಾಲಿಕವಾಗಿ ರೋಗ ಸ್ತಬ್ಧತೆಯನ್ನೂ ರೋಗ ಪೋಷಣೆಯನ್ನೂ ರೋಗ ವಿಶೇಷಗಳನ್ನು ಉಂಟುಮಾಡುವ ಬೇರೆ ಬೇರೆ ಭೂ ವಾಯು ಗುಣಗಳಿಗೆ ಸಂಬಂಧಪಟ್ಟ ಆಹಾರ ವಸ್ತು ಔಷಧಿಗಳು ಅಯೋ ಯಂತ್ರಪರಿಷ್ಕೃತವಾಗಿ ಜನತಾ ವಿನಾಶಕಾರಿಯಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧನ್ವಂತರೀ ಪ್ರಯೋಗ ಪಾಠಶಾಲೆಯ ಪದಾರ್ಥಗಳಾದ ಚೂರ್ಣ, ರಸಾಯನ, ಘೃತ, ತೈಲ, ಘುಟಿಕಾ, ಭಸ್ಮ ಮೊದಲಾದುವು 'ಔಷಧಿ'ಗಳೆಂಬ ಹೆಸರಿನಿಂದ ಪ್ರಕಾಶಕ್ಕೆ ಬಂದರೂ ನಿತ್ಯೋಪಯುಕ್ತ ವಸ್ತುಗಳಿಂದಲೇ ಸಿದ್ಧವಾಗುವುದರಿಂದ ಶರೀರಾರೋಗ್ಯದ ವೈಷಮ್ಯ ವನ್ನು ಪರಿಹರಿಸಿ ಸಮೀಕರಣ ಮಾಡುವ ಪರ್ಣ, ಶಾಕ, ಮೂಲಿಕಾ ಮೊದಲಾದುವುಗಳಂತೆ ನಿತ್ಯೋಪಯುಕ್ತ ವಸ್ತುಗಳೇ ಆಗಿವೆ.

ವಿಷವೆಂಬ ಬಿರುದನ್ನು ಹೊಂದಿ ಕಂಗೊಳಿಸುವ ವಿದೇಶೀಯ ಧಾತು ಸಂಯೋಜಿತ ವಸ್ತುಗಳು ಕೆಡುಕನ್ನು ಉಂಟುಮಾಡುವುವು ಎಂಬುದನ್ನು ಮನಗಾಣುವುದು ಉಚಿತ ಮತ್ತು ಆವಶ್ಯಕ.

ವೈದ್ಯ ಮತ್ತು ಚಿಕಿತ್ಸಾ ವಿಷಯದಲ್ಲಿ ಪಂಡಿತೋತ್ತಮನೂ ತತ್ತ್ವಾನ್ವೇಷಣಪರನೂ ವಿಶ್ವಪೂಜ್ಯನೂ ಆದ ಅಲೆಕ್ಸಸ್ ಕ್ಯಾರೆಲ್ ಮಹಾಶಯನು ಸ್ವತಃ ಪ್ರಯೋಗ ಪರೀಕ್ಷಾನುಭವಗಳಿಂದ ಸಿದ್ಧಾಂತೀ ಕರಿಸಿ ಹೇಳಿರುವ ಮಿತಿ ಸೂತ್ರವನ್ನು (ಸ್ವ. ವಿ. 152 ಸಾಲು 12) ವಿಶ್ವದಲ್ಲಿ ಯಾವ ವೈದ್ಯನಾಗಲೀ ಚಿಕಿತ್ಸೆಯನ್ನು ಹೊಂದುವ ಯಃ ಕಶ್ಚಿತ್ ಸಾಮಾನ್ಯ ಮನುಷ್ಯನೇ ಆಗಲೀ ಆದರಿಸಿ ಮನ್ನಿಸಿ ಮಿತಿ ಯರಿತು ಆರೋಗ್ಯಸಾಧನೆಗೆ ಎಚ್ಚರಿಕೆಯಿಂದ ಯತ್ನಿಸಬೇಕಾಗಿರುತ್ತದೆ. ಭಾರತೇತರ ದೇಶದವರು ಇದನ್ನು ಧರ್ಮಗ್ರಂಥಕ್ಕಿಂತ ಹೆಚ್ಚು ಪವಿತ್ರವನ್ನಾಗಿ ಪರಿಗಣಿಸಿ ಶರಣಾಗತಿಯಿಂದ ಅನುಸರಿಸಿ ಮಾನವೀ ಯತೆಯನ್ನು ಕಾಪಾಡುವುದು ಯುಕ್ತವಾಗಿದೆ.

ವಿಜ್ಞಾನವು ಕೀಳು ಮಟ್ಟದ ಬ್ಯಾಕ್ಟೀರಿಯಾದಲ್ಲಿ ಮುಳುಗಿ ಏಳಲಾರದೆ ಇರುವುದರಿಂದ ದುಃಖ ವಿನಾಶಕ ಸ್ವಸ್ವರೂಪಾನು ಸಂಧಾನ. ಭಕ್ತಿ ಜ್ಞಾನಗಳ ಸ್ಫೂರ್ತಿಯೂ ಉಂಟಾಗಲಾರದು. ಜ್ಞಾನ ವಿಜ್ಞಾನಾದಿಗಳಲ್ಲಿ ಉನ್ನತ ಮಟ್ಟದಲ್ಲಿದ್ದು ವಿಶ್ವಕ್ಕೆಲ್ಲಾ ಮಾನವೀಯತೆ ಯನ್ನು ಬೋಧಿಸುವ ಯೋಗ್ಯತೆಯುಳ್ಳವರಾದರೂ 'ಹಂದಿಗಳೊಡನೆ ಆಡುವ ಹಸುವಿನ ಕರುವೂ ಸಹ ಮಲ ಭಕ್ಷಣ ಮಾಡುವುದು' ಎಂಬ ಗಾದೆಯಂತೆ ಸಹವಾಸ ಸಂಪರ್ಕಗಳಿಂದ ಭಾರತೀಯರು ಸ್ವಸ್ವರೂಪ ವನ್ನು ಮರೆತು ಪರದೇಶೀಯ ಚೆಡಗಿಗೆ ಮರುಳಾಗಿ ಮೋಹದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೋಸ ಹೋಗಿ ಪರದೇಶೀಯರ ದೇಶಕ್ಕೆ ಹೊಂದಿಕೊಂಡಿರಬಹುದಾದರೂ ನಮ್ಮ ದೇಶಕ್ಕೆ ಅನುಗುಣವಾಗಲಾರದೆಂಬ ಕಾರಣದಿಂದ ದೋಷಭೂಯಿಷ್ಠವಾದ ರಾಜ್ಯಭಾರ ಕ್ರಮವನ್ನೂ ಗ್ರಂಥ ಪಠನಾದಿಗಳನ್ನೂ ಆಚಾರ ನಾಶ, ಸಂಸ್ಕೃತಿ ನಾಶ, ವ್ಯಕ್ತಿತ್ವನಾಶ, ಕುಟುಂಬ ನಾಶ, ಸಮಾಜ ನಾಶ, ಪ್ರದೇಶ ನಾಶ, ರಾಷ್ಟ್ರ ನಾಶಗಳನ್ನುಂಟು ಮಾಡುವ ತಂತ್ರಗಳನ್ನೂ ಯೋಜನೆಗಳನ್ನೂ ವರ್ತನೆಗಳನ್ನೂ ಮತಾಂತರ ಪ್ರವೃತ್ತಿಯನ್ನೂ ಅಭ್ಯಾಸ ಮಾಡಿ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದಾಗಿದೆ. ರಾಜ್ಯಕಾರ್ಯಾಲಯದಲ್ಲಿ ಆಸನಗಳನ್ನು ಪರದೇಶೀಯ ವ್ಯಕ್ತಿಗಳು ಸ್ವತಃ ಅಲಂಕರಿಸುವ ಸಂಭವವಿಲ್ಲವಾದ ಮಾತ್ರದಿಂದ ಭಾರತೀಯರು ಸ್ವತಂತ್ರರೆನಿಸಿಕೊಂಡಂತಿರುವ ಪರಿಸ್ಥಿತಿಯಲ್ಲಿ ವಸ್ತುತಃ ಶಾರೀರಕವಾಗಿಯೂ ಮಾನಸಿಕವಾಗಿಯೂ ಸ್ವತಂತ್ರರಲ್ಲವೆಂಬುದು ತೋರುತ್ತದೆ. ಶರೀರದಲ್ಲಿ ನೆಲಸಿರುವ ಅಸ್ವಾತಂತ್ರ್ಯವೆಂಬ ಈ ಬಗೆಯ ಕ್ಷಯರೋಗವನ್ನು ಭಾರತದಲ್ಲಿ ಆಯಾ ಭೂ ಭಾಗ ವಾಯುಗುಣ ಮಾನವ ಗುಣಕರ್ಮಶಕ್ತಿಗಳಿಗೆ ಅನುರೂಪವೂ ಸ್ವಕೀಯವೂ ಸ್ವದೇಶೀಯವೂ ಋಷಿಪ್ರೋಕ್ತವೂ ಆದ ಆಹಾರ, ವಿಹಾರ, ಔಷಧಿ ಉಪಚಾರಗಳ ಅವಲಂಬನೆಯಿಂದ ನಿಶ್ಶೇಷಗೊಳಿಸುವುದಕ್ಕೆ ಸಾಧ್ಯವಾದೀತು. ಆರೋಗ್ಯಾಭಿವೃದ್ಧಿಯ ಕ್ರಮಗಳಿಂದ ಶಾರೀರಕ, ಮಾನಸಿಕ ಸಾಮರ್ಥ್ಯವನ್ನು ಹೊಂದಿ ಸ್ವಕೀಯ ಸಂಸ್ಕೃತಿ ಗ್ರಂಥಗಳಲ್ಲಿರುವ ತತ್ವವನ್ನರಿತು ಯಂತ್ರಾದಿ ಪರದೇಶೀಯಾವಲಂಬನೆಯ ರೋಗದಿಂದ ವಿಮುಕ್ತರಾಗಿ ಸರ್ವವಿಧದಲ್ಲಿಯೂ ಸ್ವತಂತ್ರರಾಗಿ ಸ್ವಾತಂತ್ರ್ಯವನ್ನು ಘೋಷಿಸಿ ವರ್ಣಪರಿಪಾಲನೆಯೆಂಬ ಮಾನವೀಯತೆಯನ್ನು ಸಾಧಿಸಬಹುದಾಗಿದೆ. ಪರಕೀಯಾದಿ ಈತಿ ಬಾಧೆಗಳಿಂದ ಮಲಿನವಾದ ವಿಮರ್ಶಾ ವಿವೇಕಗಳಿಂದ ಉಂಟಾಗಿರುವ ವೈಷಮ್ಯಗಳನ್ನು ಹೋಗಲಾಡಿಸಿಕೊಳ್ಳಬೇಕೆಂದು ಜನಾಂಗದಲ್ಲಿ ಗುಂಪುಗಳನ್ನು ಕಲ್ಪಿಸಿ ಒಂದು ಗುಂಪಿನ ಮೇಲೆ ದೋಷಾರೋಪಣೆಗಳನ್ನು ಮಾಡುವುದಾಗಲೀ, ಗುಂಪನ್ನು ತ್ಯಜಿಸಿ ಬೇರೆ ಗುಂಪನ್ನು ಸೃಷ್ಟಿಸುವುದಾಗಲೀ ಅಥವಾ ಬೇರೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಂಪಿಗೆ ಸೇರುವುದಾಗಲೀ ಆತ್ಮ ದ್ರೋಹ, ವಿಶ್ವಾಸಘಾತಕತನ, ರಾಷ್ಟ್ರಘಾತಕತನವೆಂಬುದನ್ನೂ ದ್ವೇಷಾಸೂಯೆಗಳಿಂದ ರಾಷ್ಟ್ರದಲ್ಲಿ ಜನಿಸಿದ ಗುಂಪುಗಳೇ ಸೂಚಿಸುತ್ತಿರುವುದನ್ನು ವಿಮರ್ಶಿಸಿ ಎಚ್ಚೆತ್ತು ಕೊಳ್ಳಬೇಕು. ನಿಜತ್ವದ ನೆಲೆಯನ್ನರಿಯಲು ಸರ್ವ ಪ್ರಯತ್ನಮಾಡಿ ಸ್ವಯಂ ಉತ್ತೀರ್ಣರಾಗಿ ಮಿತಿಯನ್ನು ಮೀರದೆಯೂ ಮಿತಿಯಿಂದ ಜಾರದೆಯೂ ಮಾನವರಾಗಿ ಬಾಳುತ್ತಾ ಪರದೇಶೀಯರಿಗೂ ಮಿತಿ ತತ್ವವನ್ನು ಬೋಧಿಸುವ ಪವಿತ್ರ ಕರ್ತವ್ಯವನ್ನು ಸಾಧಿಸಬೇಕಾಗಿದೆ.

ವರ್ಣಪರಿಪಾಲನೆ — ೨

ಯಾರನ್ನು ಯಾರೂ ತಿದ್ದುವುದಕ್ಕಾಗಲೀ ಯಾರಿಗಾದರೂ ಶ್ರೇಯಸ್ಸನ್ನು ತುಂಬುವುದಕ್ಕಾಗಲೀ ಅಥವಾ ಹೊರಿಸುವುದಕ್ಕಾಗಲೀ ಸಾಧ್ಯವಿಲ್ಲ. ಅವರವರ ಶ್ರೇಯಸ್ಸನ್ನು ಅವರವರೇ ಸಾಧಿಸಿಕೊಳ್ಳ ಬೇಕು. ಕೇವಲ ಸಂಸ್ಕೃತಿ ಮಾರ್ಗ ದರ್ಶನದಿಂದಲೂ ಸಂಸ್ಕೃತಿಯನ್ನು ಆಚರಿಸಲು ತಕ್ಕ ವಾತಾವರಣ ಕಲ್ಪನೆಯಿಂದಲೂ ವ್ಯಕ್ತಿಗಳು ತಮ್ಮ ತಮ್ಮ ಸಂಕಲ್ಪದಲ್ಲಿ ಶ್ರೇಯೋ ಲಾಭವನ್ನು ಅಳವಡಿಸಿಕೊಳ್ಳಬಹು ದಾದ ಸನ್ನಿವೇಶವನ್ನುಂಟುಮಾಡುವುದೇ ಪರೋಪಕಾರಿಗಳಾದ ತದ್ವಿದರ ಕರ್ತವ್ಯ. (ಸ್ವ. ವಿ. ಪುಟ 277)

ಪ್ರಪಂಚದಲ್ಲಿ ಪರಸ್ಪರ ಹೆಣೆದುಕೊಂಡು ಒಂದೇ ಆಗಿರುವ ಸೃಷ್ಟಿಸ್ಥಿತಿಲಯ ಕಾರ್ಯಗಳ ಯಾವ ಒಂದು ಅಂಶವೂ 'ಕೃತ'ವೆನಿಸ ಬೇಕಾದರೆ "ಇಡೀ ಪ್ರಪಂಚವು ಸಾಕ್ಷಾತ್ತಾಗಿ, ಪರೋಕ್ಷವಾಗಿ ಮತ್ತು ಪರಂಪರೆಯಾಗಿ ಸಹಕರಿಸುವುದೆಂಬುದೇ ನಿತ್ಯವಾದ ಪ್ರಕೃತಿ ನಿಯಮವು" ವೆಂಬುದನ್ನೂ ಯಾರೂ ಮರೆಯಬಾರದು. ಇಂತಹ ಪರಿಸ್ಥಿತಿಯಲ್ಲಿ ನಾನು ಮಾಡುತ್ತೇನೆ. ನಾನು ಮಾಡಿದೆ, ನನ್ನಿಂದ ಆಯಿತು, ಎಂಬ ದುರಭಿಮಾನವನ್ನು ತೊಲಗಿಸಿ ವ್ಯವಹರಿಸುವ ಉಪಾಯವು ಸಂಪುಟೀ ಕೃತ ಭಗವದ್ಗೀತೆಯಲ್ಲಿ ವಿವರಿಸಲ್ಪಟ್ಟಿದೆ. "ಮಾಡುವವನು ನಾನುವು" 'ಮಾಡಿದವನು ನಾನುವು' 'ಆದುದು ನಾನುವಿನಿಂದ' ಇತ್ಯಾದಿ ಪದ ಪ್ರಯೋಗಗಳಿಂದ ವ್ಯವಹರಿಸಿ ಪ್ರತಿಕ್ಷಣದಲ್ಲಿಯೂ ಸ್ವಸ್ವರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಸ್ಥಾನವನ್ನು ಲಕ್ಷ್ಯವಾಗಿಟ್ಟುಕೊಳ್ಳಬಹುದಾಗಿದೆ. ವಿಶ್ವದ ಅಷ್ಟ ಮೂರ್ತಿಗಳು ಅಷ್ಟಮೂರ್ತಿ ದೇವತೆಗಳಿಗಾಗಿ ಅಷ್ಟ ಮೂರ್ತಿವ್ರವ್ಯ ತ್ಯಾಗ ಮಾಡುತ್ತಿರುವುದನ್ನು ಗಮನಿಸಬೇಕು. ಈಶಾವಾಸ್ಯವಾದ ಪ್ರಪಂಚದಲ್ಲಿ ಪರಮಾತ್ಮನ ಜಗದ್ಧನವನ್ನು ಪರಮಾತ್ಮನಿಗಾಗಿ ಪರಮಾತ್ಮನೇ ವಿನಿಯೋಗಿಸಿಕೊಳ್ಳುವುದನ್ನು ಜ್ಞಾಪಿಸಿಕೊಳ್ಳುತ್ತಿರಬೇಕು. ತದ್ವಿರುದ್ಧವಾಗಿ ವ್ಯಕ್ತಿಯು ತನ್ನ ಪರಮಾತ್ಮತ್ವವನ್ನು ಪ್ರಧಾನವಾಗಿ ಎಣಿಸಿ ತನ್ನಿಂದ ಪ್ರಪಂಚವನ್ನು ಪ್ರಪಂಚದಿಂದ ತನ್ನನ್ನು ಬೇರ್ಪಡಿಸಿ ಪ್ರಪಂಚವೆಲ್ಲಾ ತನಗೇ ತನ್ನ ಭೋಗಕ್ಕೇ ಇರುವುದೆಂದು ಭಾವಿಸಿ ಲಂಚ, ದುರ್ವರ್ತನೆ, ಕೀಳು ಮಟ್ಟದ ಇಂದ್ರಿಯಲೋಲುಪತೆಗಳಿಂದ ನಡೆದರೆ ಆ ಧನವೂ ವಿಷಪೂರಿತವಾಗಿ ವ್ಯಕ್ತಿಯನ್ನೇ ಕೊಲ್ಲುವುದು ಎಂಬುದನ್ನು ಕಂಡು ಕಂಡು, ತಿದ್ದಿಕೊಳ್ಳದೆ ಎಚ್ಚರಿಕೆಯನ್ನು ಹೊಂದದೆ 'ಇರುವ' ವ್ಯಕ್ತಿಯು ಮಾನವ ಮಟ್ಟಕ್ಕಿಂತ ಅಧಮಸ್ಥಿತಿಯಲ್ಲಿರುವವನಾಗುವನು.

ಭೂ ವಾಯುಗುಣಗಳ ಆವಶ್ಯಕತೆಯ ಪೂರೈಕೆಗಾಗಿ ಕೃತಕವಾಗಿ ವಿವಿಧವಾಗಿ ಮದ್ಯಗಳನ್ನು ಮಾಡುವುದು, ಮದ್ಯಾರಾಧನೆ, ಮದ್ಯಸೇವನೆಗಳೇ ಮೊದಲಾದ ಆಹಾರ ಪಾನಾದಿಗಳಿಂದಲೇ ಅವರವರ ಉದ್ಯಮ ವ್ಯಾಸಂಗಗಳನ್ನು ಸಾಧಿಸುವ ಮೋಹಾವೇಶಗಳಿಂದ ಕೂಡಿದ ಜನಾಂಗಗಳಿಗೆ ಶ್ರೇಯಸ್ಸಾಧಕಗಳೂ ಜೀವ ಸಂಜೀವನಗಳೂ ಆದ ಗೋಮೂತ್ರ, ಗೋಮಯ, ಪಂಚಗವ್ಯ, ಪಂಚಾಮೃತಗಳ ಮಹಿಮೆಯನ್ನೂ ಸತ್ವವನ್ನೂ ತಿಳಿಯಲು ಅವಕಾಶವಿರುವುದಿಲ್ಲ. ಇದರ ಜತೆಗೆ ದ್ವೇಷಾಸೂಯೆಗಳಿಂದ ಕೂಡಿದವರಾದ ಇಂತಹವರು ಉತ್ಕೃಷ್ಟವಾದ ಸಂಜೀವನ, ಅಮೃತವಾದ ಈ ಪದಾರ್ಥಗಳನ್ನು ಅಲ್ಲಗಳೆದು ಅಪಪ್ರಚಾರ ಮಾಡಿ ತಪ್ಪುದಾರಿಗೆ ಎಳೆಯುವ ಯತ್ನವನ್ನು ಮಾಡುವುದೇ ಅವರ ವೃತ್ತಿಯಾಗಿರುತ್ತದೆ. (ಸ್ವ. ವಿ. 328-329)

ಸ್ವಾಭಾವಿಕವಾದ ಕೊಟ್ಟಿಗೆ ಗೊಬ್ಬರವೂ ಎಲೆ ಗೊಬ್ಬರವೂ ಶಾಶ್ವತವಾಗಿ ಭೂಗುಣವನ್ನೂ ಬೆಳೆದ ಸಸ್ಯಗಳ ಗುಣವನ್ನೂ ಧಾನ್ಯಗುಣವನ್ನೂ ಶ್ರೇಷ್ಠತರವಾಗುವಂತೆ ಹೆಚ್ಚಿಸುವುದೆಂದು ದೃಢತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನವುಳ್ಳವರ ಸಂಪತ್ಸಮೃದ್ಧಿಯನ್ನು ನೋಡಿ ಸಹಿಸಲಾರದೆ ಅಸೂಯೆಯಿಂದ ಅವುಗಳನ್ನು ಕೆಡಿಸಲು ತಾತ್ಕಾಲಿಕವಾಗಿ ಆಸುರೀ ಸಂಪತ್ತಿನಂತೆ ಫಲವನ್ನು ಕೊಟ್ಟು ಮೂಲವನ್ನೇ ಹಾಳುಮಾಡುವ ರಾಸಾಯನಿಕ ಕೃತಕ ಗೊಬ್ಬರವನ್ನು ತಮಗಿರುವ ಆಡಳಿತ ಅಧಿಕಾರ ಬಲದಿಂದಲೂ ಧನಲಂಚದ ಮೂಲಕ ವಶೀಕರಿಸಿಕೊಂಡ ಅಧಿಕಾರಿಗಳ ವಂಚಕತನದಿಂದಲೂ ಉತ್ತಮವೆಂದು ಪ್ರಚಾರ ಮಾಡಿಸುವವರೂ ಅದಕ್ಕೆ ಸಹಾಯ ಮಾಡುವ ಪರಮ ವೈರಿಗಳಂತೆ ಇರುವ ಸ್ವಾರ್ಥಿಗಳಾದ ಸ್ವಜನರೂ ಮೃತ್ಯುರೂಪರಾಗಿರುತ್ತಾರೆ. ನೀಚತನವನ್ನು ಹೆಚ್ಚಿಸುವ ಧನಾಧಿಕ್ಯದ ದೆಸೆಯಿಂದಲೂ ತಾಮಸಾಹಾರ ಪಾನಸೇವನೆಗಳಿಂದಲೂ ಮದಿಸಿದ ಜನಗಳು ಆರ್ಥಿಕ ತಂತ್ರ ಪ್ರಯೋಗಗಳಿಂದ ಸ್ವಭಾವತಃ ಉನ್ನತ ಮಟ್ಟದಲ್ಲಿರುವ ಸರಳ ಜೀವಿಗಳ ಮೇಲೆ ಆಡಳಿತ ನಡೆಸುವ ದುಷ್ಟ ವ್ಯಾಪಾರಗಳಿಗೆ ತಕ್ಕ ಕ್ಷೇತ್ರ ಮತ್ತು ಜನಗಳನ್ನು ಆಹಾರಕ್ಕಾಗಿ ಹುಡುಕಲು ಹೋಗುವ ದುಷ್ಟ ಮೃಗಗಳಂತೆ ಹುಡುಕುತ್ತಿರುವರು. ಇಂತಹ ಕುಹಕ ಕುತಂತ್ರಗಳಿಗೂ ಅವಿವೇಕ, ಮೋಹ, ಮೋಸಗಳಿಗೂ ಬಲಿಯಾದ ಜನಗಳು ತಮ್ಮ ತಮ್ಮಲ್ಲಿ ಶತ್ರುತ್ವವನ್ನು ಕಲ್ಪಿಸಿಕೊಂಡು ಮೇಲ್ಕಂಡಂತೆ ಕುತಂತ್ರಾಗ್ರಗಣ್ಯರಾದ ಪರಕೀಯರ ಸಂಪರ್ಕ ಸ್ನೇಹಗಳಿಂದ ಶತ್ರು ವಿನಾಶಮಾಡಿ ಮೆರೆಯಬಹುದಾದರೂ ಕಾಲಾನಂತರ ತಮಗೂ ಅದೇ ಪರಕೀಯರಿಂದ ದುರ್ಗತಿಯುಂಟಾಗುವುದು ಎಂಬುದಕ್ಕೆ ಭಾರತದಲ್ಲಿ ಸಾವಿರಾರು ವರ್ಷಗಳಿಂದ ಇಲ್ಲಿಯವರೆಗೂ ಈಗಲೂ ನಿದರ್ಶನಗಳು ಅನೇಕ ಸಂಖ್ಯೆಯಲ್ಲಿ ದೊರೆಯುವುವು.

ಇಂತಹ ಗೋಮುಖ ವ್ಯಾಘ್ರಗಳ ಸುಳಿವನ್ನು ತಿಳಿಯುವುದಕ್ಕೂ ತಡೆಗಟ್ಟುವುದಕ್ಕೂ ಪ್ರತಿಯೊಬ್ಬರೂ ಸ್ವದೇಶೀಯ ರಾಜನೀತಿ ವ್ರತ ಕವಚಧಾರಿಗಳಾಗುವುದು ಅತ್ಯವಶ್ಯಕ. ಉನ್ನತ ಸಂಸ್ಕೃತಿ ಆಚಾರ ನಿಷ್ಠೆಯುಳ್ಳ ಭಾರತ ಭೂ ಭಾಗವನ್ನು ಗ್ರಂಥಗಳಲ್ಲಿಯೂ ಭೂಪಟದಲ್ಲಿಯೂ ನೋಡಲಾರದಷ್ಟು ಅಸಹನೆಯಿಂದ ದ್ವೇಷವನ್ನು ಬಹಿರಂಗಪಡಿಸಿ ಭಾರತದ ನೆರೆಹೊರೆಯವರೊಡನೆ ಮೈತ್ರಿಗಾಗಿ ಸಂಚು ಮಾಡುವ ಮತ್ತು ವಿಶ್ವಕ್ಕೂ ತಮಗೂ ಹಾನಿಯನ್ನು ಬಯಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜಸ್ತಮೋಮಯರಾದ ಕೋವಿದರ ರಾಜಕೀಯ ವರ್ತನೆಗಳ ದೆಸೆಯಿಂದ ಆತ್ಮ-ರಕ್ಷಣೆ ಮಾಡಿಕೊಳ್ಳಲು, 'ಸಮತ್ವ' ಪ್ರಧಾನಗಳಾದ ಪ್ರಕೃತಿ ಮಾತೆಯ ಶರಣಾಗತರಾಗಲು ಉಗ್ರ ವ್ರತವನ್ನಾಚರಿಸಬೇಕು. ಕುತಂತ್ರಗಳನ್ನು ಪ್ರಯೋಗಿಸಿ ಸ್ವಾರ್ಥವನ್ನು ಸಾಧಿಸುವ ಎಂತಹ ಬಲಿಷ್ಠನಾದರೂ ತಮಗೆ ತಾವೇ ಮೃತ್ಯುವಾಗಿ ದುರಂತಕ್ಕೀಡಾಗುತ್ತಾರೆಂಬುದನ್ನು ಸರ್ವರೂ ಸದಾ ನೆನಪಿನಲ್ಲಿಟ್ಟುಕೊಂಡು ಕಷ್ಟದಿಂದ ಪಾರಾಗಲು ಯತ್ನಿಸುವುದು ಉತ್ತಮಪಕ್ಷವಾಗಿದೆ.

ಈ ಬಗೆಯ ರಾಜನೀತಿ ಪಾಠಗಳನ್ನು ಪರವಸ್ತು ತತ್ವಜ್ಞಾನ ವಿಮರ್ಶೆ ವಿವೇಕಗಳಿಂದ ಕಲಿತು ಕ್ಲೇಶಗಳಿಂದ ಪಾರಾಗಿ ಯಾರಿಗೂ ನಷ್ಟವಾಗದಂತೆ ರಾಷ್ಟ್ರಾಭ್ಯುದಯ ಮೂಲವಾದ ವರ್ಣ ಪರಿಪಾಲನೆಯನ್ನು ಸಾಧಿಸಬಹುದಾಗಿದೆ.

ಶಾರೀರಕ, ಮಾನಸಿಕ ಭೂ ವಾಯು ಗುಣ ಕರ್ಮ ಶಕ್ತಿಗಳಿಂದುಂಟಾದ ಅನರ್ಹತೆಯಿಂದ ಪರವಸ್ತು ತತ್ವಜ್ಞಾನಕ್ಕೆ ಅವಕಾಶವಿಲ್ಲದವರಿಗೆ ವಿಶ್ವಗುರುಗಳಾಗಿ ವಿಶ್ವಾದರಣೀಯರಾಗುವ ಅರ್ಹತೆಯು ಆತ್ಮ-ಜ್ಞಾನಕ್ಕೆ ಹೆಸರಾಂತ ಭಾರತೀಯರಿಗೆ ಪ್ರಕೃತ್ಯಾ ದತ್ತವಾಗಿರುತ್ತದೆ. ಜನ್ಮಾರಭ್ಯ ಅಂತ್ಯಕಾಲದ ಪರ್ಯಂತ ಪ್ರತಿಯೊಬ್ಬ ಭಾರತೀಯರೂ ಜೀವನದಲ್ಲಿ ಬಳಕೆಯಲ್ಲಿರುವ ವಿಷಯಗಳನ್ನೂ ಅವುಗಳ ಮೂಲ ತತ್ವಗಳನ್ನೂ ಒಳಗೊಂಡಿರುವ ಮತ್ತು ಸಂಸ್ಕೃತಿಯ ಜ್ಞಾನಕ್ಕೆ ಆಧಾರವಾದ ಗ್ರಂಥಗಳನ್ನು ಬಾಲ್ಯಾರಭ್ಯ ಕ್ರಮಶಃ ಅಭ್ಯಾಸ ಮಾಡಿ ರಸಾತ್ಮಕ ದೃಷ್ಟಿಯಿಂದ ಮಾಡುವ ವಿಮರ್ಶೆಯ ಫಲವಾಗಿ ಸುಖ ಸಾಧನ ಸಂಪತ್ತುಗಳು ತಾವೇ ತಾವಾಗಿ ಬಂದು ಆಶ್ರಯಿಸುವುವು. ದೇಹಿಗಳು ಶರೀರ, ಮನಸ್ಸುಗಳಲ್ಲಿಯೂ ಬಾಹ್ಯ ಪ್ರಪಂಚದಲ್ಲಿಯೂ ಅಡಗಿರುವ ವಿಷಯಗಳನ್ನು ತಿಳಿಯದವರ ಜನ್ಮಕ್ಕೆ ಸಾರ್ಥಕ್ಯವಿರುವುದಿಲ್ಲ ಮತ್ತು ಜೀವನ ರಹಸ್ಯಗಳ ತಿಳಿವಳಿಕೆಯಿಲ್ಲದೆ ಔದಾಸೀನ್ಯವನ್ನು ತಾಳಿದಾಗ ಕಠಿಣತರ ಸಮಸ್ಯೆಗಳು ತಲೆದೋರಿ ವಿಶ್ವದಲ್ಲಿ ಪಂಚ ರಾಜ್ಯವಲಯಗಳಲ್ಲಿಯೂ ಜುಗುಪ್ಸೆ ಮೊದಲಾದ ಅನರ್ಥ ಪರಂಪರೆಗಳಿಗೆ ಕಾರಣವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂವತ್ತಮೂರು ಕೋಟಿ ದೇವ ಗುಣ ಕರ್ಮ ಶಕ್ತಿಗಳನ್ನು ಹೊಂದಿ, ಬ್ರಹ್ಮಾಂಡ ಮತ್ತು ಪಿಂಡಾಂಡಗಳಲ್ಲಿ ವ್ಯಾಪಿಸಿ ಅಖಂಡವಾಗಿ ತುಂಬಿರುವ ಪ್ರತಿಯೊಂದು ಅಣುವೂ ಸಹ ಪೂರ್ಣವೂ ಅಮೃತವೂ ಅಮೃತ ಮಂಥನ ಕಾರ್ಯವೂ ಕರ್ತೃವೂ ಭೂ ವಾಯು ಮಾನವ ಗುಣ ಕರ್ಮ ಶಕ್ತಿಗನುಗುಣವಾಗಿ ಅಮೃತ ಫಲ ಭೋಕ್ತೃವೂ ಆಗಿರುವುದು (ಸ್ವ. ವಿ. 152).

ನಿರಂತರವಾಗಿ ನಡೆಯುತ್ತಲಿರುವ ಮಂಥನದಿಂದ ಉದಯಿಸುವ ಫಲವನ್ನು ಆಸುರೀ ಸಂಪತ್ತನ್ನಾಗಿ ಪರಿವರ್ತಿಸುವ ಮೋಹವನ್ನು ವಿವೇಕ, ವಿಮರ್ಶೆಗಳಿಂದ ದೂರೀಕರಿಸಿ ಯೋಗ, ಆನಂದ ಸ್ವರಾಜ್ಯ, ಸಾಮ್ರಾಜ್ಯ ವಿಭೂತಿದಾಯಕವಾದ ದೈವೀ ಸಂಪತ್ಕರವಾಗುವಂತೆ ಪ್ರತಿಕ್ಷಣದಲ್ಲಿಯೂ ಜಾಗರೂಕತೆಯಿಂದ ಯತ್ನಿಸಿ ಅನುಭವಿಸುವ ಹೊಣೆಗಾರಿಕೆಯು ವ್ಯಕ್ತ್ಯಾದಿ ಪಂಚ ರಾಜ್ಯವಲಯಗಳಲ್ಲಿಯೂ ಪ್ರಕೃತ್ಯಾ ಸ್ವತಂತ್ರರಾದ ಪ್ರತಿಯೊಬ್ಬ ದೇಹಿಗೂ ಸೇರಿದುದು –ಎಂಬ ಸಿದ್ಧಾಂತವನ್ನು ವರ್ಣಮೀಮಾಂಸೆಯು ಘೋಷಿಸುವುದು. ಇದಕ್ಕಾಗಿ ದೇಹವೇ ದೇವಾಲಯವೆಂಬ ಪ್ರಯೋಗಶಾಲೆಯಾಗಿರುವಂತೆ ಮಾಡುವ ಸಂಸ್ಕೃತಿಗಳು ವಿಧಾಯಕವಾಗಿರುವುವು. ಜನತೆಗೆ ಸಾಮೂಹಿಕವಾಗಿ ತಿಳಿವಳಿಕೆ ಕೊಡುವುದಕ್ಕಾಗಿಯೂ ಜನತಾ ಮತ್ತು ಲೋಕ ಕಲ್ಯಾಣವನ್ನು ಸಾಧಿಸುವುದಕ್ಕಾಗಿಯೂ ದೇವ ಗುಣ ಕರ್ಮ ಶಕ್ತಿಗಳನ್ನು ಸಂಕಲ್ಪ, ದೇಶ, ಕಾಲಗಳಿಗೆ ತಕ್ಕಂತೆ ಪ್ರತಿಷ್ಠಿಸಿ ದೇವತ್ವಪ್ರಯೋಗಗಳಿಗಾಗಿ ದೇವಾಲಯಗಳನ್ನು ಬಹಿರಂಗವಾಗಿಯೂ ಸ್ಥಾಪಿಸುವ ವ್ಯವಸ್ಥೆಯು ಭಾರತದಲ್ಲಿದೆ. ಒಂದೊಂದು ದೇವಾಲಯವೂ ಮತ್ತೊಂದು ದೇವಾಲಯಕ್ಕಿಂತ ಪ್ರತ್ಯೇಕವಾದ ಪ್ರಯೋಗ ವೈಶಿಷ್ಟ್ಯವನ್ನು ಹೊಂದಿರುವುದು. ಆಯಾ ಪ್ರಯೋಗ ನಿಯಮಗಳ ಮರ್ಯಾದೆಯನ್ನನುಸರಿಸಿ ಸಾಧಿಸಿದ ದೇವತ್ವವು ಅಪ್ರತಿಹತವೂ ಅಮೋಘವೂ ಆದ ಕಾರ್ಯ ಸಾಧನೆಗೆ ನೆರವಾಗುವುದು. ದೇವಾಲಯಗಳು ಕೇವಲ ನಿಸ್ತೇಜಸ್ಕವಾದ ಕಟ್ಟಡಗಳಲ್ಲ. ವೈಯಕ್ತಿಕ, ಕೌಟುಂಬಿಕ, ಸಾಮಾಜಿಕಾದಿ ಮಾನವ ಗುಣಕರ್ಮಶಕ್ತಿಗಳ ಮರ್ಯಾದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ಮೀರಿ ಯಾವ ಮಾನವನೂ ಎಲ್ಲಾ ದೇವಾಲಯಗಳನ್ನೂ ಪ್ರವೇಶಿಸುವಂತಿಲ್ಲ. ತಿರುಪತಿ ವೆಂಕಟೇಶ ದೇವಾಲಯವನ್ನು ಪ್ರವೇಶಿಸುವುದರಿಂದ ದೇವತೆಗೆ ಅಪಚಾರವಾಡಿದಂತೆ ಆಗಿ ಕಷ್ಟವನ್ನು ಹೊಂದಿರುವವರು ತಿಳಿಸುತ್ತಾರೆ. ಮನೆಯಲ್ಲಿ ವೆಂಕಟೇಶನನ್ನೇ ಆರಾಧಿಸಿದರೂ ತಿರುಪತಿ ಬೆಟ್ಟದ ಮೇಲೆ ಸ್ವಾಮಿಯ ದರ್ಶನಕ್ಕೆ ಅವಕಾಶವನ್ನು ಹೊಂದದ ಬಹುಜನ ಭಕ್ತರು ನಮ್ಮ ಸಮಾಜದಲ್ಲಿರುತ್ತಾರೆ. ಏಕೈಕ ಸಂಸ್ಕೃತಿಯ ಆಶ್ರಯದಲ್ಲಿರುವ ರಾಷ್ಟ್ರದಲ್ಲಿ ವ್ಯಕ್ತಿ ವೈಶಿಷ್ಟ್ಯ ಭೂವಾಯು ಮಾನವ ಗುಣಕರ್ಮಶಕ್ತಿಗಳಿಗೆ ತಕ್ಕಂತೆ ಮಿತಿಯನ್ನು ಪಾಲಿಸಬೇಕಾದ ಕರ್ತವ್ಯವನ್ನು ತಿಳಿಯದವರು ಪಶು ಸಮಾನರೇ ಸರಿ. ರಸ ಶಾಲೆಗಳಲ್ಲಿ ವಸ್ತು ಸಂಯೋಜನ ವಿಭಜನ ನಿಯಮಗಳ ನ್ಯೂನತಾಧಿಕ್ಯಗಳಿಂದ ಪ್ರಯೋಗವು ಕೆಟ್ಟು ಅನೇಕರ ನಾಶಕ್ಕೆ ಕಾರಣವಾದ ವಿಷದ ಉತ್ಪಾದನೆಯಾಗುವುದು. ಪ್ರಯೋಗವು ಶಾಸ್ತ್ರೀಯವಾಗಿ ನಡೆದರೆ ವಿಶ್ವವನ್ನು ಉದ್ಧರಿಸುವ ಸಂಜೀವನಾಮೃತವು ದೊರೆಯುವುದು. ಅದರಂತೆ ಪ್ರತಿ ದೇವಾಲಯವೂ ತನ್ನದೇ ಆದ ದೇವ ಗುಣ ಕರ್ಮ ಶಕ್ತಿ ಪ್ರಭಾವಗಳನ್ನು ಹೊಂದಿರೂಢಿಸುವುದಾಗಿದೆ. ಈ ಬಗೆಯ ಪ್ರಭಾವವು ವಿಶ್ವವನ್ನು ವ್ಯಾಪಿಸಿ ಅನುಯಾಯಿಗಳ ಮತ್ತು ಲೋಕಗಳ ಕಲ್ಯಾಣವನ್ನು ಸಾಧಿಸುವುದು. ಆದುದರಿಂದ ಎಂದಿಗೂ ಯಾರೂ ಅವರವರ ದೇವಗುಣಕರ್ಮಶಕ್ತಿ ಪ್ರಯೋಗಗಳ, ಆಯಾ ನಿಯಮಗಳಿಗೆ ವಿರೋಧವಾಗಿ ಮನೋವಾಕ್ಕಾಯಗಳಿಂದ ದೇವತಾ ಸೇವೆಗೆ ಯತ್ನಮಾಡಬಾರದು. ಇಂತಹ ಸೂಕ್ಷ್ಮ ಪ್ರಸಂಗಗಳನ್ನೂ ಮರ್ಮಗಳನ್ನೂ ತಿಳಿಯದೆ ದೇವಾಲಯವನ್ನು ಕೇವಲ ಪಾಶ್ಚಾತ್ಯ ಪ್ರಾರ್ಥನಾ ಅಂಗಳದಂತೆ ಉಪನ್ಯಾಸ ಚಾವಡಿಗಳಂತೆ ಭಾವಿಸಿ, ಏಕೈಕ ಸಂಸ್ಕೃತಿಯ ನೆರಳಿನಲ್ಲಿ ಆಶ್ರಯವನ್ನು ಹೊಂದಿದ ಆಸ್ತಿಕರಲ್ಲಿ ಭೇದಬುದ್ಧಿ, ದ್ವೇಷಾಸೂಯೆ, ಉಚ್ಚನೀಚ ಭಾವನೆಗಳ ಸೃಷ್ಟಿ— ಇತ್ಯಾದಿ ಕ್ಷುದ್ರ ವಿಚಾರಗಳನ್ನು ಹರಡುವುದರಿಂದ ಜನತೆಯು ಕಂಗೆಟ್ಟು ಪರದೇಶೀಯಾಶ್ರಯ, ಅವಲಂಬನವನ್ನು ಹೊಂದುವಂತೆ ಮಾಡುವ ಪರಕೀಯರಿಗೂ ಅದನ್ನು ಆದರಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶೀಯರಿಗೂ ದುರಂತ ವಿನಾಶಗಳು ತಪ್ಪಿದ್ದಲ್ಲವೆಂದು ಕರ್ಮ ಮೀಮಾಂಸೆಯೂ- ವರ್ಣ ಮೀಮಾಂಸೆಯು ಘೋಷಿಸುವುದು. ರಾಷ್ಟ್ರಾಭ್ಯುದಯಕ್ಕೆ ಹೊಣೆಗಾರಿಕೆಯನ್ನು ಹೊತ್ತುಕೊಂಡೇ ಸರ್ವರೂ ಜನಿಸುವರು. ಆದ್ದರಿಂದ ಪ್ರತಿಯೊಬ್ಬ ಭಾರತೀಯರೂ ರಾಷ್ಟ್ರಭಕ್ತಿ ಆಸ್ತಿಕತೆ, ಸದಾಚಾರ, ಸಂಸ್ಕೃತಿ ನಿಷ್ಠೆಯುಳ್ಳವರಾಗಿ ರಾಷ್ಟ್ರಕ್ಕೂ ಪ್ರಕೃತಿಗೂ ಶರಣಾಗತರಾಗಿ, ಭೂಮಾತೆಯು ಆಯಾ ಭೂಭಾಗ ವಾಯು ಗುಣ ಕರ್ಮ ಶಕ್ತಿಗಳಿಗೆ ಯೋಗ್ಯವಾಗಿರುವಂತೆ ಸ್ವಯಂ ನೀಡುವ ಅಮೃತವೂ ಪುಷ್ಟಿಕಾರಕವೂ ಕಾಯಕಲ್ಪ ಸಂಜೀವನವೂ ಸ್ವಾಭಾವಿಕವೂ ಆರೋಗ್ಯಕಾರಕವೂ ರೋಗ ಪರಿಹಾರಕ ಮತ್ತು ನಿವಾರಕವೂ ಯಂತ್ರ ದೂಷಿತವಲ್ಲದುದೂ ಆದ ಮೂಲಿಕಾ, ಶಾಕ, ಧಾನ್ಯ, ಫಲ, ಅಭ್ಯಂಗತೈಲಾದಿಗಳನ್ನು ಉಪಯೋಗಿಸುವುದರಿಂದ ಸಂಪ್ರದಾಯಾನುಸಾರ ಶಾರೀರಕ, ಮಾನಸಿಕ ಪುಷ್ಟಿಯನ್ನೂ ಸಂತೃಪ್ತಿಯನ್ನೂ ಹೊಂದಿ ಸಮರ್ಥವೀರರಾಗಿ ಬಾಳುವರು. ಯಂತ್ರಗಾರಿಕೆಯ ತಾಮಸ ವಸ್ತ್ರಾದಿಗಳನ್ನು ಬಹಿಷ್ಕರಿಸಿ ಬ್ರಹ್ಮಜ್ಞಾನಕಾರಕವೂ ಬ್ರಹ್ಮಜ್ಞಾನ ಪ್ರಕಾಶಕವೂ ಪರದೇಶೀಯ ಬಾಧಾ ಪರಿಹಾರಕ್ಕೆ ವಜ್ರಕವಚವೂ ಆದ ಸಾಕ್ಷಾತ್ ಕೈಗಾರಿಕೆಯಿಂದ ಹತ್ತಿಯಿಂದ ಸಿದ್ಧಪಡಿಸಿದ ಬ್ರಾಹ್ಮಣವಸ್ತ್ರವನ್ನು ಧರಿಸುವುದರಿಂದ ಶ್ರೋತ್ರಿಯತ್ವಾದಿ ಪಂಚ ಗುಣಕರ್ಮಶಕ್ತಿಗಳ ಸಾಮರಸ್ಯ, ಸಮನ್ವಯ, ಪರಸ್ಪರ ಸಹಕಾರಕ್ಕೆ ಉತ್ತೇಜನವು ಉಂಟಾಗುವುದು. ಸಹಜ ಮತ್ತು ಸರಳ ಜೀವನದ ಸುಖ ಶಾಂತಿಗಳು ಸ್ವತಃ ದೊರೆಯುವುವು. ಪ್ರಜೆಗಳು ನಿರ್ವಹಿಸುವ ರಾಜ ಕಾರ್ಯಗಳು ವಾ ವರ್ತನೆ – ವರ್ಣಗಳು ಹಿತಪ್ರದವಾಗುವುವು.

ಆತ್ಮ ತತ್ವ ವಿಚಾರವು ತಿಳಿಸುವಂತೆ ಪ್ರತಿಯೊಂದು ವೃತ್ತಿ–ವರ್ತನೆ–ವರ್ಣ–ದಲ್ಲಿಯೂ ಇತರ ಎಲ್ಲಾ ವೃತ್ತಿಗಳೂ ಪ್ರತಿಬಿಂಬಿಸುವುವು. ಪ್ರತಿಯೊಂದು ವ್ಯಕ್ತಿಯೂ ತನ್ನ ವ್ಯಕ್ತಿತ್ವಕ್ಕಾಗಿ ಕುಟುಂಬಕ್ಕಾಗಿ ಸಮಾಜಕ್ಕಾಗಿ ಪ್ರದೇಶಕ್ಕಾಗಿ ರಾಷ್ಟ್ರಕ್ಕಾಗಿ ಸೃಷ್ಟಿಸ್ಥಿತಿಲಯಾತ್ಮಕವಾದ ಜಗತ್ತಿಗಾಗಿ ಪರಮಾತ್ಮ ಪ್ರೀತಿಗಾಗಿ ತನುಮನಧನಗಳಿಂದ ಕಾರ್ಯ ನಿರ್ವಾಹ ಮಾಡಬೇಕೆಂದು ತಿಳಿದು ಅವರವರ ಸ್ಥಾನ, ಮಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಯೋ ಮಿತಿ, ಆಶ್ರಮ (ಅವಸ್ಥಾ) ಗಳಿಗೆ ಅನುಗುಣವಾಗಿ ನಡೆದರೆ ವರ್ಣ ಪರಿಪಾಲನೆಯು ತಾನೇ ತಾನಾಗಿ ನೆರವೇರಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಸ್ವತಃ ಸಿದ್ಧವಾಗುವುವು.

ಸ್ತ್ರೀಯಾಗಲೀ, ಪುರುಷನಾಗಲೀ ಒಬ್ಬ ವ್ಯಕ್ತಿಯು ಶೌಚಾದಿ ಆಹಾರ ವಿಹಾರಗಳು ಮೊದಲುಗೊಂಡು ತಾನು ಮಾಡುವ ಪ್ರತಿಯೊಂದು ಕೆಲಸವೂ ಸರ್ವರ ಯೋಗಕ್ಷೇಮಕ್ಕೆಂದು ಭಾವಿಸುವುದಲ್ಲದೆ ಆ ಕೆಲಸವು ತನ್ನ ಮೂಲಕ ಸರ್ವರಿಂದಲೂ ಆಚರಿಸಲ್ಪಡುತ್ತದೆಂದು ಪರಿಭಾವಿಸಬೇಕು. ಮನೆಯಲ್ಲಿ ಅಡಿಗೆ ಮಾಡುವ ವ್ಯಕ್ತಿಯು ಭೋಕ್ತೃಗಳ ಪರವಾಗಿ ತನಗೂ ಲೋಕಕ್ಕೂ ಪರಮಾತ್ಮ ಪ್ರೀತಿಗೂ ಅಡಿಗೆ ಕೆಲಸವು ನೆರವೇರುತ್ತದೆಂತಲೂ, ಗೃಹದಲ್ಲಿ ವಾಸಮಾಡುವವರೆಲ್ಲರೂ ತಮಗೆ ತಾವೇ ಅಡಿಗೆ ಮಾಡುತ್ತಾರೆಂತಲೂ ತಿಳಿಯಬೇಕು. ಹಾಗೆಯೇ ಗೃಹದಲ್ಲಿರುವವರೆಲ್ಲರೂ ಒಬ್ಬರ ಮೂಲಕ ಅಡಿಗೆ ಕೆಲಸ ಗೃಹ ನಿರ್ಮಲೀಕರಣಾದಿ ಕಾರ್ಯಗಳನ್ನು ತಾವೇ ನಿರ್ವಹಿಸುತ್ತಿರುವಂತೆ ಅನುಸಂಧಾನ ಮಾಡಬೇಕು. ದೇವರ ಪೂಜೆಯನ್ನು ಮಾಡುವವರು ಒಬ್ಬರೇ ಆದರೂ ಮನೆಯವರೆಲ್ಲರೂ ತನ್ಮೂಲಕ ಪೂಜಾ ಧುರಂಧರರಾಗಿರುತ್ತಾರೆಂದು ಭಾವಿಸಿ ಪ್ರಸಾದ ಸೇವನೆಯಿಂದ ಪೂಜಾ ಫಲವು ಏಕ ಪ್ರಕಾರವಾಗಿ ಲಭಿಸುವುದೆಂದು ಸಂಸ್ಕೃತಿಯು ಘೋಷಿಸುತ್ತದೆ. ಹೀಗೆಯೇ ಯಜ್ಞಶಾಲೆಯಲ್ಲಿ ಋತ್ವಿಜರಿಂದ ನಿರ್ವಾಹವಾಗುವ ಯಜ್ಞದ ಫಲವು ವಿಶ್ವವನ್ನೆಲ್ಲಾ ವ್ಯಾಪಿಸುವುದೆಂಬುದು ವರ್ಣತತ್ವ. ಕುಟುಂಬದಲ್ಲಿ ಧನಧಾನ್ಯದ್ರವ್ಯಾರ್ಜನೆಗಾಗಿ ದುಡಿಯುವವರು ಒಬ್ಬರು ಇಬ್ಬರು ಆದರೂ ಮನೆಯವರೆಲ್ಲರೂ ಏಕ ಪ್ರಕಾರವಾಗಿ ಶ್ರಮಿಸುತ್ತಿರುವವರೇ ಆಗುತ್ತಾರೆ. ವಿದ್ಯಾಭ್ಯಾಸ, ಕೈಗಾರಿಕೆ ಮೊದಲಾದ ಗೃಹಕೃತ್ಯಗಳು ಸರ್ವರಿಂದಲೂ ಸರ್ವದಾ ನಡೆಯುವುದೆಂತಲೇ ಭಾವಿಸಿ ಫಲವನ್ನು ಅನುಭವಿಸುವವರಾಗುತ್ತಾರೆ.

ಅಧಿಕ ಸಂಖ್ಯೆಯಲ್ಲಿ ಅಧಿಕಾರಿಗಳು ನಡೆಸುವ ಕೆಲಸಗಳ ಮೇಲಿನ ವಿಚಾರಣೆ ನಡೆಸುವವರು ಒಬ್ಬರೇ ಆದರೂ ಎಲ್ಲಾ ಅಧಿಕಾರಿಗಳೂ ನಡೆಸಿದ ಕೆಲಸದ ಹೊಣೆಗಾರಿಕೆಯು ವಿಚಾರಣೆ ಮಾಡುವವರೊಬ್ಬರಿಗೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇರುವುದರಿಂದ ಅವರೂ ಕೆಲಸಮಾಡಿದವರಲ್ಲಿ ಒಬ್ಬರಾಗಿರುತ್ತಾರೆಂಬು ದನ್ನು ಯಾರೂ ಮರೆಯಬಾರದೆಂದು ವರ್ಣ ವಿಧಾನವು ತಿಳಿಸುತ್ತದೆ. ಯಜ್ಞ, ಸತ್ರ ಕಾರ್ಯನಿರ್ವಾಹಗಳಲ್ಲಿಯೂ ಈ ವ್ಯವಸ್ಥೆಯು ಸ್ಪಷ್ಟವಾ ಗಿರುವುದು. ಕುಟುಂಬ ಪ್ರತಿನಿಧಿಗಳಾದ ಸಮಾಜ ಪ್ರಮುಖರು ಕುಟುಂಬಗಳ ಯೋಗಕ್ಷೇಮವನ್ನು ಆಲೋಚಿಸಿ ಕಾಲೋಚಿತವಾಗಿ ಕರ್ತವ್ಯನಿಷ್ಠರಾಗುವರು. ಸಮಾಜ ಅಂದರೆ ಗೊತ್ತಾದ ಜನತೆ–ಜನ ಸಮೂಹದ ಸೇವೆಯನ್ನು ಮಾಡಿ ಸ್ವಂತ ಮತ್ತು ಸ್ವಕುಟುಂಬ ಸೇವೆ ಯು ಚರಿತಾರ್ಥವಾಗುವಂತೆ ಮಾಡುವ ವ್ಯಕ್ತಿಗಳು ಮತ್ತು ಕುಟುಂಬ ಗಳು ಸಮಾಜ ರಾಜ್ಯ ವಲಯಕ್ಕೆ ಸೇರಿರುತ್ತವೆ. ಇವು ಸಮಯೋಚಿತ ವಾಗಿ ಆವಶ್ಯಕತೆಯಿದ್ದಂತೆ ವಿವಿಧ ರೂಪಗಳಲ್ಲಿ ಅನಂತವಾಗಿ ಕಾಣಿಸಿ ಕೊಳ್ಳುವುವು.

ಸಾಮಾನ್ಯವಾಗಿ ಜನ ಜೀವನದಲ್ಲಿ ಯೋಗಕ್ಷೇಮ ಪಾಲನೆಗಾಗಿ ವೈದ್ಯ, ಜ್ಯೋತಿಷ್ಯ, ಆಚಾರ ಸಂಸ್ಕೃತಿ ಶಿಕ್ಷಣ, ಶಾಸ್ತ್ರ ಶಿಕ್ಷಣ, ಪುಸ್ತಕ ಪಠನ, ಲೇಖನಾಭ್ಯಾಸ, ಸಂಗೀತ – ಶಿಲ್ಪಶಾಸ್ತ್ರ ಮತ್ತು ಕಲೆಗಳು ಕ್ರಯ ವಿಕ್ರಯ, ದುಷ್ಟ ದಮನ, ಶಿಷ್ಟ ಪರಿಪಾಲನ, ನ್ಯಾಯನಿರ್ಣಯ, ಧನಸಂಗ್ರಹವ್ಯಯ, ಆಯ, ವ್ಯಯ, ಗಣಕತ್ವ, ಲೇಖಕತ್ವ, ಬೋಧನ, ಪಾಲನ, ಶಾಸನ, ಪಾಚನ, ಗೃಹಕೃತ್ಯ, ಗೃಹ ನಿರ್ಮಲೀಕರಣ, ಗೃಹ ಮೇಧ, ಗ್ರಾಮಗಳ ಅಂತಃ ಮತ್ತು ಬಹಿಃ ನಿರ್ಮಲೀಕರಣ, ಆಯು ಷ್ಕರ್ಮ ನಿರ್ವಾಹ ಕಲಾ, ರಜಕತ್ವ, ಸಂಚಾರ ಸೌಕರ್ಯ, ಆಪತ್ ರಕ್ಷಣಕ್ಕಾಗಿ ಕಾದು ಕುಳಿತಿರುವ (ನಿಷಾದ)ಕೆಲಸ,§ ದುಷ್ಟಮೃಗಬಾಧಾ ಪರಿಹಾರ, ಭೂ ಕೃಷಿ ಸಸ್ಯಾದಿ ಬೆಳವಣಿಗೆ, ತೋಟದ ಕೆಲಸ, ಮನೆ

---

§ ನಿಷಾದ ರಕ್ಷಣಾ ಕೆಲಸವು ಮೈಲಿಗೆ ಧಾರಿಗಳಿಂದ ಸುರಕ್ಷಿತವಾಗಿ ಶುಚಿರ್ಭೂತವಾಗಿ ನಿರ್ವಾಹವಾಗುವುದು. ಏಕೆಂದರೆ ಸುತ್ತಮುತ್ತಲಿ ನವರು ಮೈಲಿಗೆ ಎಂದು ತಾವಾಗಿಯೇ ದೂರಸರಿಯುವರು. ಮಡಿ ಧಾರಿಗಳಿಗೆ ಸಂಪರ್ಕದ ಭಯ, ಆತಂಕಗಳಿಂದ ಸಂಕುಚಿತ ಭೇದಭಾವವೇ ಮನಸ್ಸಿನಲ್ಲಿ ಬೇರೂರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೈಗಾರಿಕೆ, ನೂಲುವ ಕೆಲಸ,ನೇಯ್ಗೆ, ಕೈಕೆಲಸ, ಮರಗೆಲಸ, ಲೋಹದ (ಕಬ್ಬಿಣ) ಕೆಲಸ, ಚಿನ್ನ ಬೆಳ್ಳಿ ಕೆಲಸ, ಚರ್ಮದ ಕೆಲಸ, ಬೆತ್ತದ ಹೆಣಿಗೆ ಕೆಲಸ, ಚಾಪೆ (ಆಸನ) ಕೆಲಸ, ದೇವತಾನುಸಂಧಾನ, ಪ್ರಯೋಗ ಮೊದಲಾದವುರು ಪಾರ್ಥಪ್ರಾಪಕ ವೃತ್ತಿ–ವರ್ತನೆ–ವರ್ಣಗಳು ಸ್ವತಃ ಅಥವಾ ಪರತಃ ಪ್ರೇರಿತರಾದ ವ್ಯಕ್ತಿಗಳಿಂದ ನಡೆಯುವುವು. ಇವು ಗಳಲ್ಲಿ ಸಂಸ್ಕಾರಕ್ಕೆ ತಕ್ಕಂತೆ ಫಲಪ್ರಾಪ್ತಿಯು ಇಹಪರಗಳಲ್ಲಿ ದೊರೆ ಯುವುದು. ನಮ್ಮ ರಾಷ್ಟ್ರದಲ್ಲಿ ತಂತುವಾಯ (ನೂಲುವ, ನೇಯುವ) ವೃತ್ತಿಯೇ ಅದೃಶ್ಯವಾಗಿರುವಂತೆ ಅತ್ಯಂತ ಕಡಿಮೆಯಾದ ತಂತುವಾಯ ವೃತ್ತಿಯವರ ಸಂಖ್ಯೆಯು ಸೂಚಿಸುತ್ತದೆ. ಇದರಿಂದ ರಾಷ್ಟ್ರವು ಆರ್ಥಿಕ ದಾರ್ಢ್ಯವನ್ನು ಕಳೆದುಕೊಂಡು ಪರಾವಲಂಬಿಯಾಗಿರುವ ಶೋಚನೀಯ ಸ್ಥಿತಿಯು ಸರ್ವರಿಗೂ ಕೈಹುಣ್ಣಿನಂತೆ ಸ್ಪಷ್ಟವಾಗಿರು ತ್ತದೆ. ಸ್ತ್ರೀಯರಿಂದ ಸಿದ್ಧವಾದ ಅರಳೆಯ ತಂತುಗಳಿಂದಲೇ ಪುರುಷರ ಯಜ್ಞೋಪವೀತ ಧಾರಣೆಯು ನೆರವೇರಬೇಕಾಗಿರುವುದು. ವಸ್ತ್ರ ಮತ್ತು ಯಜ್ಞೋಪವೀತ ಸಮರ್ಪಣೆಯು ದೇವ ಪೂಜಾದಿಗಳ ಷೋಡಶೋಪಚಾರಗಳಲ್ಲಿ ಸೇರಿರುವುದರಿಂದ ತಂತು ಕೈಗಾರಿಕೆಯು ವರ್ತನೆ – ವರ್ಣವು ಜೀವನ ಯಜ್ಞದ ಪ್ರಧಾನಾಂಗವಾಗಿರುತ್ತದೆ. ಆದರೂ ಪರದೇಶೀ ಯಂತ್ರ ಸೌಲಭ್ಯಕ್ಕೂ ತಂತ್ರಕ್ಕೂ ಮರುಳಾದ ಜನತೆಯ ಮೋಹದಿಂದ ಆ ವೃತ್ತಿಯು ಸಂಪೂರ್ಣವಾಗಿ ನಾಶವಾಗಿರು ವುದರಿಂದ ವರ್ಣ ಪರಿಪಾಲನೆಯ ಅಸ್ತಿಭಾರವೇ ಕಳಚಿಹೋದಂತಾಗಿದೆ. ಇದಕ್ಕೆ ರಾಷ್ಟ್ರವೂ ವಿಶ್ವವೂ ವಿದೇಶೀಯರೂ ಹೊಣೆಗಾರರಾಗಿ ದುಷ್ಟ ಫಲವನ್ನು ಪ್ರತಿ ಕ್ಷಣದಲ್ಲಿಯೂ ಅನುಭವಿಸುತ್ತಿರುವರು.

ವೃತ್ತಿಗಳು ಪರಸ್ಪರ ಸಹಕಾರದಿಂದ ವೃದ್ಧಿಹೊಂದಿ ವರ್ಣವೃಕ್ಷ ವನ್ನು ಬೆಳೆಸುವುವು. ವಿವಿಧ ವೃತ್ತಿಯುಳ್ಳ ಪ್ರಜೆಗಳು ಮೋಹದಿಂದ ಅನ್ಯ ದೇಶೀಯರ ವೃತ್ತಿಯನ್ನು ಪ್ರೋತ್ಸಾಹಿಸುವುದರಿಂದ ಸ್ವದೇಶೀ ಯರ ಸ್ವಬಾಂಧವರ, ಸಮಾಜದವರ ವೃತ್ತಿಯನ್ನು ನಾಶ ಮಾಡುವವ ರಾಗುತ್ತಾರೆ. ಇದರ ಪರಿಣಾಮವಾಗಿ ವರ್ಣ ಪರಸ್ಪರ ಸಹಕಾರ ತತ್ವವು ಬದಿಗೊತ್ತಲ್ಪಟ್ಟು ಪ್ರಜೆಗಳ ಸಕಲ ವೃತ್ತಿಗಳೂ ಅಸ್ತವ್ಯಸ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ ರಾಷ್ಟ್ರಾಭ್ಯುದಯಕ್ಕೆ ಅಪಘಾತವುಂಟಾಗುವುದು.

ಸರ್ವ ಪ್ರಕಾರದಲ್ಲಿಯೂ ಪಂಚ ರಾಜ್ಯವಲಯಗಳ ವೃತ್ತಿಯು ಪಂಚ ರಾಜ್ಯ ವಲಯಗಳ ಪರಿಮಿತಿಯಲ್ಲಿಯೇ ವೃದ್ಧಿ ಹೊಂದುವಂತೆ ಪ್ರಜೆಗಳು ಎಚ್ಚರಿಕೆಯಿಂದ ವರ್ತಿಸಬೇಕು. ಮೋಹಕ್ಕೆ ಬಲಿಯಾಗಿ ವಿಶ್ವವೆಂಬ ಹಡಗು ವಾ ದೋಣಿಯಲ್ಲಿ ಅನ್ಯ ದೇಶದ ವೃದ್ಧಿಯನ್ನು ಬಯಸಿದಂತೆಯೂ ಸ್ವದೇಶ ಭಾಗವನ್ನು ಹಗುರ ಮಾಡಿದಂತೆಯೂ ವರ್ತಿಸಿದರೆ ಸಮತೋಲನ-ಸಮತ್ವವು ತಪ್ಪಿ ದುಷ್ಟಗುಣಗಳ ಸಮುದ್ರ ದಲ್ಲಿ ಅನ್ಯ ದೇಶದವರೂ ಮುಳುಗಿ ನಾಶವಾಗುವವರಲ್ಲದೆ ಸ್ವದೇಶ ದವರೂ ನಾಶವಾಗುತ್ತಾರೆ. ವಿಶ್ವದ ಯೋಗಕ್ಷೇಮಕ್ಕಾಗಿ ಋಣಾನು ಬಂಧ ಕ್ರಮದಲ್ಲಿಯೂ ಸಮಾಜ ಸನ್ನಿವೇಶ ಪ್ರಾಬಲ್ಯದಿಂದಲೂ ಪ್ರಜೆಗಳು ತಾವಾಗಿಯೇ ಆರಿಸಿಕೊಂಡ ಆಯಾ ವೃತ್ತಿಗಳಲ್ಲಿ ಪ್ರತಿ ಯೊಂದೂ – ಯೋಗಕ್ಷೇಮ ಸುಖ ಶಾಂತಿಗಳ ಎಲ್ಲೆಯನ್ನು ಮೀರ ದಂತೆಯೂ ಮಿತಿಯಿಂದ ಕೆಳಗಿಳಿಯದಂತೆಯೂ– ಆಯಾ ವೃತ್ತ್ಯೇತರ ಪ್ರಜೆಗಳೆಲ್ಲರೂ ತಮ್ಮ ತಮ್ಮ ರಾಜ್ಯದ ಮಿತಿಯಲ್ಲಿ ಜಾಗರೂಕತೆ ಯಿಂದ ಪ್ರೋತ್ಸಾಹಿಸಿ, ತಾವೂ ಇತರರಿಂದ ಪ್ರೋತ್ಸಾಹವನ್ನು ಹೊಂದಿ ಸಮತೂಕದಲ್ಲಿ ಸಮ ಪ್ರಮಾಣದಲ್ಲಿ ವೃದ್ಧಿ ಹೊಂದ ಬೇಕೆಂಬುದೇ ವರ್ಣ ನಿರ್ವಾಹದ ಮರ್ಮವಾಗಿರುತ್ತದೆ.

ದೃಶ್ಯಾದೃಶ್ಯಗಳ ಸಂಬಂಧವನ್ನು ದೇವ ಗುಣ ಕರ್ಮ ಶಕ್ತಿ (ದೇವತಾ) ಅನುಸಂಧಾನ ಕ್ರಮದಲ್ಲಿ ರೂಢಿಸಿ ಆಯಾ ವಲಯಕ್ಕೆ ಸೇರಿದ ಪ್ರಜೆಗಳ ಯೋಗಕ್ಷೇಮ ಹಿತಚಿಂತನೆ ಮಾಡುವ ಪುರೋಹಿತ ಆಚಾರ್ಯವರ್ಗದವರು ಜೀವನಯಜ್ಞವನ್ನು ಸುಧಾರಿಸುವವರಾಗಿರು ತ್ತಾರೆ. ಲೋಕ ಕಲ್ಯಾಣಕ್ಕಾಗಿ ಶ್ರಮಿಸುವ ಇಂತಹವರ ದಿನಚರ್ಯೆ, ತಪಸ್ಸು, ಅನುಷ್ಠಾನಗಳು ಏಕ ಪ್ರಕಾರವಾಗಿ ವೃದ್ಧಿ ಹೊಂದುವಂತೆ ಯೂ, ಧನದ್ರವ್ಯಾದಿ ಪ್ರಾಪಂಚಿಕಗಳ ಆಧಿಕ್ಯದಿಂದ ಮಿತಿಮೀರದಂತೆ ಯೂ ಅಥವಾ ಧನದ್ರವ್ಯಾದಿಗಳ ಅಭಾವದಿಂದ ಮಿತಿಯಿಂದ ಜಾರ ದಂತೆಯೂ ಮಿತವಾದ ಆರ್ಥಿಕ ಸಹಾಯ ಸಂಪತ್ತುಗಳಿಂದ ನೋಡಿ ಕೊಳ್ಳಬೇಕಾದ ಹೊಣೆಗಾರಿಕೆಯು ಆಯಾ ರಾಜ್ಯ ವಲಯಕ್ಕೆ ಸೇರಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜೆಗಳಿಗೆ ಸೇರಿದುದು. ಈ ಪರಮ ಕರ್ತವ್ಯದಿಂದ ಭ್ರಷ್ಟರಾದ ಅಧಿಕ ಸಂಖ್ಯೆಯ ಪ್ರಜೆಗಳು ಪುರೋಹಿತ – ಆಚಾರ್ಯವರ್ಗದವರ ಲೋಪ ದೋಷಗಳನ್ನು ಉದ್ಘಾಟಿಸಿ, ಶಾಸ್ತ್ರೀಯವಾಗಿ ನಡೆಯ ಬೇಕಾದುದಕ್ಕಿಂತಲೂ ಕಡಿಮೆ ಪ್ರಮಾಣದ ವಿತ್ತಶಾಠ್ಯದಿಂದ ಅಸಹನೆ ಸೂಚಿಸಿದರೆ ಕಲ್ಯಾಣವಾಗುವುದಿಲ್ಲ. ವರ್ಣಗಳ ಸಮತೋಲನ ತಪ್ಪಿ ಸರ್ವರೂ ದುಃಖಪಡುವಂತಾಗುವುದು. ರಾಷ್ಟ್ರ ವಲಯದ ಏಕೈಕ ವ್ಯಕ್ತಿಯು ರಾಷ್ಟ್ರದ ಯೋಗಕ್ಷೇಮಕ್ಕೆ ಬದ್ಧನಾಗಿರುವಂತೆ ಸಾರ್ವಜನಿಕವಾಗಿ ದೇವ ಗುಣಕರ್ಮಶಕ್ತಿ (ದೇವತ್ವ) ಗಳನ್ನು ಮಥಿಸಿ, ಸೃಜಿಸಿ, ವೃದ್ಧಿ ಹೊಂದಿಸುವ ಋಷಿಗಳು, ತಪಸ್ವಿಗಳು, ಯಾಜ್ಞಿಕರು, ದೇವತೋಪಾಸಕರು, ಯೋಗಿಗಳು, ದೇವಾಲಯಗಳಲ್ಲಿ ಪೂಜಾಯಜ್ಞ ವನ್ನು ನಡೆಸುವವರು — ರಾಷ್ಟ್ರದ ಒಂದು ಕಡೆಯಲ್ಲಿದ್ದರೂ ಇಡೀ ರಾಷ್ಟ್ರದ ಕಲ್ಯಾಣವನ್ನು ವಲಯಗಳಿಗೆ ಸಂಬಂಧಪಟ್ಟ ಪ್ರಜೆಗಳ ಬೆಂಬಲದಿಂದ ತಮ್ಮ ವರ್ಣ – ವೃತ್ತಿಗಳ ಮೂಲಕ ಸಾಧಿಸುವವರೇ ಆಗುತ್ತಾರೆಂಬುದು ವರ್ಣ ವಿಧಾನದ ತತ್ವ.

ಈಶಾವಾಸ್ಯ ಪ್ರಪಂಚದಲ್ಲಿ ಸರ್ವ ಧರ್ಮಗಳಲ್ಲಿಯೂ ಅಂತ-ರ್ಯಾಮಿಯಾಗಿ ಏಕೈಕನಾದ ಪರಮಾತ್ಮನನ್ನು 'ಶರಣಂ' ಎಂದು ಭಾವಿಸಿ ಕರ್ತವ್ಯ ಕರ್ಮಗಳನ್ನು ಪರಮೇಶ್ವರನ ಪಾದಾರವಿಂದಗಳಲ್ಲಿ ಸಮರ್ಪಿಸಬೇಕು, ಸಂನ್ಯಸ್ತಮಾಡಬೇಕು. (ಸಂ.ಭ.ಗೀತಾ ಪುಟ 202 ; 18 – 59) ಇದನ್ನು ತಿಳಿಯದೆ, ತಿಳಿಯಲಾರದೆ ಕೇವಲ ಕರ್ತವ್ಯ ಕರ್ಮಗಳನ್ನು 'ಶರಣಂ' ಎಂದು ಅವುಗಳಿಂದಲೇ ನೇರವಾಗಿ ಫಲ ಪ್ರಾಪ್ತಿಯಾಗುವುದೆಂದು ನಂಬಿ ಮಾಡಿದರೆ ಸ್ವತಃ ಫಲವೀಯಲು ಸಾಮರ್ಥ್ಯವಿಲ್ಲದ ಅಂತಹ ಕರ್ಮಗಳಿಂದ ವಂಚಿತರಾಗಬೇಕಾಗುತ್ತದೆ - ಕರ್ತೃಗಳ ಔದಾಸೀನ್ಯಕ್ಕೆ ಪಾತ್ರನಾಗಿ ಸರ್ವಶಕ್ತನಾದ ಪರಮೇಶ್ವರ ನೂ ಉದಾಸೀನನಾಗಿ ಫಲಪ್ರದನಾಗಲಾರನು — ಎಂಬುದು ಕರ್ಮ ಯೋಗದ ರಹಸ್ಯ. ಕರ್ತೃವಿಗೆ ಕರ್ಮವನ್ನು ಎಸಗುವುದರಲ್ಲಿ ಮಾತ್ರ (ಸಾಮರ್ಥ್ಯ, ಅರ್ಹತೆ) ಅಧಿಕಾರವಿರುವುದೆಂದೂ ಮಾಡಿದ ಕರ್ಮಗಳ ಗುಣದೋಷಗಳ ವಿಮರ್ಶೆಯಿಂದ ಉಂಟಾಗಬೇಕಾದ ಫಲದ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ತೃವಿನ ಅಧಿಕಾರ (ದರ್ಪ) ವು ಇರುವುದಿಲ್ಲವೆಂದೂ ಹೇಳಲಾಗಿದೆ (ಸಂ. ಭ. ಗೀತಾ ಪುಟ 165 ; 2–47). ಆದುದರಿಂದ ಸರ್ವಧರ್ಮ ಗಳನ್ನು 'ಶರಣಂ' ಎಂದು ಭಾವಿಸುವುದನ್ನು ಪರಿತ್ಯಜಿಸಿ, ಆಚರಿಸಲ್ಪಟ್ಟು ಸಮರ್ಪಿತವಾದ ಕರ್ಮಗಳ ಗುಣದೋಷಗಳ ವಿಮರ್ಶೆ ಮೂಲಕ ಅನುರೂಪವೆಂದು ಗೊತ್ತಾದ ಫಲವನ್ನು ಅಥವಾ ಕರ್ಮಗಳ ಗುಣವು ಆಪಾತತಃ ನ್ಯೂನವೆಂದು ಕಂಡುಬಂದರೂ ಕರ್ತೃವಿನ ಕರ್ಮಯೋಗ ಬುದ್ಧಿಯ ಔನ್ನತ್ಯದಿಂದ ಕರ್ಮಗಳ ಗುಣಾಧಿಕ್ಯವನ್ನು ನಿಷ್ಕರ್ಷಿಸಿ ಹೆಚ್ಚಿನ ಫಲವನ್ನು ನೀಡಬಲ್ಲ ಏಕೈಕನಾದ ಪರಮಾತ್ಮನನ್ನು (ವಿಧಿಯನ್ನು) 'ಶರಣಂ' ಎಂದು ಭಾವಿಸಿ ಆಶ್ರಯಿಸಿ, ಮಾಡಿದ ಕರ್ಮಗಳನ್ನು ಭಗವತ್ಪಾದಗಳಲ್ಲಿ ಸಮರ್ಪಿಸುವುದರಿಂದ (ಸಂನ್ಯಸ್ತ ಮಾಡುವುದರಿಂದ)ಫಲವು ಅನಿರೀಕ್ಷಿತವಾಗಿ ತಾನಾಗಿಯೇ ಪ್ರಾಪ್ತವಾಗುವುದು. (ಸಂ. ಭ. ಗೀತಾ ಪುಟ 203)

ಕರ್ಮಾಚರಣೆಯ ಈ ಗುಟ್ಟನ್ನು ತಿಳಿಯದೆ, ತಿಳಿಯಲಾರದೆ ಮಾಡುವ ಕಾರ್ಯಗಳು ಅಥವಾ ಕರ್ತವ್ಯ ಕರ್ಮಗಳು ಕೇವಲ ಇಂದ್ರಿಯಕರಚರಣಾದಿಗಳ ಕುಚೇಷ್ಟೆಯಾಗಿ ಪರಿಣಮಿಸುವುದಾಗಬಹುದಾದ್ದರಿಂದ ಉದ್ದೇಶ ಭಂಗವಾಗಿ 'ಆಡಂಬರ' (ಆಸುರೀ) ಎನಿಸುವುವು.

ಅರ್ಜುನನು ಸ್ತ್ರೀ ಪುರುಷ-ಜನಗಳ, ಬಂಧುಗಳ, ಮಿತ್ರರ ಮೇಲಿನ ಮೋಹಕ್ಕೆ ಬಲಿಯಾಗಿ ಕಾರ್ಪಣ್ಯ ದೋಷದಿಂದ ಕೂಡಿದ ಸ್ವಭಾವವುಳ್ಳವನೂ ಆದ್ದರಿಂದಲೇ ಧರ್ಮ ಸಮ್ಮೂಢ ಮನಸ್ಸು (ಧರ್ಮ ತತ್ವವನ್ನು ತಿಳಿಯಲಾರದ ಮಂಕು ಮನಸ್ಸು) ಉಳ್ಳವನೂ ಆದಾಗ ಅವನ ಸರ್ವಸ್ವವಾದ ಗಾಂಡೀವವು ತಾನಾಗಿಯೇ ಕಳಚಿ (ಜಾರಿ) ಬಿದ್ದುಹೋಯಿತು. ಪುರಂದರ ದಾಸರು " ಉದರವೈರಾಗ್ಯವಿದು" ಎಂಬ ಕೀರ್ತನೆಯಲ್ಲಿ ತಿಳಿಸಿರುವಂತೆ ಪೇಟೆಯ ಅಂಗಡಿಗಳಲ್ಲಿ ಮಾರಾಟಕ್ಕಿರುವ ಮನಮೋಹಕ ವಸ್ತುಗಳ ಮೇಲಿನ ಮೋಹದಿಂದಲೂ ಅವುಗಳನ್ನು ತಾವೂ ಸಂಗ್ರಹಿಸಿ ಸ್ವಜನ ಬಾಂಧವರಿಗೆಲ್ಲಾ ವಿತರಣೆ ಮಾಡುವ (ಸಂ.ಭ. ಗೀತಾ ಪುಟ 157–160 ; 15–16) ಹೆಮ್ಮೆಯ ಮೋಹದಿಂದಲೂ ಪರಮೇಶ್ವರನನ್ನು 'ಶರಣಂ' ಎಂದು ಭಾವಿಸುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಕ್ಕೆ ಅವಕಾಶವೇ ತಪ್ಪಿ ಹೋಗುವುದರಿಂದ ಕೇವಲ ಪ್ರಾಪಂಚಿಕವಸ್ತು ಶರಣರಾಗುವ ಜನಗಳು ನಡೆಸುವ ಧರ್ಮವು ಮಿತಿ ಮೀರಿದ ಅಧಿಕ ಸಂಖ್ಯೆಯಲ್ಲಿ ತೋರಿದರೂ, ಪ್ರಧಾನವಾದ ಪರಮೇಶ್ವರನ ಶರಣ ಬಲಹೀನವಾಗಿ ವ್ಯರ್ಥವಾಗುವುದು. ಅರಕ್ಷಿತವೂ ನಿಷ್ಫಲವೂ ಆದ ಕೇವಲ ತೋರಣೆಯ ಆಡಂಬರದ (ಆಸುರೀ) ಧರ್ಮ ಕಾರ್ಯಗಳು ದುಃಖ ಕಾರಣಗಳೇ ಆಗುವುವು. ಮಿತವಾಗಿ, ತಮ್ಮ ತಮ್ಮ ಸ್ಥಿತಿ ಗತಿಗಳನ್ನು ಮೀರದೆಯೂ ಸ್ಥಿತಿಗತಿಗಳ ಮಟ್ಟದಿಂದ ಕೆಳಮಟ್ಟಕ್ಕೆ ಜಾರಿ ಬೀಳದೆಯೂ ಧರ್ಮ ಸ್ವರೂಪನೂ, ಏಕೈಕನೂ ಆದ ಪರಮಾತ್ಮನನ್ನು ಶರಣಂ ಎಂದು ಭಾವಿಸಿ ಮಾಡುವ ಅಲ್ಪತಮವಾದ ಧರ್ಮಕಾರ್ಯಾಚರಣೆಯೂ ಸಹ ಸುಸಂಸ್ಕೃತವಾಗಿ ಶರಣಬಲಯುತ ವಾಗಿ ಅನಂತ ಫಲವನ್ನೀಯುವುವು. ಕರ್ತೃಗಳು ಸರ್ವಪಾಪ (ದೋಷ) ಗಳಿಂದಲೂ ವಿಮೋಚನೆಯನ್ನು ಹೊಂದಿ ಉತ್ತಮ ಗತಿಯನ್ನು ಹೊಂದುವವರಾಗುತ್ತಾರೆ. ರಾಜ್ಯ ವಲಯಗಳ ಯೋಗಕ್ಷೇಮ ಮತ್ತು ಹಿತಕ್ಕೆ ಸಂಬಂಧಿಸಿದ ಇಂತಹ ಸೂಕ್ಷ್ಮವಿಷಯ ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯಕ್ತಿಗಳು ತಮ್ಮ ಕರಚರಣಾದಿಗಳ, ವಾಕ್, ಇಂದ್ರಿಯ ಮತ್ತು ಮನಸ್ಸಿನ ವ್ಯಾಪಾರಗಳನ್ನು ಕ್ರಮಪಡಿಸಿ ಕೊಂಡು ಜೀವನ ಯಜ್ಞವನ್ನು ಸಮರ್ಪಣ ಬುದ್ಧಿಯಿಂದ ನಿರ್ವಹಿಸುವುದರಿಂದ ವರ್ಣ ಪರಿಪಾಲನೆಯು ಸ್ವತಃ ನೆರವೇರಿ ಶುಭ ಫಲಪ್ರದವಾಗುವುದು ಮತ್ತು ಪುರುಷಾರ್ಥಗಳ ಅನುಭವವು ತಾನೇ ತಾನಾಗಿ ಉಂಟಾಗುವುದು.

ಸಂಸ್ಕೃತಿ ಪ್ರದೀಪಕವಾದ ಇಂತಹ ಆವರಣದಲ್ಲಿ ಹಿಂದೆ ಹೇಳಿ ದಂತೆ ಗ್ರಂಥಗಳನ್ನು ನಿಸ್ತ್ರೈಗುಣ್ಯಭಾವ ಬುದ್ಧಿಯಿಂದಲೂ ವಿವೇಕ ರಸಾತ್ಮಕ ವಿಮರ್ಶೆಯಿಂದಲೂ ವಿಶ್ವದಲ್ಲಿರುವ ಸಕಲ ವಿಧ ಕರ್ಮಗಳ ಪರಸ್ಪರ ತೋಲನಗಳಿಂದಲೂ ಕಾಲ, ಭೂ, ವಾಯು, ಮಾನವ ಗುಣ ಕರ್ಮ ಶಕ್ತಿಗಳ ಮಿತಿಯಿಂದಲೂ ರಾಷ್ಟ್ರ ಮತ್ತು ರಾಷ್ಟ್ರೈಕ್ಯ ಭಾವನೆ ಗಳಿಂದಲೂ ಸರ್ವರೂ ಶ್ರಮಪಟ್ಟು ಅಭ್ಯಾಸ ಮಾಡಿ ಸಾಧಿಸಿ ಜ್ಞಾನಿ ಗಳಾಗಿ ಜ್ಞಾನಪ್ರಸಾರಮಾಡುವುದು ಶ್ರೇಷ್ಠತಮ ಕರ್ಮವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದ ಸರ್ವತ್ರ, ಸಾರ್ವಕಾಲಿಕವಾಗಿ, ಸರ್ವವಸ್ತುಗಳಲ್ಲಿಯೂ ಸರ್ವ ದೇಹಿಗಳಲ್ಲಿಯೂ ಸಮ (ಆತ್ಮ, ಬ್ರಹ್ಮ) ವನ್ನು ನೋಡುವ ಸಮದರ್ಶಿತ್ವವೂ ನಿಸ್ತ್ರೈಗುಣ್ಯ ಶೂದ್ರತ್ವ ಸಾಕ್ಷಾತ್ಕಾರವೂ ಉಂಟಾಗುವುವು ಮತ್ತು ವ್ಯಕ್ತಿಗಳ ವರ್ಣ ಪರಿಪಾಲನೆಯಿಂದ ಸರ್ವವಿಧವಾದ ಶಾಂತಿ ಸುಖ ಸಾಧನ ಸಂಪತ್ತುಗಳು ಎಲ್ಲಾ ರಾಜ್ಯ ವಲಯಗಳಲ್ಲಿಯೂ ರೂಢಮೂಲವಾಗಿ ವೃದ್ಧಿಯಾಗುವುವು.

ಶಾಸ್ತು ಬ್ರಾಹ್ಮಣಭೂರ್ವಿಶ್ವಂ ವರ್ಣ-ಚಕ್ರಧ್ವಜೇನ ಶಂ ।

ಆಧಾರ ವರ್ಣವನ್ನು ಹಿನ್ನೆಲೆಯಲ್ಲಿಯೂ ವರ್ಣ ನಿಯಮಗಳಲ್ಲದೆ ಸ್ವತಂತ್ರವಾಗಿ ಸೃಷ್ಟಿ ಸ್ಥಿತಿ ಲಯ ಪಾಲನ ಸಂರಕ್ಷಕ ಸಾರ್ವಗಾಮಿ ಚಕ್ರವನ್ನು ಮೇಲ್ಮೈಯಲ್ಲಿಯೂ ಹೊಂದಿ ಪರಸ್ಪರ ಸಮಾನವಾದ ತ್ರಯಸ್ತ್ರಿಂಶತ್ಕೋಟಿ ಗುಣಕರ್ಮಶಕ್ತಿಗೂಡಿ ತ್ರಿವರ್ಣಗಳಿಂದ ವಿರಾಜಿಸುವ ರಾಷ್ಟ್ರಧ್ವಜದ ಅಂಕಿತದಿಂದ ಪ್ರಜಾಸಾಮ್ರಾಜ್ಯ ಲಕ್ಷ್ಮಿಯಾದ ಬ್ರಾಹ್ಮಣ ಭೂಮಾತೆಯು ವಿಶ್ವವನ್ನು ಸುಖವಾಗಿ ಸುಮುಖವಾಗಿ ಶಾಸನಮಾಡಲಿ !

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಧರ್ಮವಿವೇಕಾದಿ

ಗ್ರಂಥ ಸಮೀಕ್ಷೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಡಬ ಹೈಸ್ಕೂಲ್ ಸಂಸ್ಕೃತ ಪಂಡಿತ, ಪಾಠಶಾಲಾಧ್ಯಕ್ಷ,
ಕಡಬ ಉಪಾಧ್ಯಾಯ, ವಿದ್ವಾನ್

ವೇ|| ಬ್ರ|| ಶ್ರೀ ಕೆ. ಲಕ್ಷ್ಮೀನರಸಿಂಹಶಾಸ್ತ್ರೀ

ಕಡಬ

ವಿಶ್ವಾವಸು ಭಾದ್ರ. ಶುದ್ಧ ನವಮೀ ಶನಿವಾರ
4-9-65

ಕಡಬ ಉಪಾಧ್ಯಾಯ ಶ್ರೀ ಸೂರ್ಯನಾರಾಯಣಾತ್ಮಜರಾದ, ಶ್ರೀ ಕಾಶಿ ಶ್ರೀರಂಗಪಟ್ಣಂ ಭಾಗ್ಯಾಂಬಾ ಸಮೇತ ಬ್ರಹ್ಮ-ಆನಂದಾತ್ಮ ಶ್ರೀ ಭಾಸುರಾನಂದನಾಥ ಶ್ರೀ ಸೂರ್ಯನಾರಾಯಣರ ಪ್ರಿಯಮುಖ್ಯ ಶಿಷ್ಯರಾದ ಶ್ರೀ ಲಕ್ಷ್ಮೀನರಸಾಂಬಾ ಸಮೇತ ಶ್ರೀ ಆನಂದಾತ್ಮಕ ಯೋಗಾನಂದ ಅಹೋಬಲನರಸಿಂಹ ಶಾಸ್ತ್ರಿಗಳ ಮುಖ್ಯ ಶಿಷ್ಯರಾದ ಮತ್ತು ಶ್ರೀಗುರುದತ್ತಾತ್ರೇಯಪೀಠದ ಅಧಿಷ್ಠಾತೃಗಳಾದಶ್ರೀವಿದ್ಯಾ ಮಂತ್ರಮೂರ್ತಿಗಳು ಆಗಿ ಪಂಚಭೂತಾತ್ಮಕರಾಗಿಯೂ ಈ ಪ್ರಪಂಚದ ಸರ್ವತತ್ವಗಳಲ್ಲಿಯೂ ಅಡಗಿರುವ ಶ್ರೀಗುರುಗಳು ಮಾಡಿರುವ ಅನುಗ್ರಹರೂಪವಾದ ಪಾರಿತೋಷಿಕವನ್ನು ಹೊಂದಿರುವ ಶ್ರೀ ಆರ್.ಎನ್. ಸೂರ್ಯನಾರಾಯಣ, ಎಂ.ಎ. ಮೈಸೂರು ಪ್ರಜಾ ಸಾಮ್ರಾಜ್ಯಂ ಪುರೋಧರು ಇವರ ಸ್ವಧರ್ಮವಿವೇಕ, ಶೂದ್ರಮೀಮಾಂಸಾ, ಪುರುಷಸೂಕ್ತಾರ್ಥ ವಿವರಣೆ ಕೃತಿಗಳು ತಮ್ಮ ಸ್ವ ಅನುಭವ ಬ್ರಹ್ಮ ಆನಂದ ಸ್ವರೂಪವಾಗಿರುತ್ತವೆ. ಈ ಗ್ರಂಥಸ್ಥ ವಾಣಿಗಳು ಇನ್ನು ಕೆಲವೇ ದಿವಸಗಳಲ್ಲಿ ಜಗತ್ತಿನ ಮುಖ್ಯ ಭಾಗಗಳಲ್ಲಿ ಅವರ ಸದ್ಗುರು ವಿವಕ್ಷಿತದಂತೆಯೂ ಮತ್ತು ಗೀತಾ ವಾಕ್ಯಗಳಂತೆಯೂ ರಾಮಕೃಷ್ಣ ಪರಮಹಂಸರ ಶ್ರೇಷ್ಠ ನುಡಿಗಳಂತೆಯೂ ಶಂಕರಾಚಾರ್ಯರ ಬ್ರಹ್ಮಾಂಡೋಪಾಸನಾಮಯ, ಉಪಾಸನಾಬ್ರಹ್ಮಮಯ, ಅರ್ಥಮಯ ಸ್ವರೂಪ ವಾಣಿಗಳಂತೆಯೂ ಆಧ್ಯಾತ್ಮಿಕ ಕ್ರಿಯಾತ್ಮಕ-ಶಕ್ತಿತ್ರಯ ಸ್ವರೂಪವಾಗಿಯೂ ಅವರ ಸ್ವಾನುಭವ ಸ್ವರೂಪವೂ ಗ್ರಾಹಕರ ಅನುಭವಕ್ಕೆ ಬರುವಂತಹವೂ ಆಗಿ ಅರ್ಥಸಾಧಕಗಳೂ ಸ್ವರೂಪಜ್ಞಾನಪ್ರಕಾಶಕಗಳೂ ಆಗಲಿ ಎಂಬ ಆಶೀರ್ವಾದಗಳನ್ನು ಗ್ರಂಥಕರ್ತೃಗಳಿಗೆ ತಿಳಿಯಪಡಿಸಲು ಬಹಳ ಸಂತೋಷಿಸುತ್ತೇನೆ. ಮತ್ತು ಹರ್ಷರೂಪವಾದ ಅವರ ಗುರುಗಳ ಅನುಗ್ರಹವನ್ನು ನಿವೇದಿಸಿರುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂಡಿತರತ್ನಂ, ಪಂಡಿತರಾಜ, ವೇದಾಂತಪಂಚಾನನ,
ಮೈಸೂರು ಸಂ. ಮಹಾಪಾಠಶಾಲಾ ಅದ್ವೈತವೇದಾಂತ ವಿಶ್ರಾಂತ ಪ್ರಾಧ್ಯಾಪಕ
ಆಸ್ಥಾನಧರ್ಮಾಧಿಕಾರೀ, ಮಹಾವಿದ್ವಾನ್ ವೇ॥ ಬ್ರ॥ ಶ್ರೀ ಎಂ.ಎಸ್. (ನವೀನಂ)
ವೆಂಕಟೇಶ ಶಾಸ್ತ್ರೀ

आस्थान धर्माधिकारी. महाविद्वान्.
पण्डितरत्नं. पण्डितराजः. वेदान्तपञ्चाननः.
यं. यस्. वेंकटेशशास्त्री,
अद्वैतवेदान्त विश्रान्त प्राध्यापकः
महाराजा संस्कृतमहापाठशाला

मैसूर
20-10-59

... ते च संवाभिवृद्धिकरान् कांश्चन विमर्शकादरणीयान् ग्रन्थान् व्यरचन् । ... तेषु स्वधर्म-विवेक–प्रजापतिराज्यव्यवहार–ऋण–कर्म–संस्कृति–आचार–अनुष्ठानवैरूप्य–धर्मग्लानि--राजयोगाख्यान् विषयान् गर्भीकृत्य किंचन ग्रन्थरत्नं निर्माय तत्परामर्शार्थं मत्समीपमनयन् । अहं च आमूलाग्रं तं ग्रन्थमणिं आलोडयम् ।सर्वेऽपि विषयाः प्राचीनाधुनिक-विमर्शकाभ्यां आदरणीयाः देशकालानुरोधिनः शास्त्राविरुद्धाः सम्यगेव चर्चिताः दृश्यन्ते ।

किंच धर्मब्राह्मणक्षत्रियादिशब्दाः शास्त्राविरोधेन सवर्षां जनानां मनःखेदो यथा न भवेत्तथा विवृत्ता दृश्यन्ते । आचारविषयेऽपि एभिः बहु पराक्रान्तम् । राजनीतिशास्त्रं पञ्चमवेदत्वेन इमे पर्यगणयन् । तत्सर्वेषां नः हर्षदायकमेव । यतः एतद्ग्रन्थकारोक्तरीत्या राजनीत्यभ्यासे तत्प्रयोगे च एकैकस्या अपि प्रजायाः साम्राज्यापरपर्यायं स्वातन्त्र्यं सेत्स्यतीत्यत्र न कापि संशीतिः । किं बहुना ! एतद् ग्रन्थकाराभिमत-राजनीति-प्रयोगे अनायासेन मोक्षसाम्राज्यं भविष्यत्येव ।

अयं चापरः असाधारणो विशेषः अस्मिन् ग्रन्थरत्ने दरीदृश्यते — ब्राह्मणधर्मः ब्राह्मणाचारः, क्षत्रियधर्मः क्षत्रियाचारः, वैश्यधर्मः

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

वैश्याचार:, शूद्रधर्म: शूद्राचार: तत्तज्जातिपद्धति: इत्येवंविधा: ये ये विषया: धर्मशास्त्रादिग्रन्थेषु उच्चनीचभावेनेव प्रतिभासन्ते (अत एव ते विषया:) ब्राह्मणेतरादिमन:क्लेशकारिण इव दृश्यन्ते ; वस्तुत: ते ते विषया: तत्तत्प्रतिपादकशब्दाश्च न तथा भवितुमर्हन्ति । आपातशब्दार्थ-ग्रहणेन आपातविषयविमर्शनेन तथा प्रतिभान्तोऽपि गूढार्थ-विवरणे गाढविषयविमर्शने च न कोऽपि विषय: उच्चनीच-भावं प्रतिपाद्यमानो दृश्यते । न वा कस्याप्युद्वेगावहोऽपि भवति इति निश्चप्रचं वदाम: ।

किं बहूक्त्या ! अयं ग्रन्थमणि: श्रेयस्कामै: शिरसि धारयितुं योग्य इति महान्मे संप्रत्ययो वर्तत इति परीक्षकाणां पुरत: घण्टाघोषं घोषयामि ॥

... शूद्रमीमांसा इति समाख्याते ग्रन्थे शूद्रशब्दनिर्वचनविषये स्वाभिप्रायं बहुधा आविरकार्षु: । शूद्रशब्दार्थमहिमा अपरिमित: इति कडवग्रामस्थ-नित्यानन्दस्वामिनां अभिप्रायं सम्यगन्वमोदन्त । किं च मन्वादिधर्मशास्त्रव्यासादिकृतपुराणोपपुराणादिरीत्या जन्मत: ब्राह्मणादिशब्दार्थव्यवस्था तत्तच्छब्दार्थगतोच्चनीचभावादिव्यवस्था च आपातत: संकुचितदृष्टिमेव प्रख्यापयत: एतत्काले शूद्रत्वेन, ब्राह्मणेतरत्वेन वा व्यवह्रियमाणानां स्वान्तसन्तापं संपादयत: आपातत: प्रतीयमाने एते व्यवस्थे अनुसृत्यैव अधुनातना: शूद्रा: ब्राह्मणत्वेन अधुना व्यवह्रियमाणान् द्विषन्ति । ... शूद्रशब्द: पवित्र एव तदर्थपवित्रतां विना स्वत: शब्दस्य पवित्रता न संभवतीति पवित्रत्वमर्थस्यावश्यकम् । अत: ब्राह्मणादिशब्दार्थैस्समं साम्यं सर्वथा आवश्यकमेव । वेदार्थतात्पर्य-निर्णयज्ञतां प्राचीनमहर्षीणां तादृश साम्य एव आग्रह इत्यत्र न कोपि द्वापर: । किंच विश्वंभराया: भूम्या ईश्वरपादरूपत्वेन वेदे आम्नातशूद्रस्यापि ईश्वरपादोत्पन्नत्वेनोक्तत्वात् ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

एवं उभयोस्साम्यात् पूजनीयत्वं विश्वव्यापकत्वं च संभवति । तस्मात् धर्मशास्त्रादेरापाततः परामर्शे उच्चनीचभावादिविभावनेऽपि महतां महर्षीणां अन्यत्रैव तात्पर्यं स्यात् इत्यकामेनाप्यभ्युपगन्तव्यम् । तादृशतात्पर्याविष्करणे अधुनातनाः कोविदा उदासत इति महती दुरवस्था इत्यादिकं स्वाभिप्रेतं स्वग्रन्थे समीचीनमुदघोषयन् ।

... सर्वथा शूद्रशब्दार्थस्य ब्राह्मणादिशब्दार्थापेक्षया नीचभावो नास्तीति सर्वं चतुरश्रम् । ...

ಪೂರ್ವ-ಉತ್ತರ ಮೀಮಾಂಸಾ ಪಂಡಿತ ಪ್ರವರ

ಪ್ರಾಚೀನನ್ಯಾಯ ನವೀನನ್ಯಾಯ ವೇದಾಂತ ವಿದ್ವಾನ್

ವೇ|| ಬ್ರ|| ಶ್ರೀ ಎಂ. ಲಕ್ಷ್ಮೀನರಸಿಂಹ ಶಾಸ್ತ್ರೀ

ಬೆಂಗಳೂರು 25-1-64

...विख्यात-गुरूपदिष्ट-मन्त्रसिद्धि-समधिगत-धर्म-ब्रह्म-तत्वरहस्याः रुद्रपत्तनम् सूर्यनारायणमहोदयाः ... अस्मिन् धर्मह्रासकरे काले व्यग्रायां जनतायां स्वधर्माचारविषये, आपाततः प्रतिभासमानां उच्च-नीचभावभावनां धर्माचारादि-शब्दार्थान् अविरोधेन व्युत्पाद्य प्रणुदन्तः ग्रन्थमिमं व्यरचयन् । ... अस्मिश्च ग्रन्थराजे, ऋणशब्दार्थं, तद्भेदं, तन्निवर्तनोपायं च सम्यक् प्रतिपादयन्तः कस्य वा मनः न प्रसादयां-बभूवुः ? शैशवमिव कौमारे, तद्विव वृद्धत्वे, आधुनिकानां पुरातनैः कृतोऽर्थः न स्वदते । अभिप्रायमिममाकलय्य, धर्मसनातनत्वाविरोधेन धर्मानुष्ठानाचारादि-प्रतिपादकानां वाक्यानां अविरुद्धं, सर्वैरनुष्ठातुं योग्यं चार्थं कल्पयामासुः । प्रसन्नेन मनसा आसमाप्ति ग्रन्थोऽयं

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

समालोडितः । एतेषामसाधारणोऽयं ग्रन्थनिर्माणपरिश्रमः सर्वैस्सादरं सार्थकयितव्य इति सामोदं विज्ञापयामि ।

अन्वभावि अमन्दः आनन्दः शूद्रमीमांसाख्यं परिमाणतः अल्पमिव भासमानमपि विस्तृतार्थगुम्फितं ग्रन्थसुममाघ्राय, तद्रसमास्वाद्य च मया । शूद्रशब्दस्तावत् श्रुतिषु स्मृतिषु च प्रयुक्तः पाटकानां कर्णपथमारूढः इयन्तं कालं निरूढतया कस्यचन जातिविशेषस्य वाचक इति व्यवह्रियमाणः आसीत् । तथा व्यवहारः अनवगतविचारितार्थानां जनानां न्यूनाधिकभावभ्रांतिमुत्पाद्य परस्परविद्वेषकारणं च समपद्यत । तदिदमाकलय्य मान्याः आर्. एन्. सूर्यनारायणार्याः चातुर्वर्ण्यं जात्यायत्तमुत गुणकर्मविभागनिष्पन्नं इति बहोः कालात् आरभ्य विशयानानां प्राचीनेषु विपश्चित्सु श्रद्धान्ध्यमारोपयतां तत्वनिर्दिधारयिषूणां अर्वाचीनानां सन्तोषाय पुरातनानामिमनःखेदाय च तदर्थ-प्रकाशकं ग्रन्थरत्नमिदं प्रकटयचकार्षुः ।

... एवं च दोषबाहुल्यमेव नीचत्वेन व्यवह्रियमाणवर्णभेदनिदानमित्यवगम्यते । ब्राह्मणत्वेन व्यवह्रियमाणा यदि शौचस्नानसन्ध्यादिकर्माणि परित्यज्य म्लेंच्छसमाचाराः तदीयवेषभाषाऽचाराहारादीनभ्यस्यन्तः वर्तेरन्, तर्हि कथं ते ब्राह्मणपदव्यपदेशभाजो भवेयुः ? कुतो वा पितृभक्तिपरायणाः विहितशौचाचाराः गीतोक्तशमदमदयादिपराः शूद्रत्वेन व्यवह्रियमाणा अपि उत्कृष्टाः न स्युः ।

... अस्मिन् ग्रन्थे शूद्रशब्दार्थ-निर्णयं कस्यापि मनस्सन्तापो यथा न भवेत् तथा कर्तुं प्रायतन्त ।

अतः विमर्शात्मकोयं ग्रन्थः सर्वैरपि आमूलचूडं उत्सार्य मात्सर्यं परिशीलनीयः । तेषां परिश्रमस्सार्थकयितव्यश्चेति निवेदयामि ।

एम्. लक्ष्मीनरसिंहशास्त्री

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀಮದಿತ್ಯಾದಿ ಬಿರುದಾಂಕಿತ ಶ್ರೀ ಶ್ರೀ ಜಗದ್ಗುರು
ದ್ವಾರಕಾ ಶ್ರೀ ಶಾರದಾ ಪೀಠ ಶ್ರೀ ಶಂಕರಾಚಾರ್ಯ
ಮಹಾರಾಜ ಮಹಾಸ್ವಾಮಿಯವರ ಸಂಸ್ಥಾನ,
ದ್ವಾರಕಾ 15-5-64

आपतम्बधर्मसूत्रमंजरी, यूनिवर्सल् रिलिजन, श्रीमद्भगवद्गीता, प्रभृति प्रबन्ध निर्माता श्री सूर्यनारायण शर्मा स्वधर्मविवेक, शूद्रमीमांसा, व्यवहार-पंकजादि ग्रन्थप्रकाशनसंकल्पः किल निरंतरमेतादृशग्रन्थप्रकाशन-बद्धादरः स्वोपज्ञ-प्रजासाम्राज्यचित्ररचनसमाकुलचित्तः सततं यतमानो दृश्यते ।

समाशास्महे यत् श्री द्वारकाधीशचन्द्रमौलीश्वरौ श्रेयः परम्परामाकलयतां कर्मण्यस्मिन् ।

ಅರಮನೆ ಪೂಜಾಸಮ್ಮುಖ ತರ್ಕ ವೇದಾಂತ ವಿದ್ವಾನ್
ವೇ॥ ಬ್ರ॥ ಶ್ರೀ ಕಾಶಿ ಪುರೋಹಿತ
ನಂಜುಂಡ ಶಾಸ್ತ್ರೀ ಮೈಸೂರು 13-6-62

ಸ್ವಧರ್ಮ ವಿವೇಕ

ಸ್ವಧರ್ಮ-ವಿವೇಕವನ್ನು ರಚಿಸಿರುವ ಶ್ರೀ ಸೂರ್ಯನಾರಾಯಣ ಅವರು ಬಹಳ ಕಾಲದಿಂದ ಪರಿಚಿತರಾಗಿರುವ ಮಿತ್ರವರ್ಯರಲ್ಲಿ ಒಬ್ಬರು. ಈ ಮಹಾನುಭಾವರು ಸಮಾಜಶಾಸ್ತ್ರವನ್ನು ಬಹಿರಂಗ ಪಡಿಸಿ ಎಲ್ಲ ಜನರಲ್ಲೂ ತಪ್ಪು ತಿಳಿವಳಿಕೆಯಿಂದುಂಟಾಗಿರುವ ಪರಸ್ಪರ ದ್ವೇಷಾಸೂಯೆಗಳನ್ನು ನಿರ್ಮೂಲ ಮಾಡುವ ಉದ್ದೇಶದಿಂದ ಬದ್ಧ ಕಂಕಣರಾಗಿ ಪರಮೋಪಕಾರ ದೃಷ್ಟಿಯಿಂದ ಈ ಗ್ರಂಥವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಚಿಸಿರುತ್ತಾರೆ. ಅಲ್ಲದೆ ಋಣಪ್ರಾಪ್ತಿ, ವಿಮೋಚನೆ, ಸಂಸ್ಕೃತಿ, ಸ್ವಧರ್ಮವಿವೇಕ, ಅನುಷ್ಠಾನ ಕ್ರಮದಲ್ಲಿ ವ್ಯತ್ಯಾಸಗಳನ್ನು ಸಪ್ರಮಾಣವಾಗಿ ಚರ್ಚಿಸಿ ಸಂಶಯಗಳನ್ನು ದೂರಮಾಡಿರುತ್ತಾರೆ. ನೀತಿಶಾಸ್ತ್ರ ಸ್ಮೃತ್ಯಾದಿ ಗ್ರಂಥಗಳಲ್ಲಿಯೂ ವಿಕಲಿತವಾಗಿ ನಿರೂಪಿಸಲ್ಪಟ್ಟ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳ ಪದ್ಧತಿ ಮತ್ತು ವಿಶಿಷ್ಟಾಚಾರಗಳನ್ನು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತೆ ಉಲ್ಲೇಖಿಸಿರುತ್ತಾರೆ.

ಈ ಗ್ರಂಥಗಳು ಸ್ವಾಗತಾರ್ಹವಾಗಿರುತ್ತವೆ. ಈ ಮಹಾನುಭಾವರು ಪಟ್ಟಿರುವ ಶ್ರಮಕ್ಕೆ ಎಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶೂದ್ರ ಮೀಮಾಂಸಾ

ಶೂದ್ರ ಶಬ್ದಕ್ಕೆ ದರ್ಶನಗಳಲ್ಲಿ ಅಡಗಿರುವ ಅರ್ಥವನ್ನು ಬಹಿರಂಗಪಡಿಸಿ ಜನಸಾಮಾನ್ಯದಲ್ಲಿಯೂ ವಿದ್ವಾಂಸರಲ್ಲಿಯೂ ಬೇರೂರಿರುವ ತಪ್ಪು ಅಭಿಪ್ರಾಯಗಳನ್ನು ತಿದ್ದುವುದರ ಮೂಲಕ ಲೋಕೋಪಕಾರ ಮಾಡಿರುತ್ತಾರೆ. ಈ ಗ್ರಂಥರತ್ನವು ಶಾಸ್ತ್ರತಃ ವ್ಯವಹಾರತಶ್ಚ ನಿರ್ದುಷ್ಟವಾಗಿರುವುದರಿಂದ ಪ್ರಕಾಶನಾರ್ಹವಾಗಿರುತ್ತೆ.

ಪುರುಷಸೂಕ್ತಾರ್ಥ ವಿವರಣೆ

ಪುರುಷಸೂಕ್ತಾರ್ಥ ವಿವರಣೆಯು ನಿರ್ದುಷ್ಟವಾಗಿರುವುದಲ್ಲದೆ ಇದರಲ್ಲಿ ಅಡಕವಾಗಿರುವ ಚಾತುರ್ವರ್ಣ್ಯದ ಸೃಷ್ಟಿ ಮತ್ತು 'ವಿರಾಟ್' ಸ್ವರೂಪಗಳನ್ನು ಮನದಟ್ಟಾಗುವಂತೆ, ವಿವರಿಸಿರುತ್ತಾರೆ. ಮೂಲಾರ್ಥದ ಲೋಪವಿಲ್ಲದಂತೆ ಕನ್ನಡ ಭಾಷೆಯಲ್ಲಿ ಕಷ್ಟಪಟ್ಟು ರಚಿಸಿರುವುದು ಸರ್ವಥಾ ಸ್ತುತ್ಯವಾದುದು. ಈ ತೆರನಾಗಿ ಮುಂದೆಯೂ ಗ್ರಂಥಗಳನ್ನು ರಚಿಸಿ ಜನತೆಗೆ ಉಪಕಾರ ಭಾಗಿಗಳಾಗಿ ಶ್ರೇಯೋವಂತರಾಗಿ ಬಾಳಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ವಿ. ಮುದ್ದಲಿಂಗಣ್ಣ, ಎಂ.ಎ., 6-10-60
ಅಧ್ಯಾಪಕ ಸಮಾಜಶಾಸ್ತ್ರ-ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವೇ ॥ ಬ್ರಂ ॥ ಶ್ರೀ ಸೂರ್ಯನಾರಾಯಣ ಶರ್ಮಾ ಅವರ 'ಶೂದ್ರ ಮೀಮಾಂಸಾ' ಗ್ರಂಥದ ಹಸ್ತಪ್ರತಿಯನ್ನು ನೋಡಿದ್ದೇನೆ. ಧರ್ಮಶಾಸ್ತ್ರದ ದೃಷ್ಟಿಯಿಂದ ಶೂದ್ರ ಶಬ್ದಕ್ಕೆ ಇರುವ ನೈಜವಾದ ಅರ್ಥವನ್ನು ಈ ಕೃತಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಶೂದ್ರ ಶಬ್ದದ ವಿಚಾರವಾಗಿ ಮಾತ್ರ ಏಕೆ ? 'ವರ್ಣ' 'ಜಾತಿ' ಇತ್ಯಾದಿ ಶಬ್ದಗಳ ಬಗ್ಗೆ ಜನ ಸಾಮಾನ್ಯರಲ್ಲೇ ಅಲ್ಲದೆ ಅನೇಕ ವಿದ್ವಾಂಸರಲ್ಲಿಯೂ ಸಹ ನಾನಾ ಬಗೆಯ ತಪ್ಪು ಅಭಿಪ್ರಾಯಗಳು ಬೇರೂರಿವೆ. ನಮ್ಮ ಸಮಾಜದಲ್ಲಿ ಶತಮಾನಗಳಿಂದ ಬೆಳೆದು ಬಂದಿರುವ ಅನೇಕ ಕ್ಷೋಭೆಗಳಿಗೆ ಈ ತಪ್ಪು ಅಭಿಪ್ರಾಯಗಳೇ ಬಹುಮಟ್ಟಿಗೆ ಕಾರಣವೆನ್ನಬಹುದು ಈ ತಪ್ಪು ಅಭಿಪ್ರಾಯಗಳ ನಿವಾರಣೆ ಸಮಾಜದ ಕ್ಷೋಭೆಗಳ ನಿವಾರಣೆಗೆ ಮಾರ್ಗವಾಗುತ್ತದೆ. ಶೂದ್ರ ಮೀಮಾಂಸಾ ಗ್ರಂಥವು ನಮ್ಮ ಸಮಾಜದ ಬಗ್ಗೆ ನಿಷ್ಪಕ್ಷವಾದ ಮತ್ತು ರಚನಾತ್ಮಕವಾದ ಅಭಿಪ್ರಾಯಗಳನ್ನು ಮೂಡಿಸುವುದು ನಿಸ್ಸಂದೇಹ. ಆದಷ್ಟು ಬೇಗನೆ ಈ ಗ್ರಂಥ ಪ್ರಕಾಶಕ್ಕೆ ಬಂದು ನಮ್ಮ ಜನ ಮನವನ್ನು ಬೆಳಗಲಿ ಸ್ವಚ್ಛಗೊಳಿಸಲಿ.

ವಿದೇಶೀಯರಲ್ಲಿ ನಮ್ಮ ಸಮಾಜದ ಇತಿಹಾಸ ಮತ್ತು ಅದರ ಸಂಸ್ಥೆಗಳು ಮತ್ತು ರೀತಿ ನೀತಿಗಳ ಬಗ್ಗೆ ಬಹಳ ನಿಕೃಷ್ಟವಾದ ಅಸತ್ಯವಾದ ಅಭಿಪ್ರಾಯಗಳಿವೆ. ರಾಜಕೀಯ ದಾಸ್ಯದ ನಿಮಿತ್ತವಾಗಿ ನಮ್ಮ ದೇಶದಲ್ಲಿ ವಿದೇಶೀಯರ ಅಭಿಪ್ರಾಯಗಳಿಗೇ ಹೆಚ್ಚು ಪ್ರತಿಷ್ಠೆ ಉಂಟಾಗಿರುವುದು ಶೋಚನೀಯ. ನಾವು ಸ್ವತಂತ್ರರಾದ ಮೇಲೂ ಸಹ ಈ ದೌರ್ಬಲ್ಯ ನಮ್ಮಲ್ಲಿ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ನಮ್ಮ ಸಮಾಜದ ಇತಿಹಾಸದ ನಿಜಸ್ವರೂಪವನ್ನು ವಿದೇಶೀಯರಿಗೆ ಸ್ಪಷ್ಟಪಡಿಸುವುದು ಇಂದು ನಮ್ಮ ಆದ್ಯ ಕರ್ತವ್ಯ. ಈ ದೃಷ್ಟಿಯಿಂದ ಈ ಗ್ರಂಥ ಆಂಗ್ಲೇಯ ಭಾಷೆಯಲ್ಲೂ ಪ್ರಕಟವಾದರೆ ಲೇಸು ಅನಿಸುತ್ತದೆ.

ಗ್ರಂಥ ಕರ್ತರ ಪ್ರಬುದ್ಧ ಲೇಖನಿಯಿಂದ ಇಂಥ ಅಮೂಲ್ಯ ಗ್ರಂಥಗಳನ್ನು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ನಿರೀಕ್ಷಿಸುವ ವಿ.ಮು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar